ಸಂವಾದ

ಜನವರಿ ೨೦೦೭
ಸಂ. ೧೦

ಬೀಜ ಭಯೋತ್ಪಾದನೆ



ಅರುಂಧತಿ ರಾಯ್

ಅಫ್ಜಲ್ ಬದುಕಲೇ ಬಾರದೆ?

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೩

ಜನವರಿ ೨೦೦೭

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಬಿ.ಯು.ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

© ೨೩೨೮೭೯೪೩/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

© 080-23287943, 94480 48306

e-mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೩
- ಹೊಸ ಪುಸ್ತಕ ೪
- ಅಂತ ರಂಗ ೫
- ಉಳ್ಳವರನ್ನು ಕಾಡುತ್ತಿರುವ ಪ್ರಜಾಪ್ರಭುತ್ವದ ಭೀತಿ ೬
  - ಪಿ. ಸಾಯಿನಾಥ್
- ಪರಂಪರೆಯ ಬಳುವಳಿ 'ಹೇಡಿತನ' ೮
  - ಜೋಗನಹಳ್ಳಿ ಗುರುಮೂರ್ತಿ

- ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಕಲಿಕೆ ೯
  - ಆರ್. ಮಹಾದೇವಪ್ಪ
- ಬೀಜ ಭಯೋತ್ಪಾದನೆ ೧೦
  - ಎನ್. ಜಗದೀಶ್‌ಕೊಪ್ಪ
- ಇಂಗ್ಲಿಷ್ ಮತ್ತು ಶಿಕ್ಷಣ: ಒಂದು ಮಾರ್ಕೆಟ್ ಕಥನ ೧೪
  - ಶ್ರೀಶ ಉಡುಪ
- 'ಅಫ್ಜಲ್ ಬದುಕಲೇಬಾರದೇ?' ೧೮
  - ಅರುಂಧತಿ ರಾಯ್
- ಕೆರಳಿದ ದಲಿತ ಸ್ವಾಭಿಮಾನ ೨೦
  - ನಾ. ದಿವಾಕರ

- ಸುತ್ತೂರು ಮಠಕ್ಕೆ ಕೋಮುವಾದಿ ರಾಜಕಾರಣ ಅನಿವಾರ್ಯವೇ? ೨೪
  - ದಾಸನೂರು ಕೂಸಣ್ಣ
- ಬ್ರಾಹ್ಮಣರು ಹಿಂದೂಗಳಲ್ಲವೇ? ೨೬
  - ಡಾ॥ ಸಿ.ಜಿ. ಲಕ್ಷ್ಮಿಪತಿ
- ದಲಿತ್ ಡೈರಿ ೨೮
  - ಚಂದ್ರ ಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ. ಎಚ್. ರಾಜಶೇಖರ್

ಕವನಗಳು :
- ಬೊಡ್ಡೆ ಚಿಗುರು ೧೩
- ಗಂಧ ಮತ್ತು ಗಾಳಿ ೧೩
- ಮನವಿ ೩೩



ಮುಖಪುಟ ಕಲೆ ವೆಂಕಟಾಚಲಪತಿ ವಿನ್ಯಾಸ: ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)



ದಿಟ್ಟ ಅಭಿಪ್ರಾಯ

'ಸಂವಾದ' ಪತ್ರಿಕೆಯ ಸಂಪಾದಕರಿಗೆ,

ಪೂರ್ವ ಆಫ್ರಿಕಾದಲ್ಲಿ ವಿಕಾಸ ಗೊಂಡ ಮಾನವನ ಸಂತತಿ ವಿಶ್ವದಾದ್ಯಂತ ಹಬ್ಬಿ, ಅನೇಕ ಸಂಸ್ಕೃತಿಗಳನ್ನು ಹುಟ್ಟು ಹಾಕಿರುವುದು ವಾಸ್ತವ.

'ಗಡಿಗಳ ವಾಸ್ತವತೆ'ಯ ಅಡಿಯಲ್ಲಿ ಮೂಡಿ ಬಂದಿರುವ ಡಾ॥ ವಸುರವರ ಪ್ರಬುದ್ಧ ಲೇಖನ ಪ್ರಚಲಿತ ಗಡಿ ಹಾಗೂ ಭಾಷಾ (ಅರ್ಥವಿಲ್ಲದ??) ವಿವಾದಗಳಿಗೆ ಸವಾಲಾಗಿ ನಿಲ್ಲುತ್ತದೆ. ವೈಚಾರಿಕತೆ ಹಾಗೂ ವಾಸ್ತವತೆಯನ್ನು ಬಿಂಬಿಸುವ ಇಂಥಹ ಬರಹಗಳು ಸಮಕಾಲೀನ ಗೊಂದಲಗಳನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಶಿಸುವಲ್ಲಿ ಸಹಕಾರಿಯಾಗುತ್ತವೆ. ಇತಿಹಾಸದ ವಿವಿಧ ರೂಪಗಳಲ್ಲಿ (ಲೇಖನದಲ್ಲಿ ಮೂಡಿರುವಂತೆ) ಸಮಸ್ಯೆಗಳನ್ನು ನೋಡಿದ್ದೆ ಆದರೆ, ಅವುಗಳು ಬಿಡಿಸಲಾಗದ ಕಗ್ಗಂಟುಗಳಾಗದೆ, ವಾಸ್ತವತೆಯ ಸತ್ಯದಲ್ಲಿ ಅವುಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂಬ ದಿಟ್ಟ ಅಭಿಪ್ರಾಯವನ್ನು ಲೇಖನ ಹೊರಚೆಲ್ಲಿದೆ.

ಕು. ಕೆ. ಲಲಿತಾ, ತುಮಕೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ

ರೂ.೧೦೦/- ರೂ.೩೦೦/- ರೂ.೫೦೦/-

ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಮನ ಕಲಕಿದ 'ಹಾಡು ಪಾಡು'

ಗೌರವಾನ್ವಿತ ಹೊನ್ನಾಪುರ ಅವರಿಗೆ,

'ಸಂವಾದದಲ್ಲಿ ಬರುತ್ತಿರುವ ಕವನಗಳನ್ನು ಗಮನಿಸದರೆ, ಕನ್ನಡ ಕಾವ್ಯ ಲೋಕ ನಿಜವಾಗಿಯೂ ಶ್ರೀಮಂತವಾಗುತ್ತಿದೆ ಅನ್ನಿಸುತ್ತಿದೆ. ಡಿಸೆಂಬರ್ ಸಂಚಿಕೆಯಲ್ಲಿನ ನೇತ್ರಾವತಿ ಕೋಲಾರ ಅವರ ಕವಿತೆ 'ಹಾಡು ಪಾಡು' ನನ್ನನ್ನು ಪೂರ್ಣ ಮೌನವಾಗಿಸಿತು. ಕವನ ಓದಿದ ಮೇಲೆ ಏನು ಮಾಡಬೇಕೆಂದು ತೊಚದೆ ಶೂನ್ಯ ಅವರಿಸಿತು. ಅಷ್ಟೊಂದು ಗಾಢ ನೋವು ನನ್ನನ್ನು ಕಾಡಿತು. ಹೀಗೆ ಓದಿ ಹಾಗೆ ಮರೆತು ಬಿಡುವಂಥ ಕವನಗಳನ್ನೇ ಓದುತ್ತಿದ್ದ ನನಗೆ 'ಹಾಡು ಪಾಡು'ವನ್ನು ಮತ್ತೆ ಮತ್ತೆ ಓದಬೇಕೆನಿಸುತ್ತಿದೆ. ಇಂಥ ಮನ ಕಲಕಿದ ಕವನ ಪ್ರಕಟಿಸಿದ್ದಕ್ಕಾಗಿ ವಂದನೆಗಳು.

ಎಂ.ಎಸ್. ಆಶಾರಾಣಿ
ಮಾನಸ ಗಂಗೋತ್ರಿ, ಮೈಸೂರು

ಭ್ರಮನಿರಸನ ಆಗಿರುವುದು ನಿಜ

ಸನ್ಮಾನ್ಯ ಇಂದೂಧರ್ ಅವರೇ

'ಬ್ರಾಹ್ಮಿನ್ ಫೋಬಿಯಾ' ಲೇಖನ ಓದಿದೆ, ಮುಂದಿನ ಸಂಚಿಕೆಗಳಲ್ಲಿ ಬರುವ ಲೇಖನಗಳನ್ನು ನೋಡುವ ಕುತೂಹಲ ನನಗಿದೆ- ಆದರೆ ನನಗೆ ಭ್ರಮನಿರಸನ ಆಗಿರುವುದು ನಿಜ. ಲೇಖಕರು ಈ ಲೇಖನ ಮಾಲೆಯನ್ನು ಆಧಾರ ಸಹಿತ ಹೇಳಿದರೆ ಮೆಚ್ಚುಗೆಯಾಗುತ್ತದೆ. ಅದು ಬಿಟ್ಟು ಲಕ್ಷ್ಮಿಪತಿಯವರು ಇದು ಲೇಖಕನ ಪರಿಕಲ್ಪನೆ ಎಂದರೆ ಅದಕ್ಕೆ authenticity ಸಿಗಲಾರದು. ಇಂದಿನ ವಸ್ತುಸ್ಥಿತಿಯನ್ನು ಗುರುತಿಸಿ, ಒಂದು theory ರೂಪಿಸುವುದು ಸರಿಯೆ? ಈ phobia ಹೇಗೆ ಹುಟ್ಟಿತು. ಯಾವಕಾಲದಲ್ಲಿ ಆರಂಭವಾಯಿತು? ಮಾಟ ಮಂತ್ರದಿಂದ ಆರಂಭವಾಯಿತೇ? ಮಹಿಮೆಯಿಂದ ಆರಂಭವಾಯಿತೇ? ಅತೀಂದ್ರಿಯ ಶಕ್ತಿಯಿಂದ ಆರಂಭವಾಯಿತೇ? ಇಲ್ಲ ಎಲ್ಲ ದಡ್ಡ ಜನರಾಗಿದ್ದು ಬ್ರಾಹ್ಮಣ ಮಾತ್ರ ಚಾಣಾಕ್ಷ ದುರ್ಬುದ್ಧಿಯವನಾಗಿ ಹುಟ್ಟಿ ಬಂದನೇ? ಇದೆಲ್ಲ ನನ್ನ ಮನಸ್ಸಿನಲ್ಲಿ ಹುಟ್ಟಿರುವ ಗೊಂದಲ. ಮುಂದಿನ ಲೇಖನಗಳಲ್ಲಿ ನನ್ನ ಗೊಂದಲಕ್ಕೆ ಪರಿಹಾರ ಸಿಕ್ಕೀತೆ ಕಾದು ನೋಡುತ್ತೇನೆ.

ಎಚ್.ಎಸ್. ದೊರೆಸ್ವಾಮಿ,
ಬೆಂಗಳೂರು

ಪತ್ರಾಗಾರ

ಶ್ಲಾಘನೀಯ ಪ್ರಯತ್ನ

ಪ್ರೀತಿಯ ಸಂಪಾದಕರಿಗೆ, ನಮಸ್ಕಾರಗಳು.

'ಸಂವಾದ' ಹೆಚ್ಚು ಅರ್ಥಪೂರ್ಣವಾದ ಲೇಖನಗಳಿಂದ ಹೊರಬರುತ್ತಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಜನಪರ ಸಾಹಿತ್ಯ ಮತ್ತು ಚಳುವಳಿಗಳನ್ನು ಜೀವಂತವಾಗಿಡುವ ನಿಟ್ಟಿನಲ್ಲಿ ಪತ್ರಿಕೆಯ ನಿಲುವು ಶ್ಲಾಘನೀಯವಾಗಿದೆ.

ದತ್ತಾತ್ರಯ ಇಕ್ಕಳ,
ಕಲ್ಬುರ್ಗಿ

ಪ್ರಗತಿ ಪರ ಶಕ್ತಿಗಳು ಒಂದಾಗಲಿ

ಪ್ರೀತಿಯ ಇಂದೂಧರ ಅವರಿಗೆ, ಗೌರವ ಪೂರ್ವಕ ವಂದನೆಗಳು.

ಡಿಸೆಂಬರ್-೦೬ರ 'ಸಂವಾದ'ದಲ್ಲಿ ನೀವು ಬರೆದಿರುವ ಸಂಪಾದಕೀಯವನ್ನು ಓದಿ ಈ ಪತ್ರ ಬರೆಯುತ್ತಿರುವೆ. ಭಾರತ ದೇಶದಲ್ಲಿ ನಾಗರಿಕ ಸಮಾಜ ಉಳಿಯುವುದೇ? ಎಂಬ ನಿಮ್ಮ ಸಂಶಯ ನನ್ನನ್ನು ಕಾಡಿಸುತ್ತಿದೆ. ಆದರೆ ಭಾರತ ದೇಶದ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಂಥ ಆತಂಕಕ್ಕೇನೂ ಅಸ್ಪದ ಇಲ್ಲ ಎಂಬ ನೆಮ್ಮದಿಯೂ ಮೂಡುತ್ತದೆ.

ಉಪನಿಷತ್ತುಗಳನ್ನು ನಾಶಮಾಡಿ ವೇದ-ಸ್ಮೃತಿಗಳು ಸೃಷ್ಟಿಯಾದಾಗಲೇ ಈ ನಾಡಿನ ಅಧಃಪತನ ಪ್ರಾರಂಭವಾಯಿತು. ಪುರೋಹಿತರು ದೇವರು ಮತ್ತು ಧರ್ಮದ ವಾರಸುದಾರರಾಗಿ ಸ್ವಯಂ ಘೋಷಣೆ ಮಾಡಿಕೊಳ್ಳುವ ಮೂಲಕ ಭಾರತದ ಜೀವ ಧಾತುವನ್ನೇ ಸರ್ವನಾಶ ಮಾಡಿದರು. ಇಡೀ ಮನುಕುಲವನ್ನೇ ಮೇಲು-ಕೀಳು ವಿಷವ್ಯೂಹದಲ್ಲಿ ತಳ್ಳಿ ಮಾನವೀಯತೆಯನ್ನು ಸಂಪೂರ್ಣ ನಾಶ ಮಾಡಲು ಪ್ರಯತ್ನಿಸಿದರು. ಹೊಟ್ಟೆ ಪಾಡಿನ ವೃತ್ತಿಗಳಿಗೆಲ್ಲಾ ಜಾತಿಯನ್ನು ಅಂಟಿಸಿ ಅಸಮಾನತೆಯನ್ನು ಶಾಶ್ವತಗೊಳಿಸಿ ಬಿಟ್ಟರು. ಈ ಜನದ್ರೋಹಿ, ದೇಶದ್ರೋಹಿ ಮನಸ್ಸುಗಳು ಈಗ ಎಲ್ಲ ಕಡೆಯೂ ಹಬ್ಬಿ ತನ್ನ ನೆಲೆಯನ್ನು ಗಟ್ಟಿಗೊಳಿಸತೊಡಗಿದೆ. ಜಗತ್ತು ೨೧ನೇ ಶತಮಾನದತ್ತ ಮುಖ ಮಾಡಿ ಜಾಗತೀಕರಣದ ಹೊಸ ಮಾಯೆಯ ಬೆನ್ನು ಹತ್ತಿದ್ದರೂ, ಭಾರತೀಯ ಮನಸ್ಸುಗಳು ಇನ್ನೂ ಮಧ್ಯಯುಗೀನ ಮೃಗತ್ವದಲ್ಲೇ ಮುಳುಗಿವೆ.

ದಲಿತರು ಅಲ್ಪಸಂಖ್ಯಾತರು ಇನ್ನೂ ತಬ್ಬಲಿಗಳಂತೆಯೇ ಅಪರಾಧಿ ಮನೋಭಾವದಲ್ಲಿ ದಿನ ಕಳೆಯುವಂಥ ಸ್ಥಿತಿ ಉಳಿದಿದೆ. ಭಾರತದ ಒಟ್ಟು ಜನಸಂಖ್ಯೆಯ ಶೇ. ೫೦ರಷ್ಟಿರುವ ಮಹಿಳೆಯರು ಇನ್ನು ಉಳಿಗಮಾನ್ಯ ವ್ಯವಸ್ಥೆಯ ಪಳೆಯಳಿಕೆಗಳಂತೆಯೇ ಬದುಕುತ್ತಿದ್ದಾರೆ.

ಇಷ್ಟೆಲ್ಲದರ ನಡುವೆ ಕೂಡ ನಮಗೆ ಬುದ್ಧ, ಬಸವ, ಅಲ್ಲಮರು ಕಣ್ಬೆಳಕಿನಂತೆ ಕಾಣಿಸುತ್ತಿದ್ದಾರೆ. ಗಾಂಧಿ, ಅಂಬೇಡ್ಕರ್ ಲೋಹಿಯಾರ ಚಿಂತನೆಗಳು ದಾರಿದೀಪವಾಗಿ ತೋರುತ್ತವೆ. ಆದರೆ ಮಂಕು ಕವಿದಿರುವ ಬಹುಜನರನ್ನು ಬಡಿದೆಬ್ಬಿಸುವ ಕೆಲಸ ಮಾತ್ರ ಪೂರ್ಣಪ್ರಮಾಣದಲ್ಲಿ ನಡೆಯುತ್ತಿಲ್ಲ. ಅಲ್ಲಲ್ಲಿ-ಅಲ್ಲಲ್ಲಿ ಸಣ್ಣಮಟ್ಟ ಪ್ರಯತ್ನಗಳು ನಡೆದರೂ ಅವು ಕಾಯಿ ಕಚ್ಚಿ ಹಣ್ಣಾಗುವ ಮೊದಲೇ ಉದುರಿ ಹೋಗುತ್ತಿವೆ. ನಮ್ಮ ಕಣ್ಣೆದುರಿನ ದಲಿತ ಚಳವಳಿ, ರೈತ ಚಳವಳಿ ಇದಕ್ಕೆ ಸಮರ್ಥ ಉದಾಹರಣೆಗಳಾಗಿವೆ.

ಚಳವಳಿಗಳನ್ನು ಸಮರ್ಥವಾಗಿ ಮುನ್ನಡೆಸಬೇಕಾದ ನಿಮ್ಮಂಥವರು ಯಾಕೋ ಹಿಂದಡಿ ಇಡುತ್ತಿದ್ದಿರೆಂಬ ಆತಂಕ ನನ್ನನ್ನು ಕಾಡಿಸುತ್ತಿದೆ. ನಾಗರಿಕ ಸಮಾಜ ಉಳಿಯುವುದೇ ಅಂತ ಪ್ರಶ್ನಿಸುವ ಬದಲು, ಅದನ್ನು ಉಳಿಸಲು ಮುಂದಾಗಬೇಕೆಂಬುದೇ ನನ್ನ ಪ್ರೀತಿಯ ಆಗ್ರಹವಾಗಿದೆ.

ನಾಡಿನಾದ್ಯಂತ ಹರಿದು ಹಂಚಿ ಹೋಗಿರುವ ಎಲ್ಲ ಪ್ರಗತಿ ಪರ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ಭಿನ್ನಾಭಿಪ್ರಾಯ, ವೈಯಕ್ತಿಕ ತಿಕ್ಕಲುತನಗಳನ್ನು ಬಿಟ್ಟು ಒಂದಾಗಿ ಮುಂದಡಿ ಇಡದಿದ್ದರೆ, ನಮ್ಮನ್ನು ಮುಂದಿನ ಜನಾಂಗ ಕ್ಷಮಿಸುವುದಿಲ್ಲ. ಆ ಅರಿವು ಎಲ್ಲರಲ್ಲಿ ಮೂಡಲಿ ಎಂದು ಪ್ರತಿ ಪೂರ್ವಕವಾಗಿ ಹಾರೈಸುತ್ತೇನೆ.

ಕೆ.ಆರ್. ಶಂಕರಲಿಂಗಪ್ಪ,
ಬೆಂಗಳೂರು.

ವಿವೇಕಾನಂದ ಕ್ರಾಂತಿಕಾರಿ ವಿಚಾರಗಳು
ಸಂ: ಜ. ಹೊ. ನಾರಾಯಣ ಸ್ವಾಮಿ
ಬೆಲೆ: ರೂ. ೬೦/-

ಸ್ವಾಮಿ ವಿವೇಕಾನಂದರನ್ನು 'ಹಿಂದೂ ಸನ್ಯಾಸಿ' ಎಂದು ಹೇಳಿ ಸಂಘ ಪರಿವಾರ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಜ.ಹೊ.ನಾ ಅವರ ಈ ಕೃತಿ ಅತ್ಯಂತ ಮುಖ್ಯವಾಗಿದೆ. ೧೯೮೬ ರಲ್ಲಿ ಪ್ರಥಮ ಮುದ್ರಣಗೊಂಡ ಈ ಕ್ರಾಂತಿಕಾರಿ ಪುಸ್ತಕ ಇದೀಗ ನಾಲ್ಕನೇ ಮುದ್ರಣ ಕಾಣುತ್ತಿದೆ. ವಿವೇಕಾನಂದ, ಭಾರತದ ಜಡ್ಡುಗಟ್ಟಿದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹೊಸ ಸ್ವಾಭಿಮಾನ ಹಾಗೂ ಸ್ವಾತಂತ್ರ್ಯದ ಸಂಚಲನವನ್ನು ಉಂಟು ಮಾಡಿದವರು. ಬ್ರಾಹ್ಮಣಶಾಹಿ ಹಾಗೂ ಪುರೋಹಿತಿಶಾಹಿಯ ದಬ್ಬಾಳಿಕೆಗಳನ್ನು ಧಿಕ್ಕರಿಸಿ ಭಾರತ ಜನಮಾನಸದಲ್ಲಿ ಜಾಗೃತಿಯ ಹಣತೆ ಹಚ್ಚಿದವರು. ಅವರ ವಿಚಾರಗಳನ್ನೊಳಗೊಂಡ ಮಹತ್ವದ ಕೃತಿ ಇದು.

ಪ್ರಕಾಶಕರು: ಮಾನವ ಪ್ರಕಾಶನ
ಉತ್ತರ ಬಡಾವಣೆ, ಹಾಸನ.

ಮಕ್ಕಳ ಮಾತು
ಪುನರ್ವಸತಿ ಹೊಂದಿದ ಬಾಲ ಕಾರ್ಮಿಕರ ಮಾತುಗಳು. ಬೆಲೆ: ರೂ. ೨೫/-

ಬಾಲಕಾರ್ಮಿಕರಾಗಿ ದುಡಿಯುತ್ತಿದ್ದ ಮಕ್ಕಳು ಪುನರ್ವಸತಿ ಹೊಂದಿದ ನಂತರ ವ್ಯಕ್ತ ಪಡಿಸಿರುವ ಅಭಿಪ್ರಾಯಗಳು ಸಂಗ್ರಹ ಇದು. ಇಲ್ಲಿಯ ಮಕ್ಕಳ ಅಭಿಪ್ರಾಯಗಳನ್ನು ಓದುತ್ತಿದ್ದಂತೆ ದುಡಿಯುವ ಮಕ್ಕಳ ಭಾವಲೋಕವೇ ತೆರೆದುಕೊಳ್ಳುತ್ತದೆ. ಕುಟುಂಬ, ತಾಯ್ತಂದೆ, ಶಾಲೆ, ಮೇಸ್ತ್ರುಗಳು, ದುಡಿತ, ಮಾಲೀಕರು ಹೀಗೆ ಎಲ್ಲರ ಕ್ರೂರತನ ದಬ್ಬಳಿಕೆಗಳು ಹೇಳಿ ಮಕ್ಕಳ ಮನಸ್ಸಿನ ಮೇಲೆ ಛಾಪಿ ಮಾಡುತ್ತವೆ ಎಂಬುದು ಈ ಮಕ್ಕಳ ಮಾತುಗಳಲ್ಲಿ ವ್ಯಕ್ತವಾಗುತ್ತದೆ.

ಪ್ರಕಾಶಕರು: ಜಿಲ್ಲಾಡಳಿತ, ಯೂನಿಸೆಫ್-ನೊರಾಡ್‌ಯೋಜನೆ
ಮತ್ತು ಕಾರ್ಮಿಕ ಇಲಾಖೆ, ದಾವಣಗೆರೆ.

ಹೊಸ ಪುಸ್ತಕ

ಸಮಕಾಲಿನ ಸಮಾಜವಾದ
ಲೇ: ಸುರೇಂದ್ರ ಮೋಹನ್.
ಅನು: ಪ್ರೊ॥ ಹನುಮಂತು
ಬೆಲೆ: ರೂ. ೧೦/-

ಬದ್ಧತೆಯಲ್ಲಿ ಇನ್ನೂ ಸಮಾಜವಾದಿಯಾಗಿ ಉಳಿದಿರುವ ಕೆಲವೇ ನಾಯಕರಲ್ಲಿ ಒಬ್ಬರಾಗಿರುವ ಸುರೇಂದ್ರ ಮೋಹನ್ ಅವರ ಆಯ್ದ ಲೇಖನಗಳ ಸಂಗ್ರಹ ಇದು. ಸಮಕಾಲೀನ ಸಮಾಜವಾದ, ತೃತೀಯ ಜಗತ್ತಿನ ಸಮಾಜವಾದ, ೨೧ನೇ ಶತಮಾನ: ಮಾರ್ಕ್ಸ್, ಗಾಂಧಿ ಪ್ರಸ್ತುತತೆ, ಜನತೆಗೆ ಅಧಿಕಾರ ಮತ್ತು ಒಂದು ಹೊಸ ಸಮಾಜವಾದಿ ಪ್ರಯತ್ನ -ಲೇಖನಗಳ ಮೂಲಕ ಸಮಾಜವಾದದ ಅಗತ್ಯ, ಮತ್ತು ಅನಿವಾರ್ಯತೆಗಳನ್ನು ಗಂಭೀರವಾಗಿ ಇಲ್ಲಿ ಚರ್ಚಿಸಲಾಗಿದೆ

ಪ್ರಕಾಶಕರು: ಸುರೇಂದ್ರ ಮೋಹನ್ ಅಭಿನಂದನಾ ಸಮಿತಿ ಬೆಂಗಳೂರು.

ನನ್ನ ಹೆಜ್ಜೆ ಗುರುತುಗಳು
ಲೇ: ಚಂದ್ರಶೇಖರ್
ಅನು: ಮಂಗ್ಳೂರು ವಿಜಯ
ಬೆಲೆ: ರೂ. ೧೦೦/-

ಮಾಜಿ ಪ್ರಧಾನಿ ಚಂದ್ರಶೇಖರ್ ಅವರ ಆತ್ಮಕತೆ ಇದು. ಅಪರೂಪದ ರಾಜಕಾರಣಿ, ಹೋರಾಟಗಾರ, ಚಿಂತಕರಾಗಿ ದೇಶಾದ್ಯಂತ ಪರಿಚಿತರಾಗಿರುವ ವ್ಯಕ್ತಿಯೊಬ್ಬರ ಆತ್ಮಕತೆ ಸಹಜವಾಗಿಯೇ ಎಲ್ಲರ ಗಮನ ಸೆಳೆಯುತ್ತದೆ. ಸಮಾಜವಾದಿಯಾಗಿದ್ದುಕೊಂಡು ಸಮಾಜವಾದಿ ಆಂದೋಲನದ ಎಲ್ಲ ವೈರುಧ್ಯಗಳನ್ನು ಖಂಡಿಸಿದ ನಿಷ್ಠುರವಾದಿ. ಪ್ರಧಾನಿಯಾಗಿ ಯಾರಿಗೂ ಬಗ್ಗದೆ ಕೆಲಸ ಮಾಡಿದ ವ್ಯಕ್ತಿತ್ವ ಅವರದು. ಚಂದ್ರಶೇಖರ್ ಬಗ್ಗೆ ತಿಳಿಯಲು ಈ ಕೃತಿ ನಿಜಕ್ಕೂ ಸಹಕಾರಿ.

ಪ್ರಕಾಶಕರು: ಭಾರತ ಯಾತ್ರಾ ಕೇಂದ್ರ
ರಾಜಾಜಿನಗರ, ಬೆಂಗಳೂರು.

ಸಾಹಿತ್ಯ ವಿಮರ್ಶೆ
ಲೇ: ಡಾ॥ ಬಸವರಾಜ ಸಬರದ
ಬೆಲೆ: ರೂ. ೪೫/-

ಸಾಹಿತ್ಯದ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಕೈಯಾಡಿಸಿರುವ ಡಾ॥ ಬಸವರಾಜ ಸಬರದ ಅವರ 'ಸಾಹಿತ್ಯ ವಿಮರ್ಶೆ' ಕುರಿತ ಪುಸ್ತಕ ಇದು. ಸ್ವತಃ ಪ್ರಾಧ್ಯಾಪಕರು ಆಗಿರುವ ಸಬರದ ಅವರು ವಿಮರ್ಶೆಯ ಪಾಠ ಮಾಡುವಾಗ ವಿದ್ಯಾರ್ಥಿಗಳು ಎದುರಿಸಬಹುದಾದ ವಿವಿಧ ಸಮಸ್ಯೆ, ಸಂಶಯಗಳನ್ನು ಈ ವಿಮರ್ಶಾ ಕೃತಿಯ ಮೂಲಕ ಪರಿಹರಿಸಲು ಪ್ರಯತ್ನಿಸಿದ್ದಾರೆ. ಸಾಂಪ್ರದಾಯಿಕ ವಿಮರ್ಶಾ ಮಾನದಂಡಗಳಿಗೆ ಹೊರತಾದ ಅಂಶಗಳಿಗೂ ಇಲ್ಲಿ ಒತ್ತು ಕೊಡಲಾಗಿದೆ. ವಿಮರ್ಶೆಯ ಸಂವಹದ ತೊಡಕಿಗೆ ಇಲ್ಲಿ ಉತ್ತರ ಸಿಕ್ಕಿದೆ ಎನ್ನಬಹುದು. ಸಾಹಿತ್ಯದ ವಿದ್ಯಾರ್ಥಿಗಳಿಗೆ ಈ ಕೃತಿ ಉಪಯುಕ್ತವಾಗಬಲ್ಲದು.

ಪ್ರಕಾಶಕರು: ಪಲ್ಲವಿ ಪ್ರಕಾಶನ
ಸರಸ್ವತಿಪುರ, ಗುಲಬರ್ಗಾ-೫೮೫೧೦೬



ಸ್ವೀಕೃತ ಪುಸ್ತಕಗಳು

ಲಿಂಗಾಯತ ಪುಣ್ಯಪುರುಷ ರತ್ನ ಮಾಲೆ ಪ್ರಕಟಣೆಗಳು

* ಪಂ. ಬಸವರಾಜ ಶಾಸ್ತ್ರಿಗಳು
  ಕೋಡಿಕೇ ಸ್ವಮಠ
  ಲೇ: ಶಶಿಕಲಾ ವೀರಯ್ಯಸ್ವಾಮಿ
  ಬೆಲೆ: ರೂ. ೫/-
* ಚಿಕ್ಕ ಕಬ್ಬೂರು ಶರಣ ಲಿಂಗಪ್ಪಗೌಡರು
  ಲೇ: ಡಾ॥ ಭೋಜರಾಜ ಪಾಟೀಲ
  ಬೆಲೆ: ರೂ. ೫/-
* ಎಂ.ಬಿ. ಬೂದಿಹಾಳ ಮಠ
  ಲೇ: ಯು.ಎಸ್. ಸಂಗನಾಳ ಮಠ
  ಬೆಲೆ: ರೂ. ೫/-
* ತೆಲಗಿ ಹನುಮಂತಪ್ಪ
  ಲೇ: ಎನ್.ಎಂ. ಕೊಟ್ರೇಶ್
  ಬೆಲೆ: ರೂ. ೨೦/-

ಸಂಪಾದಕೀಯ



ಅಂತರಂಗ

ನನ್ನ ಉತ್ತರ ನಿಮ್ಮ ಉತ್ತರವಾಗಬಹುದೇ?

ಮತ್ತೆ ಮತ್ತೆ ಒಂದೇ ವಿಚಾರ ಕುರಿತು ಬರೆಯುವುದು ಸಂತೋಷದ ವಿಷಯವೇನೂ ಅಲ್ಲ. ಆದರೆ ಪರಿಸ್ಥಿತಿ ಹಾಗೆ ಬರೆಯಲೇಬೇಕಾದಂತ ಒತ್ತಡವನ್ನು ಸೃಷ್ಟಿಸುತ್ತದೆ.

ಕಳೆದ ವಾರ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಎರಡು ದಿನಗಳ ವಿಚಾರ ವಿನಿಮಯ ಕಾರ್ಯಕ್ರಮ ಇತ್ತು. ಕಾನೂನು ಶಾಲೆಯ 'ಜಾತಿವಾದ, ಕೋಮುವಾದ ಮತ್ತು ಕಾನೂನು ಅಧ್ಯಯನ ಕೇಂದ್ರ' ಈ ಚರ್ಚೆಯನ್ನು ಏರ್ಪಡಿಸಿತ್ತು. ಪ್ರೊ॥ ಜಾಫೆಟ್ ಇದರ ರೂವಾರಿ.

ರಾಷ್ಟ್ರ ಮಟ್ಟದ ಹಲವು ಚಿಂತಕರು, ಹೋರಾಟಗಾರರು, ಬರಹಗಾರರು ಅದರಲ್ಲಿ ಪಾಲ್ಗೊಂಡಿದ್ದರು. ತುಂಬ ಅರ್ಥಪೂರ್ಣ ಹಾಗೂ ಗಂಭೀರ ಚರ್ಚೆ ಅಲ್ಲಿ ನಡೆಯಿತು.

ಚರ್ಚೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾದಲ್ಲಿ 'ದಲಿತ ಮತ್ತು ಅಲ್ಪಸಂಖ್ಯಾತರನ್ನು ಕುರಿತಾದ ಡಾ॥ ಕೆ.ಆರ್. ನಾರಾಯಣನ್ ಅಧ್ಯಯನ ಕೇಂದ್ರ'ದ ನಿರ್ದೇಶಕ ಡಾ॥ ಚೆನ್ನಾರಾವ್ ಯಗಟಿ ನೀಡಿದ ಮಾಹಿತಿ ನನ್ನನ್ನು ದಂಗು ಬಡಿಸಿತು.

೨೦೦೬ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ನೀಡಿದ ವರದಿ ಆಧಾರದ ಮಾಹಿತಿಯೊಂದನ್ನು ಅವರು ಒದಗಿಸಿದರು. ಅದರ ಪ್ರಕಾರ ಹದಿನೆಂಟು ಕೇಂದ್ರೀಯ ವಿಶ್ವ ವಿದ್ಯಾಲಯಗಳಲ್ಲಿನ ಪ್ರೊಫೆಸರ್‌ಗಳಲ್ಲಿ ಪರಿಶಿಷ್ಟ ಜಾತಿ/ವರ್ಗದ ಪ್ರೊಫೆಸರ್‌ಗಳಿರುವುದು ಕೇವಲ ಶೇಕಡಾ ೧.೯೫ ಮಾತ್ರ! ಉಳಿದಂತೆ ಶಿಕ್ಷಕ ವರ್ಗದಲ್ಲಿರುವರು ಕೇವಲ ಶೇಕಡಾ ೮ರಷ್ಟು ಮಾತ್ರ!

ಸರಿಯಾದ ಅಂಕಿ ಸಂಖ್ಯೆಗಳಲ್ಲೇ ಹೇಳುವುದಾದರೆ, ಪರಿಶಿಷ್ಟ ಜಾತಿಯಿಂದ ಕೇವಲ ಹನ್ನೊಂದು ಮತ್ತು ಪರಿಶಿಷ್ಟ ವರ್ಗದಿಂದ ಕೇವಲ ಹದಿನೇಳು! ಈ ಹದಿನೆಂಟು ವಿಶ್ವವಿದ್ಯಾಲಯಗಳ ಪೈಕಿ ಸುಮಾರು ಹದಿಮೂರು ವಿಶ್ವವಿದ್ಯಾಲಯಗಳಲ್ಲಿ ಕೇವಲ ಒಬ್ಬ ಪ್ರೊಫೆಸರ್ ಕೂಡ ಇಲ್ಲ! ನಿಮಗೆ ನಂಬಿಕೆ ಬರದಿದ್ದರೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ೨೦೦೬ರ ವಾರ್ಷಿಕ ವರದಿಯನ್ನು ನೋಡಿ ಖಚಿತ ಪಡಿಸಿಕೊಳ್ಳಿ!

ಇದೆಂಥಾ ದುರಂತ ಎಂದು ನಿಮಗೆ ಅನ್ನಿಸಬಹುದು. ಆದರೆ ಇದು ವಸ್ತು ಸ್ಥಿತಿ. ಭಾರತದ ಶ್ರೇಷ್ಠ ನ್ಯಾಯಾಲಯ ಮೀಸಲಾತಿಯಲ್ಲಿ 'ಕೆನೆಪದರ' ವಿಭಾಗಿಸುವ ಚಿಂತನೆ ಮಾಡುತ್ತಿರುವಾಗ ವಾಸ್ತವ ಇಡೀ ನ್ಯಾಯಾಂಗವನ್ನೇ ಅಣಕಿಸುತ್ತಿದೆ. ಸಂವಿಧಾನದತ್ತ ಮೀಸಲಾತಿಯನ್ನು ಜಾರಿಗೆ ತರಬೇಕಾದ ಕೇಂದ್ರ ಸರ್ಕಾರದ ನೇರ ಅಧೀನದಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲೇ ಹೀಗಾದರೆ ಉಳಿದ ಕಡೆ ಪರಿಸ್ಥಿತಿ ಹೇಗಿರಬಹುದು ಯೋಚಿಸಿ? ೫೦ ವರ್ಷಗಳ ಹಿಂದೆ ಆರಂಭವಾದ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸುಮಾರು ೨೫ ವರ್ಷಗಳ ಕಾಲ ಮೀಸಲಾತಿಯನ್ನು ಜಾರಿಗೊಳಿಸಲು ನಿರಾಕರಿಸಿತ್ತು. ೧೯೭೫ ರಿಂದಷ್ಟೇ ಅದು ಮೀಸಲಾತಿಯನ್ನು ಜಾರಿಗೊಳಿಸಲು ಒಪ್ಪಿಕೊಂಡಿತು. ಹಾಗೆ ಒಪ್ಪಿಕೊಂಡ ನಂತರವಾದರೂ ಪ್ರಾಮಾಣಿಕವಾಗಿ ಮೀಸಲಾತಿಯನ್ನು ಜಾರಿಗೆ ತಂದಿದ್ದರೆ ಮೇಲಿನ ಅಂಕಿ ಅಂಶಗಳು ಹೇಗಿರಬೇಕಾಗಿತ್ತು ಅನ್ನುವುದು ನಿಮಗೇ ಹೊಳೆಯುತ್ತದೆ.

ಇನ್ನು ನ್ಯಾಯಾಂಗ ವ್ಯವಸ್ಥೆಯನ್ನು ನೋಡಿ. ನ್ಯಾಯಾಂಗದಲ್ಲಂತೂ ಹೈಕೋರ್ಟ್-ಸುಪ್ರಿಂಕೋರ್ಟ್‌ಗಳ ನ್ಯಾಯಾಧೀಶರ ಆಯ್ಕೆಯಲ್ಲಿ ಮೀಸಲಾತಿ ಇನ್ನು ಜಾರಿಯಾಗಿಲ್ಲ. ನ್ಯಾಯಾಂಗದ ಪಂಡಿತರಿಗಿನ್ನೂ ಮೀಸಲಾತಿಯ ಕಲ್ಪನೆ ಅರ್ಥ ಆಗಿಲ್ಲ. ಅಲ್ಲಿ 'ಪ್ರತಿಭೆ'ಗಷ್ಟೇ ಮಾನ್ಯತೆ! ಆದರೆ ಈ 'ಪ್ರತಿಭೆ' ಕೆಲವೇ ಜನರಲ್ಲಿ ಮಾತ್ರ ಕಾಣಿಸುತ್ತಿರುವುದಕ್ಕೆ ಯಾವ ರೋಗ ಕಾರಣವಿರಬಹುದೆನ್ನುವುದು ಇನ್ನೂ 'ವೈದ್ಯವಿಜ್ಞಾನ'ಕ್ಕೆ ದೊಡ್ಡ ಸವಾಲಾಗೇ ಇದೆ!

೧೯೯೮ ರ ಅಂಕಿ ಅಂಶಗಳನ್ನು ನೋಡುವುದಾದರೆ, ಆಗ ನೇಮಕವಾದ ೪೮೧ ಮಂದಿ ಹೈಕೋರ್ಟ್ ನ್ಯಾಯಾಧೀಶರುಗಳಲ್ಲಿ ಕೇವಲ ಇಪ್ಪತ್ತು ಮಂದಿ ಮಾತ್ರ ಪರಿಶಿಷ್ಟ ಜಾತಿ/ವರ್ಗದವರು. ಸುಪ್ರೀಂ ಕೋರ್ಟ್‌ಗೆ ನೇಮಕಗೊಂಡ ೨೧ ಮಂದಿ ನ್ಯಾಯಮೂರ್ತಿಗಳಲ್ಲಿ ಪರಿಶಿಷ್ಟ ಜಾತಿ/ವರ್ಗದ ಒಬ್ಬರೂ ಇಲ್ಲ! (ಈಗ ಸುಪ್ರೀಂ ಕೋರ್ಟ್‌ನಲ್ಲಿ ಪರಿಶಿಷ್ಟ ಜಾತಿಯ ಒಬ್ಬರು ಮತ್ತು ಪರಿಶಿಷ್ಟವರ್ಗದ ಒಬ್ಬರು ನ್ಯಾಯ ಮೂರ್ತಿಗಳು ಇದ್ದಾರೆ)

ನ್ಯಾಯದಾನದ ಅತ್ಯುನ್ನತ ಸಂಸ್ಥೆಗಳಲ್ಲಿ ತಳಸಮುದಾಯಗಳನ್ನು ಪ್ರತಿನಿಧಿಸುವ ನ್ಯಾಯಮೂರ್ತಿಗಳು ಸರಿಯಾದ ಪ್ರಮಾಣದಲ್ಲಿ ಇರದಿದ್ದರೆ ಅಂಥ ನ್ಯಾಯಾಂಗ ವ್ಯವಸ್ಥೆಯಿಂದ ನ್ಯಾಯವನ್ನು ನಿರೀಕ್ಷಿಸುವುದಾದರೂ ಹೇಗೆ? ವಿಶ್ವವಿದ್ಯಾಲಯಗಳಂಥ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲ ಸಮುದಾಯಗಳ ಸಹಭಾಗಿತ್ವ ಇಲ್ಲದಿದ್ದರೆ, ಅಲ್ಲಿ ಸಮಾಜದ ಎಲ್ಲ ಜನವರ್ಗಗಳು ಶಿಕ್ಷಣ ಪಡೆಯುವುದಾದರೂ ಹೇಗೆ?

ಇಂಥ ಸಣ್ಣ ತಿಳುವಳಿಕೆ ಇವುಗಳನ್ನು ಮನ್ನಡೆಸುವ ಮಹಾ 'ಪಂಡಿತ'ರಿಗೆ ಇರದಿದ್ದರೆ ಅವುಗಳನ್ನು ನ್ಯಾಯಾಲಯಗಳೆಂದಾಗಲಿ, ವಿಶ್ವವಿದ್ಯಾಲಯಗಳೆಂದಾಗಲಿ ಕರೆಯುವುದಾದರೂ ಹೇಗೆ? ಸಂವಿಧಾನದತ್ತವಾಗಿ ಕಾರ್ಯ ನಿರ್ವಹಿಸಬೇಕಾದ ಸರ್ಕಾರ ಇದರ ಬಗ್ಗೆ ಜಾಣ ಕುರುಡು ಪ್ರದರ್ಶಿಸುವುದಾದರೆ ಅದನ್ನು ಸಹಿಸುವುದಾದರೂ ಹೇಗೆ?

ವಸ್ತು ಸ್ಥಿತಿ ಹೀಗಿರುವಾಗ ನ್ಯಾಯಾಂಗ 'ಕೆನೆಪದರ'ದ ಬಗ್ಗೆ ಚಿಂತಿಸುತ್ತಿದೆ ಎಂದರೆ ಅದರ ಉದ್ದೇಶದ ಹಿಂದಿನ ಕೃತ್ರಿಮತೆ ಏನಿರಬಹುದೆಂದು ದಿಗಿಲಾಗುತ್ತಿದೆ. ಇಂಥ ಕೃತ್ರಿಮ 'ಪಂಡಿತ'ರ ಕೈಗೆ ಸಿಕ್ಕೇ ಕಾನೂನು ಸಮರ್ಪಕವಾಗಿ ಜಾರಿಯಾಗಲು ಸಾಧ್ಯವಾಗುತ್ತಿಲ್ಲ. ನ್ಯಾಯಾಂಗ, ಕಾರ್ಯಾಂಗಗಳ ಅಪವಿತ್ರ ಶಾಮೀಲಿನಿಂದಾಗಿ ತಳ ಸಮುದಾಯಗಳಿಗೆ ನ್ಯಾಯ ನೀಡುವಲ್ಲಿ ವಿಫಲವಾದ ಉದಾಹರಣೆಗಳೇ ಹೆಚ್ಚು.

ಇದೇ ರಾಷ್ಟ್ರೀಯ ಕಾನೂನು ಶಾಲೆ ನಡೆಸಿದ ಸಮೀಕ್ಷೆ, ಕರ್ನಾಟಕವಂತೂ ದಲಿತರಿಗೆ ನ್ಯಾಯ ನೀಡುವಲ್ಲಿ ದೇಶದಲ್ಲೇ ಕಡೇ ಸ್ಥಾನದಲ್ಲಿದೆ ಎಂದು ಹೇಳಿದೆ. ೧೯೭೭ ಮತ್ತು ೨೦೦೦ ಇಸವಿ ನಡುವೆ ನಡೆದ ದೌರ್ಜನ್ಯ ತಡೆ ಕಾಯ್ದೆ ಅನ್ವಯ ಹೂಡಲಾದ ಮೊಕದ್ದಮೆಗಳಲ್ಲಿ ಕೇವಲ ಒಂದು ಮೊಕದ್ದಮೆಯಲ್ಲಿ ಮಾತ್ರ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ. ಅದೂ ಇದಕ್ಕಾಗೇ ಮೀಸಲಾದ ವಿಶೇಷ ನ್ಯಾಯಾಲಯದಿಂದ!

ದಕ್ಷಿಣ ರಾಜ್ಯಗಳಿಗೆ ಸಂಬಂಧಿಸಿದ ೬೪೬ ಪ್ರಕರಣಗಳನ್ನು ರಾಷ್ಟ್ರೀಯ ಕಾನೂನು ಶಾಲೆ ಸಮೀಕ್ಷೆಗೆ ಆಯ್ದು ಕೊಂಡಿದ್ದು ಅವುಗಳಲ್ಲಿ ಕೇವಲ ೨೭ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ವಜಾಗೊಳಿಸಲಾದ ೫೫೧ ಪ್ರಕರಣಗಳಲಿ ಕರ್ನಾಟಕದ್ದು ಸಿಂಹಪಾಲು.

ಈ ದೇಶ ಎಲ್ಲರಿಗೂ ಸೇರಿದ್ದು. ಇಲ್ಲಿನ ಕಾನೂನು ಎಲ್ಲರಿಗೂ ಒಂದೇ ರೀತಿ ಅನ್ವಯಿಸಬೇಕಾದ್ದು. ಆದರೆ ವಸ್ತುಸ್ಥಿತಿ ಹೇಗಿದೆ? ನನ್ನ ಉತ್ತರವೇ ನಿಮ್ಮ ಉತ್ತರವಾಗಬಹುದೇ?

○ ಇಂದೂಧರ ಹೊನ್ನಾಪುರ

ಅಂಬೇಡ್ಕರ್ ಪುಣ್ಯತಿಥಿಯನ್ನು ಆಚರಿಸಲು ಲಕ್ಷಾಂತರ ಜನ- ಕೆಲವೊಮ್ಮೆ ಸುಮಾರು ೧೦ ಲಕ್ಷದಷ್ಟು ಜನ- ಯಾವ ಕಾರಣಕ್ಕಾಗಿ ಬರುತ್ತಾರೆ ಎಂಬ ಪ್ರಶ್ನೆಯನ್ನು ಮಾಧ್ಯಮಗಳ ಕೆಲವು ಪ್ರತಿನಿಧಿಗಳಾದರೂ ಕೇಳುವ ಅಥವಾ ತಿಳಿದುಕೊಳ್ಳುವ ಗೋಜಿಗೆ ಹೋಗಲಿಲ್ಲ. ಸತ್ತು ೫೦ ವರ್ಷಗಳಾದರೂ, ಈಗಲೂ ಈ ಮಟ್ಟದಲ್ಲಿ ಜನರನ್ನು ಸೆಳೆಯುವ ಬೇರೆ ಯಾರಾದರೂ ಒಬ್ಬ ನಾಯಕ ಜಗತ್ತಿನಲ್ಲಿದ್ದಾರಾ? ಇಂಥಹಾ ಜನರ ಹೃದಯಕ್ಕೆ ಹತ್ತಿರವಾದ ಸಮಾರಂಭಕ್ಕೆ, ಯಾವುದೇ ರಾಜಕೀಯ ಪಕ್ಷ, ವೇದಿಕೆ, ಅಥವಾ ಸಂಸ್ಥೆಯಿಂದ ಆಯೋಜಿಸಲ್ಪಡದ ಸಮಾರಂಭಕ್ಕೆ ಜನಸಾಗರ ಹರಿದು ಬರುತ್ತದೆ. ಆದರೆ ಮಾಧ್ಯಮಗಳು ಬಡ ಹಾಗೂ ಶೋಷಿತ ಜನಸಮುದಾಯ ಇಲ್ಲಿಗೆ ಬರುವುದನ್ನು ಗುರುತಿಸುವುದೂ ಇಲ್ಲ.

ಪಿ. ಸಾಯಿನಾಥ್
ಅನು:
ಸತ್ಯಪ್ರಕಾಶ್ ಎಂ. ಆರ್

ಉಳ್ಳವರನ್ನು ಕಾಡುತ್ತಿರುವ ಪ್ರಜಾಪ್ರಭುತ್ವದ ಭೀತಿ!

"ಆಕ್ರಮಣಕ್ಕೆ ಸಿದ್ಧರಾಗಿ." "ಸಂಭವನೀಯ ಗೊಂದಲದಿಂದ ಪಾರಾಗಲು ಈ ಮಾರ್ಗದರ್ಶಿಯನ್ನು ಅನುಸರಿಸಿ. ದಲಿತರು ಕೂಡ ಈ ಮಹಾವಲಸೆಯಲ್ಲಿ ಭಾಗಿಯಾಗುತ್ತಿದ್ದಾರೆ. ನಿಮಗೆ ಮಂಗಳವಾರದ ಅನುಭವ ಕಷ್ಟಕರವಾಗಿತ್ತೇ? ಇಂದು ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ." ಹಿಂಸೆಯ ಕರಿನೆರಳು ಎಲ್ಲೆಲ್ಲೂ ಆವರಿಸಿದೆ- ಇದೊಂದು ದುಃಸ್ವಪ್ನ. "ಬಡ ಮುಂಬೈ ಪೊಲೀಸರು ಇವೆಲ್ಲದರ ಹೊಡೆತಗಳನ್ನು ಎದುರಿಸಬೇಕಾಗಿದೆ."

ಇವು ಪತ್ರಿಕೆಗಳ ಮತ್ತು ಟಿವಿ ವಾಹಿನಿಗಳ ಆಯ್ದ ಕೆಲವು ತಲೆಬರಹಗಳು (ಇವುಗಳಲ್ಲಿ ಕೆಲವು ಮುಖಪುಟದ ಲೀಡ್‌ಗಳು). ಡಾ. ಬಿ ಆರ್ ಅಂಬೇಡ್ಕರರ ೫೦ನೇ ವರ್ಷದ ಪುಣ್ಯತಿಥಿಯನ್ನು ಆಚರಿಸಲು ಡಿ. ೬ರಂದು ಲಕ್ಷಾಂತರ ಸಂಖ್ಯೆಯಲ್ಲಿ ಮುಂಬೈಗೆ ಆಗಮಿಸಿದ್ದ ದಲಿತರನ್ನು ಉದ್ದೇಶಿಸಿ ಈ ತಲೆಬರಹಗಳನ್ನು ಬರೆಯಲಾಗಿತ್ತು. ಕೆಲವು ನಿದರ್ಶನಗಳನ್ನು ಹೊರತುಪಡಿಸಿದರೆ, ಅಂಬೇಡ್ಕರ್ ಪುಣ್ಯತಿಥಿಯ ಸಂದರ್ಭದ ಮಾಧ್ಯಮ ವರದಿಗಾರಿಕೆ, ಮಹಾರಾಷ್ಟ್ರದ ಖೇರ್ಲಾಂಜಿ ಘಟನೆಯ ನಂತರದ ಪ್ರತಿಭಟನೆಗಳ ವರದಿಗಾರಿಕೆಯನ್ನೇ ಹೋಲುತ್ತಿತ್ತು.

ಮಹಾನ್ ವ್ಯಕ್ತಿ ಅಂಬೇಡ್ಕರ್‌ರ ಪುಣ್ಯತಿಥಿಯ ಆಚರಣೆ ನಡೆಯುತ್ತಿರುವುದು ಇದು ಮೊದಲೇನಲ್ಲ. ಈ ದಿನ ಮುಂಬೈನಲ್ಲಿರುವ 'ಚೈತ್ಯಭೂಮಿ'ಯನ್ನು ನೋಡಲು ಲಕ್ಷಾಂತರ ಮಂದಿ ಜನರು ಧಾವಿಸುತ್ತಾರೆ. ಈ ವರ್ಷ ಕೂಡ ಸಾಕಷ್ಟು ಶಿಸ್ತು ಸಂಯಮದಿಂದ ಲಕ್ಷಾಂತರ ಜನರು ಭೇಟಿ ನೀಡಿದರು. ಮಾಧ್ಯಮಗಳ ತಲೆಬರಹಗಳು ಭವಿಷ್ಯ ನುಡಿದಂತೆ ಏನೂ ಸಂಭವಿಸಲಿಲ್ಲ. (ಇಡೀ ವಿಚಾರಕ್ಕೆ ಅನವಶ್ಯಕವಾಗಿ ನಕಾರಾತ್ಮಕ ಪ್ರಚಾರ ನೀಡಲಾಯಿತು. ಆದರೆ ಯಾವುದೇ ರೀತಿಯ ಅಹಿತಕರ ಘಟನೆ ನಡೆಯಲೇ ಇಲ್ಲ.) ಹಾಗಾದರೆ ಈ ಭೀತಿ ಯಾಕೆ? ಖೇರ್ಲಾಂಜಿ ಕಗ್ಗೊಲೆಯ ನಂತರ ಸ್ವಲ್ಪಮಟ್ಟಿಗೆ ಹಿಂಸೆ ಸಂಭವಿಸಿತು ಎಂಬ ಕಾರಣಕ್ಕಾಗಿಯೇ? ಈಗ 'ದಲಿತ'ರಿಗೆ ಸಂಬಂಧಿಸಿದ ಪ್ರತಿಯೊಂದು ವಿಚಾರವನ್ನು "ಘಟನೆಯಿಂದಾಗಿ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಯಾಗಲಿದೆಯೇ ಅಥವಾ ಜನಜೀವನ ಅಸ್ತವ್ಯಸ್ತಗೊಳ್ಳಲ್ಲಿದೆಯೇ?' ಎಂಬ ಚೌಕಟ್ಟಿನಡಿಯೇ ನೋಡಲಾಗುತ್ತದೆ.

ಇತರ ವಾರ್ಷಿಕ ಆಚರಣೆಗಳಿಗೆ ಅನ್ವಯಿಸದೆ, ಹಲವು ದಶಕಗಳಷ್ಟು ಹಳೆಯದಾದ ಈ ಆಚರಣೆಯನ್ನು ಮಾತ್ರ ಸೀಮಿತ ಚೌಕಟ್ಟಿನಡಿ ವಿಶ್ಲೇಷಿಸಲಾಗುತ್ತಿದೆ. ಉದಾಹರಣೆಗೆ ಗಣೇಶ ಉತ್ಸವದಂತಹ ಕೆಲವು ಆಚರಣೆಗಳು ನಗರದಲ್ಲಿ ಸುಮಾರು ಹತ್ತು ದಿನಗಳವರೆಗೂ ನಡೆಯುತ್ತದೆ. ಉತ್ಸವದಿಂದಾಗಿ ವಾಹನಸಂಚಾರಕ್ಕೆ ಭಾರೀ ತೊಡಕುಂಟಾಗುವುದಷ್ಟೇ ಅಲ್ಲದೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಳ್ಳುತ್ತದೆ. ಅವುಗಳ ಬಗ್ಗೆ ಮಾಧ್ಯಮಗಳು ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಅಂಬೇಡ್ಕರ್ ಪುಣ್ಯತಿಥಿಯಂತಹ ಪ್ರಮುಖ ದಿನವನ್ನು ಇಂಗ್ಲಿಷ್ ಮಾಧ್ಯಮಗಳು ತೀರ ಸೀಮಿತವಾಗಿ ಬಿಂಬಿಸಿದೆ. ಮರಾಠಿ ಪತ್ರಿಕೆಗಳು ಕನಿಷ್ಠ ಡಿ. ೬ರಂದಾದರೂ ಕೊಂಚ ಮಟ್ಟಿಗಿನ ಸಂವೇದನೆಯನ್ನು ಪ್ರದರ್ಶಿಸಿವೆ. ಅಂದು ಮರಾಠಿ ಪತ್ರಿಕೆಗಳು ಅಂಬೇಡ್ಕರ್ ಹಾಗೂ ಅವರ ವಿಚಾರಧಾರೆಯ ಪ್ರಸ್ತುತತೆಯ ಬಗ್ಗೆ ಲೇಖನಗಳನ್ನು ಪ್ರಕಟಿಸಿದವು.

ಕೆಲವು ವಿರಳ ನಿದರ್ಶನಗಳನ್ನು ಹೊರತುಪಡಿಸಿದರೆ ಬಹುತೇಕ ಇಂಗ್ಲಿಷ್ ಮಾಧ್ಯಮಗಳು ಅಂಬೇಡ್ಕರ್ ವಾರ್ಷಿಕ ಆಚರಣೆಯನ್ನು ಟ್ರಾಫಿಕ್ ಸಮಸ್ಯೆಯೆಂಬಂತೆ ಬಿಂಬಿಸಿದವು. ಕೆಲವು ಮಾಧ್ಯಮ ಸಂಸ್ಥೆಗಳು ಇನ್ನೂ ಒಂದು ಹೆಜ್ಜೆ ಮುಂದುವರಿದು, ಇದನ್ನು ದುಃಸ್ವಪ್ನವೆಂದು ಕರೆದವು. ಅಂಬೇಡ್ಕರ್‌ರ ೫೦ನೇ ವರ್ಷದ ಪುಣ್ಯತಿಥಿಯ ಸಂದರ್ಭದಲ್ಲಿ ಅವರ ಬಗ್ಗೆ ಸ್ವಲ್ಪಮಟ್ಟಿಗಿನ ತೋರಿಕೆಯ ಆಸಕ್ತಿಯೂ ಈ ಮಾಧ್ಯಮಗಳಲ್ಲಿ ಕಂಡುಬರಲಿಲ್ಲ. 'ದಲಿತರ ನಾಯಕ' ಮಾತ್ರವಲ್ಲದೆ ಓರ್ವ ರಾಷ್ಟ್ರನಾಯಕನಾಗಿ ಜಾಗತಿಕ ಸಂದೇಶವನ್ನು ನೀಡಿದ್ದ ಅಂಬೇಡ್ಕರರಂತಹ ಮಹಾನ್ ವ್ಯಕ್ತಿಯ ಬಗ್ಗೆ ಕಿಂಚಿತ್ತೂ ಆಸಕ್ತಿ ಕಂಡುಬರಲಿಲ್ಲ. ಡಾ. ಅಂಬೇಡ್ಕರ್ ಸಂವಿಧಾನಶಿಲ್ಪಿಯಷ್ಟೇ ಆಗಿರಲಿಲ್ಲ. ರಾಷ್ಟ್ರದ ಮೊತ್ತಮೊದಲ ಕಾನೂನು ಸಚಿವರಾಗಿದ್ದ ಅಂಬೇಡ್ಕರ್ ಮಹಿಳಾ ಹಕ್ಕುಗಳಿಗೆ ಸಂಬಂಧಿಸಿದ ವಿಚಾರದ ಹಿನ್ನೆಲೆಯಲ್ಲಿ ನೆಹರು ಕ್ಯಾಬಿನೆಟ್‌ಗೆ ರಾಜೀನಾಮೆ ನೀಡಿದ್ದರು. ದೇಶದ ಲಕ್ಷಾಂತರ ಮಂದಿ ಮಹಿಳೆಯರ ಪಾಲಿಗೆ ವರವಾಗಲಿದ್ದ ಹಿಂದೂ ನೀತಿ ಸಂಹಿತೆ ಮಸೂದೆಯನ್ನು ಅಂಗೀಕರಿಸುವಲ್ಲಿ ಕ್ಯಾಬಿನೆಟ್ ಅಡ್ಡಗಾಲು ಹಾಕಿದ್ದನ್ನು ಪ್ರತಿಭಟಿಸಿ ಅಂಬೇಡ್ಕರ್ ರಾಜೀನಾಮೆ ನೀಡಿದ್ದರು.

ಅಂಬೇಡ್ಕರ್ ಪುಣ್ಯತಿಥಿಯನ್ನು ಆಚರಿಸಲು ಲಕ್ಷಾಂತರ ಜನ- ಕೆಲವೊಮ್ಮೆ ಸುಮಾರು ೧೦ ಲಕ್ಷದಷ್ಟು ಜನ- ಯಾವ ಕಾರಣಕ್ಕಾಗಿ ಬರುತ್ತಾರೆ ಎಂಬ ಪ್ರಶ್ನೆಯನ್ನು ಮಾಧ್ಯಮಗಳ ಕೆಲವು ಪ್ರತಿನಿಧಿಗಳಾದರೂ ಕೇಳುವ ಅಥವಾ ತಿಳಿದುಕೊಳ್ಳುವ ಗೋಜಿಗೆ ಹೋಗಲಿಲ್ಲ. ಸತ್ತು ೫೦ ವರ್ಷಗಳಾದರೂ, ಈಗಲೂ ಈ ಮಟ್ಟದಲ್ಲಿ ಜನರನ್ನು ಸೆಳೆಯುವ ಬೇರೆ ಯಾರಾದರೂ ಒಬ್ಬ ನಾಯಕ ಜಗತ್ತಿನಲ್ಲಿದ್ದಾರಾ? ಇಂಥಹಾ ಜನರ ಹೃದಯಕ್ಕೆ ಹತ್ತಿರವಾದ ಸಮಾರಂಭಕ್ಕೆ, ಯಾವುದೇ ರಾಜಕೀಯ ಪಕ್ಷ, ವೇದಿಕೆ, ಅಥವಾ ಸಂಸ್ಥೆಯಿಂದ ಆಯೋಜಿಸಲ್ಪಡದ ಸಮಾರಂಭಕ್ಕೆ ಜನಸಾಗರ ಹರಿದು ಬರುತ್ತದೆ. ಆದರೆ ಮಾಧ್ಯಮಗಳು ಬಡ ಹಾಗೂ ಶೋಷಿತ ಜನಸಮುದಾಯ ಇಲ್ಲಿಗೆ ಬರುವುದನ್ನು ಗುರುತಿಸುವುದೂ ಇಲ್ಲ. ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪದವಿ ಪಡೆದು ಹಿಂದಿರುಗಿ ಶೋಷಿತರ ಪರ ಹೋರಾಟದ ನಾಯಕತ್ವ ವಹಿಸಿದ್ದನ್ನು ಮಾಧ್ಯಮದವರ್‍ಯಾರೂ ನೆನಪಿಸಿಕೊಳ್ಳುವುದಿಲ್ಲ.

ಕೇವಲ ಎರಡು ರೊಟ್ಟಿಗಳನ್ನು ಕೈಯಲ್ಲಿಡಿದು ಮಧ್ಯಪ್ರದೇಶದ ಮವ್ ಎಂಬ ಹಳ್ಳಿಯಿಂದ ಮುಂಬೈನ ದಾದರ್‌ವರೆಗೆ ಹಸಿವು-ಕಷ್ಟಗಳನ್ನು ಬದಿಗೊತ್ತಿ ೭೫ ವರ್ಷದ ವಯೋವೃದ್ಧರು ಬರುತ್ತಾರೆಂದರೆ, ಅದರ ಹಿಂದಿನ ಕಾರಣಗಳನ್ನು ತಿಳಿದುಕೊಳ್ಳುವ ವಿಷಯ ದಾಹ ಪತ್ರಕರ್ತರಲ್ಲಿ ಕಂಡುಬರುವುದೇ ಇಲ್ಲ. ಬಿಡಿಗಾಸನ್ನೂ ತೆಗೆದುಕೊಳ್ಳದೆ ಸಂಗೀತಗಾರರು, ಕವಿಗಳು ದಿನಪೂರ್ತಿ ಕಾರ್ಯಕ್ರಮ ನೀಡುತ್ತಾರೆ. ತಮ್ಮದೇ ಖರ್ಚಿನಲ್ಲಿ ಪುಸ್ತಕಗಳನ್ನು ಮತ್ತು ಪಾಂಪ್ಲೆಟ್‌ಗಳನ್ನು ಮುದ್ರಿಸಿ ಲೇಖಕರು ಜನರಿಗೆ ಹಂಚುತ್ತಾರೆ. ಇವರೆಲ್ಲರೂ ಈಗಲೂ ಈಡೇರದೆ ಉಳಿದಿರುವ ಆಶಾವಾದವನ್ನು ಹೊತ್ತು ಮಹಾಮೇಳದಲ್ಲಿ ಬಂದು ಸೇರುತ್ತಾರೆ. ಅದು ಜಾತ್ಯತೀತ ಸಮಾಜ ನಿರ್ಮಾಣದ ಆಶಾವಾದ.

ದೇಶದ ಬೇರೆ ಯಾವ ನಾಯಕ ಮರಣದ ೫೦ ವರ್ಷದ ನಂತರವೂ- ಬದುಕಿದ್ದಾಗ ಬಿಡಿ- ಇಷ್ಟು ಗೌರವಕ್ಕೆ ಪಾತ್ರರಾಗುತ್ತಾರೆ? ಭಾರತದ ಹಳ್ಳಿಗಳಲ್ಲಿ ಅಂಬೇಡ್ಕರರ ಪ್ರತಿಮೆಗಳು ಇತರೆ ಯಾವುದೇ ನಾಯಕರ ಪ್ರತಿಮೆಗಳಿಗಿಂತ ಹೆಚ್ಚಾಗಿ ಕಂಡುಬರುವುದಾದರೂ ಏಕೆ? ಇತರ ನಾಯಕರಂತೆ ಅಂಬೇಡ್ಕರರ ಪ್ರತಿಮೆಗಳನ್ನು ಸರ್ಕಾರ ಪ್ರತಿಷ್ಠಾಪಿಸಿಲ್ಲ. ಇವುಗಳನ್ನು ಬಡಜನರು ತಮ್ಮದೇ ಖರ್ಚಿನಲ್ಲಿ ಪ್ರತಿಷ್ಠಾಪಿಸಿದ್ದಾರೆ. ತಮಿಳುನಾಡು,

ಉತ್ತರ ಪ್ರದೇಶ, ಮಹಾರಾಷ್ಟ್ರ ಅಥವಾ ಒರಿಸ್ಸಾ, ಯಾವುದೇ ರಾಜ್ಯದ ಬಡಜನರ ಗುಡಿಸಲುಗಳಲ್ಲಿ ಸರ್ವೇಸಾಧಾರಣವಾಗಿ ಕಾಣಿಸುವ ಚಿತ್ರಪಟಗಳು ಯಾವುವು ಎಂದು ಗಮನಿಸಿ. ಇವೆಲ್ಲವೂ ನಾವು ಅರ್ಥೈಸಿಕೊಳ್ಳಬೇಕಾದ ವಿಚಾರಗಳಲ್ಲವೇ?

ಮಹಾರಾಷ್ಟ್ರದ ದಲಿತರ ಪ್ರತಿಭಟನೆಯ ಹಿನ್ನೆಲೆಯಲ್ಲಿಯೇ ಈ ಬಾರಿ ಅಂಬೇಡ್ಕರರ ೫೦ನೇ ಪುಣ್ಯತಿಥಿಯನ್ನು ಆಚರಿಸಲಾಯಿತು. ಆದರೆ ದುರದೃಷ್ಟವಶಾತ್ ಈ ದಿನವನ್ನು ಖೇರ್ಲಾಂಜಿ ಮತ್ತು ಅದರ ಸುತ್ತಲಿನ ವಿಕೃತ ಸಾಮಾಜಿಕ ಸಂದರ್ಭವನ್ನು ಮರೆಮಾಚಲು ಬಳಸಿಕೊಳ್ಳಲಾಯಿತು. ೧೯೮೦ ಮತ್ತು ೧೯೯೦ರ ನಂತರ ಮಹಾರಾಷ್ಟ್ರದಲ್ಲಿ ದಲಿತರ ಮೇಲಿನ ದೌರ್ಜನ್ಯ ಕ್ರಮೇಣ ಹೆಚ್ಚಾಗುತ್ತಾ ಬಂದಿದೆ. ೧೯೮೮ರಲ್ಲಿ ೬೦೪ ದಲಿತ ಮಹಿಳೆಯರ ಅತ್ಯಾಚಾರ ನಡೆದಿರುವುದು ದಾಖಲಾಗಿದೆ. ೧೯೯೦ರಲ್ಲಿ ಈ ಅತ್ಯಾಚಾರದ ಸಂಖ್ಯೆ ೮೮೫ಕ್ಕೆ ಏರಿದೆ. ೨೦೦೦ದ ಸಾಲಿನಲ್ಲಿ ಇದು ೧,೦೩೪ಕ್ಕೆ ಏರಿದೆ. ಇದು ಸಾಕಷ್ಟು ತಾರತಮ್ಯದಿಂದ ಕೂಡಿರುವ ಸರ್ಕಾರಿ ಅಂಕಿ ಅಂಶಗಳು. ನಿಜವಾದ ಅಂಕಿ-ಅಂಶಗಳನ್ನು ಹೆಕ್ಕಿ ತೆಗೆದರೆ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿರುವುದಂತೂ ನಿಜ. ನಂತರದ ವರ್ಷಗಳಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತಾ ಬಂದಿದೆ.

ಆದರೆ ಅಚ್ಚರಿಯ ವಿಷಯವೆಂದರೆ, ದಲಿತರ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗಿರುವ ಅಪರಾಧಗಳ ಸಂಖ್ಯೆ ಮಾತ್ರ ಕಡಿಮೆಯಾಗಿದೆ. ಇದಕ್ಕೂ ಕಾರಣ ಇದೆ. ಶಿವಸೇನಾ-ಬಿಜೆಪಿ ಸರ್ಕಾರ ಕಾಯ್ದೆಯಡಿ ದಾಖಲಾದ ಸಾವಿರಾರು ಮೊಕದ್ದಮೆಗಳನ್ನು ಒಮ್ಮೆಲೇ ಸಾರಾಸಗಟಾಗಿ ಕೈಬಿಟ್ಟಿತ್ತು.

ಮಹಾರಾಷ್ಟ್ರದ ಸಂಘಟನಾತ್ಮಕ ರಾಜಕಾರಣದಲ್ಲಿ ದಲಿತರ ಧ್ವನಿ ದಿನದಿಂದ ಕ್ಷೀಣಿಸುತ್ತಾ ಬಂದಂತೆ ದಲಿತರ ಮೇಲಿನ ದೌರ್ಜನ್ಯ ಕೂಡ ಹೆಚ್ಚುತ್ತಾ ಬಂದಿದೆ. ಈ ಹಿಂದೆ ರಾಜಕೀಯ ಶಕ್ತಿಯೇ ದಲಿತರಿಗೆ ಕವಚವಾಗಿತ್ತು. ಇದರ ಫಲವಾಗಿ ದಲಿತರು ಭೂಮಾಲಿಕರ ದೌರ್ಜನ್ಯದ ವಿರುದ್ಧ ಸೆಟೆದು ನಿಂತಿದ್ದರು. ಅಸ್ಪೃಶ್ಯತೆಯ ಸವಾಲನ್ನು ಧೈರ್ಯವಾಗಿ ಎದುರಿಸುತ್ತಿದ್ದರು. ಆದರೆ ಈ ಪ್ರತಿಭಟನೆಯ ಸಂಸ್ಕೃತಿ ಶಕ್ತಿಯುತವಾದ ರಾಜಕೀಯ ಚಳವಳಿಯನ್ನು ಅವಲಂಬಿಸಿತ್ತು. ರಾಜಕೀಯ ಸಂಘಟನೆಯ ಪರಿಣಾಮವಾಗಿ ಮಹಾರಾಷ್ಟ್ರದ ಜನಸಂಖ್ಯೆಯಲ್ಲಿ ೧೧%ಕ್ಕಿಂತ ಕಡಿಮೆಯಿರುವ ದಲಿತರು ಮಂಚೂಣಿಗೆ ಬರಲು ಸಾಧ್ಯವಾಯಿತು.

ಆದರೆ ಈಗ ರಾಷ್ಟ್ರೀಯ ರಿಪಬ್ಲಿಕನ್ ಪಕ್ಷ (ಆರ್‌ಪಿಐ) ವಿಭಜನೆಯಾಗಿ, ಪಕ್ಷದ ಎಲ್ಲಾ ನಾಯಕರೂ ಮುಖ್ಯವಾಹಿನಿಯ ಪಕ್ಷಗಳಿಗೆ ಸೇರಿಕೊಂಡಿದ್ದಾರೆ. ಇಡೀ ದಲಿತ ಸಮುದಾಯಕ್ಕೆ ಚೇತನ ಶಕ್ತಿಯಾಗಿದ್ದ ದಲಿತ ಪ್ಯಾಂಥರ್ಸ್ ಬಹುತೇಕ ನಶಿಸಿ ಹೋಗಿದೆ. ಅವನತಿಯ ಫಲಿತಾಂಶ ನಮ್ಮ ಕಣ್ಮುಂದಿದೆ. ದಲಿತರ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಮೊಕದ್ದಮೆಗಳನ್ನು ಸರ್ಕಾರ ಕೈಬಿಟ್ಟಾಗ ಯಾವುದೇ ಪ್ರತಿಭಟನೆಗಳು ನಡೆಯಲಿಲ್ಲ. ಚುನಾವಣೆ ಕೇಂದ್ರಿತ ಅವಕಾಶವಾದಿ ರಾಜಕಾರಣದ ಫಲವಾಗಿ ಆರ್‌ಪಿಐ ಈಗ ಮತ್ತಷ್ಟು ಹದಗೆಟ್ಟಿದೆ. ೨೦೦೪ ರ ಚುನಾವಣೆಯಲ್ಲಿ ಆರ್‌ಪಿಐ ಹಿಂದೆಂದಿಗಿಂತಲೂ ಹೀನಾಯ ಪ್ರದರ್ಶನ ನೀಡಿತ್ತು.

ಜಲ್ನಾದಲ್ಲಿ ನಡೆದ ನೀರಿನ ಜಗಳ, ರಾಯಗಢದಲ್ಲಿನ ಕಾರ್ಮಿಕರ ಬಹಿಷ್ಕಾರ ಮತ್ತು ವೇತನ ಸಂಬಂಧಿ ಜಗಳಗಳನ್ನು ಗಮನಿಸಿ. ಮಹಾರಾಷ್ಟ್ರದಲ್ಲಿ ದಲಿತರ ಮೇಲಿನ ದೌರ್ಜನ್ಯ ದಿನೇ ದಿನೇ ಹೆಚ್ಚಾಗುತ್ತಿದೆ. ಅಕೋಲಾ ಜಿಲ್ಲೆಯ ಬೆಳ್ಖೇಡ್ ಹಳ್ಳಿಯಲ್ಲಿ ಒಂದು ವರ್ಷದ ಹಿಂದೆಯಷ್ಟೆ ದಲಿತರ ೨೦ ಮನೆಗಳಿಗೆ ಬೆಂಕಿ ಇಡಲಾಯಿತು. ಅಕೋಲಾ ಒಂದು ಕಾಲದಲ್ಲಿ ದಲಿತ ರಾಜಕಾರಣದ ಶಕ್ತಿ ಕೇಂದ್ರವಾಗಿತ್ತು. ೧೯೬೦ರ ದಶಕದಲ್ಲಿ ಆರ್‌ಪಿಐ ಅಭ್ಯರ್ಥಿಗಳು ಇಲ್ಲಿನ ಲೋಕಸಭಾ ಕ್ಷೇತ್ರದಲ್ಲಿ ೪೦%ರಷ್ಟು ಮತಗಳನ್ನು ಪಡೆಯುತ್ತಿದ್ದರು.

ದಲಿತರ ಏಕತೆ ಮಣ್ಣುಪಾಲಾಯಿತು. ಇದರ ಪ್ರತಿಕೂಲ ಪರಿಣಾಮ ಎಲ್ಲಾ ವಲಯಗಳಲ್ಲೂ ಕಾಣಿಸಲು ಆರಂಭವಾಯಿತು. ಆರ್ಥಿಕ ಸುಧಾರಣೆಯ ವರ್ಷಗಳಲ್ಲಿ ಸಾರ್ವಜನಿಕ ವಲಯ ಮತ್ತು ಸರ್ಕಾರದ ಹುದ್ದೆಗಳು ಕ್ಷೀಣಿಸಿದ್ದರಿಂದ ದಲಿತರಿಗೆ ಭಾರೀ ಪೆಟ್ಟಾಯಿತು.

ಸೊರಗಿಹೋಗಿರುವ ಆರ್‌ಪಿಐ

೧೯೮೦ರ ನಂತರ ಹಿಂದುತ್ವ ಮಂಚೂಣಿಗೆ ಬರುತ್ತಿದ್ದಂತೆ ಆರ್‌ಪಿಐ ಶಕ್ತಿ ಕ್ಷೀಣಿಸುತ್ತಾ ಬಂತು. ಪಕ್ಷದ ಬಹಳಷ್ಟು ನಾಯಕರನ್ನು ಕಾಂಗ್ರೆಸ್ ಮತ್ತು ನಂತರ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ ನುಂಗಿ ಹಾಕಿತು. ದಲಿತರ ಏಕತೆ ಮಣ್ಣುಪಾಲಾಯಿತು. ಇದರ ಪ್ರತಿಕೂಲ ಪರಿಣಾಮ ಎಲ್ಲಾ ವಲಯಗಳಲ್ಲೂ ಕಾಣಿಸಲು ಆರಂಭವಾಯಿತು. ಆರ್ಥಿಕ ಸುಧಾರಣೆಯ ವರ್ಷಗಳಲ್ಲಿ ಸಾರ್ವಜನಿಕ ವಲಯ ಮತ್ತು ಸರ್ಕಾರದ ಹುದ್ದೆಗಳು ಕ್ಷೀಣಿಸಿದ್ದರಿಂದ ದಲಿತರಿಗೆ ಭಾರೀ ಪೆಟ್ಟಾಯಿತು. ದಲಿತರಿಗೆ ಮೀಸಲಾದ ಹುದ್ದೆಗಳು ಕೂಡ ಭರ್ತಿಯಾಗದೇ ಹಾಗೇ ಉಳಿದಿವೆ. 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ವರದಿಯ ಪ್ರಕಾರ ಮಹಾರಾಷ್ಟ್ರದಲ್ಲಿ ದಲಿತರಿಗೆ ಮೀಸಲಾದ ಸುಮಾರು ೧.೩ ಲಕ್ಷದಷ್ಟು ಸರ್ಕಾರಿ ಹುದ್ದೆಗಳು ಹಲವು ವರ್ಷಗಳಿಂದ ಭರ್ತಿಯಾಗದೆ ಹಾಗೇ ಉಳಿದಿವೆ.

ಇನ್ನು ಖೇರ್ಲಾಂಜಿ ಪ್ರತಿಭಟನೆಗಳ ಕಡೆ ಗಮನ ಹರಿಸೋಣ. ಖೇರ್ಲಾಂಜಿ ಪ್ರತಿಭಟನೆಗಳ ಮಾಧ್ಯಮ ವರದಿಗಾರಿಕೆಯನ್ನು ಜಾತಿ ತಾರತಮ್ಯದ ಸ್ಪಷ್ಟ ನಿದರ್ಶನವೆಂದು ಹೇಳಬಹುದು. ಖೇರ್ಲಾಂಜಿ ಘಟನೆಗೆ ಸಂಬಂಧಿಸಿದಂತೆ ಮಾಧ್ಯಮದವರ ವಿವರಣೆಗಳು ರೋಗಗ್ರಸ್ಥವಾಗಿದ್ದವು. ಖೇರ್ಲಾಂಜಿಯಲ್ಲಿ ನಡೆದದ್ದು ಜಾತಿ ವೈಷಮ್ಯದ ಕಗ್ಗೊಲೆಯಲ್ಲ. ಅತ್ಯಾಚಾರಕ್ಕೊಳಗಾಗಿ, ಕೊಲೆಗೀಡಾದ ಮಹಿಳೆಯ ನೈತಿಕ ಮೌಲ್ಯ ಸರಿಯಿರಲಿಲ್ಲ. ಹಳ್ಳಿಯಲ್ಲಿ 'ಮೇಲ್ಜಾತಿಗಳು' ಯಾವುವೂ ಇಲ್ಲ. (ಕೊನೆಯ ಉವಾಚ ಇಂಗ್ಲಿಷ್ ಪತ್ರಿಕೆಯ ಪತ್ರಕರ್ತನಿಂದಲೇ ಬರಬೇಕಿತ್ತು. ಆತನಿಗೇನು ಗೊತ್ತು ಹಳ್ಳಿಯಲ್ಲಿ ಯಜಮಾನಿಕೆ ನಡೆಸುವ ಜಾತಿ "ಮೇಲ್ಜಾತಿ"ಗೆ ಸೇರಿರಬೇಕಿಲ್ಲ ಎಂದು.) ದಲಿತರು ಸರ್ಕಾರವನ್ನು ಆತಂಕದ ಸ್ಥಿತಿಗೆ ದೂಡಿಬಿಟ್ಟರು. ಇಡೀ ಪ್ರತಿಭಟನೆಯ ಹಿಂದೆ "ಕ್ರೂರ ರಾಜಕಾರಣಿಗಳ ಕೈವಾಡವಿದೆ." ಪ್ರತಿಭಟನೆಗಳಿಗೆ ನಕ್ಸಲರ ಬೆಂಬಲವಿದೆ, ಇನ್ನೂ ಬಹಳಷ್ಟು ನಿದರ್ಶನಗಳಿವೆ. ಜಾತೀಯತೆ ಮಾಧ್ಯಮದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಎಂದಿನಂತೆ ಮಾಧ್ಯಮಗಳಲ್ಲಿ ಜಾತೀಯತೆ ಪ್ರದರ್ಶನದಲ್ಲೂ ಅದ್ಭುತವಾದ ವೈವಿಧ್ಯತೆ ಕಂಡುಬಂದಿತು. (ಟೆಲಿವಿಷನ್‌ನಲ್ಲಿ ಕೂಡ.) ಟಿವಿ ಮಾಧ್ಯಮದವರು ಪ್ರಮುಖ ವಿಚಾರವನ್ನು ವ್ಯಾಖ್ಯಾನಿಸುವ ಅಥವಾ ಗುರುತಿಸುವ ಗೋಜಿಗಂತೂ ಹೋಗಲಿಲ್ಲ. ಇದೇ ಮಾಧ್ಯಮಗಳು ಮೀಸಲಾತಿ-ವಿರೋಧಿ ಕಾರ್ಯಕರ್ತರನ್ನು ಹೀರೋಗಳಂತೆ ಬಿಂಬಿಸುತ್ತವೆ. (ಇದರಿಂದಾಗಿ ಎಂತಹ ಆಘಾತವಾಗಬಹುದು, ಅಥವಾ ತಮ್ಮ ವಾದ ಜಾತೀಯತೆಯಿಂದ ಕೂಡಿರಬಹುದು ಎಂಬ ಚಿಂತೆ ಯಾರಿಗೂ ಇಲ್ಲ.)

ಅಂಬೇಡ್ಕರರ ಪುಣ್ಯತಿಥಿ ಆಚರಣೆ ತಯಾರಿಯ ದಿನಗಳಲ್ಲಿ ನಡೆದ ಬಹುತೇಕ ಸಂದರ್ಶನಗಳು ಶಿವಾಜಿ ಪಾರ್ಕ್ ಮೈದಾನವನ್ನು ದಲಿತರು ಪಾಯಿಖಾನೆಯಾಗಿಸಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಸಾರ್ವಜನಿಕರ ಕುರಿತದ್ದಾಗಿತ್ತು. ಅಥವಾ ಮಾಲಿನ್ಯದ ಬಗ್ಗೆ ಮತ್ತು ಟ್ರಾಫಿಕ್ ಜಾಮ್‌ಗಳ ಬಗ್ಗೆ ಮಾತನಾಡಿದವರ ಸಂದರ್ಶನಗಳು ಬಿತ್ತರಗೊಂಡವು.

ಇನ್ನು ರಾಜಕೀಯ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸದೇ ಹೋದರೆ ಪ್ರತಿಭಟನೆಗೆ ಕಳೆ ಕಟ್ಟುವುದಿಲ್ಲವಲ್ಲ! ಯಾಕೆಂದರೆ ಮುಂಬರುವ ಫೆಬ್ರವರಿ ತಿಂಗಳಲ್ಲಿ ಪಾಲಿಕೆ ಮತ್ತು ಪಂಚಾಯಿತಿ ಚುನಾವಣೆಗಳು ನಡೆಯಲಿದೆ. ಪಕ್ಷಗಳು ಇಂತಹ ಸುಸಂದರ್ಭ ಕೈತಪ್ಪಿ ಹೋಗಲು ಬಿಡುವುದೇ? ರಾಜಕೀಯ ಪಕ್ಷಗಳಂತೂ ಪ್ರತಿಭಟನೆಗಳನ್ನು ಆರಂಭಿಸಲಿಲ್ಲ. ಆದರೆ ಪ್ರತಿಭಟನೆಯ ಲಾಭವನ್ನು ಪಡೆಯಲು ಮಾತ್ರ ಉತ್ಸುಕರಾಗಿದ್ದರು. ರಾಜಕೀಯ ಪಕ್ಷಗಳ ದಲಿತ ನಾಯಕರು ಬರುವುದಕ್ಕೂ ಮುಂಚಿತವಾಗಿ ಸಾಮಾನ್ಯ ದಲಿತರು ಅದಾಗಲೇ ಬೀದಿಗಿಳಿದಿದ್ದರು. ಸ್ಫೋಟಗೊಳ್ಳಲು ಸಿದ್ಧವಾಗಿದ್ದ ಬಾಂಬ್‌ನಂತಾಗಿದ್ದ ವಿಷಯಕ್ಕೆ ಖೇರ್ಲಾಂಜಿ ಕಿಡಿ ಹೊತ್ತಿಸಿತ್ತು. ಪ್ರಮುಖವಾಗಿ ಸಾಂಪ್ರದಾಯಿಕ ರಾಜಕೀಯ ಚೌಕಟ್ಟಿನಾಚೆಯೇ ಬಹಳಷ್ಟು ಪ್ರತಿಭಟನೆಗಳು ನಡೆದವು. ಯಾವುದೇ ರಾಜಕೀಯ ಪಕ್ಷಗಳ ಸಂಪರ್ಕವಿಲ್ಲದ ದಲಿತ ನೌಕರರು ಮತ್ತು ಕಾರ್ಮಿಕರು ಬೀದಿಗಿಳಿದು ಪ್ರತಿಭಟಿಸಿದರು. ಮಾರಾಟಗಾರರು, ಶಿಕ್ಷಕರು, ಬೀದಿಬದಿಯ ವ್ಯಾಪಾರಿಗಳು, ಸೇಲ್ಸ್ ಪ್ರತಿನಿಧಿಗಳು, ನಿರುದ್ಯೋಗಿಗಳು, ಭೂಮಿಯ ಒಡೆತನವಿಲ್ಲದವರು ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದರು. ಈ ಸಾಮಾನ್ಯರು ಇಡೀ ಪ್ರತಿಭಟನೆಯ ಚೇತನ ಶಕ್ತಿಯಾಗಿದ್ದರೇ ವಿನಃ ಬೇರಾವುದೇ 'ದಮನಕಾರಿ ಶಕ್ತಿ'ಗಳಲ್ಲ.

ಪೊಲೀಸರು ಈಗಲೂ ಘಟನೆಗೆ ನಕ್ಸಲ್ ಆಯಾಮ ನೀಡುವ ಪ್ರಯತ್ನದಲ್ಲಿದ್ದಾರೆ. ರಾಜ್ಯವ್ಯಾಪಿ ಕಾರ್ಯತಂತ್ರ ರೂಪಿಸಿ ಅದನ್ನು ಕೈಗೊಳ್ಳುವ ಶಕ್ತಿ ಮಾವೋವಾದಿಗಳಿಗೆ ಖಂಡಿತ ಇಲ್ಲ. ತಾವು ಉದ್ದೇಶಿಸದೆ ಈ ಮಟ್ಟದಲ್ಲಿ ನಡೆದ ಪ್ರತಿಭಟನೆಯನ್ನು ಆರಂಭಿಸಿದ ಶ್ರೇಯ ಪಡೆಯಲು ಯಾವುದೇ ರಾಜಕೀಯ ಪಕ್ಷಗಳು ರೋಮಾಂಚಿತವಾಗುವುದರಲ್ಲಿ ಸಂಶಯವೇ ಇಲ್ಲ. ಇದರಿಂದಾಗಿ ಪಕ್ಷದ ವರ್ಚಸ್ಸು ಹೆಚ್ಚಿಸಿಕೊಳ್ಳಬಹುದಲ್ಲಾ? ರಾಜಕೀಯ ಪಕ್ಷಗಳ ಬಹಳಷ್ಟು ದಲಿತ ನಾಯಕರು ಪ್ರತಿಭಟನೆ ಆರಂಭವಾದ ಕೆಲವು ದಿನಗಳ ಬಳಿಕ ತಾವೂ ಪಾಲ್ಗೊಂಡರು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಪ್ರತಿಭಟನೆಗೆ 'ನಕ್ಸಲ್-ಪ್ರೇರಿತ' ಆಯಾಮ ನೀಡುವುದು ಕಳಪೆ ಫಲಾಯನವಾದವಾಗುವುದಷ್ಟೆ.

ಇಡೀ ರಾಷ್ಟ್ರದಲ್ಲಿಯೇ ಅತಿಹೆಚ್ಚು ರೈತರ ಆತ್ಮಹತ್ಯೆ ಸಂಭವಿಸುವ ರಾಜ್ಯ ಇದು. ರಾಜ್ಯದ ಬಡವರ ಪರಿಸ್ಥಿತಿ ತೀರ ದಯನೀಯವಾಗಿದೆ. ಸಾವಿರಾರು ಜನರು ಅಸಹಾಯಕತೆ, ಆಕ್ರೋಶವನ್ನು ತಮ್ಮ ಮೇಲೆ ಆರೋಪಿಸಿಕೊಂಡು ಆತ್ಮಹತ್ಯೆ ಮೊರೆ ಹೋಗುತ್ತಿದ್ದಾರೆ. ದಲಿತರು ಹಾಗೆ ಮಾಡದೆ, ತಮ್ಮ ಆಕ್ರೋಶವನ್ನು ಬಾಹ್ಯವಾಗಿ-ಬಹಿರಂಗವಾಗಿ ತೋರ್ಪಡಿಸಿಕೊಂಡಿದ್ದಾರೆ. ಆದರೆ ಸಮಾಜ ತಮ್ಮ ಅಸ್ತಿತ್ವಕ್ಕೆ ಮಾರಕವಾಗುವಂತೆ, ಇಂತಹ ಹೋರಾಟಗಳನ್ನು ತಿರುಚುತ್ತದೆ, ಕಡೆಗಾಣಿಸುತ್ತದೆ.

ಎಲೀಟ್ ಸಮಾಜ ಮತ್ತು ಮಾಧ್ಯಮದವರನ್ನು ಕಾಡುತ್ತಿರುವುದು ಕೇವಲ ಹಿಂಸೆಯ ಭೀತಿಯಲ್ಲ. ಇದು ಸಮೂಹದ ಅಥವಾ ಜನರ ಭೀತಿ. ಈ ಜನರು ತಮ್ಮ ಎಲ್ಲೆಗಳನ್ನು ಮೀರುವ ಭೀತಿ. ಅವರ ಹಕ್ಕುಗಳನ್ನು ಒತ್ತಾಯಿಸುವ ಭೀತಿ ಮತ್ತು ಆ ಮೂಲಕ ತಮ್ಮ ಸ್ಥಾನಗಳಿಗೆ ಕಂಟಕ ಬರುವ ಭೀತಿ. ಸರಳವಾಗಿ ಹೇಳಬೇಕೆಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಭೀತಿ!

(ಸೌಜನ್ಯ 'ದಿ ಹಿಂದೂ') □

ಪರಂಪರೆಯ ಬಳುವಳಿ 'ಹೇಡಿತನ'

ಜೋಗನಹಳ್ಳಿ ಗುರುಮೂರ್ತಿ

ಸನ್ಮಾನ್ಯ ಸಂಪಾದಕರೇ,

'ಯುವತಿಯ ಮೇಲೆ ಹಾಡು ಹಗಲೇ ಊರ ಜನರ ಎದುರಿಗೆ ಅತ್ಯಾಚಾರ ನಡೆಯಿತು. ಮಾನ ಭಂಗದ ಅವಮಾನ ಸಹಿಸಲಾಗದೆ ಆ ಯುವತಿ ಜನರ ಎದುರೇ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು'

ಕುಷ್ಟಗಿಯಿಂದ ವರದಿಯಾದ ಈ ಅಮಾನವೀಯ ಸಂಗತಿ 'ಕೊರಡಕೇರ' ಗ್ರಾಮದಲ್ಲಿ ನಡೆದದ್ದು. ಈ ಹಿಂದೆ ಮತ್ತೊಂದು ಸುದ್ದಿ ಪತ್ರಿಕೆಯಲ್ಲಿತ್ತು. ಕೆಳಗೆ ಮನೆ ಮುಂದೆ ಸರಗಳ್ಳರು ಯುವತಿಯ ಕುತ್ತಿಗೆಯಿಂದ ಚಿನ್ನದ ಸರ ಕಿತ್ತುತ್ತಿದ್ದಾಗ ಮಹಡಿ ಮೇಲೆ ನಿಂತ ಯುವಕರು ಆ ಘಟನೆಯನ್ನು ನೋಡುತಿದ್ದರು. ಆ ಯುವತಿ ಕೂಗಿಕೊಂಡರು ಯಾರೂ ಸಹಾಯಕ್ಕೆ ಬರಲಿಲ್ಲ. ಈ ಎರಡು ದುರ್ಘಟನೆಗಳು ನಡೆದದ್ದು ಜನರ ನಡುವಿನಲ್ಲಿಯೆ. ಆದರೆ ಜನರು ಯಾರೂ ಪ್ರತಿಭಟಿಸಲಿಲ್ಲ; ಪ್ರತಿಕ್ರಿಯಿಸಲಿಲ್ಲ.

ಈ ಎರಡು ಘಟನೆಗಳೇ ಅಲ್ಲ. ಪುರಾಣದಲ್ಲಿ' ಚರಿತ್ರೆಯ ಉದ್ದಕ್ಕೂ ನಾವು ಲೆಕ್ಕ ಹಾಕಿಕೊಂಡರೆ ಬಹಳ ಸಂದರ್ಭದಲ್ಲಿ ನಾವು ಪ್ರೇಕ್ಷಕರಾಗಿಯೇ ಉಳಿದಿದ್ದೇವೆ. ಚರಿತ್ರೆಗೆ ದೊಡ್ಡ ತಿರುವು ನೀಡಿದ್ದೇವೆ. ಒಂದೊಂದಾಗಿ ನೆನಪಿಸಿಕೊಳ್ಳಿ.

ಪುರಾಣದ ಒಂದು ಘಟನೆ.

ದುರ್ಯೋಧನನ ಸಭೆ. ಪಾಂಡವರು ಪಗಡೆಯಾಟಲ್ಲಿ ಸೋತು ತಲೆಮೇಲೆಯೊತ್ತು ಕುಳಿತಿದ್ದಾರೆ. ದುರುಳ ದುಶ್ಯಾಸನ ದ್ರೌಪದಿಯ ಸೀರೆಯನ್ನು ಸೆಳೆಯುತಿದ್ದಾನೆ. ಮಾನ ಕಾಯುವಂತೆ ದ್ರೌಪದಿ ಹಿರಿಯರಾದ ದ್ರೋಣ, ಭೀಷ್ಮರಲ್ಲಿ ಅಂಗಲಾಚುತಿದ್ದಾಳೆ. ಆದರೆ, ಧರ್ಮಕ್ಕೆ ಬದ್ಧರಾದ ಹಿರಿಯರು ಮೌನವಾಗಿದ್ದಾರೆ. ದೇಶದ ಪ್ರಜೆಗಳೂ ಅಷ್ಟೇ ಮೌನವಾಗೇ ಇರುತ್ತಾರೆ. ಕೊನೆಗೆ ಭಗವಂತ ಬಂದು ದ್ರೌಪದಿಯ ಮಾನವನ್ನು ಕಾಯುತ್ತಾನೆ. ಈಗಲೂ ಅಷ್ಟೇ ನಮಗೆ ನಮ್ಮ ಬುದ್ಧಿಬಲ, ತೋಳ ಬಲಕ್ಕಿಂತ ದೈವ ಬಲದಲ್ಲೇ ಹೆಚ್ಚು ನಂಬಿಕೆ.

ಚರಿತ್ರೆಯಲ್ಲಿ ನೋಡಿ

ಕ್ರಿ.ಶ. ೧೦೨೫ ಘಜನಿ ಮಹಮದನ ೧೭ನೇ ದಂಡೆಯಾತ್ರೆ, ಅಕ್ಟೋಬರ್ ೧೮ರಂದು ೩೦ ಸಾವಿರ ಅಶ್ವಾರೋಹಿ ಸೈನಿಕರೊಡನೆ ಸೋಮನಾಥನ ಮೇಲೆ ದಾಳಿ ನಡೆಸಲು ಮುಲ್ತಾನದಿಂದ ಹೊರಟನು, ದಾರಿಯುದ್ದಕ್ಕೂ ಲಕ್ಷಾಂತರ ಜನರ ಕಗ್ಗೊಲೆ ಆಯಿತು. ೧೦೨೬ ಜನವರಿ ೬ರಂದು ಸೋಮನಾಥದ ಮೇಲೆ ನುಗ್ಗಿದ.

ಭಾರತೀಯರ ಧರ್ಮ ಸಂಸ್ಕೃತಿಯ ಕೇಂದ್ರವಾಗಿತ್ತು. ಸೋಮನಾಥ ದೇವಾಲಯ ಕ್ರಿ.ಶ. ೪೮೦ ರಿಂದ ೭೮೬ರ ಅವಧಿಯಲ್ಲಿ ವಲ್ಲಭಿ ಅರಸರು ಸೋಮನಾಥ ದೇವಾಲಯ ಅಸ್ತಿತ್ವಕ್ಕೆ ಕಾರಣರಾದರು. ಈಶ್ವರ ಅಥವಾ ಮಹದೇವನೇ ಇಲ್ಲಿಯ ಆರಾಧ್ಯ ದೈವ ವಿಶ್ವದಲ್ಲೇ ಇದು ಖ್ಯಾತಿವೆತ್ತ ಶ್ರೀಮಂತ ಮತ್ತು ಸುಂದರ ದೇವಾಲಯ. ಬಂಗಾರದ ಹೊದಿಕೆಯ ೫೬ ಕಂಬಗಳ ಮೇಲೆ ನಿಂತ ಈ ಭಾರಿ ದೇವಾಲಯವನ್ನು ನಾಶ ಮಾಡುವುದು ಅಪಾರಶ್ರಮದ ಕೆಲಸವಾಯಿತು. ಪ್ರತಿಯೊಂದು ಕಂಬ ಹಾಗೂ ರತ್ನ ವಜ್ರ ವೈಡೂರ್ಯಗಳಿಂದ ತುಂಬಿತ್ತು. ಅವುಗಳನ್ನು ತೆಗೆತೆಗೆದು ಮೊಹಮದನ ಸೈನಿಕರ ತೋಳುಗಳು ಸೋತವಂತೆ. ಈ ಕಂಬಗಳು ಭಾರತದ ವಿವಿಧ ರಾಜ್ಯದ ರಾಜರು ನೀಡಿದ ಕಾಣಿಕೆಗಳಾಗಿದ್ದವು. ಪ್ರತಿಯೊಂದರ ಮೇಲೂ ಅವುಗಳನ್ನು ನೀಡಿದ ಅರಸರ ಹೆಸರನ್ನು ಕೆತ್ತಲಾಗಿತ್ತು. ಮುಸ್ಲಿಂ ಲೇಖಕ ಪರಿಷ್ಟು ಹೇಳುವಂತೆ 'ಮಹಮದನು ಸ್ವತ: ದೇವಾಲಯದ ಗರ್ಭಗುಡಿಯನ್ನು ಪ್ರವೇಶಿಸಿದ. ಅಲ್ಲಿ ಐದು ಅಡಿ ಎತ್ತರದ ಸೋಮನಾಥ ಲಿಂಗ ನೂರಾರು ವರ್ಷಗಳಿಂದ ವಿಜ್ರುಂಭಿಸುತಿತ್ತು. ಅದು ಎರಡು ಕುಂಡದಲ್ಲಿ ಇಳಿದಿತ್ತು. ಅದನ್ನು ಕಂಡೊಡನೆ ಮೂರ್ತಿ ಭಂಜಕನಾದ ಮಹಮದ್ ತನ್ನ ಕೈಯಲಿದ್ದ ಭಾರಿ ತೂಕದ ಗುದ್ದಲಿಯಿಂದ ಲಿಂಗದ ಮೇಲೆ ಬಲವಾಗಿ ಹೊಡೆದು ನಾಲ್ಕು ಹೋಳುಗಳನ್ನಾಗಿ ಮಾಡಿದ. ಆ ಹೋಳುಗಳನ್ನು ಘಜ್ನಿಗೆ ಕೊಂಡೊಯ್ಯಲು ತನ್ನ ಸೈನಿಕರಿಗೆ ಆಜ್ಞೆಯಿತ್ತ. ಒಂದು ಹೋಳನ್ನು ಅಲ್ಲಿಯ ಮಸೀದಿಯ ಮೆಟ್ಟಲಿಗೂ ಇನ್ನೊಂದನ್ನು ತನ್ನ ಅರಮನೆಯ ದರ್ಬಾರ್ ಭವನದ ಮೆಟ್ಟಲಿಗೂ, ಇನ್ನೆರಡು ತುಂಡುಗಳನ್ನು ಮಕ್ಕ ಮದೀನಗಳಿಗೂ ರವಾನಿಸಲು ನಿರ್ಧರಿಸಿ ಅವುಗಳನ್ನು ಊರಿಗೆ ಸಾಗಿಸಿದ. ಈ ಅಕ್ರಮಣವನ್ನು ತಡೆಗಟ್ಟಲು ಅರಸ ಪರಮದೇವ ಮತ್ತು ಪುಂಡಲಿಕ ಹಾಗೂ ಭೀಮದೇವ ಕೈಗೊಂಡ ಪ್ರಯತ್ನಗಳು ಸಫಲವಾಗಲಿಲ್ಲ.

> **ಗುರುತರ ಗಣಿ ಲಂಚ ಹಗರಣದ ಭ್ರಷ್ಟ ನಾಟಕವನ್ನು ನಾವಿನ್ನು ಪ್ರತಿಭಟಿಸದೆ ಸಹಿಸಿಕೊಂಡಿದ್ದೇವೆ. ಎಂದರೆ ಏನರ್ಥ? ನಾವು ಪರಂಪರಾನುಗತವಾಗಿ ಬಂದ ನಮ್ಮ ಹೇಡಿತನ ಜಡತ್ವವನ್ನು ಉಳಿಸಿಕೊಂಡು ಹೋಗಲು ಕಟಿ ಬದ್ಧರಾಗಿದ್ದೇವೆ ಎಂದೇ ಅಲ್ಲವೆ? ರೈತ ಚಳುವಳಿ ಬರಲಿ, ದಲಿತ ಚಳುವಳಿ ಬರಲಿ, ಭಾಷಾ ಚಳುವಳಿ ಬರಲಿ. ಬರುತ್ತದೆ, ಹೋಗುತ್ತದೆ. ನಾವು ಮಾತ್ರ ನಿಂತಲ್ಲೇ ನಿಂತಿರುತ್ತೇವೆ.**

ಮಹಮದನು ಗರ್ಭಗುಡಿ ಪ್ರವೇಶಿಸುವ ಮೊದಲು ದೇವಾಲಯದ ಕೆಲವು ಭಕ್ತರು ಶತ್ರುವಿನ ಬೆಂಬಲಿಗರೊಡನೆ ಮಾತುಕತೆ ನಡೆಸಿದರು. ಅದು ವಿಫಲವಾಯಿತು. ಆಗ ಕೆರಳಿದ ಯುವಕರು ಅರ್ಚಕರನ್ನು ಕುರಿತು 'ಸ್ವಾಮಿ, ಈಗ ಇವರನ್ನು ಹೇಗೆ ಎದುರಿಸುವುದು ಹೇಳಿ ಏನಾದರು ಪ್ರಯತ್ನ ಮಾಡೋಣ' ಎಂದರು. ಆಗಲೆ, ಗಾಬರಿಯಾಗಿದ್ದ ಅರ್ಚಕ ನೀವು ಏನು ಮಾಡುವುದು ಬೇಡ. ನಾನೇ ಮಂತ್ರ ಹಾಕಿ ಇವರನ್ನೆಲ್ಲ ಸಾಯಿಸುತ್ತೇನೆ. ಎಂದು ಹೇಳಿ ದೇವಸ್ಥಾನದಿಂದ ಓಡಿ ಹೋದ. ಕೆಲವರು ಮಾತ್ರ ಕೈ ಕೈ ಹಿಸುಕಿಕೊಂಡು ಸುಮ್ಮನೆ ನಿಂತು ನೋಡಿದರು.

ಪ್ಲಾಸಿ ಕದನ

೧೭೫೬ ರಲ್ಲಿ ಬಂಗಾಳದ ಮುರ್ಷಿದಾ ಬಾದ್‌ನಲ್ಲಿ ಉತ್ತರಾಧಿಕಾರಕ್ಕಾಗಿ ಯುದ್ಧವಾಗಿ ಎಳೆಯ ಸಿರಾಜ್-ಉದ್-ದೌಲ ನವಾಬನಾದ-ಮತ್ತೊಬ್ಬ ಹಕ್ಕುದಾರ ಮೀರ್ ಜಾಫರ್ ಪ್ರಧಾನ ಸೇನಾಪತಿಯಾದ. ೧೭೫೭ ರ ಜೂನ್ ೨೩ ರಂದು ಮೀರ್‌ಜಾಫರ್ ಪ್ಲಾಸೀ ಬಳಿಯ ಕದನದಲ್ಲಿ ನವಾಬನಿಗೆ ದ್ರೋಹ ಬಗೆದು ಬ್ರಿಟಿಷರಿಗೆ ಬೆಂಬಲ ನೀಡಿದ. ಇದರ ಫಲವಾಗಿ ೧೮ ಸಾವಿರ ಅಶ್ವದಳ, ೫೦ ಸಾವಿರ ಪದತಿ ದಳ ರಾಬರ್ಟ್ ಕ್ಲೈವನ ಕೇವಲ ಮೂರು ಸಾವಿರ ಸೈನ್ಯಕ್ಕೆ ಶರಣಾದರು. ಮೊಟ್ಟ ಮೊದಲಿಗೆ ಬ್ರಿಟಿಷರು ಬಂಗಾಳದಲ್ಲಿ ರಾಜ್ಯಸ್ಥಾಪನೆ ಮಾಡಿದರು.

೧೭೬೭ ರಲ್ಲಿ ಕ್ಲೈವನು ಭಾರತವನ್ನು ಬಿಟ್ಟು ಹೋದ. ೧೭೭೩ ರಲ್ಲಿ ಅವನು ಭಾರತದಲ್ಲಿ ಕೊಳ್ಳೆ ಹೊಡೆದಿದ್ದಾ ಸಂಪತ್ತಿನ ಪ್ರಶ್ನೆಯನ್ನು ಪರಿಶೋಧಿಸಲು ಹೌಸ್ ಆಫ್ ಕಾಮನ್ಸ್‌ನಲ್ಲಿ ಒಂದು ಆಯೋಗವನ್ನು ರಚಿಸಲಾಯಿತು. ಆದರೆ, ಅವನು ತನ್ನ ದೇಶಕ್ಕೆ ಬಹುಮುಖ್ಯ ಹಾಗೂ ಪ್ರಶಂಸರ್ಹ ಸೇವೆಸಲ್ಲಿಸಿದ್ದರಿಂದಾಗಿ ಅವನನ್ನು ಕೊನೆಗೆ ದೋಷಾಮುಕ್ತನನ್ನಾಗಿ ಘೋಷಿಸಲಾಯಿತು.

ರಾಬರ್ಟ್ ಕ್ಲೈವನು ಆರೋಪದಿಂದ ಮುಕ್ತನಾದ ಮೇಲೆ ಸಾಮಾನ್ಯ ಜನರು ಅವನಿಗೆ ಒಂದು ಸನ್ಮಾನ ಇಟ್ಟುಕೊಂಡರು. ಆಗ ಕ್ಲೈವ್ ಸನ್ಮಾನಕ್ಕೆ ಉತ್ತರಿಸುತ್ತ ಹೀಗೆ ಹೇಳಿದ. "ನಾವು ಕೇವಲ ಮೂರು ಸಾವಿರ ಸೈನಿಕರಿದ್ದೆವು. ಅದರಲ್ಲಿ ೮೦೦ ಜನ ಮಾತ್ರ ಬ್ರಿಟಿಷರು. ಈ ಯುದ್ಧ ನೋಡಲು ನಿಂತಿದ್ದವರು ಸುಮಾರು ಒಂದು ಲಕ್ಷ ಜನ. ಅವರೆಲ್ಲಾ ಒಂದೊಂದು ಕಲ್ಲು ತೆಗೆದು ನಮ್ಮ ಮೇಲೆ ಬೀಸಿದ್ದರೂ ನಾವು ಬದುಕುಳಿಯುತ್ತಿರಲಿಲ್ಲ.

ಇಂತಹ ಇನ್ನೆಷ್ಟೋ ಘಟನೆಗಳು ಪುರಾಣ ಮತ್ತು ಚರಿತ್ರೆಯಲ್ಲಿ ಜನರ ಹೇಡಿತನಕ್ಕೆ ನಿದರ್ಶನವಾಗಿ ಇರಬಹುದು. ಆದರೂ ಪ್ರಸ್ತುತ ಇನ್ನು ಇಂಥ ಘಟನೆಗಳನ್ನು ಕಣ್ಣಾರೆ ಕಾಣುತ್ತಿದ್ದೇವೆ. ಗುರುತರ ಗಣಿ ಲಂಚ ಮುಖ್ಯಮಂತ್ರಿಯನ್ನು ಅವರ ಭ್ರಷ್ಟ ನಾಟಕವನ್ನು ನಾವಿನ್ನು ಪ್ರತಿಭಟಿಸದೆ ಸಹಿಸಿಕೊಂಡಿದ್ದೇವೆ. ಎಂದರೆ ಏನರ್ಥ? ನಾವು ಪರಂಪರಾನುಗತವಾಗಿ ಬಂದ ನಮ್ಮ ಹೇಡಿತನ ಜಡತ್ವವನ್ನು ಉಳಿಸಿಕೊಂಡು ಹೋಗಲು ಕಟಿ ಬದ್ಧರಾಗಿದ್ದೇವೆ ಎಂದೇ ಅಲ್ಲವೆ? ರೈತ ಚಳುವಳಿ ಬರಲಿ, ದಲಿತ ಚಳುವಳಿ ಬರಲಿ, ಭಾಷಾ ಚಳುವಳಿ ಬರಲಿ. ಬರುತ್ತದೆ, ಹೋಗುತ್ತದೆ. ನಾವು ಮಾತ್ರ ನಿಂತಲ್ಲೇ ನಿಂತಿರುತ್ತೇವೆ. □

ಪ್ರತಿಕ್ರಿಯೆ

ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಕಲಿಕೆ

ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್‌ನ್ನು ಭಾಷೆಯಾಗಿ ಕಲಿಸುವುದರಿಂದ ಕನ್ನಡ ಭಾಷೆಗೆ ತೊಂದರೆಯಾಗುವುದಿಲ್ಲ ಎನ್ನುವುದು ಅನೇಕ ನಿದರ್ಶನಗಳಿಂದ ಗೊತ್ತಾಗಿದೆ. ಎಷ್ಟೋ ಇಂಗ್ಲಿಷ್ ಪ್ರಾಧ್ಯಾಪಕರು ಉತ್ತಮವಾದ ಕನ್ನಡ ಸಾಹಿತ್ಯವನ್ನು ರಚಿಸಿದ್ದಾರೆ. ಇಂಗ್ಲಿಷ್ ಕಲಿತ ಅನ್ಯಭಾಷಿಕರು ಮನೆಯಲ್ಲಿ ತಮಿಳು, ತೆಲುಗು ಮಲೆಯಾಳಂ, ಉರ್ದು ಮಾತನಾಡುವುದು, ಸಾಂಸ್ಕೃತಿಕ ಸಂದರ್ಭದಲ್ಲಿ ಮಾತ್ರ ಭಾಷೆಯಿಂದ ಅಭಿವ್ಯಕ್ತಪಡಿಸುವುದು ಗೊತ್ತಿದೆ. ಕೊಳ್ಳೇಗಾಲ, ಚಾಮರಾಜನಗರ, ಮಂಡ್ಯ, ಹಾಸನ, ಮೈಸೂರು ಮುಂತಾದ ಗ್ರಾಮೀಣ ಪ್ರದೇಶದ IAS ಅಧಿಕಾರಿಗಳು, ಡಾಕ್ಟರು, ಎಂಜಿನಿಯರ್‌ಗಳು ಅವರ ಖಾಸಗಿ ಬದುಕಿನಲ್ಲಿ, ಕೌಟುಂಬಿಕ ಸಂದರ್ಭದಲ್ಲಿ ಅಪ್ಪಟ ಹಳ್ಳಿ ಹೈದನ ತರಹ ಕನ್ನಡ ಮಾತನಾಡುವುದನ್ನು ನೋಡಿದ್ದೇವೆ. ಕನ್ನಡ ಭಾಷೆ ಸಮೃದ್ಧಿಯಾಗಿದೆಯೇ ವಿನಹ ಭಾಷೆಯ ಕೊರತೆ ಎಲ್ಲಿಯೂ ಕಂಡಿಲ್ಲ.

ಆರ್. ಮಹಾದೇವಪ್ಪ

ಸನ್ಮಾನ್ಯ ಸಂಪಾದಕರೇ,

ಇಂಗ್ಲಿಷ್ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಒಂದು ಭಾಷೆಯಾಗಿ ಕಲಿಸುವ ಸರ್ಕಾರದ ಕ್ರಮ, ಇದೊಂದು ಪ್ರಗತಿಪರ ನಿರ್ಧಾರ. ಗ್ರಾಮ ನಗರಗಳ ನಡುವೆ ಶಿಕ್ಷಣ ವ್ಯವಸ್ಥೆಯಲ್ಲಿ ಉಂಟಾಗಿರುವ ಕಂದಕವನ್ನು ಸ್ವಲ್ಪಮಟ್ಟಿಗಾದರೂ ಮುಚ್ಚುವ ಕ್ರಮವಾಗಿದೆ. ನಗರದಲ್ಲಿಯೆ ಇರುವ ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳ ಮತ್ತು ಸಾಮಾನ್ಯ ಶಾಲೆಗಳಲ್ಲಿ ಕಲಿಯುವ ಮಕ್ಕಳಲ್ಲಿ ಅಂತರವಿದ್ದೂ, ಆ ಇಬ್ಬರು ಮಕ್ಕಳು ಉನ್ನತ ಶಿಕ್ಷಣವನ್ನು ಅಧ್ಯಯನ ಮಾಡಲು ಸೇರಿದ ಕಾಲೇಜಿನಲ್ಲಿ ಅವರ ನಡವಳಿಕೆಯನ್ನು ಕಂಡಾಗ ಗೋಚರವಾಗುತ್ತದೆ.

ಗೋಕಾಕ್ ಚಳುವಳಿಯಿಂದ ಪ್ರಭಾವಿತನಾಗಿ ನನ್ನ ಮಕ್ಕಳನ್ನು ಸಾಮಾನ್ಯ ಶಾಲೆಯಲ್ಲಿ, ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿಸಿದೆ. ಓದುವ ವಿಷಯಗಳಲ್ಲಿ ಗ್ರಹಿಕೆ, ಉತ್ತಮ ತಿಳುವಳಿಕೆ, ಸಂಭಾಷಣೆ ಮತ್ತು ಅಭಿಪ್ರಾಯಗಳ ಅಭಿವ್ಯಕ್ತತೆ ಎಲ್ಲವೂ ಚೆನ್ನಾಗಿದೆ. ಉನ್ನತ ಶಿಕ್ಷಣದಲ್ಲೂ ಸಹ ತಿಳುವಳಿಕೆ, ವಿಷಯ ಗ್ರಹಣ, ಬೇರೆಯವರಿಗಿಂತ ಚೆನ್ನಾಗಿಯೇ ಇದೆ. ಇಂಜಿನಿಯರಿಂಗ್ ಕೋರ್ಸ್‌ನಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ೬,೭ನೇ ಸೆಮಿಸ್ಟರ್ ಸಮಯದಲ್ಲಿ ಬರುವ ಕಂಪನಿಗಳು ಮಾಡುವ ಲಿಖಿತ ಪರೀಕ್ಷೆಯಲ್ಲಿ ಉತ್ತಮವಾಗಿ ಉತ್ತರಿಸಿದರೂ ಪರ್ಸನಲ್ ಇಂಟರ್‌ವ್ಯೂ ಸಂದರ್ಭದಲ್ಲಿ ಎಕ್ಸ್‌ಪ್ರೆಸ್ ಮಾಡಲು ಸಾಧ್ಯವಾಗಿಲ್ಲ, ವಿಷಯ ಮಂಡನೆ ಸಾಧ್ಯವಾಗಿಲ್ಲ. ಪರ್ಸನಾಲಿಟಿ ಟೆಸ್ಟ್‌ನಲ್ಲಿ ಸ್ಕಿಲ್‌ಫುಲ್ ಆಗಿ ಉತ್ತರಿಸಲಾಗಿಲ್ಲ. ಭಾಷೆಯ ಅಭಿವ್ಯಕ್ತತೆ, ಸ್ಪಷ್ಟ ಉಚ್ಚಾರಣೆ ಸಾಧ್ಯವಾಗಿಲ್ಲ. ಕೀಳರಿಮೆಯಿಂದ ಸ್ಪರ್ಧಿಸಲಾರದೆ ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಸೆಲೆಕ್ಟ್ ಆಗುವುದಿಲ್ಲ.

ಭಾಷೆಯ Express ನಲ್ಲಿನ ಕೀಳರಿಮೆ ವಿಷಯ ಮಂಡನೆಗೆ ತೊಡಕಾಗಿ ಬೇರೆಯವರಿಗಿಂತ weak ಎಂದು ಪರಿಗಣಿಸಲ್ಪಟ್ಟಿದೆ. competency ಡೆವಲಪ್ ಆಗುವುದೇ ಇಲ್ಲ. ಬೆಂಗಳೂರು, ಹೈದರಾಬಾದ್, ಚೆನ್ನೈ ಮತ್ತು ಮುಂಬಯಿಗಳಂತಹ ಮಹಾ ನಗರಗಳಲ್ಲಿರುವ IT/BT ಕಂಪನಿಗಳ ಮುಖ್ಯಸ್ಥರುಗಳು ಇಂತಹ ಯುವಕ-ಯುವತಿಯರನ್ನು ನಿಕೃಷ್ಟವಾಗಿ ಕಾಣುತ್ತಾರೆ. ಕಲಿತ ವಿಷಯದ ಆಳ-ಅರಿವು ಇದ್ದರೂ ಅದನ್ನು ಹೊರಹಾಕಲಾರದ ಸ್ಥಿತಿಯಲ್ಲಿ ಮೂಕವೇದನೆ ಅನುಭವಿಸುತ್ತಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿಸಿದ್ದಕ್ಕೆ ಪ್ರತಿದಿನ ನನ್ನನ್ನು ದೂಷಣೆ ಮಾಡುತ್ತಿದ್ದಾರೆ. ಬಿ.ಇ. ಪದವಿ ಮುಗಿಸಿ, ಅದೇಷ್ಟೋ ಮಂದಿ, ಗ್ರಾಮೀಣ ಯುವಕ-ಯುವತಿಯರು Exposure ಇಲ್ಲದೆ ಬದುಕನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಬಿ.ಇ. ಪದವಿಗಳಿಸಿ, ಪೋಲೀಸ್ ಕಾನ್ಸ್ಟೇಬಲ್ ಕೆಲಸಕ್ಕೆ ಸೇರಿದ್ದಾರೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿಯೇ ಒಂದು ಭಾಷೆಯಾಗಿ ಇಂಗ್ಲಿಷ್‌ನ್ನು ಕಲಿಸುವ ಮೂಲಕ ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಆವರಿಸಿರುವ ಕೀಳಿರಿಮೆಯನ್ನು ತೆಗೆಯುವ ಮೂಲಕ ಅವರನ್ನು ಸ್ಪರ್ಧಾ ಸಮಾಜಕ್ಕೆ ನೂಕಬಹುದು. ಭಾಷೆಯ ಪ್ರೌಢತೆ ಪಡೆದ ಒಬ್ಬ ಯುವಕ ತನ್ನ ಕನಸುಗಳ ಸಾಕಾರಕ್ಕೆ ಪ್ರಯತ್ನಿಸುತ್ತಾನೆ. ಭಾಷೆಯು ವಿವಿಧ ಜನರ, ಸಮುದಾಯದ ಸಂಪರ್ಕದ ಮಾಧ್ಯಮವಾಗಿರುವುದರಿಂದ ಅದು ಅವನಲ್ಲಿರುವ ಪ್ರತಿಭೆ ಅರಳಲು ಕಾರಣವಾಗುತ್ತದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಜಗತ್ತಿನ ರಾಷ್ಟ್ರಗಳು ಉದಾರ ನೀತಿಯನ್ನು ಅನುಸರಿಸುತ್ತಿವೆ. ಇದರ ಫಲವಾಗಿ ಒಂದು ರಾಷ್ಟ್ರದ ಜನತೆ ಅನೇಕ ಭಾಷೆಗಳನ್ನು ಕಲಿಯುವ ಅನಿವಾರ್ಯತೆ ಇದೆ. ಉದ್ಯೋಗ, ವ್ಯಾಪಾರ ಮುಂತಾದ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯು ಸಂಪರ್ಕ ಸೇತುವೆಯಾಗಿದೆ.

ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್‌ನ್ನು ಭಾಷೆಯಾಗಿ ಕಲಿಸುವುದರಿಂದ ಕನ್ನಡ ಭಾಷೆಗೆ ತೊಂದರೆಯಾಗುವುದಿಲ್ಲ ಎನ್ನುವುದು ಅನೇಕ ನಿದರ್ಶನಗಳಿಂದ ಗೊತ್ತಾಗಿದೆ. ಎಷ್ಟೋ ಇಂಗ್ಲಿಷ್ ಪ್ರಾಧ್ಯಾಪಕರು ಉತ್ತಮವಾದ ಕನ್ನಡ ಸಾಹಿತ್ಯವನ್ನು ರಚಿಸಿದ್ದಾರೆ. ಇಂಗ್ಲಿಷ್ ಕಲಿತ ಅನ್ಯಭಾಷಿತರು ಮನೆಯಲ್ಲಿ ತಮಿಳು, ತೆಲುಗು ಮಲೆಯಾಳಂ, ಉರ್ದು ಮಾತನಾಡುವುದು, ಸಾಂಸ್ಕೃತಿಕ ಸಂದರ್ಭದಲ್ಲಿ ಮಾತ್ರ ಭಾಷೆಯಿಂದ ಅಭಿವ್ಯಕ್ತಪಡಿಸುವುದು ಗೊತ್ತಿದೆ. ಕೊಳ್ಳೇಗಾಲ, ಚಾಮರಾಜನಗರ, ಮಂಡ್ಯ, ಹಾಸನ, ಮೈಸೂರು ಮುಂತಾದ ಗ್ರಾಮೀಣ ಪ್ರದೇಶದ IAS ಅಧಿಕಾರಿಗಳು, ಡಾಕ್ಟರು, ಎಂಜಿನಿಯರ್‌ಗಳು ಅವರ ಖಾಸಗಿ ಬದುಕಿನಲ್ಲಿ, ಕೌಟುಂಬಿಕ ಸಂದರ್ಭದಲ್ಲಿ ಅಪ್ಪಟ ಹಳ್ಳಿ ಹೈದನ ತರಹ ಕನ್ನಡ ಮಾತನಾಡುವುದನ್ನು ನೋಡಿದ್ದೇವೆ. ಕನ್ನಡ ಭಾಷೆ ಸಮೃದ್ಧಿಯಾದೆಗಿಯೇ ವಿನಹ ಭಾಷೆಯ ಕೊರತೆ ಎಲ್ಲಿಯೂ ಕಂಡಿಲ್ಲ. ಕನ್ನಡ ಉಳಿಯಬೇಕಾದರೆ ನಾವು ಉಳಿಯಬೇಕು! ನಾವು ಉಳಿಯಬೇಕಾದರೆ ನಮಗೆ Exposure ಇರಬೇಕು. ನಾಲ್ಕಾರು ಭಾಷೆ ಕಲಿತವನಿಗೆ ಅಸ್ತಿತ್ವದ ಭಯ ಇರುವುದಿಲ್ಲ.

ನಮ್ಮ ಅವ್ವ ಚಿಕ್ಕಂದಿನಲ್ಲಿ ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತದೆ. "ನಾಗಮಂಗಲಕ್ಕೆ ದಾರಿ ಯಾವುದೆಂದರೆ ನಾಲಿಗೆಯೆ" □

ಬೀಜ ಭಯೋತ್ಪಾದನೆ

ಎನ್. ಜಗದೀಶ್‌ಕೊಪ್ಪ

ಭಾರತದ ನೆಲದಲ್ಲಿ ರೈತ ಸಮುದಾಯ ಎಂತಹ ಅತಂತ್ರ ಸ್ಥಿತಿಗೆ ತಲುಪಿದೆ ಎಂದರೆ, ಜೀವನ ನಿರ್ವಹಣೆಗಾಗಿ ಎಂತಹ ಪ್ರಯೋಗಕ್ಕೂ ಒಡ್ಡಿಕೊಳ್ಳಲು ಸಿದ್ಧವಾಗಿದೆ. ಈ ಧಾರುಣ ಸ್ಥಿತಿಯಿಂದಾಗಿ ಭಾರತದ ನೆಲ ಈಗ ಎಲ್ಲ ಅಪಾಯಕಾರಿ ಪ್ರಯೋಗಗಳಿಗೆ ಆಡೊಂಬಲವಾಗಿದೆ. ಜಾಗತಿಕ ಮಟ್ಟದಲ್ಲಿ ತಿರಸ್ಕರಿಸಿದ ಎಲ್ಲಾ ಪ್ರಯೋಗಗಳು, ಕ್ರಿಮಿ ಮತ್ತು ಕೀಟ ನಾಶಕಗಳು ನಿರಂತರವಾಗಿ ಚಾಲನೆಯಲ್ಲಿವೆ. ಇಂತಹ ಬೀಜ ಭಯೋತ್ಪಾದನೆಗೆ ಸಿಲುಕಿರುವ ರೈತ ಅವಸಾನದತ್ತ ಹೆಜ್ಜೆ ಇರಿಸಿದ್ದಾನೆ. ಬಹುರಾಷ್ಟ್ರ ಕಂಪನಿಗಳು ನೀಡುವ ಅಪಾರ ಹಣದ ಆಮಿಶಕ್ಕೆ ಬಲಿಯಾಗಿರುವ ಈ ದೇಶದ ಕೃಷಿ ವಿಜ್ಞಾನಿಗಳು, ವಿಶ್ವವಿದ್ಯಾಲಯಗಳು ರೈತನ ಪಾಲಿಗೆ ಭಯೋತ್ಪಾದಕರಾಗಿ ಪರಿಣಮಿಸಿದ್ದಾರೆ. ಇಂತಹ ಸಂಕಟದ ಸ್ಥಿತಿಯಲ್ಲೂ ನೆಮ್ಮದಿಯ ಸಂಗತಿ ಎಂದರೆ ಈ ನೆಲದಲ್ಲಿ ಇನ್ನು ಜೀವಂತ ವಿರುವ ವೈಚಾರಿಕ ಪ್ರಜ್ಞೆ, ಪರಿಸರದ ಕಾಳಜಿ, ಜೈವಿಕ ವೈವಿಧ್ಯತೆಯ ಬಗ್ಗೆ ಇರುವ ಕಳಕಳಿ.

ಅತಿವೃಷ್ಟಿ, ಅನಾವೃಷ್ಟಿ ನಡುವೆ ಬಸವಳಿದು ತಾನು ಬೆಳೆದ ಕೃಷಿ ಉತ್ಪನ್ನಗಳನ್ನು ಬೀದಿಗೆ ಚೆಲ್ಲಿ ನೆಲಕ್ಕಚ್ಚಿದ ರೈತ ಈಗ ಅನಾಥನಾಗಿದ್ದಾನೆ. ಇಂದಿನ ಸಂಧಿಗ್ಧ ವರ್ತಮಾನದ ಸಂದರ್ಭದಲ್ಲಿ ಆತನಷ್ಟು ಶೋಷಣೆಗೆ ಒಳಗಾದ ಮತ್ತೊಬ್ಬ ಜೀವಿ ಇರಲಾರ.

ಭಾರತದ ಅಭಿವೃದ್ಧಿಯ ಬೆನ್ನುಲೆಬು ಎಂದೆ ಪರಿಭಾವಿಸಿದ್ದ ಕೃಷಿ ವಲಯ ಈಗ ಜಾಗತೀಕರಣದ ಆಕ್ರಮಣ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಎಲ್ಲಾ ಸಂಸ್ಕೃತಿಗಳನ್ನು ಹೊಸಕಿ ಹಾಕುತ್ತಿರುವ ಮಾರುಕಟ್ಟೆಯ ಸಿದ್ಧಾಂತ, ಆಧುನಿಕ ಜಗತ್ತಿನ ನಾಗರಿಕರಲ್ಲಿ ಹೆಚ್ಚುತ್ತಿರುವ ಕೊಳ್ಳುಬಾಕುತನ ಸಂಸ್ಕೃತಿ ಇವೆಲ್ಲವು ಒಟ್ಟಾರೆ ಸಮಾಜದ ಚಿತ್ರಣವನ್ನು ತಿರುಗು-ಮುರುಗು ಮಾಡಿವೆ.

ಇದ್ದ ತುಂಡು ಭೂಮಿಯನ್ನೇ ನಂಬಿ ಪ್ರಕೃತಿಯೊಡನೆ ನಿರಂತರ ಸೆನಸಾಡಿ ಉತ್ತಿ-ಬೆಳೆದು ತಾನಿದ್ದ ಸ್ಥಳದಲ್ಲೇ ನೆಮ್ಮದಿಯ ಬದುಕು ಕಂಡುಕೊಳ್ಳುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ಮುಗ್ಧ ರೈತನ ಕೈಗೆ ಹೈಬ್ರೀಡ್ ಹಾಗೂ ಜೈವಿಕ ತಂತ್ರಜ್ಞಾನದ ಬೀಜಗಳನ್ನು ನೀಡಿ ಆತನನ್ನು ಕುಲಾಂತರಿ ತಳಿ ಪ್ರಯೋಗಕ್ಕೆ ಬಲಿ ಪಶು ಮಾಡುತ್ತಿವೆ.

ಭಾರತದ ನೆಲದಲ್ಲಿ ರೈತ ಸಮುದಾಯ ಎಂತಹ ಅತಂತ್ರ ಸ್ಥಿತಿಗೆ ತಲುಪಿದೆ ಎಂದರೆ, ಜೀವನ ನಿರ್ವಹಣೆಗಾಗಿ ಎಂತಹ ಪ್ರಯೋಗಕ್ಕೂ ಒಡ್ಡಿಕೊಳ್ಳಲು ಸಿದ್ಧವಾಗಿದೆ. ಈ ಧಾರುಣ ಸ್ಥಿತಿಯಿಂದಾಗಿ ಭಾರತದ ನೆಲ ಈಗ ಎಲ್ಲ ಅಪಾಯಕಾರಿ ಪ್ರಯೋಗಗಳಿಗೆ ಆಡೊಂಬಲವಾಗಿದೆ. ಜಾಗತಿಕ ಮಟ್ಟದಲ್ಲಿ ತಿರಸ್ಕರಿಸಿದ ಎಲ್ಲಾ ಪ್ರಯೋಗಗಳು, ಕ್ರಿಮಿ ಮತ್ತು ಕೀಟ ನಾಶಕಗಳು ನಿರಂತರವಾಗಿ ಚಾಲನೆಯಲ್ಲಿವೆ. ಇಂತಹ ಬೀಜ ಭಯೋತ್ಪಾದನೆಗೆ ಸಿಲುಕಿರುವ ರೈತ ಅವಸಾನದತ್ತ ಹೆಜ್ಜೆ ಇರಿಸಿದ್ದಾನೆ. ಬಹುರಾಷ್ಟ್ರ ಕಂಪನಿಗಳು ನೀಡುವ ಅಪಾರ ಹಣದ ಆಮಿಶಕ್ಕೆ ಬಲಿಯಾಗಿರುವ ಈ ದೇಶದ ಕೃಷಿ ವಿಜ್ಞಾನಿಗಳು, ವಿಶ್ವ ವಿದ್ಯಾಲಯಗಳು ರೈತನ ಪಾಲಿಗೆ ಭಯೋತ್ಪಾದಕರಾಗಿ ಪರಿಣಮಿಸಿದ್ದಾರೆ. ಇಂತಹ ಸಂಕಟದ ಸ್ಥಿತಿಯಲ್ಲೂ ನೆಮ್ಮದಿಯ ಸಂಗತಿ ಎಂದರೆ ಈ ನೆಲದಲ್ಲಿ ಇನ್ನು ಜೀವಂತವಿರುವ ವೈಚಾರಿಕ ಪ್ರಜ್ಞೆ, ಪರಿಸರದ ಕಾಳಜಿ, ಜೈವಿಕ ವೈವಿಧ್ಯತೆಯ ಬಗ್ಗೆ ಇರುವ ಕಳಕಳಿಯ ಪರಿಣಾಮವಾಗಿ ಅನೇಕ ಪ್ರಗತಿ ಪರ ಮನಸುಗಳು ಮತ್ತು ಸಂಘಟನೆಗಳು ಇಂತಹ ಅನ್ಯಾಯ ಮತ್ತು ಆಕ್ರಮದ ವಿರುದ್ಧ ಹೋರಾಡುತ್ತಾ ಬಂದಿವೆ. ಅಲ್ಲದೆ ಬೀಜ ಭಯೋತ್ಪಾದನೆಯ ಎಲ್ಲ ಕರಾಳ ಕೃತ್ಯಗಳನ್ನು ಅನಾವರಣಗೊಳಿಸುತ್ತಾ ಬಂದಿವೆ. ಇಷ್ಟೆಲ್ಲ ಹೋರಾಟಗಳ ನಡುವೆಯು ಕೂಡ ಭಾರತದ ಗ್ರಾಮೀಣ ಪ್ರದೇಶದ ಮುಗ್ಧ ರೈತರು ನಿರಂತರ ಶೋಷಣೆಗೆ ಬಲಿಯಾಗುತ್ತಲೇ ಬಂದಿದ್ದಾರೆ. ಇದೊಂದು ಅಂತ್ಯವಿಲ್ಲದ ದುರಂತ ಕಥಾನಕವೇನೊ ಎಂಬಂತಾಗಿದೆ. ಇದಕ್ಕೆ ಉದಾಹರಣೆಯಾಗಿ ಈ ಎರಡು ಘಟನೆಗಳೇ ಸಾಕ್ಷಿ.

ಒಂದು-ಕೊಯಮತ್ತೂರು ಸಮೀಪದ ರಾಮನಾಥ ಪುರಂ ಎಂಬ ಹಳ್ಳಿಯ ನಿವೃತ್ತ ಶಾಲಾ ಶಿಕ್ಷಕ ರಂಗರಾಜುವಿಗೆ ಸೇರಿದ ಒಂದು ಎಕರೆ ಭೂಮಿಯನ್ನು ಮೈಕೊ ಬೀಜ ಕಂಪನಿ ಒಂದು ವರ್ಷದ ಅವಧಿಗೆ ೪೦ ಸಾವಿರ ರೂಪಾಯಿ ಸಂದಾಯ ಮಾಡಿ ಗುತ್ತಿಗೆ ಪಡೆಯಿತು. ಈ ಭೂಮಿಯಲ್ಲಿ ಎಂತಹ ಬೆಳೆ ಬೆಳೆದರೂ ೪೦ ಸಾವಿರ ಸಂಪಾದನೆ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿದ್ದ ರಂಗರಾಜು ಕಣ್ಣುಮುಚ್ಚಿ ಬೀಜ ಕಂಪನಿಯ ಎಲ್ಲ ಶರತ್ತುಗಳಿಗೆ ಒಪ್ಪಿ ತನ್ನ ಭೂಮಿಯನ್ನು ಪರಭಾರ ಮಾಡಿದ. ಈ ಕಂಪನಿಯು ರೈತನಿಗೆ ತಾನು ಗುತ್ತಿಗೆ ಪಡೆದಿರುವ ಭೂಮಿಯಲ್ಲಿ ಕೆಲವು ಹೈಬ್ರೀಡ್ ತಳಿಗಳ ಪ್ರಯೋಗ ಮಾಡುವುದಾಗಿ ತಿಳಿಸಿತ್ತು. ಆದರೆ ತಮಿಳುನಾಡಿನ ರೈತ ಸಂಘಟನೆ ಬಂದು ಈ ಜಮೀನಿನಲ್ಲಿ ಬೆಳೆದಿದ್ದ ಭತ್ತದ ಬೆಳೆಯನ್ನು ಸಂಪೂರ್ಣವಾಗಿ ನಾಶಪಡಿಸಿದಾಗ ರೈತ ರಂಗರಾಜುವಿಗೆ ತಿಳಿ

ಯಿತು ತನ್ನ ಭೂಮಿಯಲ್ಲಿ ಪ್ರಯೋಗ ಮಾಡಿರುವುದು ಹೈಬ್ರೀಡ್ ತಳಿಯಲ್ಲ ಬದಲಾಗಿ ಬಿ.ಟಿ ಭತ್ತದ ಬೆಳೆ ಎಂದು.

ಘಟನೆ ಎರಡು-ಹರಿಯಾಣದ ಕರ್ನಲ್ ಜಿಲ್ಲೆಯ ರಾಮಪುರದಲ್ಲಿ ಹಾಗೂ ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಇಂತಹದೆ ಪ್ರಯೋಗಕ್ಕೆ ಕೈಹಾಕಿದ್ದ ಮಾನ್ಸೆಂಟೋ ಮತ್ತು ಮೈಕೊ ಕಂಪನಿಗಳ ವಿರುದ್ಧ ಭಾರತೀಯ ಕಿಸಾನ್ ಸಂಘಟನೆಯ ರೈತರು ಸಿಡಿದೆದ್ದು ಭತ್ತದ ಬೆಳೆಯನ್ನು ನಾಶ ಪಡಿಸಿ ಈ ಕಂಪನಿಗಳ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ.

ಕೇಂದ್ರ ಸರಕಾರದ ಕೃಷಿ ಸಚಿವಾಲಯ ವಿಧಿಸಿರುವ ಶರತ್ತುಗಳ ಪ್ರಕಾರ ಯಾವುದೇ ಕಂಪನಿಯು ಕುಲಾಂತರಿ ತಳಿ ತಾನು ಪ್ರಯೋಗ ಮಾಡುವ ಭೂಮಿಯ ವ್ಯಾಪ್ತಿಗೆ ಬರುವ ಸ್ಥಳೀಯ ಸಂಸ್ಥೆಗಳಾದ ಗ್ರಾಮಪಂಚಾಯತಿ ಮತ್ತು ಸುತ್ತಮುತ್ತಲಿನ ರೈತ ಸಮುದಾಯಕ್ಕೆ ಈ ಕುರಿತು ಮಾಹಿತಿ ನೀಡಬೇಕು/ ಆದರೆ ಈವರೆಗೆ ಇಂತಹ ಯಾವುದೇ ಮಾಹಿತಿಯನ್ನು ನೀಡಿದ ಉದಾಹರಣೆಗಳಿಲ್ಲ.

ಈಗಾಗಲೇ ಕಳೆದ ಹತ್ತು ವರ್ಷಗಳಿಂದ ಭಾರತದಲ್ಲಿ ಬಿ.ಟಿ. ಹತ್ತಿ ಬೆಳೆಯುವ ಪ್ರಕ್ರಿಯೆಗೆ ಚಾಲನೆ ನೀಡಿದ್ದು ಈ ಪ್ರಯೋಗ ಎಲ್ಲೆಡೆ ವಿಫಲವಾಗಿದೆ. ದೇಶದಲ್ಲಿ ಅತಿ ಹೆಚ್ಚು ಹತ್ತಿ ಬೆಳೆಯುವ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಸಾವಿರಾರು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಬಿ.ಟಿ. ಬೆಳೆಯನ್ನು ಚೀನಾ, ಬ್ರೆಜಿಲ್ ಮುಂತಾದ ರಾಷ್ಟ್ರಗಳಲ್ಲಿ ಅತಿ ಹೆಚ್ಚಾಗಿ ಬೆಳೆಯುತ್ತಿದ್ದಾರೆಂದು ಕೃಷಿ ವಿಶ್ವವಿದ್ಯಾನಿಲಯಗಳು ಕರಪತ್ರಗಳ ಮೂಲಕ ಸುಳ್ಳು ಮಾಹಿತಿಯನ್ನು ನೀಡಿ ರೈತರನ್ನು ವಂಚಿಸುತ್ತಿವೆ, ಚೀನಾ ದೇಶವು ಕಳೆದ ಸೆಪ್ಟಂಬರ್ ತಿಂಗಳಿನಲ್ಲಿ ಬಿ.ಟಿ. ಹತ್ತಿ ಬೆಳೆಯುವ ಪ್ರಯೋಗಕ್ಕೆ ಮುಕ್ತಾಯ ಹಾಡಿರುವುದನ್ನು ಕೃಷಿ ವಿಜ್ಞಾನಿಗಳು ಮರೆಮಾಚುತ್ತಿದ್ದಾರೆ. (ಹೆಚ್ಚಿನ ಮಾಹಿತಿಗಾಗಿ ನೋಡಿ ಡೌನ್ ಟು ಅರ್ಥ್ ಪ್ರಾಕ್ಟಿಕ್ ಸೆಪ್ಟಂಬರ್ ೧ ರಿಂದ ೧೫).

ಈ ನಡುವೆ ಸುಪ್ರೀಂ ಕೋರ್ಟ್ ದಿನಾಂಕ ೨೨-೯-೨೦೦೬ ರಂದು ದೇಶಾದ್ಯಂತ ಯಾವುದೇ ಬೆಳೆಯ ಕುಲಾಂತರಿ ತಳಿಗಳ ಪ್ರಯೋಗ ನಡೆಸದಂತೆ ತಡೆಯಾಜ್ಞೆ ನೀಡಿದೆ. ದುರಂತವೆಂದರೆ ಈ ಮಹತ್ವದ ಆದೇಶ ಯಾವುದೇ ಸುದ್ದಿ ಮಾಧ್ಯಮಗಳಲ್ಲಿ ಪ್ರಮುಖ ವಿಷಯವಾಗಿ ಪ್ರಕಟವಾಗಲಿಲ್ಲ ನ್ಯಾಯಾಲಯದ ಈ ಆದೇಶ, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಹಾಗೂ ಕುಲಾಂತರಿ ತಳಿಗಳ ಪ್ರಯೋಗಕ್ಕೆ ಅನುಮತಿ ನೀಡುತ್ತಿದ್ದ ಸಮಿತಿಯ ಸದಸ್ಯರುಗಳ ಪ್ರಾಮಾಣಿಕತೆಯನ್ನು ಹಾಗೂ ಪಾರದರ್ಶಕತೆಯನ್ನು ಪ್ರಶ್ನಿಸಿದಂತಾಗಿದೆ. ಅತ್ಯಂತ ನೋವಿನ ಸಂಗತಿಯೆಂದರೆ ಬಹುರಾಷ್ಟ್ರೀಯ ಕಂಪನಿಗಳು ಸಂಶೋಧನೆಯ ಹೆಸರಿನಲ್ಲಿ ನೀಡುತ್ತಿರುವ ಹಣದ ಆಸೆಗಾಗಿ ಈ ನೆಲದ ಮುಗ್ಧ ರೈತರನ್ನು ವಂಚಿಸುತ್ತಾ ದೇಶಿ ಬೀಜ ಸಂಸ್ಕೃತಿಯನ್ನು ನಾಶ ಮಾಡಲು ಹೊರಟಿರುವ ಕೃಷಿ ವಿಜ್ಞಾನಿಗಳ ವರ್ತನೆ ತಲೆತಗ್ಗಿಸುವಂತಹದ್ದು.

ಕೃಷಿ ಸರಪಳಿಯಲ್ಲಿ ಮೊದಲ ಕೊಂಡಿಯಾಗಿರುವುದೇ ಬಿತ್ತನೆ ಬೀಜ. ಕೃಷಿ ತಳಿಗಳನ್ನು ವಿಕಾಸಗೊಳಿಸಿ, ತಳಿಗಳನ್ನು ಅಭಿವೃದ್ಧಿ ಪಡಿಸಿ, ಪರಸ್ಪರ ವಿನಿಮಯ ಮಾಡಿಕೊಂಡು ಕೃಷಿ ಚಟುವಟಿಕೆಯಲ್ಲಿ ನಮ್ಮ ರೈತರು ಸಾವಿರಾರು ವರ್ಷಗಳಿಂದ ಪಾಲ್ಗೊಳ್ಳುತ್ತಾ ಬಂದಿರುವುದು ನಮ್ಮ ದೇಶಿ ಪರಂಪರೆಯ ಜ್ಞಾನಗಳಲ್ಲಿ ಒಂದು. ಈ ಸಾಂಪ್ರದಾಯಿಕ ಚಟುವಟಿಕೆಯಲ್ಲಿ ರೈತ ಎರಡು ವಿಧಗಳಲ್ಲಿ ಪಾಲ್ಗೊಳ್ಳುತ್ತಾನೆ. ಒಂದು ಬೀಜ ಶೇಖರಣೆ ಮತ್ತು ವಿನಿಮಯ ಮಾಡಿಕೊಳ್ಳುವುದು, ಎರಡನೇಯದು ತಾನೆ ಸ್ವಂತಕ್ಕೆ ಉಪಯೋಗ ಮಾಡುವುದು. ಹೀಗೆ ರೈತ ಏಕಕಾಲಕ್ಕೆ ಬೀಜ ಉತ್ಪಾದಕ, ವಿತರಕ ಬಳಕೆದಾರ ಎಲ್ಲವೂ ಆಗಿರುತ್ತಾನೆ. ಈ ಪರಂಪರೆಯ ಸರಪಳಿ ಕೊಂಡಿಯನ್ನು ಕತ್ತರಿಸಿ ರೈತನನ್ನು ಈ ಪ್ರಕ್ರಿಯೆಯಿಂದ ದೂರವಿಡಲು ಬಹುರಾಷ್ಟ್ರೀಯ ಕಂಪನಿಗಳು ನಡೆಸುತ್ತಿರುವ ಹುನ್ನಾರವೇ ಈ ಕುಲಾಂತರಿ ತಳಿಗಳ ಪ್ರಯೋಗ. (ಜಿ.ಎಂ. ಸೀಡ್ಸ್ ಟೆಕ್ನಾಲಜಿ)

> **ಕುಲಾಂತರಿ ತಳಿಗಳ ಬೀಜ ಪ್ರಯೋಗದಿಂದಾಗಿ ಮತ್ತು ಭಾರತದ ನೆಲ ತನ್ನ ಅಪೂರ್ವ ಜೈವಿಕ ಸಂಪತ್ತನ್ನು ಕಳೆದುಕೊಳ್ಳುತ್ತಿದೆ.**

ಈಗಾಗಲೇ ಅಮೆರಿಕಾ ಸೇರಿದಂತೆ ಹಲವು ರಾಷ್ಟ್ರಗಳ ೧೫ ಕಂಪನಿಗಳು ಜೈವಿಕ ತಂತ್ರಜ್ಞಾನದ ಹೊಸ ಅವಿಸ್ಕಾರಗಳಲ್ಲಿ ಒಂದಾದ ತಳಿ ಹಂತಕ ಬೀಜಕ್ಕೆ ಪೇಟೆಂಟ್ ಪಡೆದಿವೆ. ಇವುಗಳಲ್ಲಿ ಮಾನ್ಸೆಂಟೊ ಕಂಪನಿ ಪ್ರಮುಖವಾದುದು. ಅಲ್ಲದೆ ಈ ಕಂಪನಿಯ ಇತಿಹಾಸವೇ ಕರಾಳವಾಗಿದೆ. ಅಮೆರಿಕದಲ್ಲಿ ಕಳೆದು ೧೦೦ ವರ್ಷಗಳಿಂದ ರಾಸಾಯನಿಕ ಕ್ರಿಮಿನಾಶಕಗಳನ್ನು ತಯಾರಿಸುತ್ತಿದ್ದ ಈ ಸಂಸ್ಥೆ ಜಗತ್ತಿನಾದ್ಯಂತ ವಹಿವಾಟು ನಡೆಸುತ್ತಿದೆ. ವಿಷಪೂರಿತ ರಾಸಾಯನಿಕ ತ್ಯಾಜ್ಯ ವಸ್ತುಗಳನ್ನು ಸುರಿದ ಅಪರಾಧಕ್ಕಾಗಿ ೩೦೦ ದಶಲಕ್ಷ ಡಾಲರ್ ಹಣವನ್ನು ದಂಡವಾಗಿ ಅಮೆರಿಕಾ ಸರ್ಕಾರಕ್ಕೆ ತೆತ್ತಿರುವ ಕಪ್ಪು ಇತಿಹಾಸವು ಈ ಸಂಸ್ಥೆಗಿದೆ; ಇವೆಲ್ಲಕ್ಕಿಂತ ಹೆಚ್ಚಾಗಿ ೧೯೬೦ ರಲ್ಲಿ ಅಮೆರಿಕಾ ವಿಯಾಟ್ನಾಂ ದೇಶದ ಮೇಲೆ ನಡೆಸಿದ ಯುದ್ಧದಲ್ಲಿ ವಿಯಾಟ್ನಾಂನ ಗೆರಿಲ್ಲಾ ಯುದ್ಧತಂತ್ರಗಳನ್ನು ಸದೆ ಪಡೆಯಲು ಈ ಸಂಸ್ಥೆ ಅಮೆರಿಕಾ ಸೇನೆಪಡೆಗೆ ಕಾಡಿನ ಎಲೆಗಳನ್ನು ಉದುರಿಸುವ ಎಜೆಂಟ್ ಆರೆಂಜ್ ಎಂಬ ರಾಸಾಯನಿಕ ದ್ರವ್ಯವನ್ನು ಸರಬರಾಜು ಮಾಡಿತ್ತು. ಇದರ ಪರಿಣಾಮವನ್ನು ೩೬ ವರ್ಷಗಳ ನಂತರವೂ ಕೂಡ ವಿಯಾಟ್ನಾಂ ದೇಶದ ಪರಿಸರದಲ್ಲಿ ಕಾಣುತ್ತಿದ್ದೇವೆ. ಇದರ ಫಲವಾಗಿ ಇಂದು ಕೂಡ ಅನೇಕ ಅಂಗವಿಕಲ ಮಕ್ಕಳು ವಿಯಾಟ್ನಾಂನಲ್ಲಿ ಜನಿಸುತ್ತಿದ್ದು ದೇಶಕ್ಕೆ ಹೊರೆಯಾಗಿವೆ. ಈ ಕುರಿತು ಈ ಮಕ್ಕಳ ಪೋಷಕರು ಈ ಸಂಸ್ಥೆಯ ವಿರುದ್ಧ ಅಂತರ್‌ರಾಷ್ಟ್ರೀಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

ಈ ಕಂಪನಿಯೆ ಭಾರತದಲ್ಲಿ ಬಿ.ಟಿ. ಹತ್ತಿ ಹಾಗೂ ಬಿ.ಟಿ. ಭತ್ತದ ಪ್ರಯೋಗಕ್ಕೆ ಮುಂದಾಗಿದೆ. ಈಗಾಗಲೇ ರೌಂಡ್ ಅಪ್ ಹೆಸರಿನ ಕಳೆ ನಾಶಕವನ್ನು ಭಾರತದಲ್ಲಿ ಬಿಡುಗಡೆ ಮಾಡಿರುವ ಈ ಕಂಪನಿ ಕಳೆ ನಾಶಕದ ಜೊತೆ ಕೀಟ ನಾಶಕ ತಳಿಯನ್ನು ತಯಾರಿಸುವ ಪ್ರಯೋಗವಾದ ಪ್ರಾಣಿಗಳ ವಂಶ ವಾಹಿಗಳನ್ನು ಸಸ್ಯಗಳಿಗೆ ಜೋಡಿಸುವ ತಂತ್ರಜ್ಞಾನವಾದ ಅಂದರೆ ಬ್ಯಾಸಿಲ ಸುರಂಗಿಯುನ್ಸಿಸ್ ಎಂಬ ಸೂಕ್ಷ್ಮಾಣು ಜೀವಿಯನ್ನು ಆಹಾರ ಬೆಳೆ ಮತ್ತು ವಾಣಿಜ್ಯ ಬೆಳೆಗಳನ್ನು ಜೋಡಿಸಿ ಇನ್ನು ಮುಂದೆ ಬೆಳೆಗಳ ಕೀಟ ನಿಯಂತ್ರಕ್ಕೆ ಕೀಟ ನಾಶಕದ ಅವಶ್ಯಕತೆ ಇಲ್ಲ ಎಂಬ ಹೊಸ ಘೋಷಣೆಯನ್ನು ಹುಟ್ಟುಹಾಕಿದೆ.

ಕೃಷಿ ಮತ್ತು ಆಹಾರ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನವನ್ನು ಅಳವಡಿಸಿ ಪ್ರಪಂಚದ ಆಹಾರ ಸಮಸ್ಯೆಯನ್ನು ಬಗೆಹರಿಸಿ ಹಸಿವಿಲ್ಲದ ಜಗತ್ತನ್ನು ಸೃಷ್ಟಿ ಮಾಡುವುದೇ ತನ್ನ ಗುರಿ ಎಂದಿರುವ ಈ ಕಂಪನಿಯು ಸೇರಿದಂತೆ ಅನೇಕ ಬಹುರಾಷ್ಟ್ರೀಯ ಕಂಪನಿಗಳ ಬೀಜ ತಂತ್ರಜ್ಞಾನ ಪ್ರಯೋಗವೇ ರೈತರ ಪಾಲಿಗೆ ಮರಣಶಾಸನವಾಗಿದೆ. ಜೈವಿಕ ತಂತ್ರಜ್ಞಾನದ ಸಂಶೋಧನೆ ೧೫ ಕಂಪನಿಗಳ ಕೈಯಲ್ಲಿದ್ದು ಇವುಗಳಲ್ಲಿ ೧೦ ಕಂಪನಿಗಳು ಮಾರುಕಟ್ಟೆಯ ಮೇಲೆ ಶೇ.೮೧ ರಷ್ಟು ಪ್ರಭುತ್ವ ಸಾಧಿಸಿವೆ.

ಮುನ್ನೆಚ್ಚರಿಕೆಯ ಕ್ರಮದ ಬಗ್ಗೆ ಯಾವುದೇ ರಾಷ್ಟ್ರಗಳು ಶಾಸನ ಮಾಡುವುದನ್ನು ಈ ಕಂಪನಿಗಳು ವಿರೋಧಿಸುತ್ತಿವೆ. ಅಷ್ಟೇ ಅಲ್ಲ ಕುಲಾಂತರಿ ತಳಿಗಳಿಂದ ಆಗುವ ಅಥವಾ ಆಗಬಹುದಾದ ಎಂತಹದೇ ನಷ್ಟ ಹಾಗೂ ದುರಂತಕ್ಕೆ ಹೊಣೆಹೊರಲು ನಿರಾಕರಿಸಿವೆ.

ಭಾರತದಲ್ಲಿ ಪ್ರಸ್ತುತ ೫ ಕೋಟಿ ಹೆಕ್ಟರ್ ಪ್ರದೇಶದಲ್ಲಿ ಕುಲಾಂತರಿ ತಳಿಗಳ ಬೀಜ ಪ್ರಯೋಗ ನಡೆಯುತ್ತಿದೆ. ಮಾನ್ಸೆಂಟೊ, ಕಾರ್ಗಿಲ್ ಮತ್ತು ಮೈಕೊ ಬೀಜ ಕಂಪನಿಗಳು ಮೆಕ್ಕೆಜೋಳ, ಹತ್ತಿ, ಸೋಯಾ, ಎಣ್ಣೆಕಾಳುಗಳಲ್ಲದೆ ಪ್ರಮುಖ ತರಕಾರಿ ಬೆಳೆಯಾದ ಬದನೆಕಾಯಿಗೂ ಬಿ.ಟಿ. ತಂತ್ರಜ್ಞಾನ ಅಳವಡಿಸಲು ಮುಂದಾಗಿವೆ. ಇಂತ ಪ್ರಯೋಗದಿಂದಾಗಿ ಮತ್ತು ಭಾರತದ ಬಡತನದ ಅನಕ್ಷರತೆ, ಅಜ್ಞಾನದಿಂದಾಗಿ ಈ ನೆಲ ತನ್ನ ಅಪೂರ್ವ ಜೈವಿಕ ಸಂಪತ್ತನ್ನು ಕರಗಿಸಿಕೊಳ್ಳುತ್ತಿದೆ. ಅಲ್ಲದೇ ಅಪೂರ್ವ ಕೃಷಿ ತಳಿಗಳು ಮಾಯವಾಗುತ್ತಿವೆ. ಇವುಗಳಲ್ಲಿ ಭತ್ತದ ತಳಿ ಕೂಡ ಒಂದು. ಭಾರತದ ನೆಲದಲ್ಲಿ ಅಪರೂಪದ ಗುಣವುಳ್ಳ ಸಾವಿರಾರು ಸಸ್ಯ ಪ್ರಭೇದಗಳಿರುವುದು ಸುಳ್ಳಲ್ಲ. ಭತ್ತದ ತಳಿಯೊಂದರಲ್ಲೆ ದೇಶದ ಎಲ್ಲಾ ಭಾಗದ ಪರಿಸ್ಥಿತಿಗೆ, ಸ್ಥಳೀಯ ಹವಾಮಾನ, ಭೂಮಿ ಮತ್ತು ನೀರಿನ ಲಭ್ಯತೆಗೆ ಹೊಂದಿಕೊಳ್ಳುವ ಗುಣವುಳ್ಳ ಸಾವಿರಾರು ಭತ್ತದ ತಳಿಗಳಿವೆ. ಇಂತಹ ಅನ್ಯೂನ್ಯ ಅಪರೂಪದ ಭತ್ತದ ತಳಿಯ ಪ್ರಭೇದಗಳೇ ರೈತನ ಕೃಷಿ ಬದುಕಿಗೆ ಆಧಾರವಾಗಿದ್ದವು. ಮನುಷ್ಯನ ಇತಿಹಾಸದಲ್ಲಿ ರೈತ ತನಗೆ ಸೂಕ್ತ ಎನಿಸಿದ ತಳಿಗಳನ್ನು ಮಾತ್ರ ಕಾಪಾಡಿಕೊಂಡು ಉಳಿದವುಗಳನ್ನು ನಿರ್ಲಕ್ಷಿಸಿದ್ದಾನೆ. ಭಾರತದಲ್ಲಿ ಕಡಿಮೆ ನೀರಿನಲ್ಲಿ ಬೆಳೆಯುವ, ಉಪ್ಪಿನಂಶದ ಭೂಮಿಯಲ್ಲೂ ಬದುಕುಳಿಯುವ ಶಕ್ತಿ ಪಡೆದಿರುವ ಭತ್ತದ ತಳಿ, ನಡು ನೀರಿನಲ್ಲಿ ಅಥವಾ ಮಳೆ ಆಶ್ರಯದಲ್ಲಿ, ಅತಿ ಬಿಸಿಲು, ಅತಿ ಚಳಿ ಗುಡ್ಡಗಾಡು ಪ್ರದೇಶ ಇಂತಕಡೆ ಬೆಳೆಯುವ ೫೦ ಸಾವಿರಕ್ಕೂ ವೈವಿಧ್ಯಮಯ ಭತ್ತದ ತಳಿಗಳು ಭಾರತದಲ್ಲಿದ್ದವು. ಈಗ ಇವುಗಳ ಪ್ರಮಾಣ ೮-೧೦ ಸಾವಿರಕ್ಕೆ ಕುಸಿದಿದೆ. ಇಂತಹ ಅಪರೂಪದ ತಳಿಗಳೀಗ ಕುಲಾಂತರಿ ತಳಿಗಳ ಪ್ರಯೋಗ ಜೀವನ್ಮರಣದ ಸವಾಲಾಗಿದೆ.

ಬಿತ್ತನೆ ಬೀಜಗಳ ಮೇಲೆ ನಡೆಯುತ್ತಿರುವ ಪ್ರಯೋಗವನ್ನು ಜಾಗತಿಕ ಮಟ್ಟದಲ್ಲಿ ಪ್ರತಿಭಟಿಸುತ್ತಿರುವ ಖ್ಯಾತ ಕೃಷಿ ಹಾಗೂ ಪರಿಸರ ತಜ್ಞೆ ಡಾ॥ ವಂದನಾ ಶಿವಂ ಈ ಪ್ರಯೋಗಗಳು ಕೃಷಿ ವಲಯದ ಮೇಲೆ ಅನೇಕ ದುಷ್ಪರಿಣಾಮಗಳು ಬೀರುತ್ತವೆಂದು ಪ್ರತಿಪಾದಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಎಂದರೆ;

ಒಂದು- ತೃತೀಯ ಜಗತ್ತಿನ ರಾಷ್ಟ್ರಗಳ ೧೪೦ ಕೋಟಿ ರೈತರು ತಾವು ಬಿತ್ತಿ ಬೆಳೆದ ಬೀಜವನ್ನು ಪರಸ್ಪರ ವಿನಿಮಯ ಮಾಡಿಕೊಂಡು, ಅದೇ ಬೀಜವನ್ನು

ಮುಂದಿನ ಫಸಲಿಗೆ ಉಪಯೋಗಿಸುತ್ತಾ ಬಂದಿದ್ದಾರೆ. ಭಾರತದ ೧೦೬ ಕೋಟಿ ಜನಸಂಖ್ಯೆಯಲ್ಲಿ ಶೇಕಡ ೭೦ಕ್ಕೂ ಹೆಚ್ಚು ಮಂದಿ ಕೃಷಿ ಬದುಕನ್ನು ಅವಲಂಬಿಸಿದ್ದಾರೆ. ಇವರಲ್ಲಿ ಶೇಕಡ ೮೦ ರಷ್ಟು ಮಂದಿ ರೈತರು ತಾವು ಸಂರಕ್ಷಿಸಿಕೊಂಡು ಬಂದಿರುವ ಬೀಜಗಳನ್ನು ಬೇಸಾಯಕ್ಕಾಗಿ ಬಳಸುತ್ತಾ ಬಂದಿದ್ದಾರೆ. ಅಲ್ಲದೆ ಅವರವರ ಪರಿಸರಕ್ಕೆ ಮಣ್ಣಿನ ಗುಣಕ್ಕೆ ಅನುಗುಣವಾಗಿ ಬೀಜಗಳನ್ನು ಆಯ್ಕೆ ಮಾಡಿಕೊಳ್ಳುವ ಪದ್ಧತಿಯನ್ನು ತಲತಲಾಂತರದಿಂದ ಮುಂದುವರಿಸಿಕೊಂಡು ಬಂದಿದ್ದಾರೆ. ಈ ಸ್ಥಿತಿಯಲ್ಲಿ ಬಹು ರಾಷ್ಟ್ರೀಯ ಕಂಪನಿಗಳು ಅಭಿವೃದ್ಧಿ ಪಡಿಸಿ ಟರ್ಮಿನೇಟರ್ ಬೀಜ ಬಳಸಿದರೆ. ರೈತರು ಮುಂದಿನ ಫಸಲಿಗಾಗಿ ಬೀಜ ಮಾರುಕಟ್ಟೆಯನ್ನೇ ಅವಲಂಬಿಸಬೇಕಾಗುತ್ತದೆ. ಭಾರತದ ರೈತರು ಶೇಕಡ ೮೦ ರಷ್ಟು ಬೀಜವನ್ನು ತಮ್ಮದೇ ಆದವುಗಳನ್ನು ಬಳಸುತ್ತಿದ್ದು, ಈ ಪದ್ಧತಿ ತಪ್ಪಿದರೆ ಭಾರತ ಕೃಷಿಯಲ್ಲಿ ಏರುಪೇರಾಗುವುದು ನಿಶ್ಚಿತ. ಅಲ್ಲದೆ ಯಾವದೇ ಖರ್ಚಿಲ್ಲದೆ ಸಾಂಪ್ರದಾಯಿಕವಾಗಿ ಅಭಿವೃದ್ಧಿ ಪಡಿಸಿದ ಬೀಜಗಳಿಂದ ಭಾರತೀಯ ರೈತರನ್ನು ಬೇರ್ಪಡಿಸಿದರೆ ಅವರು ಕೃಷಿಯಿಂದ ವಿಮುಖರಾಗದೆ ಬೇರೊಂದು ಮಾರ್ಗವಿಲ್ಲ. ಭಾರತ ಸಾಧಿಸಿರುವ ಆಹಾರ ಭದ್ರತೆಯ ಸ್ವಾವಲಂಬಿತನಕ್ಕೆ ಇದರಿಂದ ಧಕ್ಕೆಯಾಗುವುದು ನಿಶ್ಚಿತ.

ಎರಡು-ಟರ್ಮಿನೇಟರ್ ಬೀಜ ತಂತ್ರಜ್ಞಾನವನ್ನು ಬಳಸಿ, ಬೆಳೆದ ಬೆಳೆಗಳಿಂದ ಸಾಂಪ್ರದಾಯಕ ಬೀಜಗಳಿಗೆ ಪರಾಗ ಸ್ಪರ್ಶ ನಡೆಯುವ ಸಾಧ್ಯತೆಗಳಿದ್ದು, ಇದರಿಂದ ಈ ಬೀಜಗಳಿಗೂ ಬಂಜೆತನ ಬರುವ ಸಾಧ್ಯತೆ ಇದೆ. ಅಕಸ್ಮಾತ್ ಬಂದಿದ್ದರೂ ಬಂಜೆತನ ತಿಳಿಯುವುದು ಮುಂದಿನ ಬಿತ್ತನೆ ಸಮಯದಲ್ಲಿ ಮಾತ್ರ ಇದರಿಂದ ಕೃಷಿ ಉತ್ಪನ್ನಕ್ಕೆ ಧಕ್ಕೆಯಾಗಿ ಆಹಾರ ಭದ್ರತೆಗೆ ಕುಂದುಂಟಾಗುವ ಸಾಧ್ಯತೆಗಳಿವೆ.

ಮೂರು-ದೇಶದ ಸಮಗ್ರ ಆಂತರಿಕ ಉತ್ಪನ್ನದಲ್ಲಿ ಕೃಷಿಯಭಾಗ ಶೇಕಡ ೩೦ ರಷ್ಟಿದೆ. ಕೃಷಿ ಆಧಾರಿತ ಜನಸಂಖ್ಯೆ ಅಗಾಧವಾಗಿದೆ. ಶೇ.೭೦ ರಷ್ಟು ಜನಸಂಖ್ಯೆ ಈ ತಂತ್ರಜ್ಞಾನದಿಂದ ಅತಂತ್ರರಾಗುವುದು ಖಂಡಿತ. ಕೃಷಿ ತಜ್ಞ ಡಾ॥ ಎಂ.ಎಸ್.ಸ್ವಾಮಿನಾಥನ್ ಹೇಳುವಂತೆ ದೇಶದ ಕೃಷಿ ಜನಜೀವನ ಮತ್ತು ಆಹಾರ ಭದ್ರತೆ ಇವೆರಡೂ ತಳಿ ಹಂತಕ ಬೀಜದಿಂದ ಅಪಾರ ಪ್ರಮಾಣದಲ್ಲಿ ಅಪಾಯಕ್ಕೆ ಒಳಗಾಗಲಿವೆ.

ನಾಲ್ಕು- ಈ ತಂತ್ರಜ್ಞಾನದಿಂದ ಬೆಳೆದ ಬೆಳೆಗಳು ಕ್ಯಾನ್ಸರ್‌ನಂತಹ ಭಯಾನಕ ರೋಗಗಳಿಗೆ ಕಾರಣವಾಗುವ ರಾಸಾಯನಿಕಗಳನ್ನು ಹೊಂದಿರುವುದನ್ನು ತಳ್ಳಿ ಹಾಕುವಂತಿಲ್ಲ. ನಮ್ಮಲ್ಲಿ ಸಾಕು ಪ್ರಾಣಿಗಳಿಗೆ ಹತ್ತಿ, ಜೋಳ, ಇವೆಲ್ಲವೂ ಮುಖ್ಯ ಆಹಾರ. ಹಾಗಾಗಿ ಪ್ರಾಣಿಗಳಿಗೂ ಇದು ಅಪಾಯಕಾರಿಯಾಗುವ ಸಾಧ್ಯತೆಗಳಿವೆ.

ಐದು-ಭಾರತದೇಶ "ಜೈವಿಕ ವೈವಿಧ್ಯತೆಗಳ ಆಗರ" ಈ ತಂತ್ರಜ್ಞಾನದಿಂದ ಜೈವಿಕ ವೈವಿಧ್ಯತೆ ಹಾಳಾಗುವ ಸಾಧ್ಯತೆ ಹೆಚ್ಚು ಒಂದೇ ರೀತಿಯ ಬೆಳೆ ಬೆಳೆಯುವ ಪ್ರದೇಶ ಹೆಚ್ಚಾಗಿ ಸ್ಥಳೀಯ ಪ್ರಭೇದಗಳನ್ನು ಸಂರಕ್ಷಿಸುವ ಭೂಮಿ ಸಂಕುಚಿತವಾಗುತ್ತದೆ.

ಸಾಂಪ್ರದಾಯಕ ಬೀಜಗಳನ್ನು ಅಭಿವೃದ್ಧಿ ಪಡಿಸಿ ಸಂರಕ್ಷಿಸಿ ಸ್ಥಳೀಯ ಪ್ರಭೇದಗಳ ಇಳುವರಿ ಹೆಚ್ಚಿಸುವ ಕಾರ್ಯಕ್ಕೆ ಬಹಳ ದೊಡ್ಡ ಹಿಂಜರಿತ ಉಂಟಾಗುತ್ತದೆ. ಈ ತಂತ್ರಜ್ಞಾನ ವ್ಯಾಪಿಸಿದಂತೆ ರೈತರು ಈ ಬೀಜಗಳನ್ನೇ ಅವಲಂಬಿಸಿ ಅತಂತ್ರರಾಗುತ್ತಾರೆ. ಪ್ರತಿವರ್ಷ ಬೀಜ ಕಂಪನಿಗಳ ಮುಂದೆ ಅವು ಹೇಳಿದಷ್ಟು ಬೆಲೆಗೆಕೊಂಡು ಬೇಸಾಯ ನಡೆಸುವ ಗುಲಾಮಗಿರಿತನಕ್ಕೆ ರೈತರು ಒಳಗಾಗುತ್ತಾರೆ.

ಸಾವಿರಾರು ವರ್ಷಗಳಿಂದ ರೈತರು ತಮ್ಮ ಭೂಮಿಯಲ್ಲಿ ಬೆಳೆಯನ್ನು ತೆಗೆಯುತ್ತಿದ್ದ ವ್ಯವಸ್ಥೆ ಮತ್ತು ತಾನೇ ಬೆಳೆದ ಬೀಜದ ವಿನಿಮಯ ಮತ್ತು ಮಾರಾಟದ ಹಕ್ಕನ್ನು ಕಸಿಯುವ ತಂತ್ರವನ್ನು ರೂಪಿಸಿರುವ ಈ ತಂತ್ರಜ್ಞಾನ ಅನೈತಿಕತೆಯ ಪರಕಾಷ್ಠೆ ಎಂದು ಚೀನಿ ದೇಶದ ಹೆಸರಾಂತ ಕೃಷಿತಜ್ಞ ಕಾಮಿಲ ಮಾಂಟೋನಿನೋಸ್ ಅಭಿಪ್ರಾಯ ಪಟ್ಟಿದ್ದಾರೆ. ಕೃಷಿರಂಗದ ಜೀವಶಾಸ್ತ್ರ ಮತ್ತು ಅರ್ಥಶಾಸ್ತ್ರದ ಆವರಣಗಳನ್ನೆ ಮೂಲಭೂತವಾಗಿ ಬಡವರ ವಿರುದ್ಧ ಮಾರ್ಪಡಿಸುವ ಈ ತಂತ್ರಜ್ಞಾನ ಅತ್ಯಂತ ಅನೈತಿಕ ,ಅನಾಗರಿಕ, ಅಸಾಧು, ತರ್ಕವಿರೋಧಿ ಮತ್ತು ಅವ್ಯವಹಾರ, ಎಂದು ಬಾಂಗ್ಲಾ ದೇಶದ ತಜ್ಞ ಫರಹತ್ ಮಗಜ ಪ್ರತಿಕ್ರಿಯಿಸಿದ್ದಾರೆ.

ಅಂತಿಮವಾಗಿ ಇಂತಹ ಸ್ಥಿತಿಯಲ್ಲಿ ನಮ್ಮ ಕೃಷಿ ವಿಜ್ಞಾನಿಗಳು ಕುಲಾಂತರಿ ಪ್ರಯೋಗಕ್ಕೆ ಮುನ್ನ ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ: ಭಾರತದತ್ತ ತೃತೀಯ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಕೃಷಿ ಕೇವಲ ಒಂದು ಕಸುಬಾಗಿ ಉಳಿದಿಲ್ಲ. ಅದು ಕೈಗಾರಿಕೆ. ವಾಣಿಜ್ಯ, ಸಾಮಾಜಿಕ ಬೆಳವಣಿಗೆಗೆ ಪೂರಕವಾಗಿಯೇ ಬಂದಿದೆ. ಕೃಷಿಯನ್ನಾಧರಿಸಿದ ಅನೇಕ ಕೈಗಾರಿಕೆಗಳು ಅವನತಿಯ ಹಾದಿ ಹಿಡಿದಿವೆ. ಭಾರತದ ಬಹು ಸಂಸ್ಕೃತಿಯ ವಿಶಿಷ್ಟ್ಯ ಪರಂಪರೆಯ ನೆಲದಲ್ಲಿ ನಮ್ಮ ದೇಶಿ ಜ್ಞಾನ ಪರಂಪರೆ ಕೃಷಿಗೆ ಅಪಾರವಾದ ಕೊಡುಗೆ ನೀಡಿದೆ. ರೈತ ಬೆಳೆಯುವ ಒಂದು ಬೆಳೆ ಕೇವಲ ರೈತನ ಕುಟುಂಬಕ್ಕೆ ಮಾತ್ರ ಸೀಮಿತವಲ್ಲ. ಆ ಬೆಳೆಯ ಮೇಲೆ ಆತ ಸಾಕಿರುವ ಜಾನುವಾರು ಪ್ರಾಣಿಗಳು ಮತ್ತು ಅವುಗಳ ಮೇವು, ಪರಿಸರದಲ್ಲಿರುವ ಕ್ರಿಮಿ ಕೀಟಗಳು, ಪಕ್ಷಿಗಳು, ಭೂಮಿಯ ಸತ್ವ ಹೀಗೆ ಒಂದು ಜೈವಿಕ ಸರಪಳಿಯ ಕೊಂಡಿಯೇ ಅಡಗಿದೆ. ಅಲ್ಲದೆ ಕೃಷಿ ಉತ್ಪನ್ನಗಳ ಮೇಲೆ ಕೈಗಾರಿಕೆಗಳು ಅವಲಂಬಿತವಾಗಿವೆ. ಆದರೆ ಇತ್ತೀಚಿಗೆ ಕೃಷಿ ವಲಯದಲ್ಲಿ ಅಳವಡಿಸುತ್ತಿರುವ ಅಪಾಯಕಾರಿ ತಂತ್ರಜ್ಞಾನಗಳಿಂದಾಗಿ ಜಾನುವಾರುಗಳಿಗೆ ಮೇವಿನ ಕೊರತೆ ಮತ್ತು ಆಹಾರ ಧಾನ್ಯದಲ್ಲಿ ಜೀವಸತ್ವ ಮತ್ತು ಪೌಷ್ಠಿಕಾಂಶಗಳ ಕೊರತೆ ಎದ್ದು ಕಾಣುತ್ತಿದೆ. ಇಷ್ಟಲ್ಲದೆ ಹೊಸ ಆಹಾರ ಧಾನ್ಯಗಳು ಅಥವಾ ವಾಣಿಜ್ಯ ಬೆಳೆಗಳ ಸಂಸ್ಕರಣೆಗಾಗಿ (ಉದಾಹರಣೆಗೆ ಹತ್ತಿಯ ಸಂಸ್ಕರಣೆ) ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ 'ಸ್ಥಳೀಯ ಕೈಗಾರಿಕೆಗಳು ವಿಫಲವಾಗಿದ್ದು ಪ್ರಾದೇಶಿಕ ಅಸಮತೋಲನೆಗೆ ಕೂಡ ಕಾರಣವಾಗಿವೆ. ಇವೆಲ್ಲವನ್ನು ಅವಲೋಕಿಸಿ ಮನದಟ್ಟು ಮಾಡಿಕೊಂಡಿರುವ ಈ ನೆಲದ ರೈತ ಈಗ ನಿಧಾನವಾಗಿ ತಾನು ತ್ಯಜಿಸಿದ್ದ ತನ್ನ ದೇಶಿ ಕೃಷಿ ತಂತ್ರಜ್ಞಾನಕ್ಕೆ ಮರಳುತ್ತಿದ್ದಾನೆ. ಈಗಾಗಲೇ ಅಪಾರ ವೆಚ್ಚದ ರಾಸಾಯನಿಕ ಗೊಬ್ಬರ, ಬಿತ್ತನೆಯ ಬೀಜ, ಕ್ರಿಮಿನಾಶಕಗಳನ್ನು ತ್ಯಜಿಸಿ ಶೂನ್ಯ ಕೃಷಿಗೆ ತೊಡಗಿಕೊಳ್ಳುತ್ತಿದ್ದಾನೆ. ಕೃಷಿ ವಿಜ್ಞಾನಿಗಳ ಮೇಲೆ ಸಂಪೂರ್ಣ ನಂಬಿಕೆ ಕಳೆದುಕೊಂಡಿದ್ದಾನೆ. ಇನ್ನಾದರೂ ಈ ನೆಲದ ಕೃಷಿ ವಿಶ್ವನಿಲಯಗಳು ಮತ್ತು ಅದರ ವಿಜ್ಞಾನಿ ಸಂಶೋಧಕರು ಬೀಜ ಭಯೋತ್ಪಾದನೆಯ ಕೃತ್ಯವನ್ನು ಕೈಬಿಟ್ಟು ರೈತರು ಹಿತಾಸಕ್ತಿಗಾಗಿ ದೇಶಿ ತಂತ್ರಜ್ಞಾನವನ್ನು ಬೆಳೆಸುವತ್ತ ಗಂಭೀರವಾಗಿ ಆಲೋಚಿಸಬೇಕಾಗಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೪೩೦೬

ಬೊಡ್ಡೆ ಚಿಗುರು

ದಟ್ಟ ಕಣ್ಣು ಕಟ್ಟಿದ್ದ ಮಲೆನಾಡ ಹಚ್ಚ ಹಸಿರು:
ಬಟ್ಟ ಬಯಲ ಅಡರಿದ ಕೆಂಪುದೂಳು ಮಣ್ಣು!
ಬೆಟ್ಟ ಸಾಲು ಘಟ್ಟ ಕಣಿವೆ ಮಂಜು ಮಳೆ:
ಸುಟ್ಟ ಮೋರೆಯ ಇಳಿಜಾರು ತಿರುವು!

ಹಗಲಿನಿಕ್ಕೆಲದ ಬೆಳಗು ಬೈಗಿನ ಹಾಗೆ
ನದಿಗುಂಟ ಮುಗಿಲು ಮುಟ್ಟಿದ ಸಾಲುಮರ:
ಹಕ್ಕಿ ಪಕ್ಕಿಗಳ ರಸಗೊರಳ ಜೀವ-ಪರ:
ಬರಿ ಮರಳ ಬಿಳಿದಂಡೆ ಭಣಭಣ ಬಂಡೆ!

ರೋಬೋಟ್ ರಾಕೆಟ್, ಕಂಪ್ಯೂಟರ್ ನಡುವೆ
ಈ ಜೀವನದಿ ಈ ಸಾಲು ಈ ಉಸಿರು
ಗರಗಸದ ನಯಕೆ ಕಡಿದುರುಳಿ ಬಿದ್ದ ಮರ
ಬಿಗಿ ಹಿಡಿದ ಜೀವ ದೆಳೆಯ ಬೊಡ್ಡೆಚಿಗುರು!

○ ಡಾ॥ ಶ್ರೀಧರ ಪಿಸ್ಸೆ



ಗಂಧ ಮತ್ತು ಗಾಳಿ

ಗಂಧದೊಂದಿಗೆ ಒಮ್ಮೆ ಗುದ್ದಾಡಿದೆ
ಮೈಕೈ ತುಂಬಾ ಪುಳಕ-ಅಂದೇ

ಗುದ್ದಾಡಿದರೆ ಗುದ್ದಾಡಬೇಕು
ಮುದ ಮೋಹ ಮುಮ್ಮಡಿಸೊ ಹಾಗೆ

ಗುದ್ದಾಡುವ ಹಟ ಗುದ್ದಾಡುವ ಚಟ
ಅಂತು ಹೇಗೊ ಅದಕೆ ಅಂಟಿಕೊಂಡೆ

ಸಿಕ್ಕವರೊಂದಿಗೆ ಗುದ್ದಾಡುತ್ತಿದ್ದೆ-
ಭಾರ ನುಂಗುವ ನೀರಿನ ಹಾಗೆ
ಕೆಳಗೆ ಬೀಳುವ ಕಲ್ಲಿನ ಹಾಗೆ
ಇಳಿಜಾರರಸುವ ಜಲದ ಹಾಗೆ

ಗಾಳಿಯೊಂದಿಗೂ ಗುದ್ದಾಡಿ ಬಿಟ್ಟೆ
ಮೈಕೈ ಹಿಂಡಿ ಹಣ್ಣು ಹಣ್ಣಾದೆ

ಅಂದಿನಿಂದ ಕಲಿತೆ
ಗುದ್ದುವ ಮಿದ್ದುವ ಎರಕ ಹೊಯ್ಯುವ ಬಗೆ
ತಿಳಿನೀರಿನ ತಿಳಿ ಹಾಗೆ!

ಇಂಗ್ಲಿಷ್ ಮತ್ತು ಶಿಕ್ಷಣ: ಒಂದು ಮಾರ್ಕೆಟ್ ಕಥನ

ಭಾಷೆ ಕೇವಲ ವ್ಯವಸ್ಥೆಯಲ್ಲ, ಅದು ವ್ಯವಸ್ಥೆಗಳ ವ್ಯವಸ್ಥೆ. ಅದರಲ್ಲಿರುವ ಘಟಕಗಳೆಲ್ಲ ಅಮೂರ್ತ ಅಥವಾ ಸಾಂಕೇತಿಕ. ಈ ಸಾಂಕೇತಿಕತೆ ರೂಢಿಗತ ಪರಂಪರೆಯಿಂದ ಬೆಳೆದು ಬಂದಿರುತ್ತದೆ. ಒಂದು ಪದಕ್ಕೂ, ಅದು ನಿರ್ದೇಶಿಸುವ ಅರ್ಥಕ್ಕು ಯಾವ ತಾರ್ಕಿಕ ಸಂಬಂಧವೂ ಇಲ್ಲ. ಇದನ್ನು ಭಾಷಾ ಶಾಸ್ತ್ರೀಯವಾಗಿ ಸೂಚಕ-ಸೂಚಿತಗಳೆಂದು ಕರೆದರೆ ಈ ಸೂಚಕ-ಸೂಚಿತಗಳ ಮಧ್ಯೆ ಯಾವ ಘನ ಸಂಬಂಧವೂ ಇಲ್ಲ. ಇನ್ನೂ ಮುಂದುವರಿದು ಹೇಳುವುದಾದರೆ-ಸೂಚಕ ವೆನ್ನುವುದು ಪದವಲ್ಲ; ಅದು ಶ್ರವಣ ಬಿಂಬ ಒಂದು ಪದವನ್ನು ರಚಿಸಬಲ್ಲ ಶ್ರವಣ ಬಿಂಬಗಳ ನೆನಪು, ಮತ್ತು ಸೂಚಿತವೆನ್ನುವುದು ವಸ್ತುವಲ್ಲ, ಬದಲಾಗಿ ಪರಿಕಲ್ಪನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಯಾವ ಸ್ತರದಲ್ಲೂ ಭಾಷೆಗೆ ಮೂರ್ತವಾದ ಸತ್ವವಿಲ್ಲ. ಅಲ್ಲಿರುವುದು ಅಮೂರ್ತ ಭಾಷಾ ವ್ಯವಸ್ಥೆಯ ಚೌಕಟ್ಟು.

ಶ್ರೀಶ ಉಡುಪ

–ಮೆಮ್‌ಸಾಬ್ ಎದುರು ಕೋತಿಯು ನೋಡಾ

ಯುರೋಪಿಗೆ ಇಂಡಿಯಾ ಎಂದರೆ ಆನೆಗಳ, ಹಾವುಗಳ, ಕೋತಿಗಳ ದೇಶ. ಪಶ್ಚಿಮದ ಹಮ್ಮಿನ ಓರಿಯಂಟಲಿಸ್ಟರೂ ಪೂರ್ವವನ್ನು, ಕಂಡಿದ್ದು, ಹಾಗೆಯೇ-ಸರ್ಕಸ್‌ನ ಡೇರೆಯ ಹಾಗೆ ಅಥವಾ ಸಮೃದ್ಧ ಕಾಡಿನ ಹಾಗೆ. ಹಾಗೇ, ಆಪ್ತ ಕ್ಷಣಗಳಲ್ಲಿ ಭಾರತಕ್ಕೆ ಯುರೋಪು ಸಾಕ್ಷಾತ್ಕಾರಗೊಂಡದ್ದು ಮೆಮ್‌ಸಾಬ್‌ಗಳ ಮೂಲಕ; ಒಟ್ಟು ಯುರೋಪನ್ನು ಏಕರೂಪಿಯಾಗಿ ಅರ್ಥೈಸಿದ್ದು ಅವರ ಗತ್ತು, ವೈಯಾರ, ಹಮ್ಮು, ಕ್ರೌರ್ಯಗಳ ಮೂಲಕ.

ಈ ಹೊತ್ತಿನಲ್ಲಿ ಮೆಮ್‌ಸಾಬ್ ಮುಂದೆ ಕೋತಿ ಒಂದು ಕೂತಿದೆ.

–೧–

... Prolonged amcirut Fear (that is man's orginal) and fundamental feeling, Through fear, every thing is Explained at last become sumtle, spiritial andintellectual -at present, think, it is called science' - ಫ್ರೆಡ್ರಿಕ್ ನೀಷೆ 'ಬಂದೂಕಗಳ ಹಿಂದೆ ಹೊಸ ಶಾಲೆಯಿತ್ತು. ಹೊಸ ಶಾಲೆಗೆ ಬಂದೂಕು ಮತ್ತು ಸೂಜಿಗಲ್ಲುಗಳೆರಡರ ಗುಣಗಳೂ ಇದ್ದವು. ಬಂದೂಕಿನ ಮಾದರಿಯಿಂದ ಆಯುಧದ ಗುಣ ಪಡೆದ ಶಾಲೆ, ಬಂದೂಕಿಗಿಂತ ಪರಿಣಾಮಕಾರಿಯಾಗಿ ಶಾಶ್ವತ ನಿಯಂತ್ರಣವನ್ನು ಸಾಧಿಸಿತು. ಬಂದೂಕು ದೇಹವನ್ನು ಅಂತೆಯಲ್ಲಿಟ್ಟು ಕೊಂಡರೆ, ಶಾಲೆ ಆತ್ಮವನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ..'

–ಹಮಿದು ಕಾನೆ: Ambiguious Adventure ಸಂದರ್ಶಕ: ಪಶ್ಚಿಮದ ನಾಗರಿಕತೆಯ ಬಗ್ಗೆ ನಿಮ್ಮ ಅಭಿಪ್ರಾಯ? ಗಾಂಧೀಜಿ: ಅವರಿಗೆ ಅಂಥದೊಂದು ಇರುವುದೇ ನನಗೆ ಗೊತ್ತಿಲ್ಲವಲ್ಲ.

–೨–

ವಿಜ್ಞಾನ,. ಇಂಗ್ಲಿಷ್, ಶಿಕ್ಷಣಗಳೆಲ್ಲ 'ಅಭಿವೃದ್ಧಿ'ಯ ಕೇಂದ್ರದ ಸುತ್ತ ಬೆಸುಗೆಗೊಂಡು ನಿರ್ಮಿತವಾದ ಮಾದರಿಯ ಸಂದರ್ಭದಲ್ಲಿ ನಿಂತು ಈ ಟಿಪ್ಪಣಿಗಳನ್ನು ಮಾಡಿದ್ದೇನೆ. ಶಿಕ್ಷಣದ ಸಮಸ್ಯೆಗಳನ್ನು ನಿರ್ವಾತದಲ್ಲಿರಿಸಿ ಚರ್ಚಿಸುವ ನೆಲೆ ಒಂದೆಡೆಯಲ್ಲಿದ್ದರೆ, 'ಇಂಗ್ಲಿಷ್ v/s ಭಾಷಾಭಿಮಾನ' ಅಥವಾ 'ಇಂಗ್ಲಿಷ್= ಅಭಿವೃದ್ಧಿ'ಯ ಸರಳ ಸಮೀಕರಣಗಳೇ ಇನ್ನೊಂದೆಡೆ ಚರ್ಚೆಗೆ ಚೌಕಟ್ಟಾಗುತ್ತಿದೆ. ಈ ನಡುವೆ ಸರ್ಕಾರದ ಮಟ್ಟದಲ್ಲಿ ಮೊಟ್ಟೆ, ಹಾಲು, ಸೈಕಲ್‌ಗಳ ಸಂಭ್ರಮದಲ್ಲಿ ಸಮಸ್ಯೆಗಳು ಮಸಾಕಾಗುತ್ತಿವೆ. ಒಟ್ಟೂ ಶಿಕ್ಷಣದ ಹೊರ ರಚನೆ, ಅದರ Presetationನ ಸ್ವರೂಪ–ಇವುಗಳೇ ಮುಖ್ಯವಾಗುತ್ತಿವೆ. ಈ ಎಲ್ಲ ಬೆಳವಣಿಗೆಗಳು ಅಭಿವೃದ್ಧಿಗೆ ವ್ಯತಿರಿಕ್ತವಾಗಿವೆಯೆಂದು ನಾನು ಹೇಳುತ್ತಿಲ್ಲ. ಯಾಕೆಂದರೆ ಬ್ಯುಸಿನೆಸ್ ಮ್ಯಾನೇಜ್‌ಮೆಂಟಿನ ಮೂಲ ಪಾಠಗಳಲ್ಲೊಂದು: ಗ್ರಾಹಕರಿಗೆ ಉತ್ಪನ್ನಗಳನ್ನು ಯಾವ ರೀತಿ ಪ್ಯಾಕ್ ಒಪ್ಪಿಸುತ್ತೀರಿ ಅನ್ನುವ ಶೈಲಿ.

–೩–

ಭಾಷೆ ಕೇವಲ ವ್ಯವಸ್ಥೆಯಲ್ಲ, ಅದು ವ್ಯವಸ್ಥೆಗಳ ವ್ಯವಸ್ಥೆ. ಅದರಲ್ಲಿರುವ ಘಟಕಗಳೆಲ್ಲ ಅಮೂರ್ತ ಅಥವಾ ಸಾಂಕೇತಿಕ. ಈ ಸಾಂಕೇತಿಕತೆ ರೂಢಿಗತ ಪರಂಪರೆಯಿಂದ ಬೆಳೆದು ಬಂದಿರುತ್ತದೆ. ಒಂದು ಪದಕ್ಕೂ, ಅದು ನಿರ್ದೇಶಿಸುವ ಅರ್ಥಕ್ಕು ಯಾವ ತಾರ್ಕಿಕ ಸಂಬಂಧವೂ ಇಲ್ಲ. ಇದನ್ನು ಭಾಷಾ ಶಾಸ್ತ್ರೀಯವಾಗಿ ಸೂಚಕ–ಸೂಚಿತ (Signifier ಮತ್ತು Signified) ಗಳೆಂದು ಕರೆದರೆ ಈ ಸೂಚಕ–ಸೂಚಿತಗಳ ಮಧ್ಯೆ ಯಾವ ಘನ ಸಂಬಂಧವೂ ಇಲ್ಲ. ಇನ್ನೂ ಮುಂದುವರಿದು ಹೇಳುವುದಾದರೆ–ಸೂಚಕವೆನ್ನುವುದು ಪದವಲ್ಲ; ಅದು ಶ್ರವಣ ಬಿಂಬ (Accoustic Preage) ಒಂದು ಪದವನ್ನು ರಚಿಸಬಲ್ಲ ಶ್ರವಣ ಬಿಂಬಗಳ ನೆನಪು, ಮತ್ತು ಸೂಚಿತವೆನ್ನುವುದು ವಸ್ತುವಲ್ಲ, ಬದಲಾಗಿ ಪರಿಕಲ್ಪನೆ (concept). ಸಂಕ್ಷಿಪ್ತವಾಗಿ ಹೇಳುವುದಾದರೆ ಯಾವ ಸ್ತರದಲ್ಲೂ ಭಾಷೆಗೆ ಮೂರ್ತವಾದ ಸತ್ವವಿಲ್ಲ. ಅಲ್ಲಿರುವುದು ಅಮೂರ್ತ ಭಾಷಾ ವ್ಯವಸ್ಥೆಯ, 'langue ನ ಚೌಕಟ್ಟು, ಈ ಚೌಕಟ್ಟಿನೊಳಗೆ' ಸಂಸ್ಕೃತಿಯೊಂದು ವಿಶಿಷ್ಟ ವಿನ್ಯಾಸದಲ್ಲಿ ಬಳಕೆಯ ಭಾಷೆ– Parole–ಅನ್ನು ರಚಿಸಿರುತ್ತದೆ. ಸಂಸ್ಕೃತಿಯು ಕಾಲ–ದೇಶಗಳ (space-time) ಪ್ರವಾಂತದಲ್ಲಿ ತನ್ನ ಸ್ವಭಾವವನ್ನು ಭಾಷೆಯಲ್ಲಿ ಸೂತ್ರೀಕರಿಸಿಕೊಂಡಿರುತ್ತದೆ.

ಸರಳವಾಗಿ ಹೇಳಬೇಕೆಂದರೆ ಇಂಗ್ಲಿಷ್ ಕಲಿಕೆಯೆಂದರೆ ಬರೇ ಎಬಿಸಿಡಿಯನ್ನು ಕಲಿಯುವುದಲ್ಲ ಮತ್ತು ಈ ಚರ್ಚೆಯನ್ನು ಕಲಿಕಾ ಸಾಮರ್ಥ್ಯದ ಮಿತಿ'ಯೊಳಗಿಟ್ಟು ಜಗ್ಗಾಡಲು ಬರುವುದಿಲ್ಲ. ಇಲ್ಲೇ ಗಮಸಬೇಕಾದ ಇನ್ನೊಂದು ಸತ್ಯವೆಂದರೆ : language langue ಅನ್ನು ಪಳಗಿಸಿಕೊಳ್ಳುವ ದರ್ದು ಕಾರ್ಪೋರೇಟ್ ಜಗತ್ತಿಗಿಲ್ಲ. ಇದು ಎಲ್ಲವನ್ನು ಸ್ವಹಿತಾಸಕ್ತಿ ಕೇಂದ್ರಿತ ಮೂರ್ತದಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳುತ್ತದೆ. ಭಾಷೆಯ ಮೇಲಿನ ಹಿಡಿತ ಇಲ್ಲಿ ಅಗತ್ಯವಲ್ಲ; ಬೇಕಾದದ್ದು ಕೇವಲ 'Corporate Parole'ಗಳಷ್ಟೇ. ಈ ರೀತಿಯಲ್ಲಿ ಎಲ್ಲರನ್ನು ಇಂಗ್ಲಿಷ್‌ನಲ್ಲಿ educate ಮಾಡುವ ಭ್ರಮೆಯನ್ನು ಸೃಷ್ಟಿಸಿ ಅಂತಿಮ ಅಥೆಂಟಿಸಿಟಿಯನ್ನು Oxford ವ ಉಳಿಸಿಕೊಳ್ಳುತ್ತವೆ. ಜ್ಞಾನದ ಮೇಲಿನ ಹಿಡಿತ ಕಾರ್ಪೋರೇಟ್ ವಸಾಹತುಶಾಹಿಯ ಕೈಯಲ್ಲಿ ಉಳಿದುಕೊಂಡು ಉಳಿದವರೆಲ್ಲ educated ಆದ ಅಮ



ಲಿನಲ್ಲಿರುತ್ತಾರೆ. ಈ ವ್ಯವಸ್ಥೆ ಆತ್ಯಂತಿಕವಾಗಿ ಉತ್ಪಾದಿಸುವ ಪ್ರತಿಭಾವಂತ –ಸಿಎನ್‌ಎನ್–ಬಿಬಿಸಿಗಳನ್ನು, ಆಕ್ಸ್‌ಫರ್ಡ್ ಹಾರ್ವರ್ಡ್‌ಗಳನ್ನು ನಕಲು ಮಾಡುವ, ಕಾರ್ಪೋರೇಟ್ ಜಗತ್ತಿನಲ್ಲಿ ಕೈತುಂಬ ಸಂಪಾದಿಸುವ ಕೆಲಸ ಪಡೆದುಕೊಳ್ಳುವವನಾಗಿರುತ್ತಾನೆ.

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಕೂಡ ಗಮನಿಸಬೇಕೆಂದು ಕಾಣುತ್ತಿದೆ. ಪ್ರೊ॥ ಸಿ.ಎನ್. ರಾಮಚಂದ್ರನ್‌ರಿಗೆ ಇದಕ್ಕೆ ನಾನು ಕೃತಜ್ಞನಾಗಿದ್ದೇನೆ. ಅದೇನೆಂದರೆ Tense ಮತ್ತು easeಗಳು ಮೂಲಭೂತವಾಗಿ ಕಾನ್ವೆಂಟ್‌ಗಳನ್ನು ಕನ್ನಡ ಶಾಲೆಗಳಿಗಿಂತ ಆಕರ್ಷಕವಾಗಿಸುತ್ತದೆ.

ರೆನ್ ಮತ್ತು ಮಾರ್ಟಿನ್, ನೆಸೆಫಿಲ್ಡ್ ಇತ್ಯಾದಿಗಳ ಯಾವ ಇಂಗ್ಲಿಷ್ ವ್ಯಾಕರಣ ಪುಸ್ತಕಗಳಲ್ಲೂ ಐದು ವಿಭಕ್ತಿಗಳಿವೆ (ease)-ನಾಮಿನೆಟಿವ್, ಆಬ್ಜೆಕ್ಟಿವ್, ಪಸೆಸಿವೆ, ಡೇಟಿವ್ ಮತ್ತು ಅಕ್ಯೂಸಟಿವ್. ಆದರೆ ನಿಜವಾಗಿ ಇಂಗ್ಲಿಷ್‌ನಲ್ಲಿರುವುದು ಎರಡೇ ವಿಭಕ್ತಿಗಳು; ಹಾಗೇ ಇರುವುದು ಎರಡೇ ಕಾಲಗಳು (tenses)-ಭೂತ ಮತ್ತು ವರ್ತಮಾನ. ಭವಿಷ್ಯತ್ ಕಾಲ ಸೂಚಿತವಾಗುವುದು ಸಾಮಾನ್ಯವಾಗಿ ಮೋಡಲ್‌ಗಳ ಉಪಯೋಗದಿಂದ. ಯಾಕೆ ಹೀಗೆ?

ಹದಿನಾಲ್ಕನೆಯ ಶತಮಾನದ ಹೊತ್ತಿಗೆ ಅನೇಕ ಕಾರಣಗಳಿಂದ ಇಂಗ್ಲಿಷ್ ಭಾಷೆಯ ಪ್ರತ್ಯಯ (Inflix tion) ಗಳು ಕಳೆದು ಹೇಗಿದ್ದವು; ಮತ್ತು ರಾಚನಿಕವಾಗಿ ಲ್ಯಾಟಿನ್‌ಗಿಂತ ಇಂಗ್ಲಿಷ್ ಭಿನ್ನವಾಗಿತ್ತು. ಆದರೆ ಲ್ಯಾಟಿನ್ ಚರ್ಚ್‌ನ ಭಾಷೆಯಾಗಿತ್ತು. ಮತ್ತು ರೋಮ್‌ನ ಆಡಳಿತಾವಧಿಯಲ್ಲಿ ರಾಜಭಾಷೆಯಾಗಿತ್ತು. ಪುನರುತ್ಥಾನದ ಗತಕ್ಕೆ ಮರಳುವ ಉತ್ಸಾಹದಲ್ಲಿ ಲ್ಯಾಟಿನ್ ಭಾಷೆಯ ವರ್ಗೀಕರಣವನ್ನು ಇಂಗ್ಲಿಷ್ ಭಾಷೆಯ ಮೇಲೆ ಹೇರಲಾಯಿತು (ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು: ಪ್ರಸಾರಾಂಗ ಮೈಸೂರು ವಿವಿ) ಇವತ್ತಿಗೂ ಇವನ್ನು ಗಿಣಿ ಪಾಠ ಮಾಡಿಸುವುದು ಇಂಗ್ಲಿಷ್ ವ್ಯಾಕರಣ ಎಂಬ ನಂಬಿಕೆಯಿಂದಲೇ.

ರೆನ್ ಮತ್ತು ಮಾರ್ಟಿನ್, ನೆಸೆಫಿಲ್ಡ್ ಇತ್ಯಾದಿಗಳ ಯಾವ ಇಂಗ್ಲಿಷ್ ವ್ಯಾಕರಣ ಪುಸ್ತಕಗಳಲ್ಲೂ ಐದು ವಿಭಕ್ತಿ ಗಳವೆ (ease)-ನಾಮಿನೆಟಿವ್, ಆಬ್ಜೆಕ್ಟಿವ್, ಪಸೆಸಿವೆ, ಡೇಟಿವ್ ಮತ್ತು ಅಕ್ಯೂಸಟಿವ್. ಆದರೆ ನಿಜವಾಗಿ ಇಂಗ್ಲಿಷ್‌ನಲ್ಲಿರುವುದು ಎರಡೇ ವಿಭಕ್ತಿಗಳು; ಹಾಗೇ ಇರುವುದು ಎರಡೇ ಕಾಲಗಳು (tenses)-ಭೂತ ಮತ್ತು ವರ್ತ ಮಾನ. ಭವಿಷ್ಯತ್ ಕಾಲ ಸೂಚಿತವಾಗುವುದು ಸಾಮಾನ್ಯ ವಾಗಿ ಮೋಡಲ್‌ಗಳ ಉಪಯೋಗದಿಂದ. ಯಾಕೆ ಹೀಗೆ? ಹದಿನಾಲ್ಕನೆಯ ಶತಮಾನದ ಹೊತ್ತಿಗೆ ಅನೇಕ ಕಾರಣಗಳಿಂದ ಇಂಗ್ಲಿಷ್ ಭಾಷೆಯ ಪ್ರತ್ಯಯ (Inflix tion) ಗಳು ಕಳೆದು ಹೇಗಿದ್ದವು; ಮತ್ತು ರಾಚನಿಕವಾಗಿ ಲ್ಯಾಟಿನ್‌ಗಿಂತ ಇಂಗ್ಲಿಷ್ ಭಿನ್ನವಾಗಿತ್ತು.

* * *

ಮೆಮ್‌ಸಾಬ್ ಕೋತಿಯ ಕುಣಿಸುತ್ತಾಳೆ ನೋಡಾ...

–೪–

ಕೆಲವು ಸಮಯದ ಹಿಂದೆ ಬೆಂಗಳೂರಿಗೆ ಮಿತ್ರರ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಆಸಕ್ತಿಯಿರುವವರು ಮತ್ತು ಶಾಸ್ತ್ರೀಯವಾಗಿ ಸಣ್ಣಮಟ್ಟಿಗೆ ಹಿಡಿತ ಕೂಡ ಇರುವವರು ಅಲ್ಲೇ ಪಕ್ಕದಲ್ಲಿ–ಬ ಎಂದುಕೊಳ್ಳೋಣ–ಜೊತೆಗೆ, ಓದಿದವರು, ಒಟ್ಟಿಗೆ ಬೆಳೆದವರು, ಅವರ, ತಬಲಾವಾದಕ. ಹೊಸ ರಾಗವೊಂದರ ಪ್ರಾಕ್ಟೀಸ್‌ಗಾಗಿ ತಬಲಾ ಸಾಥ್‌ಗೆ ವಿನಂತಿಸಿದಾಗ ಆತ ಯಾವುದೋ ದಿನ, ಇಷ್ಟು ಹೊತ್ತು, ಅಂತ ಒಪ್ಪಿಕೊಂಡು ಬಿಟ್ಟರು–ಶುಲ್ಕದೊಂದಿಗೆ. ನನಗೆ ವಿಚಿತ್ರವೆನಿಸಿದ್ದು ಕಛೇರಿ ಸಮಯದಲ್ಲಿ ಪಡೆಯುವಷ್ಟೇ ಶುಲ್ಕವನ್ನು ಜೊತೆಯಲ್ಲೇ ಆಡಿ ಬೆಳೆದವರೊಂದಿಗೆ, ಇಂದಿಗೂ ಆತ್ಮೀಯರಾಗಿಯೇ ಉಳಿದುಕೊಂಡವರ ಪ್ರಾಕ್ಟೀಸ್‌ಗಾಗಿ ಕೇಳಿದ್ದು. ಇಂಥ ವಿಚಾರಗಳು ನನ್ನಂತ ಬಹಳ ಮಂದಿಗೆ ಬಹುಶಃ ಊಹಿಸಲಿಕ್ಕೂ ಅಸಂಗತ. ಇಂಥವೇ ಬಹಳಷ್ಟಿವೆ ಇನ್ನೂ. ಇವನ್ನೆಲ್ಲಾ ಅಭಿವೃದ್ಧಿ–ನಾಗರಿಕತೆಯ ಹೆಸರಿನಲ್ಲಿ ಒಪ್ಪಿಕೊಳ್ಳುತ್ತಾ ಹೋಗುವುದೆಂದರೆ ಮನುಷ್ಯತನದಿಂದ ಕಳಚಿಕೊಳ್ಳುತ್ತ ಹೋದ ಹಾಗೆ. ವಸಾಹತುಶಾಹಿ ಅಭಿವೃದ್ಧಿ ಮಾದರಿಯ ಮೂಲ ಸ್ವಭಾವವೇ, ಇದು. ಇದು ಎರಡಲಗಿನ ನಿರ್ಮಾನವೀಕರಣದ ಸಾಧನ. ಆಧುನಿಕ ಸಂಸ್ಥೆಗಳು ಉಂಟುಮಾಡುವ ಈ ಅನುಭವವನ್ನು ಆರ್ವೆಲ್ ಆಸೆಯ ಬೇಟೆಯ ಬಗ್ಗೆ ಬರೆಯುತ್ತ ಕಟ್ಟಿಕೊಡುತ್ತಾನೆ. ಏಮಿಸಿಸಾಂ ಈ ಪ್ರಕ್ರಿಯೆಯನ್ನು ಹೀಗೆ ಗುರುತಿಸುತ್ತಾನೆ. ವಸಾಹತೀಕರಣಗೊಂಡವನನ್ನು ಪ್ರಾಣಿಯನ್ನಾಗಿ ಕಾಣ ಹೊರಡುವ ವಸಾಹತುಕಾರ ತನ್ನನ್ನೂ ಪ್ರಾಣಿಯನ್ನಾಗಿ ಪರಿವರ್ತಿಸಿಕೊಳ್ಳತೊಡಗುತ್ತಾನೆ... ಭಾರತೀಯನ್ನು ಅಥವಾ ಆಫ್ರಿಕನ್ನರನ್ನು ಮಾತ್ರ ಕೊಲ್ಲುತ್ತಿದ್ದೇವೆಂದುಕೊಂಡ ಯುರೋಪಿಯನ್ನರು ಆ ಪ್ರಕ್ರಿಯೆಯಲ್ಲಿ ನಾಗರಿಕತೆ ಸ್ವತಂತ್ರವಾಗಿ ಬೆಳೆಯಲು ಅಗತ್ಯವಾಗುವ ತಳಹದಿಯನ್ನೇ ರಾಷ್ಟ್ರ ಕಿತ್ತೆಸೆದಿರುವುದನ್ನು ಮರೆತಿದ್ದರೆ cited in Intimate Enemy ಆಶೀಶ್ ನಂದಿ:೫೦) .

ಸಾರ್ತೃ ಈ ಕೂಡ ಎರಡೂ ನೆಲೆಯ ನಿರ್ಮಾನವೀಕರಣವನ್ನು ಗಮನಿಸುತ್ತಾನೆ: ವಸಾಹತುವಾದಿ ಹಿಂಸೆ ದೇಶೀಯನನ್ನು ಗುಲಾಮನನ್ನಾಗಿ ಮಾಡಿ, ಬಂದೂಕಿನ ನಳಿಕೆಯೆದುರು ನಿಲ್ಲಿಸಿಕೊಂಡು ಅವನನ್ನು ನಿರ್ಮಾನವೀಕರಣಗೊಳಿಸುತ್ತದೆ. ಶರಣಾಗತಿ–ಪ್ರತಿರೋಧಗಳೆರಡೂ ಆತ್ಮಹತ್ಯಕಾರಕಗಳಾಗುವ ಸ್ಥಿತಿ ಇದು. ವಸಾಹತುವಾದದ ಯಂತ್ರ ವೃತ್ತಾಕಾರದಲ್ಲಿ ಚಲಿಸುತ್ತಿರುತ್ತದೆ... ಶೋಷಿತನ ನಿರ್ಮಾನವೀಕರಣದ ಇನ್ನೊಂದು ಮುಖವೇ ಶೋಷಕನ ಪರಕೀಯತೆ.

ಆರಂಭದಲ್ಲಿ ಉದ್ಧರಿಸಿದ ಗಾಂಧಿಯ ಮಾತು ಸೂಚಿಸಿದ್ದು ಇದನ್ನೆ.

–೫–

'ಇಂಗ್ಲಿಷ್ ಮತ್ತು ಶಿಕ್ಷಣ' ಎಂದಿದ್ದೇನೆ ಮೊದಲಿಗೇ. ನಡುವಿನ 'ಮತ್ತು'ವನ್ನು ತೆಗೆದು ಹಾಕಿದರೂ ಹೆಚ್ಚಿಗೆಯೇನು ವ್ಯತ್ಯಾಸವಾಗಲಿಕ್ಕಿಲ್ಲ. ಆದರೂ ಆ ತೆಲುಗರೆ ಹಾಗೆ ಉಳಿದುಕೊಂಡಿದೆ ಅಂದುಕೊಂಡಿದ್ದೇನೆ–ಬ್ಯಾಂಗಲೋರ್ ಮತ್ತು ಬೆಂಗಳೂರಿನ ನಡುವೆ ಇದ್ದ ಹಾಗೆ. ಅತ್ತ Knowledge ಕಮಿಶನ್‌ನ ಸ್ಯಾಮ್ ಪಿಟ್ರೋಡಾರಂಥವರು ಪ್ರಕಟಿಸುವ ಆಕಾಶದೆತ್ತರ ಯೋಜನೆಗೆದುರಾಗಿ ಇಲ್ಲಿ ಹದಿನೆಂಟು–ಇಪ್ಪತ್ತು–ಇಪ್ಪತ್ತೈದರ ಏನಕ್ಷರವನ್ನು ಬರೆಯಲು ಬಾರದ ಹೆಣ್ಣು ಮಕ್ಕಳು ನನ್ನೆದುರು ದಿನಾಲು ನಿಲ್ಲುತ್ತಾರೆ. ಯಾಕೆ ಹೇಳಿದೆನೆಂದರೆ ರಾಜೀವರ ಶಿಕ್ಷಣ ಕ್ರಾಂತಿಯ ಉತ್ಪನ್ನಗಳ ಸಮಕಾಲೀನರು ಇವರು; ನೂರಕ್ಕೆ ನೂರು ಅಕ್ಷರಸ್ಥ ಜಿಲ್ಲೆಯಲ್ಲೇ ಹುಟ್ಟಿ ಬೆಳೆದವರು. ನನ್ನ ಆತಂಕ, ಕನ್ನಡ ಸುಶಿಕ್ಷಿತತನವೇ ಅನಕ್ಷರತೆಯೆನಿಸಿಕೊಳ್ಳುತ್ತಿರುವ ಈ ಜಗತ್ತಿನಲ್ಲಿ ಇವರ ಸ್ಥಾನವೇನು? ಬಹುಶಃ ಈ ನಾಗರಿಕತೆ ತನ್ನದು ನೂರು ವೀಸಾ ಸಾಕ್ಷರತೆ ಎಂದು ಘೋಷಿಸಿಕೊಂಡಾಗಲೇ ನಾಗರಿಕ ಮನುಷ್ಯರು ಯಾರೆಂದು ನಿರ್ಧರಿಸಿಕೊಂಡು ಬಿಟ್ಟಿತ್ತೇನೋ?

ತನಗಿಂತ ಅನ್ಯದ ಅಸ್ತಿತ್ವದ ಅರಿವು ಅದಕ್ಕಿಲ್ಲ. ಈ ರೀತಿಯ ಉದ್ದೇಶ ಪೂರ್ವಕ ನಿರ್ಲಕ್ಷ್ಯ ನಾಗರಿಕತೆಯ ಮೂಲಭೂತ ಅವಶ್ಯಕತೆಗಳಲ್ಲೊಂದಾದ ಹಮ್ಮಿನ ಆತ್ಮ ವಿಶ್ವಾಸಕ್ಕೆ ಅಗತ್ಯ ಕೂಡ ಹೌದು. ಈ ರೀತಿಯ ಅಸ್ತಿತ್ವದ ನಿರಾಕರಣೆ ಸರ್ವಾಧಿಕಾರೀ ಸ್ವರೂಪ ಮಡುಗಟ್ಟಲು ಒಂದು ಯುದ್ಧತಂತ್ರವಾಗಿ ತಾರ್ಕಿಕವೂ ಹೌದು. ಇದೇ ತಂತ್ರ ತನ್ನ ಅತಿಯಲ್ಲಿ ಫ್ಯಾಸಿಸಂ ಆಗಿ ರೂಪುಗೊಳ್ಳುತ್ತಿದೆ. ನಾಝಿ ಜರ್ಮನಿಯ ಅಲ್ಬರ್ಟ್ ಸ್ಪಿಯರ್ ಜೈಲಿನಿಂದ ಬಿಡುಗಡೆಯಾದ ನಂತರ ಹೇಳುವ ಆತ್ಮ ವಿಮರ್ಶಾತ್ಮಕ ಮಾತುಗಳು ಈ ನಿಟ್ಟಿನಲ್ಲಿ ಮುಖ್ಯವಾಗಿವೆ. ಯಹೂದ್ಯರನ್ನು ವ್ಯಕ್ತಿಗಳೆಂದು ತಾನು ಯಾಕೆ ಕಾಣಲಾರದೆ ಹೋದೆ ಅನ್ನುವುದನ್ನು ಹೇಳುತ್ತಾ: ವೃತ್ತಿಯಿಂದ ಹೊಡೆದೋಡಿಸಲ್ಪಟ್ಟ ಆಸ್ತಿಗೆ

ಮುಟ್ಟುಗೋಲು ಹಾಕಿಕೊಂಡ ಇವರೆಲ್ಲ ಕೊನೆಗೆ ಕಾನ್ಸಂಟ್ರೇಷನ್ ಕ್ಯಾಂಪ್‌ಗೆ ಎಳೆದೊಯ್ಯಲ್ಪಟ್ಟು ಬರಬರುತ್ತ ನನಗೆ ಅಮೂರ್ತರಾದರು. ಅವರು ಬೇರೆಯವರಂತೆ ಕುಟುಂಬ, ಆಕಾಂಕ್ಷೆ, ನೋವು ಬೇಡಿಕೆಗಳಿದ್ದ ಮನುಷ್ಯ ಜೀವಿಗಳಾಗಿ ನನಗೆ ತೋರಲಿಲ್ಲ. ಅಸ್ತಿತ್ವವೇ ಇಲ್ಲದವರಂತೆ ಈ ಜನ ನನ್ನ ಬದುಕು, ಯೋಚನೆಯಿಂದ ಮಾಯವಾಗಿ ಬಿಟ್ಟರೆಂದು ಒಪ್ಪಿಕೊಳ್ಳಲು ನನಗೆ ನಾಚಿಕೆಯೆನ್ನಿಸುತ್ತದೆ. ಅವರನ್ನು ಮನುಷ್ಯ ಜೀವಿಗಳೆಂದು ಕಾಣುತ್ತ ಬಂದಿದ್ದರೆ ನಾನು ನಾಝಿಯಾಗಿ ಉಳಿಯುತ್ತಲೇ ಇರಲಿಲ್ಲ. ನಾನೇನು ಅವರನ್ನು ದ್ವೇಷಿಸಲಿಲ್ಲ; ಬದಲು ಉಪೇಕ್ಷಿಸತೊಡಗಿದೆ...

ರಾಜಕೀಯ ತಾತ್ವಿಕತೆಯೊಳಗೆ ಸೇರಿಹೋದ ಈ ತಂತ್ರದ ಉಗಮ ಬೇಕನ್‌ನ ವಸ್ತುನಿಷ್ಠತೆ ಮತ್ತು ಡೆಕಾರ್ಟ್‌ನ ವಿಭಜಿಸಿ ನೋಡುವ ದೃಷ್ಟಿಕೋನದ ಸಾಫಲ್ಯವನ್ನು ಪ್ರಯೋಗಾಲಯದಾಚೆ ಸಾಮಾಜಿಕ ಪರಿಸರದಲ್ಲಿ ಅನ್ವಯಿಕಗೊಳಿಸಿದಲ್ಲಿ ಇದೆ. ಈ ಯೋಚನಾಕ್ರಮ ವ್ಯಕ್ತಿ ತನ್ನ ಪರಿಸರಕ್ಕೆ ಹೊರತಾಗಿ ನಿಂತು ಯೋಚಿಸುವಂತೆ ಮಾಡುತ್ತದೆ. ಕೈಗಾರಿಕಾ ಕ್ರಾಂತಿಯಿಂದ ಉದ್ಭವಿಸಿದ ಆರ್ಥಿಕತೆ ಕೂಡ ತನ್ನದೇ ರೀತಿಯಲ್ಲಿ ಈ 'ಪರಕೀಯತೆ'ಯನ್ನು (ಹಾಗನ್ನಬಹುದಾದರೆ) ಬೆಳೆಸಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ: ಈ ಹೊಸ ವ್ಯವಸ್ಥೆಯಲ್ಲಿ ಮೊದಲು ವ್ಯಕ್ತಿ ತನ್ನ ಉತ್ಪನ್ನಗಳಿಂದ ಪ್ರತ್ಯೇಕಿಸಲ್ಪಡುತ್ತಾನೆ. ಅಂದರೆ ಆತ ಉತ್ಪಾದಿಸುವುದು ಅದು ಯಾರದೋ ಖಾಸಗಿ ಆಸ್ತಿಯಾಗಿ ಪರಿವರ್ತನೆಯಾಗುವ ಮಾರ್ಕೆಟ್‌ಗಾಗಿ. ತನ್ನ ಶ್ರಮ ಯಾರಿಗಾಗಿ ಅನ್ನುವುದೆ ಆತನಿಗೆ ತಿಳಿದಿರದ ಸ್ಥಿತಿ ಇದು. ಎರಡನೆಯ ಹಂತದಲ್ಲಿ ಉತ್ಪಾದನಾ ಪ್ರಕ್ರಿಯೆಯಿಂದ ಆತ

[illegible] ಕ್ರಮ [illegible]ದಾಗಿ, ಒಂದು [illegible] ಇನ್ನೊಂದರ [illegible] [illegible] [illegible] [illegible] ಈ ಎರಡು ಪರಕೀಯತೆಗಳಿಂದ [illegible] ಸಮುದಾಯ ಪ್ರಜ್ಞೆಯ ವಿಘಟನೆಗೆ ಕಾರಣವಾಗುತ್ತದೆ. ತನ್ನ ಸಮುದಾಯಕ್ಕೆ ಪರಕೀಯನಾಗುತ್ತಾನೆ. ಅಭಿವೃದ್ಧಿಯ ವೇಗ ಇನ್ನಷ್ಟು ಚುರುಕಾದಾಗ ಪ್ರಾರಂಭವಾಗುವುದು ಅಂತರ್-ಪರಕೀಯತೆಯ ಸ್ಥಿತಿ; ಪ್ರಜ್ಞಾ ವಿಘಟನೆಯ ಸ್ಥಿತಿ.

ವಿನ್‌ಸ್ಲೋ ಟೇಲರ್‌ನ Mechanical organisation theory ಇಂಡಸ್ಟ್ರಿಗಳ ಮಾದರಿಯಲ್ಲೇ ಸಂಸ್ಥೆಗಳ ಚೌಕಟ್ಟನ್ನು ರಚಿಸುತ್ತದೆ. ಬಹುತೇಕ ಆಧುನಿಕ ಸಂಸ್ಥೆಗಳು ರೂಪುಗೊಂಡಿರುವುದು ಈ ಚೌಕಟ್ಟಿನಲ್ಲೇ. ಹೀಗಾಗಿ ನಾಗರಿಕತೆಯಲ್ಲಿ ಅಭಿವೃದ್ಧಿಯೆಂದರೆ, ತುಂಬ ಸರಳೀಕರಿಸಿ ಹೇಳುವುದಾದರೆ, ವ್ಯಕ್ತಿಯೊಬ್ಬ ನಾಗರಿಕತೆಯ ಸ್ವತಂತ್ರ-ಶಿಸ್ತುಬದ್ಧ ಘಟಕವಾಗುವುದು ಅಥಾತ್ ಎಲ್ಲಾ ಪರಕೀಯತೆಗಳನ್ನು ಆವಾಹಿಸಿಕೊಳ್ಳುವುದು. ಮಾರ್ಕೆಟ್ ಸಂಸ್ಕೃತಿಯ ಆತ್ಯಂತಿಕ ಸಾರ್ಥತ್ಯ ಇರುವುದು ಇಲ್ಲಿ.

ಇಂಗ್ಲಿಷ್ ಅನ್ನುವುದು ಒಂದು ಸಮೃದ್ಧ ನಾಗರೀಕತೆಯ ರೂಪಕ ಮತ್ತು ಶಿಕ್ಷಣ ಅದನ್ನು ಆಗುಮಾಡಿಕೊಳ್ಳುವ ಪ್ರಕ್ರಿಯೆ. ಸೇರಿಕೊಂಡ ಕಾಲದ ಜಾತ್ರೆಯೊಳಗೆ ಜಾಗತಿಕ ಮಾರ್ಕೆಟ್‌ನಲ್ಲಿ 'ಇಂಗ್ಲಿಷ್ ಸರಕನ್ನು' ಮಾರುವ ಕ್ರಿಯೆಯೇ ಶಿಕ್ಷಣ.

–೬–

ಶಾಲೆಗಳಲ್ಲಿ ಗ್ರಾಹಕ ಕ್ಲಬ್‌ಗಳನ್ನು ತೆರೆಯುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಗ್ರಾಹಕ ಚಳುವಳಿಯ ದೃಷ್ಟಿಯಿಂದ ಇದು ಸ್ವಾಗತಾರ್ಹ ಪ್ರಯತ್ನವೇ. ಆದರೆ ಈ ಗ್ರಾಹಕ ಚಳವಳಿ ಕೂಡ ಬಂಡವಾಳಶಾಹಿ ನಾಗರಿಕತೆಯ ಅನಿವಾರ್ಯ ಉತ್ಪನ್ನವೇ ಅಂತನ್ನುವುದನ್ನು ಕಂಡುಕೊಂಡರೆ ಅದರ ಬಗೆಗಿನ ಟೀಕೆ ಆತ್ಯಂತಿಕವಾಗಿ ಬಂಡವಾಳಶಾಹಿ ಸಾಂಸ್ಥಿಕ ಚೌಕಟ್ಟಿನ ಮೇಲಿನ ಟೀಕೆಯೇ ಆಗುತ್ತದೆ.

ಸಾಮಾನ್ಯವಾಗಿ ಸರ್ಕಾರಿ, ಅರೆಸರ್ಕಾರಿ ಸೇವೆಗಳ ಭ್ರಷ್ಟತೆ, ಅದ್ಷಕ್ಷತೆಗಳ ವಿರುದ್ಧ ಹೋರಾಡುವ ಭರದಲ್ಲಿ ಖಾಸಗೀಕರಣದ ಉಗ್ರಪ್ರತಿಪಾದನೆ ಮಾಡುವ ಬಳಕೆದಾರರ ವೇದಿಕೆಗಳ ಅಸ್ತಿತ್ವದ ತಾತ್ವಿಕತೆಯನ್ನು ಮೊದಲು ಗುರುತಿಸೋಣ. ಇವು ಇರುವುದು ಏಕೆ? ಮಾರುಕಟ್ಟೆಯಲ್ಲಿ ಗ್ರಾಹಕನ ಸ್ವಾತಂತ್ರ್ಯವನ್ನು ರಕ್ಷಿಸಲು. ಇಲ್ಲಿ ಗಮನಿಸಬೇಕಾದ ಅಂಶ-ಇದು ತನ್ನನ್ನು ಮಾರುಕಟ್ಟೆಯ ಚೌಕಟ್ಟಿನೊಳಗೆ ಬಂಧಿಸಿಕೊಳ್ಳುವುದು ಒಂದಾದರೆ, ಇನ್ನೊಂದು, ಅದು ಪರಿಕಲ್ಪಿಸಿಕೊಂಡ 'ಸ್ವಾತಂತ್ರ್ಯ'ದ ಅರ್ಥ. ಮಾರುಕಟ್ಟೆಯ ಸಂದರ್ಭಕ್ಕೆ ಸಂಬಂಧಿಸಿದಂತೆ ಅಮರ್ತ್ಯ ಸೇನ್ ಸ್ವಾತಂತ್ರ್ಯದ ಎರಡು ವಿಚಾರಗಳನ್ನು ಮುಂದಿಡುತ್ತಾರೆ [Sen: Rationatily and freedom ನಲ್ಲಿ Market and Freedom: Oup:2006]. (Opporhinity aspect) ಇನ್ನೊಂದು ವಿಧಾನಾತ್ಮಕ ವಿಚಾರ (processapeet) ಒಂದು ಅವಕಾಶದ ವಿಚಾರವಾದರೆ ಮಾರುಕಟ್ಟೆಯು ಸ್ವಾತಂತ್ರ್ಯವನ್ನು ಅರ್ಥಮಾಡಿಕೊಂಡಿರುವುದು ಎರಡಲಗಿನಲ್ಲ-ಉದ್ದಿಮೆದಾರರಿಗೆ ಮುಕ್ತ ಅವಕಾಶದ ಮಾರುಕಟ್ಟೆಯಾದರೆ ಗ್ರಾಹಕನಿಗೆ ಆಯ್ಕೆಯ ಸ್ವಾತಂತ್ರ್ಯವಿರುವ (ಆದರೆ ಸೀಮಿತ ಅವಕಾಶ) ಮಾರುಕಟ್ಟೆ (process aspct). ಮಾರ್ಕೆಟ್‌ನ ಸರ್ವಾಧಿಕಾರಿ ಅಧಿಕೃತತೆಯನ್ನು

ಸಮಾಜವನ್ನು ಹೋಳಾಗಿಸಿಬಿಡುವುದರ ಕುರಿತು. ಅಂಗಡಿಯಿಂದ ಒಂದು ಪೆನ್ನು ಕೊಳ್ಳುವ ನಾನು ಗ್ರಾಹಕ, ಅಂಗಡಿಯಾತ ಮಾರಾಟಗಾರ ಈ ಅಂಗಡಿಯವನು ಕೂಡಾ ಅಕ್ಕಿಗೋ ಸಾಬೂನಿಗೋ ಗ್ರಾಹಕನೇ. ಆದರೆ ಗ್ರಾಹಕ ಚಳವಳಿಯ ಎಚ್ಚರದಲ್ಲಿ ಯೋಚಿಸುವ ನಾನು ಅಂಗಡಿಯಾತನನ್ನು ಖಾಯಂ ಮಾರಾಟಗಾರನಂತೆಯೂ ನನ್ನನ್ನೂ ಖಾಯಂ ಗ್ರಾಹಕನಂತೆಯೂ ಕಲ್ಪಿಸಿಕೊಳ್ಳುತೇನೆ... ಮಾರುಕಟ್ಟೆಯ ಅವಕಾಶ (Space)ದಲ್ಲಿ ಈ ಎರಡು ಕಂಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿಕೊಂಡು ಬಿಟ್ಟಿರುತ್ತೇನೆ.

ಯಾವತ್ತೂ ರಕ್ಷಿಸುವ ಈ ಸ್ವಾತಂತ್ರ್ಯ ಮೀಮಾಂಸೆಯೇ ಗ್ರಾಹಕ ಚಳುವಳಿಯ ತಾತ್ವಿಕ ತಳಹದಿ. ಗ್ರಾಹಕ ಕ್ಲಬ್‌ಗಳು ಸಹಜವಾಗಿಯೇ ಈ ಮಿತಿಗೆ ಒಳಪಟ್ಟಿರುತ್ತವೆ. ಈ ಮೀಮಾಂಸೆ ಶಾಲೆಯ ಹಂತಕ್ಕೆ ಬಂದಾಗ ಅದಕ್ಕೆ ದೊಡ್ಡ ಮಟ್ಟದ ಅಧಿಕೃತತೆ ಪ್ರಾಪ್ತವಾಗುತ್ತದೆ; ಮತ್ತು ಪರ್ಯಾಯದ ಹುಡುಕಾಟ ಇನ್ನೂ ಕ್ಷೀಣವಾಗಿ ಬಿಡುತ್ತದೆ.

ಎರಡನೆಯ ಟೀಕೆ ಗ್ರಾಹಕ ತತ್ವವು ಸಮಾಜವನ್ನು ಹೋಳಾಗಿಸಿಬಿಡುವುದರ ಕುರಿತು. ಅಂಗಡಿಯಿಂದ ಒಂದು ಪೆನ್ನು ಕೊಳ್ಳುವ ನಾನು ಗ್ರಾಹಕ, ಅಂಗಡಿಯಾತ ಮಾರಾಟಗಾರ ಈ ಅಂಗಡಿಯವನು ಕೂಡಾ ಅಕ್ಕಿಗೋ ಸಾಬೂನಿಗೋ ಗ್ರಾಹಕನೇ. ಆದರೆ ಗ್ರಾಹಕ ಚಳವಳಿಯ ಎಚ್ಚರದಲ್ಲಿ ಯೋಚಿಸುವ ನಾನು ಅಂಗಡಿಯಾತನನ್ನು ಖಾಯಂ ಮಾರಾಟಗಾರನಂತೆಯೂ ನನ್ನನ್ನೂ ಖಾಯಂ ಗ್ರಾಹಕನಂತೆಯೂ ಕಲ್ಪಿಸಿಕೊಳ್ಳುತೇನೆ... ಮಾರುಕಟ್ಟೆಯ ಅವಕಾಶ (Space)ದಲ್ಲಿ ಈ ಎರಡು ಕಂಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿಕೊಂಡು ಬಿಟ್ಟಿರುತ್ತೇನೆ. ಹಿಂದೆಯೇ ಚರ್ಚಿಸಿದ ತಾತ್ವಿಕ ದ್ವಂದ್ವದ ಅಂತರ್ ಪ್ರವಾಹವೇ ಇಲ್ಲಿದ್ದರೂ, ಆ ತಾತ್ವಿಕ ಅರಿವಿನ ಅಭಾವದಲ್ಲಿ ಕೂಡ ಈ ವಿಭಜನೆ ಸಂಭವಿಸುವುದರಿಂದ ಇದನ್ನು ಪ್ರತ್ಯೇಕವಾಗಿ ಚರ್ಚಿಸಬೇಕಾಗಿದೆ. ಗ್ರಾಹಕ ಪ್ರಜ್ಞೆ ಮೊಳೆಯುವುದೆಂದರೇನೆ ಸಮುದಾಯ ಪ್ರಜ್ಞೆ ಬಿರುಕು ಬಿಡುವುದು. ವ್ಯಕ್ತಿಯನ್ನು ಅ-ಸಾಮಾಜಿಕಗೊಳಿಸುವುದು ಮಾರ್ಕೆಟ್ ಸಂಸ್ಕೃತಿಯನ್ನು ಬೆಳೆಯುವ ಮೊದಲ ಹಂತ. ಹೇಗೆ ಅ-ಸಾಮಾಜೀಕರಣಗೊಂಡಾಗ ಉಂಟಾಗುವ ಪರಕೀಯ ಭಾವನೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಅದೇ ಮಾರ್ಕೆಟ್ ಆತನ ಮುಂದೆ ಉಪಭೋಗವಾದಿ ಐಷಾರಾಮಿ ಸಾಧನಗಳನ್ನು ಇಡುತ್ತಿದೆ; ಫ್ಯಾಶನ್ ಶೋಗಳಂತಹ ಸಂಸ್ಕೃತಿಯನ್ನು ಒಡ್ಡುತ್ತದೆ. ಅಂತಿಮವಾಗಿ ಮನರಂಜನೆಯೂ ಏಕರೂಪಗೊಂಡು (Stereotype) ವ್ಯಕ್ತಿಯು ಮನರಂಜನೆಯ ಗ್ರಾಹಕ ಕೂಡ ಆಗಿಬಿಟ್ಟಿದ್ದಾನೆ.

ಇನ್ನೂ ಭೀಕರವೆಂದರೆ ಇವು ಬದಲಿಸಿಬಿಡುವ ನ್ಯಾಯದ ಕಲ್ಪನೆ. ಮಾನಹಾನಿ-ಮನೋಹಾನಿ-ಆರೋಗ್ಯ ಹಾನಿಗಳಿಗೆಲ್ಲ ಇವು ಇಷ್ಟಿಷ್ಟು ಮೊತ್ತವನ್ನು ಪರಿಹಾರ ಒಂದು ನಿರ್ಧರಿಸುತ್ತದೆ. [illegible] ಹಾಗೆ ಪ್ರತಿಯೊಬ್ಬನೂ ತನ್ನ ನ್ಯಾಯದ ಪರಿಕಲ್ಪನೆಯನ್ನು [illegible] ಸುತ್ತ ಪುನರ್‌ರಚಿಸಿಕೊಳ್ಳುತ್ತಾನೆ. ಜೀವಕ್ಕೆ ಇಷ್ಟೆಂದು ಬೆಲೆ ಕಟ್ಟುವ ವಿಮೆಯಂತೆ ಇವೂ ಕೂಡ ಕ್ರಮೇಣ ನಂಬಿಕೆಗಳಾಗುತ್ತವೆ. ಕೆ.ವಿ. ಸುಬ್ಬಣ್ಣ ಒಂದು ಘಟನೆಯನ್ನು ಹೇಳುತ್ತಾರೆ: ಬಹಳ ಹಿಂದೆ ನಮ್ಮ ಊರಲ್ಲಿ ಒಂದು ಪಂಚಾಯಿತಿ ಸೇರಿತ್ತು. ಒಬ್ಬ ದಾರಿ ತಪ್ಪಿದ ತರುಣನು ನಿಷ್ಕಾರುಣವಾಗಿ ಊರಿನ ಸ್ವತ್ತನ್ನು ನಾಶಪಡಿಸಿದ್ದರಿಂದ ಅವನಿಗೆ ತಕ್ಕ ಶಿಕ್ಷೆಯನ್ನು ನಿರ್ಧರಿಸಬೇಕಿತ್ತು. ವಿಧಿಸಬೇಕಾದ ದಂಡದ ಮೊಬಲಗಿನ ಬಗ್ಗೆ ಭಾರೀ ವಾಗ್ವಾದ, ಚರ್ಚೆಗಳು ನಡೆದವು. ಆಗ ವೃದ್ಧರೊಬ್ಬರು ಮುಂದಕ್ಕೆ ಬಂದು ಹೇಳಿದರು; ದುಡ್ಡು ಗಿಡ್ಡು ಬೇಡ, ಅವನನ್ನು ಇಲ್ಲಿ ಕರೆಸಿ ಈ ಹತ್ತು ಜನರ ಮುಂದೆ ಹುಚ್ಚುಮುಂಡೇ ಗಂಡ ಅಂದು ಬಿಡೋಣ ಅಂತ ನಾವೆಲ್ಲ ನಕ್ಕಿದ್ದೆವು. ನಮ್ಮ ಹೊಸ ಜೀವನ ಕ್ರಮ ಮತ್ತು ಅದರಿಂದ ಬರುವ ನಂಬಿಕೆಗಳ ಹಿನ್ನೆಲೆಯಲ್ಲಿ ಆ ವೃದ್ಧರ ಮಾತು ನಮಗೆ ಅರ್ಥವಾಗುವುದು ಸಾಧ್ಯವಿರಲಿಲ್ಲ.

ಮಾರ್ಕೆಟ್‌ನ ತಕ್ಕಡಿಯಲ್ಲಿ ಹಣದಿಂದ ಅಳೆಯಲಿಕ್ಕೆ ಬಾರದ ಮಾನವ ಸೂಕ್ಷ್ಮಗಳು, ವೈಶಿಷ್ಟ್ಯಗಳು ಕಳೆದು ಹೋಗುತ್ತವೆ.

–೭–

ಗ್ರಾಹಕ ಕ್ಲಬ್‌ಗಳಿಂದಾಗಿ ಈ ಸೂಕ್ಷ್ಮಗಳು, ಮುಗ್ಧತೆಗಳು ಶಾಲೆಯ ಹಂತದಲ್ಲೇ ಕಳೆದು ಹೋಗುತ್ತವೆ ಅನ್ನುವ ಕಾರಣಕ್ಕಾಗಿ ಈ ಚರ್ಚೆಯನ್ನು ಇಷ್ಟು ವಿಸ್ತರಿಸಿದೆ. ಹಾಗೆ ನೋಡಿದರೆ ಮಾರ್ಕೆಟ್ ಸಂಸ್ಕೃತಿಗೆ ಪರ್ಯಾಯವನ್ನು ನಿರ್ಮಿಸುವ ತಾಕತ್ತಿರುವುದು ಈ ಮುಗ್ಧತೆಗೆ; ಪಶ್ಚಿಮದ ಹಮ್ಮಿನಲ್ಲಿ ಮಾರ್ಕ್ಸ್ ವಿಲೇಜ್ ಈಡಿಯಸಿ ಅಂದಿದ್ದನಲ್ಲ, ಆ ಮುಗ್ಧತೆಯೇ ಪಶ್ಚಿಮಕ್ಕೆ ಸವಾಲಾಗಬಲ್ಲದು. ಈ ಮುಗ್ಧತೆಯನ್ನು ನಾಗರಿಕತೆಯ ಪ್ರಜ್ಞೆ ಮೂರ್ಖತನವೆಂದು, ಅನಾಗರಿಕತನವೆಂದು ಗ್ರಹಿಸಿಕೊಳ್ಳು'ದೆ. ಇದಕ್ಕೆ ಪ್ರತಿಯಾಗಿ ಅಲ್ಲಿ ಯಾವ ಅಸ್ತ್ರವೂ ಇಲ್ಲ; ಮುಗ್ಧತೆಯನ್ನು ನಿವಾರಿಸುವ ಮಾರ್ಗವನ್ನು ಅದು ಹಿಡಿದಿದೆ-ಜ್ಞಾನದ ಹೆಸರಿನಲ್ಲಿ. ಒಮ್ಮೆ ಅಲ್ಬರ್ಟ್ ಕಮ್ಯು ಬರೆದಿದ್ದ; Through a Curious transposition peculiar to our times, it is innosous that is called up on to Justifyitself ಅಂತ ತಾನು ಮುಗ್ಧ ಅನ್ನುವುದನ್ನು ತಾರ್ಕಿಕವಾಗಿ ಜಾಣ ತನದಿಂದ ಸಾಧಿಸಿ ತೋರಿಸಬೇಕಾದಂಥ ವಿಪರ್ಯಾಸ.

ಜಾನಪದ ಕತೆಯೊಂದಿದೆ. ಸ್ವಲ್ಪ ವಿಸ್ತೃತ ಎನಿಸಿದರೂ, ಮುಗ್ಧತೆ ವಿದ್ರೋಹಾತ್ಮಕ ನೆಲೆಯಲ್ಲಿ ನಮ್ಮ ಮೂಲ ರೂಪಕ 'ಇಂಗ್ಲಿಷ್'ನ ಎದುರು ಯಾಕೆ ಬಂತು ಅನ್ನುವುದು ಸ್ಪಷ್ಟವಾದೀತು-

ಚಂದ್ರಕೀರ್ತಿ-ರವಿಕೀರ್ತಿ ಅನ್ನುವ ಇಬ್ಬರು ದೊರೆಗಳು. ಅವರ ಮಧ್ಯೆ ಮಹಾ ಶತ್ರುತ್ವ ರವಿಕೀತಿ ಗೆದ್ದು ಬಿಡುತ್ತಾನೆ. ಚಂದ್ರಕೀರ್ತಿಯ ತಂಗಿ ಈತನ ಚಿತ್ರ ನೋಡಿ ಮೋಹಗೊಂಡು ಒಳಸಂಚಿನಿಂದ ದಿಡ್ಡಿ ಬಾಗಿಲು ತೆರೆಸಲು ನೆರವಾದಳಂತೆ. ಈ ಮೆಮ್‌ಸಾಬ್‌ಳಿಂದಾಗಿ ಗೆದ್ದ ರವಿಕೀರ್ತಿ ಸೋತ ರಾಜನನ್ನು ಸೆರೆಮನೆಗೆ ಹಾಕುತ್ತಾನೆ; ಸಮಾಧಾನವಿಲ್ಲದೆ ತನ್ನ ಉಳಿಗದ ತೊತ್ತನ್ನಾಗಿ ಮಾಡಿಕೊಳ್ಳುತ್ತಾನೆ. ಚಂದ್ರಕೀರ್ತಿಯನ್ನು ಶುದ್ಧಾಂಗವಾಗಿ ಅಪಮಾನಿಸಿ, ಆತ್ಮಗೌರವವನ್ನು ಪೂರ್ಣವಾಗಿ ನಾಶಮಾಡುವುದೇ ಆತನ ಉದ್ದೇಶ ಇರಬಹುದು.

ಚಂದ್ರಕೀರ್ತಿ ಸೆರೆಮನೆಯಲ್ಲಿ ಒಂಟಿ, ಜತೆಗೆ ಅಪಾರ ಅಪಮಾನ, ದಿನಾಲೂ, ಒಂದು ಕೋತಿ ಮಾತ್ರ ಅವನ ಸಂಗಾತಿ. ಹಿಂಸೆ, ಕ್ರೌರ್ಯ, ಅಪಮಾನ, ಕಿರುಕುಳಗಳಿಂದ ಅವನಿಗೆ ಹುಚ್ಚು ಹಿಡಿಯುತ್ತದೆ. ಅಥವಾ ದೊರೆಯ ಎದುರು ಹಾಗೆ ನಟಿಸುತ್ತಾನೆ. ಆದರೆ ಗೆದ್ದ ಹಮ್ಮಿನ ದೊರೆಗೆ ಅನುಮಾನ. ಅವನಂದುಕೊಂಡಿರುವುದು ವಾಸ್ತವವಾಗಿ ಚಂದ್ರಕೀರ್ತಿ ಸರಿಯಾಗಿಯೇ ಇದ್ದಾನೆಂದು. ಇಷ್ಟಕ್ಕೂ ಕುತೂಹಲ ಏನೆಂದರೆ ಯಾವನೇ ಮನುಷ್ಯನಾದರೂ ಇಂಥ ಕಾನ್ಸಂಟ್ರೇಷನ್ ಕ್ಯಾಂಪಿನಲ್ಲಿ ಪೂರ್ಣವಾಗಿ ನಾಶವಾಗುತ್ತಿದ್ದ. ಆದರೆ ಚಂದ್ರಕೀರ್ತಿಯ ಈ ಶಕ್ತಿ ಈ ಆಂತರಿಕ ಸ್ವಾಸ್ಥ್ಯದ ಮೂಲ ಸೆಲೆ ಎಲ್ಲಿಯದು? ಹಾಗಾಗಿ ದೊರೆ ಕೈದಿಯನ್ನು ಸೂಕ್ಷ್ಮವಾಗಿ ಗಮನಿಸಲು ಶುರುಮಾಡಿದ. ತಾನು ಅನುಭವಿಸುತ್ತಿದ್ದ ಉತ್ಕಟ ದೈಹಿಕ–ಮಾನಸಿಕ ಹಿಂಸೆಯ ನಡುವೆಯೇ ಒಮ್ಮೆಮ್ಮೆ ಹಠಾತ್ತನೆ ಚಂದ್ರಕೀರ್ತಿಯ ಮುಖದ ಮೇಲೆ ವ್ಯಂಗ್ಯದ ಮಿಂಚು ತೂರಿ ಮಾಯವಾಗುತ್ತಿತ್ತು. ಈ ನಾಟಕಕ್ಕೆ ಪ್ರೇಕ್ಷಕನಾಗಿದ್ದ ಕೋತಿಯ ಕಡೆ ತಿರುಗಿ ವ್ಯಂಗ್ಯದ ನಗೆ ಬೀರುತ್ತಿದ್ದ. ಆ ಕೋತಿ ಕೂಡ ಇದಕ್ಕೆ ಪ್ರತಿಕ್ರಿಯಿಸುತ್ತಿದ್ದ ಹಾಗೆ ಕಾಣುತ್ತಿತ್ತು. ರವಿಕೀರ್ತಿಗೆ ಹಠಾತ್ತನೆ ಏನೋ ಹೊಳೆದಂತಾಯಿತು. ಈ ತೊತ್ತಿನ ಶಕ್ತಿಯ ಮೂಲ ಇಲ್ಲಿದೆ ಅನಿಸಿತು. ಆದರೆ ಏನೂ ಹೇಳಲಿಲ್ಲ. ವೇಷ ಮರೆಸಿಕೊಂಡು ರಾತ್ರಿ ಸೆರೆಮನೆಗೆ ನಡೆದ. ಆ ದೃಶ್ಯ ರವಿಕೀರ್ತಿಯನ್ನು ಕೋಪದಿಂದ ಹುಚ್ಚೆಬ್ಬಿಸಿತು. ಅರ್ಥವಾಗದ ಭಯದಿಂದ ನಡುಗುವಂತೆ ಮಾಡಿತು.

ಅದೇನೆಂದರೆ: ಸೆರೆಮನೆಗೆ ಹೊಕ್ಕವನೇ ಚಂದ್ರಕೀರ್ತಿ ತನ್ನ ತೊತ್ತಿನ ವೇಷವನ್ನು ಕಿತ್ತೆಸೆಯುತ್ತಿದ್ದ. ಮೈಮೇಲೆ ಬರೀ ಲಂಗೋಟಿ. ಆದರೆ ಕೋತಿಗೆ ಚಂದಿಗಳಿಂದೆಲ್ಲ ಅಲಂಕರಿಸಿ ರಾಜನ ವೇಷ ಹಾಕುತ್ತಿದ್ದ. ಕೋತಿ ರವಿಕೀರ್ತಿಯ ಹಾಗೆ ತೋರುತ್ತಿತ್ತು. ಅಣಕಾಭಿನಯದ ಅತಿರೇಕ. ಆ ಕೋತಿ ಮಾತಾಡುತ್ತಿತ್ತು. ಗರ್ವಿಷ್ಟ ದೊರೆ ರವಿಕೀರ್ತಿ ತನ್ನ ಶತ್ರು–ತೊತ್ತಿಗೆ ದಿನವೆಲ್ಲ ಏನನ್ನು ಬೈಯುತ್ತಿದ್ದನೋ ಅದನ್ನೆಲ್ಲ ಕೋತಿ ಪುನರಾವರ್ತಿಸುತ್ತಿತ್ತು. ಅಟ್ಟಹಾಸದಿಂದ ಬೀಗಿ ಬೈದಿದ್ದು ಈ ಅಣಕದಲ್ಲಿ ಹಾಸ್ಯಾಸ್ಪದವಾಗಿ ಕಾಣುತ್ತಿತ್ತು. ಗಂಭೀರ ರೋಷ ಕೋತಿಯ ಪುನರಾಭಿನಯದಲ್ಲಿ ಕೀಳಾಗಿ ಕಾಣುತ್ತಿತ್ತು. ಈ ಕೋತಿಯನ್ನು ಯಕ್ಷಗಾನದ ಕೋಡಂಗಿಯಂತೆ ಅಂದುಕೊಳ್ಳಿ. ಈ ನಾಟಕದಲ್ಲಿ ಚಂದ್ರಕೀರ್ತಿ ಚಪ್ಪಾಳೆ ಹೊಡೆದು ಜೋರಾಗಿ ನಗುತ್ತಿದ್ದ. ಎಲ್ಲ ಹಿಂಸೆಯನ್ನು ಆತ ದಾಟಿ ಬಂದ ಮೂಲ ಇಲ್ಲಿ ಸಿಕ್ಕಿತ್ತು. ಮೂರನೆಯ ದಿನ ದೊರೆ ಕೋತಿಯನ್ನು ಕೊಲ್ಲಿಸಿದ. ನಂತರ ಚಂದ್ರಕೀರ್ತಿ ಪೂರ ಮಂಕಾಗಿದ್ದ ಕತೆಯನ್ನು ನಂತರ ಮುಂದುವರೆಸುತ್ತೇನೆ. ಕೈಗಾರಿಕಾ ಕ್ರಾಂತಿಯ ನಂತರ ಪಶ್ಚಿಮ ಕೂಡ ಮಂಕಾಗಲು ಶುರುವಾಗಿತ್ತು. ವಿಜ್ಞಾನ–ತಂತ್ರಜ್ಞಾನದ ಅಡವಿಯೊಳಗೆ ಕೋತಿ ಕಳೆದು ಹೋಗಿತ್ತು.

–೮–

ವಿಜ್ಞಾನ ಮೂಲ ಭೀತಿಯಿಂದಾಗಿ, ಅದೂ ಒಂದು ಅಮಲೆಂದು ಒಪ್ಪಿಕೊಂಡರೆ, ಅದರ ಅಪ್ರಶ್ನಾರ್ಹ ಸರ್ವಾಧಿಕಾರಿ ಸ್ಥಾನ ಕಳೆದು ಹೋಗುತ್ತದೆ. ವಿಜ್ಞಾನದ ವಸ್ತುನಿಷ್ಠತೆ ಮತ್ತು ಸರ್ವಜ್ಞತ್ವದ ಮೇಲೆ ರೂಪುಗೊಂಡ ನಾಗರಿಕತೆಯ ಒಟ್ಟು ರಚನೆಯೇ ಕುಸಿದು ಹೋಗಬಹುದು. 'Fear' ಅನ್ನು ವಿಜ್ಞಾನದ ಮೂಲವೆಂದು ಹೇಳುತ್ತಾ ನೀಷೆ ಮುಂದುವರಿಯುತ್ತಾನೆ–ಆ ಪಾಪಭೀರು ಹೀಗೆ ಹೇಳಿದ. ಆದರೆ ಆಗ ತಾನೆ ತನ್ನ ಗವಿಗೆ ಹಿಂತಿರುಗಿದ ಝೂರಾತುಷ್ತ್ರ ಛಾತಿಯ ಬಗ್ಗೆ ಹೇಳುತ್ತಾನೆ: This courage at last become Subtle, spiritual and intelletual, This human courage, with eagle's pinious and serpent's kingdom This, it seometh to me is called at present- ಎಂದು ವಿಜ್ಞಾನವನ್ನು ವ್ಯಾಖ್ಯಾನಿಸುತ್ತಾನೆ. ಹಾಗಿದ್ದು ಅದಕ್ಕೆ ಸರ್ಪದ ಚಾಣಾಕ್ಷತನ ಮತ್ತು ಡೇಗೆಯ ಕೊಕ್ಕಿನ ಮೊನಚನ್ನು ಗುರುತಿಸುತ್ತಾನೆ.

ಆ ಪಾಪಭೀರು ಈ ಛಾತಿಯ ಆಕ್ರಮಣಶೀಲತೆಯನ್ನು ಕಂಡು ಅದು ಭೀತಿ ಮೂಲದ್ದೆಂದಿರಬೇಕು. ಇದನ್ನು ಮುಂಗಾಣಿದ್ದ ಬ್ಲೇಕ್ ತನ್ನ ಕಾಲದಲ್ಲಿ ತಂತ್ರಜ್ಞಾನ ಸವಾಲಿನ ವಿರುದ್ಧ ದೊಡ್ಡ ಪ್ರತಿರೋಧವನ್ನೇ ತೋರಿದ್ದ. ನ್ಯೂಟನ್ ಈ ಸವಾಲಿಗೆ ಪ್ರತಿಕ್ರಿಯಿಸಿದ ರೀತಿ ಆ ಸವಾಲಿನ ಯಾಂತ್ರಿಕ ಅನುಕರಣೆಯೇ ಆಗಿತ್ತೆಂದು ಬ್ಲೇಕ್‌ಗೆ ಅನಿಸಿತ್ತು. ನ್ಯೂಟನ್ ಮತ್ತು ಲಾಕ್‌ರಲ್ಲಿ ತಮಗೆ ತಾನೇ ಮರುಳುಗೊಡ ನಾರ್ಸಿಸಸ್‌ಗಳು ಕಂಡರು: Moikon, ploikan, Voltaire, Rousseau; /Moikon, Moikon it's all in vain, You throw the sand against the wind / And wind Blows it back again. ಒಂದೂವರೆ ಶಮಾನದ ನಂತರ ಬರೆದ ಏಟ್ಸ್ ನ್ಯೂಟನ್ ಮತ್ತು ಲಾಕ್‌ರ ಪೂರ್ಣರೂಪದ ಬ್ಲೇಕಿಯನ್ ಆವೃತ್ತಿಯನ್ನು ಕೊಡುತ್ತಾನೆ:–

ಅದೇನೆಂದರೆ: ಸೆರೆಮನೆಗೆ ಹೊಕ್ಕವನೇ ಚಂದ್ರ ಕೀರ್ತಿ ತನ್ನ ತೊತ್ತಿನ ವೇಷವನ್ನು ಕಿತ್ತೆಸೆಯುತ್ತಿದ್ದ. ಮೈಮೇಲೆ ಬರೀ ಲಂಗೋಟಿ. ಆದರೆ ಕೋತಿಗೆ ಚಂದಿಗಳಿಂದೆಲ್ಲ ಅಲಂಕರಿಸಿ ರಾಜನ ವೇಷ ಹಾಕುತ್ತಿದ್ದ. ಕೋತಿ ರವಿಕೀರ್ತಿಯ ಹಾಗೆ ತೋರುತ್ತಿತ್ತು. ಅಣಕಾಭಿನಯದ ಅತಿರೇಕ. ಆ ಕೋತಿ ಮಾತಾಡುತ್ತಿತ್ತು. ಗರ್ವಿಷ್ಟ ದೊರೆ ರವಿಕೀರ್ತಿ ತನ್ನ ಶತ್ರು–ತೊತ್ತಿಗೆ ದಿನವೆಲ್ಲ ಏನನ್ನು ಬೈಯುತ್ತಿದ್ದನೋ ಅದನ್ನೆಲ್ಲ ಕೋತಿ ಪುನರಾವರ್ತಿಸುತ್ತಿತ್ತು. ಅಟ್ಟಹಾಸದಿಂದ ಬೀಗಿ ಬೈದಿದ್ದು ಈ ಅಣಕದಲ್ಲಿ ಹಾಸ್ಯಾಸ್ಪದವಾಗಿ ಕಾಣುತ್ತಿತ್ತು. ಗಂಭೀರ ರೋಷ ಕೋತಿಯ ಪುನರಾಭಿನಯದಲ್ಲಿ ಕೀಳಾಗಿ ಕಾಣುತ್ತಿತ್ತು. ಈ ಕೋತಿಯನ್ನು ಯಕ್ಷಗಾನದ ಕೋಡಂಗಿಯಂತೆ ಅಂದುಕೊಳ್ಳಿ. ಈ ನಾಟಕದಲ್ಲಿ ಚಂದ್ರಕೀರ್ತಿ ಚಪ್ಪಾಳೆ ಹೊಡೆದು ಜೋರಾಗಿ ನಗುತ್ತಿದ್ದ. ಎಲ್ಲ ಹಿಂಸೆಯನ್ನು ಆತ ದಾಟಿ ಬಂದ ಮೂಲ ಇಲ್ಲಿ ಸಿಕ್ಕಿತ್ತು. ಮೂರನೆಯ ದಿನ ದೊರೆ ಕೋತಿಯನ್ನು ಕೊಲ್ಲಿಸಿದ. ನಂತರ ಚಂದ್ರಕೀರ್ತಿ ಪೂರ ಮಂಕಾಗಿದ್ದ ಕತೆಯನ್ನು ನಂತರ ಮುಂದುವರೆಸುತ್ತೇನೆ.

Locks sank into a swoon :I the garden died. God took the spinning jenny / out of his side. ಯಾಂತ್ರಿಕ ಮತ್ತು ರೇಖಾತ್ಮಕ ಸಾಹಚರ್ಯವಾದದ ಅಧ್ವರ್ಯುವಾದ ಲಾರ್, ತನ್ನ ಪ್ರತಿಬಿಂಬದೊಳಗೆ ತಾನೇ ಮುಳುಗಿ ಹೋದಂತೆ ಏಟ್ಸ್ ಚಿತ್ರಿಸುತ್ತಾನೆ. ಈ ಉದ್ಯಾನ ಅಥವಾ 'ಏಕೀಕೃತ ಪ್ರಜ್ಞೆ' (unified consciouseness) ಅಂತ್ಯವಾಗಿದೆ. ಹದಿನೆಂಟನೇ ಶತಮಾನದ ಮಾನವನಿಗೆ Spinning jenuy ಅನ್ನುವುದು ತನ್ನ ದೇಹದ ವಿಸ್ತೃತ ರೂಪವೇ ಆಗಿಬಿಟ್ಟತು, ಎನ್ನುವಲ್ಲಿ ಏಟ್ಸ್ ಕ್ರಿಶ್ಚಿಯನ್ ಪುರಾಣದ ನೆನಪು ಮಾಡಿಕೊಳ್ಳುತ್ತಾನೆ–ಜೊತೆಗಿರಲು ತನ್ನ ದೇಹದ ಭಾಗವನ್ನೇ ಕತ್ತರಿಸಿ ಹೆಣ್ಣನ್ನು ಸೃಷ್ಟಿಸಿದ ನೆನಪನ್ನು.

ಅಸ್ತಿತ್ವದ ನಿರಾಕರಣೆಯಂತೆಯೇ ಅನ್ಯದ ನೆನಪಿನ ಚರಿತ್ರೆಯ ನಿರಾಕರಣೆ ಕೂಡ ಆಧುನಿಕ ನಾಗರಿಕತೆಯ ಮೂಲ ಸ್ವಭಾವ. ಆಧುನಿಕ ಸಾಲೋಮನ್ ಹೌಸ್‌ಗಳಾದ ಪ್ರಯೋಗಶಾಲೆಗಳಲ್ಲಿರುವ ಬೆಕೋನಿಯನ್ ಮೆಮ್‌ಸಾಬ್‌ಳ ಪಿತೃಪ್ರಧಾನ ಪ್ರವೃತ್ತಿಯನ್ನು ಏಟ್ಸ್ ನೆನಪು ಮಾಡಿಕೊಡುತ್ತಾನೆ.

–೯–

ಕೋತಿಯಿಲ್ಲದಿದ್ದರೂ ಚಂದ್ರಕೀರ್ತಿ ಮತ್ತೆ ಚೇತರಿಸಿದಂತೆ ಕಂಡಿತು. ಹೀಗಾಗಿ ಮತ್ತೆ ರವಿಕೀರ್ತಿ ತೊತ್ತನ್ನು ಹಿಂಬಾಲಿಸಿದ. ಆಗ ಕಂಡ ದೃಶ್ಯ ಮತ್ತಷ್ಟು ಕಂಗೆಡಿಸಿತು. ಸೆರೆಮನೆಯೊಳಗೆ ಚಂದ್ರಕೀರ್ತಿ ನಿದ್ದೆಯಲ್ಲಿದ್ದ. ಇನ್ನೇನು ದೊರೆ ತಿರುಗಿ ಹೋಗಬೇಕು ಅನ್ನುವಾಗ ತೊತ್ತು ನಿದ್ದೆಯಲ್ಲೇ ಮಾತನಾಡಲಾರಂಭಿಸಿದ. ಅದೆಲ್ಲ ಏಕಪಾತ್ರಾಭಿನಯದಂತಿತ್ತು. ದೊರೆ ಕೊಲ್ಲಿಸಿದ ಕೋತಿ ಕನಸಿನಲ್ಲಿ ಜೀವಂತವಾಗಿತ್ತು. ಕನಸಿನ ನಾಟಕದಲ್ಲಿ ಹಳೆಯ ಅಣಕ ಮತ್ತೆ ಮರುಕಳಿಸಿತು. ದೊರೆಯ ಹಮ್ಮಿನ ಗೇಲಿ ನಡೆಯಿತು. ರವಿಕೀರ್ತಿ ಬೆಚ್ಚಿಬಿದ್ದ. ತಾನು ಕೊಂದಿದ್ದ ಕೋತಿ ಚಂದ್ರಕೀರ್ತಿಯ ಕನಸಿನಲ್ಲಿ ಜೀವಂತವಾಗಿತ್ತು. ಇದನ್ನೇನೂ ಮಾಡುವ ಹಾಗಿರಲಿಲ್ಲ. ಈ ಕೋತಿ ಅವನ ನಿಯಂತ್ರಣಕ್ಕಿಂತ ದೂರವಾಗಿತ್ತು. ದೊರೆ ಈ ವಾಸ್ತವದ ಬಗ್ಗೆ ಪೂರ್ತಿಯಾಗಿ ಅಸಹಾಯಕ ('ಸಾಹಿತ್ಯ ಕಥನ' ದಿಂದ: ಡಿಆರ್‌ಎನ್)

–೧೦–

ಬ್ಲೇರ್ ಬರೆದದ್ದನ್ನೇ ಕೊಂಚ ಬದಲಿಸಿ Brothels (built) with bricks of market ಎಂದರೆ ಟೂರಿಸಂನ ಬಗ್ಗೆ ಪ್ರತ್ಯೇಕ ಟಿಪ್ಪಣಿ ಬೇಕಿಲ್ಲ. ಮುಕ್ತ ಮಾರುಕಟ್ಟೆ'ಯು ನಾಗರಿಕ ಪ್ರಜಾಪ್ರಭುತ್ವ'ದ ರಕ್ಷಣೆಗಾಗಿ ಸುತ್ತ ಹಾಕಿಕೊಂಡ ಕೋಟೆಯಿದೆ. ಈ ನಾಗರಿಕತೆಗೆ ಹೊಂದಿಕೊಳ್ಳುವಂಥ ಉತ್ಪನ್ನಗಳು ಶಿಕ್ಷಣದಿಂದ ತಯಾರಾಗುತ್ತಿವೆ. ಲಿಂಡಾಳ ಮೇಲೆ ಹಂಸವೆರಗಿದ ಹಾಗೆ ಮೆಮ್‌ಸಾಬ್ ಆವರಿಸಿಕೊಳ್ಳುತ್ತಿದ್ದಾಳೆ. ಮುಂದೆ ಹೆಲೆನ್ ಕ್ಲೈಟ್ನಮೆಸ್ಟ್ರಾರಂತ ಅಪ್ಸರೆಯೇ ಆವರಿಸಬಹುದು. ನುಡಿಸಿಕೊಳ್ಳುವ ಇನ್ನೊಂದು ಟ್ರಾಯ್‌ಯ ಹುಡಾಕಾಟದಲ್ಲಿದೆ ಅಮೆರಿಕ.

ಸತ್ತ ಉದ್ಯಾನದಲ್ಲಿ ಕನಸಿನ ಕೋತಿಯ ಜಾಗಕ್ಕೆ ಮೆಮ್‌ಸಾಬ್ ಬಂದಾಳೇ? □

'ಅಫ್ಜಲ್ ಬದುಕಲೇಬಾರದೇ?'

ನಮಗೆ ಇಷ್ಟು ಮಾತ್ರ ಗೊತ್ತು. ೧೩ನೇ ಡಿಸೆಂಬರ್ ೨೦೦೧ ರಂದು ಭಾರತೀಯ ಸಂಸತ್ತು ತನ್ನ ಚಳಿಗಾಲದ ಅಧಿವೇಶನಕ್ಕೆ ಸಿದ್ಧಗೊಳ್ಳುತ್ತಿತ್ತು (ಆಡಳಿತದಲ್ಲಿದ್ದ ಎನ್.ಡಿ.ಎ ಸರ್ಕಾರ ಮತ್ತೊಂದು ಭ್ರಷ್ಟಾಚಾರದ ಆಪಾದನೆಯಲ್ಲಿ ಆಕ್ರಮಣಕ್ಕೀಡಾಗಿತ್ತು). ಅಂದು ಬೆಳಗ್ಗೆ ೧೧.೩೦ ರಲ್ಲಿ ಒಂದು ಬಿಳಿಯ ಅಂಬಾಸಿಡರ್ ಕಾರಿನಲ್ಲಿ ಸುಧಾರಿತ ಸ್ಫೋಟಕಗಳನ್ನು ಹೊಂದಿದ್ದ ಶಸ್ತ್ರ ಸಜ್ಜಿತರಾದ ೫ ಮಂದಿ ಸಂಸತ್ ಭವನದ ಗೇಟಿನ ಮೂಲಕ ಒಳನುಗ್ಗಿದರು. ಕಾರಿನಿಂದ ಹೊರಗೆ ಜಿಗಿದ ಈ ಶಸ್ತ್ರ ಸಜ್ಜಿತರು ಗುಂಡು ಹಾರಿಸಲು ಆರಂಭಿಸಿದರು. ಈ ಹೋರಾಟದಲ್ಲಿ ಆ ೫ ಜನರೊಂದಿಗೆ ೮ ಜನ ರಕ್ಷಣಾ ಸಿಬ್ಬಂದಿಯವರು ಮರಣ ಹೊಂದಿದರು. ಒಂಭತ್ತನೆಯವನಾಗಿ ಒಬ್ಬ ತೋಟದ ಮಾಲಿಯೂ ಸತ್ತಿದ್ದ. ಈ ಬಗ್ಗೆ ಪೋಲೀಸರು ಹೇಳಿದ್ದೆಂದರೆ 'ಮೃತ ಭಯೋತ್ಪಾದಕರ ಬಳಿ ಸಂಸತ್ ಭವನದೊಂದಿಗೆ ಅಲ್ಲಿಯ ರಕ್ಷಣಾ ಪಡೆಯನ್ನು ನಾಶಮಾಡಲು ಬೇಕಾಗುವಷ್ಟು ಮದ್ದು ಗುಂಡುಗಳಿದ್ದವು' ಎಂದು. ಬೇರೆ ಭಯೋತ್ಪಾದಕರಂತಲ್ಲದೆ ಇವರು ತಮ್ಮ ಹಿಂದೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಬಿಟ್ಟುಹೋಗಿದ್ದರು. ಅದರಲ್ಲಿ ಆಯುಧಗಳು, ಮೊಬೈಲ್ ಫೋನು, ಫೋನ್ ನಂಬರ್‌ಗಳು, ಗುರುತಿನ ಕಾರ್ಡುಗಳು, ಛಾಯಾಚಿತ್ರಗಳು, ಹಾಗೂ ಒಣ ಹಣ್ಣುಗಳ ಪೊಟ್ಟಣದೊಂದಿಗೆ ಒಂದು ಪ್ರೇಮಪತ್ರವನ್ನು ಸಹ.



ನಿರೀಕ್ಷೆಯಂತೆಯೇ ಈ ಸಂದರ್ಭವನ್ನು ನಮ್ಮ ಅಂದಿನ ಪ್ರಧಾನಮಂತ್ರಿ ಎ.ಬಿ. ವಾಜಪೇಯಿಯವರು ಅಲ್ಲಿಗೆ ಮೂರು ತಿಂಗಳ ಮುಂಚೆ ಸೆಪ್ಟೆಂಬರ್ ೧೧ ರಂದು ಅಮೇರಿಕಾದ ಮೇಲೆ ನಡೆದಿದ್ದ ದಾಳಿಗೆ ಇದನ್ನು ಹೋಲಿಸಿದರು.

ಇದಾದ ಮರು ದಿನ ಅಂದರೆ ಡಿಸೆಂಬರ್ ೧೪-೨೦೦೧ ರಂದು ದೆಹಲಿಯ ವಿಶೇಷ ಪೋಲೀಸ್ ದಳ ಇದರ ಹಿಂದಿರುವ ಅನೇಕ ವ್ಯಕ್ತಿಗಳನ್ನು ಗುರುತಿಸಿದ್ದೇವೆ ಎಂದು ಹೇಳಿತು. ಮರುದಿನ ಅಂದರೆ ಡಿಸೆಂಬರ್ ೧೫ರಂದು ಈ ವಿಶೇಷ ದಳ ಈ ಆಕ್ರಮಣದ ಒಗಟನ್ನು ಸಂಪೂರ್ಣವಾಗಿ ಬಿಡಿಸಲಾಗಿದೆ, 'ಇದನ್ನು ಪಾಕಿಸ್ತಾನ ಮೂಲದ ಭಯೋತ್ಪಾದಕರ ಗುಂಪುಗಳಾದ ಲಷ್ಕರ್-ಎ-ತೋಯ್ಬಾ ಮತ್ತು ಜೈಶ್-ಎ-ಮೊಹಮದ್ ಸಂಘಟನೆಗಳು ಜಂಟಿಯಾಗಿ ನಡೆಸಿವೆ' ಎಂದು ಹೇಳಿತು.

ಇದರಲ್ಲಿ ಭಾಗೀದಾರರಾದ ೧೨ ಹೆಸರುಗಳನ್ನು ಮುಂದಿಟ್ಟು, ಜೈಶ್ ಸಂಘಟನೆಯ ಗಾಜಿ ಬಾಬಾ (ಯಥಾ ರೀತಿ ಸಂಶಯಿತ-೧).

ಮೌಲಾನಾ ಮಸೂದ್ ಅಝುರ್-ಜೈಶ್ (ಯಥಾರೀತಿ ಸಂಶಯಿತ-೨), ತಾರೀಖ್ ಮೊಹಮದ್ (ಪಾಕಿಸ್ತಾನಿ). ೫ ಜನ ಮೃತ 'ಪಾಕಿಸ್ತಾನಿ ಭಯೋತ್ಪಾದಕರು' (ಈವರೆಗೂ ಇವರು ಯಾರು ಎಂದು ಯಾರಿಗೂ ಗೊತ್ತಿಲ್ಲ) ಮತ್ತು ೩ ಕಾಶ್ಮೀರಿ ವ್ಯಕ್ತಿಗಳಾದ ಎಸ್.ಎ.ಆರ್. ಗಿಲಾನಿ, ಶೌಕತ್ ಹುಸೇನ್ ಗುರು ಮತ್ತು ಮೊಹಮದ್ ಅಫ್ಜಲ್. ಇದರೊಂದಿಗೆ ಶೌಕತ್‌ರ ಪತ್ನಿ ಅಫ್‌ಸಾನಾ ಗುರು. ಈ ೧೨ ಜನರಲ್ಲಿ ಮೂವರನ್ನು ಮಾತ್ರ ಬಂಧಿಸಲಾಗಿತ್ತು.

ಈ ಆತಂಕದ ಹಿನ್ನೆಲೆಯಲ್ಲಿ ಡಿಸೆಂಬರ್‌ನ ಸಂಸತ್ ಅಧಿವೇಶನವನ್ನು ಮುಂದೂಡಲಾಯಿತು. ಈ ನಡುವೆ ಪಾಕಿಸ್ತಾನದಲ್ಲಿದ್ದ ಭಾರತದ ಹೈಕಮಿಷನರನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು. ರೈಲು, ರಸ್ತೆ ಸಾರಿಗೆಯನ್ನು ರದ್ದುಗೊಳಿಸಲಾಯಿತು. ಸೈನ್ಯವನ್ನು ಜಾಗೃತ ಸ್ಥಿತಿಯಲ್ಲಿ ಇಡಲಾಯಿತು, ಹಾಗೂ ೫ ಲಕ್ಷಕ್ಕೂ ಹೆಚ್ಚು ಸೈನ್ಯವನ್ನು ಪಾಕಿಸ್ತಾನದ ಗಡಿಗೆ ಕಳುಹಿಸಲಾಯಿತು ಮತ್ತು ಭಾರತಕ್ಕೆ ಬರುವ ವಿದೇಶಿ ಪ್ರವಾಸಿಗಳಿಗೆ ಈ ಕುರಿತು ವಿಶೇಷ ಎಚ್ಚರಿಕೆ ನೀಡಲಾಯಿತು. ಈ ಉಪ ಖಂಡದಲ್ಲಿ ಅಣು ಯುದ್ಧ ಆರಂಭಗೊಂಡಂಥ ಸ್ಥಿತಿಯನ್ನು ಇಡೀ ಜಗತ್ತು ಉಸಿರು ಕಟ್ಟಿ ನೋಡುತ್ತಿತ್ತು. ಸರ್ಕಾರದ ಈ ಎಲ್ಲಾ ಪ್ರಯತ್ನಗಳಿಗೆ ದೇಶ ತೆತ್ತ ಬೆಲೆ ೧೦,೦೦೦ ಕೋಟಿ ರೂಪಾಯಿಗಳ ಸಾರ್ವಜನಿಕ ಹಣ ಹಾಗೂ ಗಾಬರಿಯ ಸಾಗಾಟದಲ್ಲಿ ಸತ್ತ ಒಂದಷ್ಟು ನೂರು ಸೈನಿಕರು.

ಬಹುಪಾಲು ೩ ವರ್ಷಗಳ ನಂತರ ಆಗಸ್ಟ್ ೪ - ೨೦೦೫ ರಂದು ಸರ್ವೋಚ್ಚ ನ್ಯಾಯಾಲಯ ಈ ಮೊಕದ್ದಮೆಯ ಬಗ್ಗೆ ತನ್ನ ಅಂತಿಮ ತೀರ್ಪನ್ನು ನೀಡಿತು. ಇದರಲ್ಲಿ ಸಂಸತ್ತಿನ ಮೇಲೆ ನಡೆದ ಆಕ್ರಮಣವನ್ನು 'ಯುದ್ಧಕ್ಕೆ ಸಮ' ಎಂದು ಹೇಳಿತು. "ಸಂಸತ್ ಭವನದ ಮೇಲೆ ನಡೆದ ದಾಳಿಯು ನಿಸ್ಸಂದೇಹವಾಗಿ ರಾಜ್ಯದ ಸಾರ್ವಭೌಮತ್ವದ ಮೇಲೆ ಹಾಗೂ ಭಾರತ ಸರ್ಕಾರದ ವ್ಯಕ್ತಿತ್ವದ ಮೇಲೆ ನಡೆದ ದಾಳಿಯಾಗಿದೆ, ಮೃತ ಭಯೋತ್ಪಾದಕರ ದಾಳಿಗೆ ಅವರ ಪ್ರಬಲ ಭಾರತ ವಿರೋಧಿ ಭಾವನೆಗಳು ಕಾರಣವಾಗಿವೆ ಎಂಬುದನ್ನು ಅವರ ಕಾರಿನ ಮೇಲಿದ್ದ ಗೃಹ ಮಂತ್ರಾಲಯದ ಕೋಟಾ ಸ್ಟಿಕ್ಕರಿನಿಂದ (EXPW1/8) ತಿಳಿದುಬರುತ್ತದೆ. ಫಿದಾಯಿನ್‌ಗಳು ಅಳವಡಿಸಿಕೊಂಡ ಕಾರ್ಯವಿಧಾನವನ್ನು ನೋಡಿದರೆ ಅದು ಭಾರತ ಸರ್ಕಾರದ ವಿರುದ್ಧವಾಗಿ ಯುದ್ಧ ಘೋಷಿಸಿದಂತೆ ಕಾಣುತ್ತದೆ" ಎಂದು ಹೇಳಿತು. ಕಾರಿಗೆ ಅಂಟಿಸಿದ್ದ ಸ್ಟಿಕ್ಕರಿನ ಮೇಲಿದ್ದ ಬರಹವೆಂದರೆ...., "ಭಾರತ ಬಹಳ ಕೆಟ್ಟ ದೇಶ, ನಾವು ಭಾರತವನ್ನು ದ್ವೇಷಿಸುತ್ತೇವೆ, ನಾವು ಭಾರತವನ್ನು ನಾಶ ಪಡಿಸಲು ಇಚ್ಛಿಸುತ್ತೇವೆ ಮತ್ತು ದೇವರ ದಯೆಯಿಂದ ಇದು ನಮಗೆ ಸಾಧ್ಯ. ದೇವರು ನಮ್ಮ ಜೊತೆಗಿದ್ದಾನೆ ಮತ್ತು ಇದಕ್ಕಾಗಿ ನಾವು ನಮ್ಮ ಕೈಲಾದ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ, ಈ ಮೂರ್ಖ ವಾಜಪೇಯಿ ಮತ್ತು ಅಡ್ವಾನಿಯನ್ನು ನಾವು ಕೊಲ್ಲುತ್ತೇವೆ. ಅವರು ಅನೇಕ ಮಂದಿ ಮುಗ್ದರನ್ನು ಕೊಂದಿದ್ದಾರೆ ಮತ್ತು ಅವರು ಕೆಟ್ಟ ಮನುಷ್ಯರು ಅವರ ಮೂರನೇ ಸೋದರ ಬುಷ್ ಸಹ ಕೆಟ್ಟ ಮನುಷ್ಯ. ಇವನು ಸಹ ಅನೇಕ ಮುಗ್ದರನ್ನು ಕೊಂದಿದ್ದಾನೆ. ಇವನೂ ಸಾಯಬೇಕು. ಅವನನ್ನು ನಾವು ಕೊಲ್ಲುತ್ತೇವೆ."

ಇಂತಹ ಒಂದು ಅಸ್ಖಲಿತ ಬರವಣಿಗೆಯುಳ್ಳ ಸ್ಟಿಕ್ಕರನ್ನು ಗಾಜಿನ ಮೇಲೆ ಪ್ರದರ್ಶಿಸಲಾಗಿತ್ತು. (ಇಷ್ಟೊಂದು ದೊಡ್ಡ ಪ್ರಮಾಣದ ಪಠ್ಯವಿದ್ದ ಸ್ಟಿಕ್ಕರನ್ನು ಗಾಜಿನ ಮೇಲೆ ಅಂಟಿಸಿದರೆ ಚಾಲಕನಿಗೆ ಏನೂ ಕಾಣಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಇರಬೇಕು ಅವರು ಉಪ ರಾಷ್ಟ್ರಪತಿಗಳ ಕಾರುಗಳ ಸಾಲಿನೊಳಕ್ಕೆ ಸೇರಿಕೊಂಡಿದ್ದು.)

ಪೋಲಿಸರು ತಮ್ಮ ಆರೋಪ ಪಟ್ಟಿಯನ್ನು ಪೋಟೋ ಕಾಯ್ದೆ ಅಡಿ ಸ್ಥಾಪಿಸಲಾದ ವಿಶೇಷ ತ್ವರಿತ ವಿಚಾರಣಾ ನ್ಯಾಯಾಲಯದ ಮುಂದೆ ಸಲ್ಲಿಸಿದರು. ವಿಚಾರಣಾ ನ್ಯಾಯಾಲಯವು ಗಿಲಾನಿ, ಶೌಕತ್ ಮತ್ತು ಅಫ್ಜಲ್‌ರಿಗೆ ಮರಣ ದಂಡನೆಯನ್ನು, ಉಳಿ

ಪೋಲಿಸರು ತಮ್ಮ ಆರೋಪ ಪಟ್ಟಿಯನ್ನು ಪೋಟೋ ಕಾಯ್ದೆ ಅಡಿ ಸ್ಥಾಪಿಸಲಾದ ವಿಶೇಷ ತ್ವರಿತ ವಿಚಾರಣಾ ನ್ಯಾಯಾಲಯದ ಮುಂದೆ ಸಲ್ಲಿಸಿದರು. ವಿಚಾರಣಾ ನ್ಯಾಯಾಲಯವು ಗಿಲಾನಿ, ಶೌಕತ್ ಮತ್ತು ಅಫ್ಜಲ್ ರಿಗೆ ಮರಣ ದಂಡನೆ ಯನ್ನು, ಉಳಿದವರಿಗೆ ಐದು ವರ್ಷಗಳ ಕಠಿಣ ಜೈಲುವಾಸವನ್ನು ವಿಧಿಸಿತು. ನಂತರ ಉಚ್ಛ ನ್ಯಾಯಾಲಯವು ಗಿಲಾನಿ ಮತ್ತು ಅಫ್‌ಸಾನರನ್ನು ಆರೋಪ ಮುಕ್ತ ಗೊಳಿಸಿತು. ಆದರೆ ಶೌಕತ್ ಮತ್ತು ಅಫ್ಜಲ್‌ರ ಮರಣ ದಂಡನೆಯನ್ನು ಎತ್ತಿ ಹಿಡಿಯಿತು. ಆ ನಂತರ ಸರ್ವೋಚ್ಛ ನ್ಯಾಯಾಲಯ ಆರೋಪ ಮುಕ್ತರನ್ನು ಕೈಬಿಟ್ಟು ಶೌಕತ್‌ರ ಶಿಕ್ಷೆಯನ್ನು ೧೦ ವರ್ಷ ಕಠಿಣ ಜೈಲುವಾಸಕ್ಕಿಳಿಸಿತು. ಅಫ್ಜಲ್‌ರ ಶಿಕ್ಷೆಯನ್ನು ಸಮರ್ಥಿಸಿತು. ಹಾಗೂ ಅವನಿಗೆ ೩ ಜೀವಾವಧಿ ಶಿಕ್ಷೆ ಹಾಗೂ ೨ ಮರಣ ದಂಡನೆ ಶಿಕ್ಷೆಗಳನ್ನು ವಿಧಿಸಿತು.

ಇಂಗ್ಲಿಷ್ ಮೂಲ:
ಅರುಂಧತಿ ರಾಯ್
ಅನು:
ಡಾ|| ಟಿ.ಎಸ್. ವಿವೇಕಾನಂದ

ದವರಿಗೆ ಐದು ವರ್ಷಗಳ ಕಠಿಣ ಜೈಲುವಾಸವನ್ನು ವಿಧಿಸಿತು. ನಂತರ ಉಚ್ಚ ನ್ಯಾಯಾಲಯವು ಗಿಲಾನಿ ಮತ್ತು ಅಫ್‌ಸಾನರನ್ನು ಆರೋಪ ಮುಕ್ತ ಗೊಳಿಸಿತು. ಆದರೆ ಶೌಕತ್ ಮತ್ತು ಅಫ್ಜಲ್‌ರ ಮರಣ ದಂಡನೆಯನ್ನು ಎತ್ತಿ ಹಿಡಿಯಿತು. ಆ ನಂತರ ಸರ್ವೋಚ್ಚ ನ್ಯಾಯಾಲಯ ಆರೋಪ ಮುಕ್ತರನ್ನು ಕೈಬಿಟ್ಟು ಶೌಕತ್‌ರ ಶಿಕ್ಷೆಯನ್ನು ೧೦ ವರ್ಷ ಕಠಿಣ ಜೈಲುವಾಸಕ್ಕಿಳಿಸಿತು. ಅಫ್ಜಲ್‌ರ ಶಿಕ್ಷೆಯನ್ನು, ಸಮರ್ಥಿಸಿತು. ಹಾಗೂ ಅವನಿಗೆ ೩ ಜೀವಾವಧಿ ಶಿಕ್ಷೆ ಹಾಗೂ ೨ ಮರಣ ದಂಡನೆ ಶಿಕ್ಷೆಗಳನ್ನು ವಿಧಿಸಿತು. ಇದಿನ್ನೂ ಸ್ಥಿರಗೊಂಡಿಲ್ಲ. ಸರ್ವೋಚ್ಚ ನ್ಯಾಯಾಲಯವು ತನ್ನ ಆಗಸ್ಟ್ -೪-೨೦೦೫ರ ತೀರ್ಪಿನಲ್ಲಿ 'ಮೊಹಮದ್ ಅಫ್ಜಲ್ ಯಾವುದೇ ಭಯೋತ್ಪಾದಕ ಗುಂಪು ಅಥವಾ ಸಂಘಟನೆಗೆ ಸೇರಿದವನು ಎನ್ನುವುದಕ್ಕೆ ಯಾವುದೇ ಆಧಾರವಿಲ್ಲ'ವೆಂದು ಸ್ಪಷ್ಟವಾಗಿ ಹೇಳಿತು. ಹಾಗೇ ಮುಂದುವರೆದು 'ಇಂಥಾ ಬಹುಪಾಲು ಪಿತೂರಿಗಳಲ್ಲಿರುವಂತೆ ಇಲ್ಲಿಯೂ ಸಹ ಪಿತೂರಿಯ ಪರಿಣಾಮಕ್ಕೆ ಸರಿಸಮಾನವಾದ ಸಾಕ್ಷ್ಯಾಧಾರಗಳಿಲ್ಲ. ಆದರೆ ಸಾಂದರ್ಭಿಕ ಸಾಕ್ಷ್ಯಗಳನ್ನು ಒಟ್ಟುಗೂಡಿಸಿ ನೋಡಿದಾಗ ಅಫ್ಜಲ್‌ಗೆ ಕೊಲೆಗಡುಕ ಫಿದಾಯೀನ್ ಭಯೋತ್ಪಾದಕರ ಸಂಬಂಧವಿತ್ತು' ಎಂದು ಹೇಳಿತು. ಅಂದರೆ, ನೇರ ಸಾಕ್ಷ್ಯಾಧಾರಗಳು ಇಲ್ಲ; ಆದರೆ ಸಾಂದರ್ಭಿಕ ಸಾಕ್ಷ್ಯಾಧಾರಗಳು ಇವೆ ಎಂದಾಯಿತು.

ಈ ತೀರ್ಪಿನ ವಿವಾದಿತ ಸಾಲುಗಳು ಮುಂದುವರೆಯುತ್ತ "ಹೆಚ್ಚು ಸಾವು ನೋವುಗಳಿಂದ ಕೂಡಿದ ಈ ಘಟನೆಯು ಇಡೀ ರಾಷ್ಟ್ರವನ್ನು ನಡುಗಿಸಿದೆ. ಆದ್ದರಿಂದ ತಪ್ಪಿತಸ್ಥರಿಗೆ ಗುರುತರ ಶಿಕ್ಷೆ ನೀಡುವುದರಿಂದ ಮಾತ್ರ ತಲ್ಲಣಗೊಂಡ ಸಮಾಜದ ಭಾವನೆಗಳನ್ನು ತೃಪ್ತಿಗೊಳಿಸಲು ಸಾಧ್ಯ. ಭಾರತದ ಏಕತೆ, ಸಮಗ್ರತೆ ಮತ್ತು ಸಾರ್ವಭೌಮತೆಗೆ ಸವಾಲಾಗಿರುವ ಇಂಥ ಭಯೋತ್ಪಾದಕ ಪಿತೂರಿಗಳನ್ನು ಸರಿಗಟ್ಟಲು ಇಂಥ ಪಿತೂರಿಗಳನ್ನು ಮಾಡಿದ ವಿಶ್ವಾಸದ್ರೋಹಿಗಳಿಗೆ ಗರಿಷ್ಠ ಶಿಕ್ಷೆಯನ್ನು ನೀಡುವುದರಿಂದ ಮಾತ್ರ ಸಾಧ್ಯ" ಎಂದು ಹೇಳಿತು. (ಒತ್ತು ನನ್ನದು). ಈ ಮರಣದಂಡನೆಯ ಮೂಲಕ ಧಾರ್ಮಿಕ ಹತ್ಯೆಯ ಬದಲಿಗೆ ಕಾನೂನು ಬದ್ಧ ಹತ್ಯೆಯತ್ತ "ಸಮುದಾಯದ ಸಮಷ್ಟಿ ಪ್ರಜ್ಞೆ"ಯನ್ನು ಜಾರಿಸುವ ಪ್ರಯತ್ನ ನಡೆದಿದೆ. ಇದನ್ನು ನಮ್ಮ ಮೇಲೆ ಹೇರಿದ್ದು ಪರಭಕ್ಷಕ ರಾಜಕಾರಣಿಗಳಾಗಲೀ, ರೋಚಕತೆಯನ್ನು ಬಯಸುವ ಪತ್ರಕರ್ತರಾಗಲೀ ಅಲ್ಲದಿದ್ದರೂ (ಅವರು ಹಾಗೆ ಮಾಡಿದ್ದರೂ ಸಹ) ಈ ಸೂಚನೆ ನೀಡಿರುವುದು ನಮ್ಮ ನೆಲದ ಸರ್ವೋಚ್ಚ ನ್ಯಾಯಾಲಯ ಎಂಬುದು ಅಚ್ಚರಿಯ ಸಂಗತಿ.

ಅಫ್ಜಲ್‌ಗೆ ವಿಧಿಸಿದ ಮರಣದಂಡನೆಗೆ ನ್ಯಾಯಾಲಯ ಕಾರಣ ಕೊಡುತ್ತಾ..., "ಈ ಮೇಲ್ಮನವಿದಾರ 'ಶರಣಾಗತ ಭಯೋತ್ಪಾದಕ'ನಾಗಿದ್ದು ದೇಶದ ಆತಂಕವನ್ನು ಹೆಚ್ಚಿಸುವ ಕೃತ್ಯಗಳನ್ನು ಪುನರಾವರ್ತಿಸುವಂತವನಾಗಿದ್ದಾನೆ ಹಾಗೂ ಇದು ಸಮಾಜಕ್ಕೆ ಘಾತುಕವಾಗಿದ್ದು, ಇವನ ಬದುಕು ಕೊನೆಗೊಳ್ಳಲೇಬೇಕಾಗಿದೆ" ಎಂದು ಹೇಳಿತು.

ಈ ಪ್ಯಾರಾವು ತಾರ್ಕಿಕ ಲೋಪದೊಂದಿಗೆ ಇಂದು ಕಾಶ್ಮೀರದಲ್ಲಿರುವ "ಶರಣಾಗತ ಭಯೋತ್ಪಾದಕ"ರಿಗಿರುವ ಅರ್ಥವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಆದರೂ ಅಫ್ಜಲ್‌ನ ಬದುಕು ಕೊನೆಯಾಗಲೇಬೇಕು?

ಸಣ್ಣ ಆದರೆ ಪ್ರಭಾವಶಾಲಿ ಅಲ್ಪಸಂಖ್ಯಾತ ಬುದ್ಧಿಜೀವಿಗಳು, ಚಳವಳಿಕಾರರು, ಪತ್ರಿಕಾ ಸಂಪಾದಕರು, ವಕೀಲರು ಹಾಗೂ ವರ್ಚಸ್ವೀ ಸಾಮಾಜಿಕ ವ್ಯಕ್ತಿಗಳ ಗುಂಪೊಂದು ಈ ಮರಣ ದಂಡನೆಯನ್ನು ನೈತಿಕ ನೆಲೆಗಟ್ಟಿನ ಮೇಲೆ ವಿರೋಧಿಸಿತು. ಈ ಗುಂಪಿನ ವಾದವೆಂದರೆ 'ಒಬ್ಬ ಭಯೋತ್ಪಾದಕನಿಗೆ ಹೀಗೆ ಮರಣ ದಂಡನೆ ವಿಧಿಸುವ ಮೂಲಕ ಉಳಿದ ಭಯೋತ್ಪಾದಕರನ್ನು ಹೆದರಿಸುವುದು ಸಾಧ್ಯವಿಲ್ಲ' ಎಂಬುದು. (ಹೇಗೆ ಸಾಧ್ಯ? ಎಲ್ಲಿ, ಯಾವ ಫಿದಾಯಿನ್ ಹಾಗೂ ಆತ್ಮಹತ್ಯಾ ಬಾಂಬ್‌ಗಳಿಗೆ ಸಾವೇ ಪ್ರಮುಖ ಆಕರ್ಷಣೆಯಾಗಿದೆಯೋ ಅಲ್ಲಿ).

'ಸಂಪಾದಕರಿಗೆ ಪತ್ರಗಳು', 'ಟೀವಿ ಸ್ಟುಡಿಯೋಗಳಲ್ಲಿ ನಡೆಯುವ 'ನೇರ ಸಂವಾದ' ಕಾರ್ಯಕ್ರಮಗಳಲ್ಲಿ ಪ್ರತಿಕ್ರಿಯಿಸುವ ವೀಕ್ಷಕರ ಅಭಿಪ್ರಾಯಗಳು 'ಜನಾಭಿಪ್ರಾಯ' ಕ್ರೋಢೀಕರಣಕ್ಕೆ ಆದರ್ಶ ಎನ್ನುವಂತಾಗಿವೆ, ಇವು ಇಂದಿನ ಭಾರತದಲ್ಲಿ ಜನಾಭಿಪ್ರಾಯ ಅಳೆಯುವ ನಿಖರ ಮಾಪಕಗಳಾಗಿವೆ. ಇಂಥವರ ಸಂಖ್ಯೆ ಗಂಟೆಗೊಮ್ಮೆ ವಿಸ್ತರಿಸುತ್ತಾ ಹೋಗುತ್ತಿದೆ. ಈ ಬಗ್ಗೆ ಭಾರತೀಯರ ಅತ್ಯುತ್ಸಾಹವನ್ನು ನೋಡಿದರೆ -ವಾರಾಂತ್ಯಗಳೂ ಸೇರಿದಂತೆ- ದಿನನಿತ್ಯವೂ ಅಫ್ಜಲ್ ನೇಣಿಗೇರುವುದನ್ನು ನೋಡಲು ಜನ ಕಾತರರಾಗಿದ್ದಾರೆ ಎಂಬಂತೆ ಕಾಣುತ್ತದೆ. ಇದು ಇನ್ನೂ ಅನೇಕ ವರ್ಷಗಳವರೆಗೆ ಮುಂದುವರೆದರೂ ಆಚ್ಚರಿಯಿಲ್ಲ. ವಿರೋಧ ಪಕ್ಷದ ನಾಯಕ ಎಲ್.ಕೆ. ಆಡ್ವಾಣಿಯವರಂತೂ ಅಫ್ಜಲ್‌ನನ್ನು ಒಂದು ಕ್ಷಣಕೂಡ ತಡ ಮಾಡದೆ ನೇಣು ಹಾಕುವುದನ್ನು ನೋಡಲು ಕಾತರರಾಗಿದ್ದಾರೆ.

ಅರುಂಧತಿ ರಾಯ್

ಇದೇ ಸಂದರ್ಭದಲ್ಲಿ ಕಾಶ್ಮೀರದ ಜನಾಭಿಪ್ರಾಯವೂ ಅತ್ಯುತ್ಸಾಹದಿಂದಲೇ ಕೂಡಿದೆ. ಹೆಚ್ಚುತ್ತಿರುವ ಆಕ್ಷೇಪದ ಪ್ರತಿಭಟನೆಗಳು ನಿಸ್ಸಂದೇಹವಾಗಿ 'ಅಫ್ಜಲ್‌ನ ನೇಣಿನ ಪರಿಣಾಮಗಳು ರಾಜಕೀಯವಾಗಿರುತ್ತವೆ' ಎಂಬುದನ್ನು ಸೂಚಿಸುತ್ತಿವೆ. ಕೆಲವು ಪ್ರತಿಭಟನೆಗಳು ಕಾನೂನಿನ ತಪ್ಪು ವಿಲೇವಾರಿಯನ್ನು ವಿರೋಧಿಸುತ್ತಿರುವಂತೆ ಕಾಣುತ್ತಿವೆ. ಹಾಗೆ ಪ್ರತಿಭಟಿಸುತ್ತಿದ್ದರೂ ಭಾರತದ ನ್ಯಾಯಾಲಯಗಳಿಂದ ಅವರು ನ್ಯಾಯವನ್ನು ನಿರೀಕ್ಷಿಸಿದಂತೆ ಕಾಣುತ್ತಿಲ್ಲ. ಅಮಾನುಷ ಕ್ರೌರ್ಯದೊಂದಿಗೆ ನಿರಂತರವಾಗಿ ಬದುಕುತ್ತಿರುವ ಇವರು ಅಫಿಡೆವಿಟ್ಟು, ನ್ಯಾಯಾಲಯ, ನ್ಯಾಯ ಇವ್ಯಾವನ್ನೂ ನಂಬುವ ಸ್ಥಿತಿಯಲ್ಲಿಲ್ಲ. ಕಾಶ್ಮೀರದ ಸ್ವಾತಂತ್ರ್ಯ ಹೋರಾಟಗಾರ, ಹುತಾತ್ಮ ಮಕ್ಬೂಲ್ ಭಟ್‌ನಂತೆ ಅಫ್ಜಲ್‌ನೂ ನಗುನಗುತ್ತಾ ನೇಣುಗಂಬವೇರುವುದನ್ನು ಅನೇಕರು ಆಶಿಸುತ್ತಿದ್ದಾರೆ. ಬಹುಪಾಲು ಕಾಶ್ಮೀರಿಗಳು ಅಫ್ಜಲ್‌ನನ್ನು ಬಲವಂತವಾಗಿ ಅಧಿಕಾರ ಕಸಿದುಕೊಂಡ ವ್ಯವಸ್ಥೆಯೊಂದರ ಮುಂದೆ ನಿಲ್ಲಿಸಲ್ಪಟ್ಟ 'ಯುದ್ಧಖೈದಿ' ಎಂಬಂತೆ ನೋಡುತ್ತಿದ್ದಾರೆ, (ಇದು ನಿಸ್ಸಂದೇಹವಾಗಿ ಹೌದು). ಸಹಜವಾಗಿಯೇ ಕಾಶ್ಮೀರ ಸೇರಿದಂತೆ ಭಾರತೀಯ ರಾಜಕೀಯ ಪಕ್ಷಗಳು ಅವಕಾಶವಾದಿಗಳಾಗಿ, ಸಿನಿಕತನದಿಂದ ಸಾವಿಗೆ ಕಣ್ಮುಚ್ಚಿ ಕುಳಿತಿವೆ.

ದುರಂತವೆಂದರೆ ಈ ಭ್ರಮೆಗಳ ನಡುವೆ ಅಫ್ಜಲ್ ವೈಯಕ್ತಿಕ ಬದುಕಿನ ಹಕ್ಕನ್ನೇ ಕಸಿದುಕೊಂಡಂಥ ಮನುಷ್ಯನಾಗಿದ್ದಾನೆ. ಇವನು ಪ್ರತಿಯೊಬ್ಬರ ಭ್ರಮೆಗಳ (ರಾಷ್ಟ್ರೀಯವಾದಿಗಳು, ಪ್ರತ್ಯೇಕತಾವಾದಿಗಳು, ಪ್ರಭುತ್ವ ಶಿಕ್ಷೆಯ ವಿರೋಧಿಗಳು) ವಾಹಕನಾಗಿದ್ದಾನೆ. ಹಾಗೇ ಭಾರತದ ಖಳನೂ, ಪಾಕಿಸ್ತಾನದ ನಾಯಕನೂ ಆಗಿದ್ದಾನೆ. ಇದು ನಮಗೆ ಹೇಳುವುದೇನೆಂದರೆ, ನಮ್ಮ ಪಂಡಿತರೂ, ನೀತಿ ನಿರೂಪಕರೂ, ಶಾಂತಿ ಗುರುಗಳೂ ಈವರೆಗೂ ಏನೇ ಹೇಳಿದರೂ ಕಾಶ್ಮೀರದಲ್ಲಿ ಯುದ್ಧ ಹಾಗೂ ಹಿಂಸೆಗಳು ಮಾತ್ರ ಯಾವ ಕಾರಣದಿಂದಲೂ ಕೊನೆಗೊಳ್ಳುತ್ತಿಲ್ಲ ಎಂಬುದು.

ಈ ಕಳವಳಕಾರಿ ಹಾಗೂ ರಾಜಕೀಕರಣಗೊಂಡ ಸಂದರ್ಭದಲ್ಲಿ ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವ ಸಾಧ್ಯತೆ ಮುಗಿದು ಹೋಗಿದೆ ಎಂದು ಬಿಂಬಿಸಲು ಪ್ರಯತ್ನಿಸಲಾಗುತ್ತಿದೆ. ಹೌದಲ್ಲವೇ, ನ್ಯಾಯಾಂಗ ಪ್ರಕ್ರಿಯೆಲ್ಲಿ ೪೦ ತಿಂಗಳು ಕಳೆದು ಹೋಗಿವೆ, ಸರ್ವೋಚ್ಚ ನ್ಯಾಯಾಲಯ ತನ್ನ ಮುಂದಿದ್ದ ಸಾಕ್ಷ್ಯಾಧಾರಗಳನ್ನೆಲ್ಲಾ ಪರಿಶೀಲಿಸಿದೆ, ಇದು ಇಬ್ಬರಿಗೆ ಶಿಕ್ಷೆ ವಿಧಿಸಿದೆ, ಇಬ್ಬರನ್ನು ಖುಲಾಸೆ ಗೊಳಿಸಿದೆ, ಇವೇ ನ್ಯಾಯಾಂಗದ ವಸ್ತು ನಿಷ್ಠತೆಗೆ ಸಾಕ್ಷಿಯಲ್ಲವೇ? (ಇನ್ನು ಹೇಳುವುದು ಏನು ಉಳಿದಿದೆ). ಆದರೆ ಇದನ್ನು ಇನ್ನೊಂದು ಕೋನದಿಂದ ನೋಡುವ ಸಾಧ್ಯತೆಯೂ ಇದೆ. ಹೇಗೆಂದರೆ, ಒಂದು ಮೊಕದ್ದಮೆಯ ಮೊದಲರ್ಧದಲ್ಲಿ ಶುದ್ಧಾಂಗ ಸುಳ್ಳುಗಳನ್ನು ಎತ್ತಿ ಹಿಡಿದು, ಉಳಿದರ್ಧದಲ್ಲಿ ನಿರಪರಾಧಿತ್ವವನ್ನು ಎತ್ತಿ ಹಿಡಿಯುವುದು ಹೇಗೆ ಸಾಧ್ಯ?

ಸಂಕ್ಷಿಪ್ತವಾಗಿ ಹೇಳುವುದಾದರೆ ಅಫ್ಜಲ್‌ನ ಬದುಕು ರೋಮಾಂಚಕವಾದದ್ದು. ಇವನು ಮಕ್ಬೂಲ್‌ಭಟ್‌ನಂತಲ್ಲ, ಆದರೂ ಇವನ ಬದುಕು ಮಕ್ಬೂಲ್‌ಭಟ್‌ನ ಬದುಕಿಗಿಂತ

ಜಟಿಲವಾಗಿ ಕಾಶ್ಮೀರದ ಕಣಿವೆಯೊಂದಿಗೆ ಹೊಸದು [illegible] ಕತೆಯು ವ್ಯಾಪ್ತಿಯು ಸ್ವಘೋಷಿತ ಸರ್ವಶಕ್ತಿಮಾನ, ಸುರಕ್ಷಿತ ಪರಿಧಿಯೊಳಗೆ ಬದುಕುವ, ಸಂಕುಚಿತ ದೃಷ್ಟಿಕೋನಗಳ ಜನರ ಹಾಗೂ ನ್ಯಾಯಾಲಯಗಳ ಕೊಠಡಿಗಳಿಗಿಂತ ತುಂಬಾ ದೂರದಲ್ಲಿದೆ. ಇವನ ಕತೆಯ ಮೂಲಗಳು ಯುದ್ಧ ಭೂಮಿಯಲ್ಲಿದ್ದು ಇವು ಕಾನೂನು, ನಯವಾದ ನಿರ್ಜೀವ ವಾದಗಳು ಹಾಗೂ ನಾಜೂಕಿನ ಚಿಂತನೆಗಳ ಸಾಮಾನ್ಯ ನ್ಯಾಯಿಕ ಚೌಕಟ್ಟಿನಿಂದ ಹೊರತಾಗಿವೆ.

ಈ ಎಲ್ಲಾ ಕಾರಣಗಳಿಂದ ಡಿಸೆಂಬರ್-೧೩ ರಂದು ಸಂಸತ್ ಭವನದ ಮೇಲೆನಡೆದ ದಾಳಿಯೊಂದಿಗೆ ನಾವು ಎಚ್ಚರಿಕೆಯಿಂದ ವ್ಯವಹರಿಸಬೇಕಾಗುತ್ತದೆ. ಇದು ಜಗತ್ತಿನ ದೊಡ್ಡ ಪ್ರಜಾಪ್ರಭುತ್ವವಾದಿ ರಾಷ್ಟ್ರವೊಂದು ಜನತಾಂತ್ರಿಕತೆಯೊಂದಿಗೆ ಹೇಗೆ ವ್ಯವಹರಿಸುತ್ತದೆ ಎಂಬುದನ್ನು ಲೋಕಕ್ಕೇ ಹೇಳುತ್ತದೆ. ಇಲ್ಲಿ ಸಣ್ಣ ಸಂಗತಿಗಳು ದೊಡ್ಡ ವಿಷಯಗಳೊಂದಿಗೆ ಬೆಸೆದುಕೊಂಡಿವೆ. ಇದು ನಮ್ಮ ಗುಹೆಗಳಂತಿರುವ ಪೋಲೀಸ್ ಠಾಣೆಗಳಲ್ಲಿ ಏನು ನಡೆಯುತ್ತಿದೆ ಎಂಬುದರಿಂದ ಹಿಡಿದು ತಣ್ಣನೆಯ ಹಿಮಾವೃತ ಬೀದಿಗಳ ಸ್ವರ್ಗ ಸದೃಶ ಕಣಿವೆಗಳಲ್ಲಿ ಏನೇನು ಸಂಭವಿಸುತ್ತಿದೆ ಎಂಬುದರವರೆಗೆ ಹೊರಗಿನವರು ತಿಳಿಯಲು ದಾರಿಯಾಗುತ್ತದೆ.

ಇದೇ ವರ್ಷದ ಅಕ್ಟೋಬರ್-೪ ರಂದು ಜನರ ಸಣ್ಣಗುಂಪೊಂದು ದೆಹಲಿಯ ಜಂತರ್‌ಮಂತರ್ ಬಳಿ ಸಮಾವೇಶಗೊಂಡಿತ್ತು. ಇದು ಮೊಹಮದ್ ಅಫ್ಜಲ್‌ನಿಗೆ ವಿಧಿಸಿದ ಮರಣದಂಡನೆಯನ್ನು ವಿರೋಧಿಸಲು ಅಲ್ಲಿ ಸೇರಿತ್ತು. ಗುಂಪಿನ ಸದಸ್ಯಳಾಗಿ ನಾನೂ ಅಲ್ಲಿದ್ದೆ. ಕಾರಣ ಅಫ್ಜಲ್ ಈ ಕೇಡಿನಾಟದ ಕೇವಲ ಒಂದು ಕಾಯಿ ಮಾತ್ರ ಎಂಬುದು ನನ್ನ ನಂಬಿಕೆ.

ಇಲ್ಲಿ ಇವನೇ ದೈತ್ಯನಲ್ಲ, ದೈತ್ಯರಿಂದ ಮಾಡಲ್ಪಟ್ಟವನು. ಇವನು ಕೇವಲ ದೈತ್ಯದ ಹೆಜ್ಜೆ, ಒಮ್ಮೆ ಈ ಹೆಜ್ಜೆ ಗುರುತು 'ಮಾಯವಾಗಿ ಬಿಟ್ಟರೆ' ಆ ದೈತ್ಯ ಯಾರೆಂದು ನಮಗೆ ಎಂದೂ ತಿಳಿಯದೇ ಹೋಗಿಬಿಡುತ್ತದೆ.

ಇದರಲ್ಲಿ ಆಶ್ಚರ್ಯವೇನೂ ಇಲ್ಲ, ಇಲ್ಲಿ ಪ್ರತಿಭಟನಾಕಾರರಿಗಿಂತ ಪತ್ರಕರ್ತರ ಹಾಗೂ ಟೀವಿಗಳ ಜನರ ದಂಡೇ ನೆರೆದಿತ್ತು. ಎಲ್ಲರ ಗಮನವೂ ಅಲ್ಲಿದ್ದ ದೈವಿಕವಾಗಿ ಕಾಣುತ್ತಿದ್ದ ಪುಟ್ಟ ಹುಡುಗ ಗಾಲಿಬ್‌ನ ಮೇಲೆ ಕೇಂದ್ರೀಕರಿಸಿತ್ತು. ಇವನು ಅಫ್ಜಲ್‌ರ ಮಗ. ನನಗೆ ಗೊತ್ತಿಲ್ಲ, ಈ ಕರುಣಾಳು ಜನರು ನೇಣುಗಂಬದತ್ತ ಹೊರಟವನ ಮಗನ ಜೊತೆ ಏನು ಮಾಡಲು ಹೊರಟಿದ್ದಾರೆಂಬುದು. ಅವರು ಐಸ್‌ಕ್ರೀಮ್ ಮತ್ತು ತಂಪು ಪಾನೀಯಗಳ ಜೊತೆ ಅವನೊಂದಿಗೆ ಆಟವಾಡುತ್ತಿದ್ದರು.

ಅಲ್ಲಿದ್ದ ಜನರನ್ನು ನೋಡುತ್ತಿದ್ದಾಗ ಒಂದು ಅಂಶ ನನ್ನ ಗಮನವನ್ನು ಸೆಳೆಯಿತು. ಕುಳ್ಳಗೆ ದಪ್ಪಗಿದ್ದ ಈ ಪ್ರತಿಭಟನೆಯ ಸಂಘಟಕ ಆತಂಕದಿಂದ ಒಬ್ಬ ಮನುಷ್ಯನನ್ನು ಅಲ್ಲಿದ್ದ ಮುಖ್ಯಸ್ಥರಿಗೆ ಪರಿಚಯಿಸುತ್ತಿದ್ದ.

ಆತನೇ ದೆಹಲಿ ವಿಶ್ವವಿದ್ಯಾಲಯದ ಅರೇಬಿಕ್ ಸಾಹಿತ್ಯ ವಿಭಾಗದ ಯುವ ಪ್ರಾಧ್ಯಾಪಕ ಎಸ್.ಎ.ಆರ್. ಗಿಲಾನಿ, ಸಂಸತ್ ಭವನದ ಮೇಲೆ ನಡೆದ ದಾಳಿ ಪ್ರಕರಣದ ಮೂರನೇ ಆರೋಪಿ.

ಈತನನ್ನು ಡಿಸೆಂಬರ್-೪-೨೦೦೧ ರಂದು ಅಂದರೆ ದಾಳಿ ನಡೆದ ಮರುದಿನ ದೆಹಲಿಯ ವಿಶೇಷ ಪೋಲೀಸ್ ಘಟಕ ಬಂಧಿಸಿತು. ಗಿಲಾನಿಯನ್ನು

ಇಲ್ಲಿ ಪ್ರತಿಭಟನಾಕಾರರಿಗಿಂತ ಪತ್ರಕರ್ತರು ಹಾಗೂ ಟೀವಿಗಳ ಜನರ ದಂಡೇ ನೆರೆದಿತ್ತು. ಎಲ್ಲರ ಗಮನವೂ ಅಲ್ಲಿದ್ದ ದೈವಿಕವಾಗಿ ಕಾಣುತ್ತಿದ್ದ ಪುಟ್ಟ ಹುಡುಗ ಗಾಲಿಬ್‌ನ ಮೇಲೆ ಕೇಂದ್ರೀಕರಿಸಿತ್ತು. ಇವನು ಅಫ್ಜಲ್‌ರ ಮಗ. ನನಗೆ ಗೊತ್ತಿಲ್ಲ, ಈ ಕರುಣಾಳು ಜನರು ನೇಣುಗಂಬದತ್ತ ಹೊರಟವನ ಮಗನ ಜೊತೆ ಏನು ಮಾಡಲು ಹೊರಟಿದ್ದಾರೆಂಬುದು. ಅವರು ಐಸ್‌ಕ್ರೀಮ್ ಮತ್ತು ತಂಪು ಪಾನೀಯಗಳ ಜೊತೆ ಅವನೊಂದಿಗೆ ಆಟವಾಡುತ್ತಿದ್ದರು.

ಪೋಲೀಸ್ ಕಸ್ಟಡಿಯಲ್ಲಿ ಅಮಾನವೀಯವಾಗಿ ಹಿಂಸಿಸಲಾಗಿತ್ತು. ಅವನ ಕುಟುಂಬವನ್ನು ಕಾನೂನು ಬಾಹಿರವಾಗಿ ದೂರ ಇಡಲಾಗಿತ್ತು. ಆದರೂ ಆತ ತಾನು ಮಾಡಿಲ್ಲದ ತಪ್ಪನ್ನು ಒಪ್ಪಿಕೊಳ್ಳಲಿಲ್ಲ. ಇವನ ಬಂಧನದ ಅವಧಿಯಲ್ಲಿ ನೀವು ಇದನ್ನು ಯಾವ ಪತ್ರಿಕೆಯಲ್ಲೂ ಓದಿರಲಾರಿರಿ.

ಆದರೆ ಅವರು ವಿವರವಾದ, ವರ್ಣನಾತ್ಮಕವಾದ, ಕಾಲ್ಪನಿಕ ತಪ್ಪೊಪ್ಪಿಗೆ ಹೇಳಿಕೆಯೊಂದನ್ನು ಸಿದ್ಧಪಡಿಸಿದರು. ಈ ಮೂಲಕ ಗಿಲಾನಿ ಈತ ದಾಳಿ ಯೋಜನೆಯ ಸಮಗ್ರ ರೂವಾರಿಯಾದ ದುಷ್ಟನೆಂದು ಬಿಂಬಿಸಲಾಯಿತು.

ಇದನ್ನು ಬಳಸಿಕೊಂಡು ರೋಚಕತೆಯನ್ನು ಬಯಸುವ ಹೈಪರ್ ರಾಷ್ಟ್ರೀಯವಾದಿ ಮಾಧ್ಯಮಗಳು ಇವರ ವಿರುದ್ಧ ವ್ಯವಸ್ಥಿತವಾದ ಅಸಹ್ಯಕರ ಅಪಪ್ರಚಾರ ಮಾಡಿದವು.

ಪೋಲೀಸರಿಗೆ ಗೊತ್ತಿತ್ತು ಸಾಮಾನ್ಯವಾಗಿ ನ್ಯಾಯಾಲಯಗಳು ಪತ್ರಿಕಾ ಬರಹಗಳನ್ನು ಅಪರಾಧ ವಿಚಾರಣೆಯಲ್ಲಿ ಗಂಭೀರವಾಗಿ ಪರಿಗಣಿಸುವುದಿಲ್ಲವೆಂದು. ಆದರೆ ಇದೂ ತಿಳಿದಿತ್ತು, ತಾವೇ ಚಾತುರ್ಯದಿಂದ ಕೆತ್ತಿ-ಕೊರೆದು ವಿನ್ಯಾಸಗೊಳಿಸಿದ್ದ 'ಭಯೋತ್ಪಾದನೆ' ವಿವರಗಳು ಅವರ ವಿರುದ್ಧ ಜನಾಭಿಪ್ರಾಯವನ್ನು ರೂಪಿಸಿ ನಾಳೆ ಅವರನ್ನು ನ್ಯಾಯಾಲಯದ ಮುಂದೆ ವಿಚಾರಣೆಗೆ ನಿಲ್ಲಿಸುವ ಹೊತ್ತಿಗೆ ಹದವಾದ ವಾತಾವರಣವೊಂದು ಸೃಷ್ಟಿಯಾಗಿರುತ್ತದೆ. ಆದರೆ ಇದು ನ್ಯಾಯ ಪರಿಶೀಲನೆಯ ಹಿಡಿತಕ್ಕೆ ಸಿಕ್ಕುವುದಿಲ್ಲ ಎಂದು.

ಈ ಸಂದರ್ಭದಲ್ಲಿ ಮುಖ್ಯವಾಗಿ ಪತ್ರಿಕೆಗಳಲ್ಲಿ



ಪ್ರಕಟವಾದ ಕೆಲವು ಸಂಪೂರ್ಣ ದ್ವೇಷಪೂರಿತ ವರದಿಗಳು ಹೀಗಿವೆ:

ರಹಸ್ಯ ಬೇಧಿಸಲಾಗಿದೆ: ದಾಳಿಯ ಹಿಂದೆ ಜೈಷ್

ದ ಹಿಂದೂಸ್ತಾನ್ ಟೈಮ್ಸ್, ಡಿ.೧೬.೨೦೦೧, ನೀತಾ ಶರ್ಮಾ ಮತ್ತು ಅರುಣ್ ಜೋಷಿ.

"ದೆಹಲಿಯ ವಿಶೇಷ ಪೋಲೀಸ್ ವಿಭಾಗದ ಬೇಹುಗಾರರು ಒಬ್ಬ ಅಧ್ಯಾಪಕನನ್ನು ಬಂಧಿಸಿದ್ದಾರೆ, ಈತ ಜಾಕಿರ್ ಹುಸೇನ್, ಕಾಲೇಜ್ (ಸಂಜೆ) ನಲ್ಲಿ ಅಧ್ಯಾಪಕನಾಗಿ ಬೋಧಿಸುತ್ತಿದ್ದಾನೆ... ಭಯೋತ್ಪಾದಕರು ಈತನ ಮೊಬೈಲ್ ಫೋನಿಗೆ ಮಾಡಿದ್ದ ಕರೆಯನ್ನು ಈತ ಸ್ವೀಕರಿಸಿದ್ದಾನೆ ಎಂಬುದು ಅನಂತರ ತಿಳಿದು ಬಂದಿದೆ." ಇದೇ ಪತ್ರಿಕೆಯ ಇನ್ನೊಂದು ಕಾಲಂನಲ್ಲಿ "ದಾಳಿಗೆ ಮುನ್ನಾ ಭಯೋತ್ಪಾದಕರು ಇವನೊಂದಿಗೆ ಮಾತನಾಡಿದ್ದಾರೆ. ಮತ್ತು ದಾಳಿಯ ನಂತರ ಈ ಅಧ್ಯಾಪಕ ಪಾಕಿಸ್ತಾನಕ್ಕೆ ಕರೆಮಾಡಿದ್ದಾನೆ".

ದೆಹಲಿ ವಿಶ್ವವಿದ್ಯಾಲಯದ ಅಧ್ಯಾಪಕ: ಭಯೋತ್ಪಾದಕ ಯೋಜನೆಯ ಅಡ್ಡೆ.

ಟೈಮ್ಸ್ ಆಫ್ ಇಂಡಿಯಾ, ಡಿ-೧೭-೨೦೦೧.

"ಡಿ-೧೩ರ ಸಂಸತ್ ಭವನದ ಮೇಲೆ ನಡೆದ ದಾಳಿಯು ಜೈಶ್-ಎ-ಮೊಹಮದ್ ಮತ್ತು ಲಷ್ಕರ್-ಎ-ತೊಯ್ಬ ಭಯೋತ್ಪಾದಕ ಸಂಘಟನೆಗಳ ಜಂಟಿ ಯೋಜನೆಯಾಗಿತ್ತು, ಇದರಲ್ಲಿ ದೆಹಲಿ ವಿಶ್ವವಿದ್ಯಾಲಯದ ಅಧ್ಯಾಪಕ ಎಸ್.ಎ.ಆರ್. ಗಿಲಾನಿ ಒಬ್ಬ ಪ್ರಮುಖ ಸಹಾಯಕನೆಂದು ದೆಹಲಿಯ ಪೋಲೀಸ್ ಆಯುಕ್ತ ಅಜಯ್‌ರಾಜ್ ಶರ್ಮಾ ಭಾನುವಾರ ತಿಳಿಸಿದ್ದಾರೆ."

"ವಿಶ್ವವಿದ್ಯಾಲಯದ ಡಾನ್ ಫಿದಾಯಿನ್‌ಗಳ ಮಾರ್ಗದರ್ಶಿ"

ದ ಹಿಂದೂ, ಡಿ.೧೭.೨೦೦೧. -ದೇವೇಶ್ ಕೆ. ಪಾಂಡೆ.

"ವಿಚಾರಣೆಯ ಸಂದರ್ಭದಲ್ಲಿ ಗಿಲಾನಿಯ ಈ ದಾಳಿಯನ್ನು ಫಿದಾಯಿನ್‌ಗಳು ಯೋಜಿಸಿದ ಕಾಲದಿಂದಲೂ ನನಗೆ ಗೊತ್ತಿತ್ತು" ಎಂದು ಹೇಳಿದ್ದಾನೆ.

ಬಿಡುವಿನ ಸಮಯದಲ್ಲಿ ಭಯೋತ್ಪಾದಕ ಸಹಾಯಕನಾಗಿದ್ದ ಅಧ್ಯಾಪಕ.

ದ ಹಿಂದುಸ್ತಾನ್ ಟೈಮ್ಸ್, ಡಿ. ೧೭.೨೦೦೧, - ಸುತೀರ್ಥೋ ಪ್ಯಾತ್ರಾನೋಬಿಸ್.

"ವಿಚಾರಣೆಯ ಹೊತ್ತಿನಲ್ಲಿ ಇವನು ಕಾಲೇಜಿನಲ್ಲಿ ಅರೇಬಿಕ್ ಅನ್ನು ಕಲಿಸುವ ಅಧ್ಯಾಪಕ ಎಂದು ತಿಳಿದು ಬಂದಿದೆ. ಇವನು ತನ್ನ ಬಿಡುವಿನ ಸಮಯದಲ್ಲಿ, ಮುಚ್ಚಿದ ಬಾಗಿಲುಗಳ ಹಿಂದೆ ಶೌಕತ್ ಹುಸೇನ್‌ನಿಂದ (ಇನ್ನೊಬ್ಬ ಸಂಶಯಿತ ಆಪಾದಿತ. ಇನ್ನು ಇವನು ಬಂಧಿಸಬೇಕಿದೆ) ಭಯೋತ್ಪಾದನೆಯ ಬಗ್ಗೆ ಕಲಿತೆ ಮತ್ತು ಕಲಿಸಿದೆ ಎಂದು ಹೇಳಿದ್ದಾನೆ."

"ಪ್ರಾಧ್ಯಾಪಕ"ನ ಆದಾಯ

ಹಿಂದುಸ್ತಾನ್ ಟೈಮ್ಸ್, ೧೭.ಡಿಸೆಂಬರ್.೨೦೦೧.

"ಗಿಲಾನಿ ಇತ್ತೀಚೆಗೆ ಪಶ್ಚಿಮ ದೆಹಲಿಯಲ್ಲಿ ೨೨ ಲಕ್ಷ ರೂ.ಗಳ ಮೊತ್ತದ ಮನೆಯೊಂದನ್ನು ಖರೀದಿಸಿದ್ದಾನೆ. ಇಂತಹ ದಿಢೀರ್ ಶ್ರೀಮಂತಿಕೆಯ ಮೂಲವನ್ನು ದೆಹಲಿಯ ಪೋಲೀಸರು ತನಿಖೆ ನಡೆಸುತ್ತಿದ್ದಾರೆ."

"ಆಲಿಘರ್‌ನಿಂದ ಇಂಗ್ಲೆಂಡ್ ತನಕ ವಿದ್ಯಾರ್ಥಿಗಳಲ್ಲಿ ಆತಂಕವಾದದ ಬೀಜಬಿತ್ತುತ್ತಿದ್ದ ಈ ಗಿಲಾನಿ."

ರಾಷ್ಟ್ರೀಯ ಸಹಾರ. ೧೮.ಡಿಸೆಂಬರ್.೨೦೦೧. – ಸುಜಿತ್ ಠಾಗೂರ್.

"ತನಿಖಾ ಏಜನ್ಸಿ ಮೂಲಗಳಿಂದ ಸಂಗ್ರಹಿಸಲಾಗಿರುವ ಮಾಹಿತಿಯ ಪ್ರಕಾರ ತಾನು ಸುದೀರ್ಘ ಕಾಲದಿಂದ ಜೈಶ್-ಎ-ಮೊಹಮದ್‌ನ ಏಜೆಂಟ್‌ನೆಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದಾನೆ......., ತನ್ನ ಮಾತುಗಾರಿಗೆ, ಕಾರ್ಯಕ್ರಮ ಹಾಗೂ ಅತ್ಯುತ್ತಮ ಯೋಜನಾ ಕೌಶಲ್ಯ ಹಾಗೂ ಸಿದ್ಧತೆಗಳ ಕಾರಣದಿಂದ ಜೈಶ್-ಎ-ಮೊಹಮದ್ ತನಗೆ ಬುದ್ಧಿಜೀವಿ ಭಯೋತ್ಪಾದನಾ ನಿರ್ವಹಣೆ ಜವಾಬ್ದಾರಿಯನ್ನು ವಹಿಸಿದೆ."

ಈ ಭಯೋತ್ಪದಕ ಪಾಕ್‌ಮಿಷನ್‌ನ ವಾಡಿಕೆ ಸಂದರ್ಶಕ: ಅನುಮಾನ

ಹಿಂದುಸ್ತನ್ ಟೈಮ್ಸ್, ೨೧.ಡಿಸೆಂಬರ್.೨೦೦೧. –ಸ್ವಾತಿ ಚತುರ್ವೇದಿ.

"ನಾನು ಪಾಕಿಸ್ತಾನಕ್ಕೆ ಪದೇ ಪದೇ ಫೋನ್ ಮಾಡುತ್ತಿದ್ದೆ. ನನಗೆ ಜೈಶ್-ಎ-ಮೊಹಮದ್ ಸಂಘಟನೆಯೊಂದಿಗೆ ಸಂಬಂಧವಿತ್ತು ಎಂದು ವಿಚಾರಣೆಯ ಸಂದರ್ಭದಲ್ಲಿ ಗಿಲಾನಿ ಒಪ್ಪಿಕೊಂಡಿದ್ದಾನೆ. ಹಾಗೂ ಭಯೋತ್ಪಾದಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಎರಡು ಮನೆಗಳನ್ನು ಖರೀದಿಸಲು ಸಂಘಟನೆ ನನಗೆ ಹಣ ಕೊಟ್ಟಿತ್ತು ಎಂದು ಸಹ ಹೇಳಿದ್ದಾನೆ."

ವಾರದ ವ್ಯಕ್ತಿ

ಸಂಡೇ ಟೈಮ್ಸ್ ಆಫ್ ಇಂಡಿಯಾ, ೨೩-ಡಿ.೨೦೦೧

"ಮಾಡಬಾರದ್ದು ಮಾಡಿದನ್ನು ಅವನ ಸೆಲ್ ಫೋನ್ ಖಚಿತ ಪಡಿಸಿದೆ. ಡಿ.೧೩ರ ದಾಳಿಗೆ ಸಂಬಂಧಿಸಿದಂತೆ ದೆಹಲಿ ವಿಶ್ವವಿದ್ಯಾಲಯದ ಸಯ್ಯದ್ ಎ.ಆರ್. ಗಿಲಾನಿಯನ್ನು ಬಂಧಿಸಿದ್ದಾರೆ. ಇದು ಭಯೋತ್ಪಾದನೆಯ ಬೇರುಗಳು ಇಳಿದಿರುವ ದೂರ ಮತ್ತು ಆಳದ ಆಘಾತಕಾರಿ ನೆನಪನ್ನು ಮರುಕಳಿಸುತ್ತಿದೆ."

ಝೀ ಟಿ.ವಿ ಇವರೆಲ್ಲರನ್ನು ಮೀರಿಸಿಹಾಕಿತು. ಇದು "ಡಿಸೆಂಬರ್-೧೩" ಎಂಬ ಡಾಕ್ಯುಡ್ರಾಮಾ (ದಾಖಲು ನಾಟಕ)ವನ್ನೇ ನಿರ್ಮಿಸಿತು. ಇದನ್ನು ಪೋಲೀಸರ ಆರೋಪಪಟ್ಟಿ ಆಧಾರಿತ ಸತ್ಯವೆಂದು ಹೇಳಿತು. (ಈ ಪದಗಳಲ್ಲಿರುವ ವಿರೋಧಾಭಾಸವನ್ನು ಗಮನಿಸಿ). ಇದನ್ನು ಅಂದಿನ ಪ್ರಧಾನಿ ಎ.ಬಿ.ವಾಜಪೇಯಿ ಮತ್ತು ಗೃಹ ಸಚಿವ ಎಲ್.ಕೆ.ಅಡ್ವಾನಿಯವರಿಗೆ ಖಾಸಗಿಯಾಗಿ ತೋರಿಸಿತು. ಈ ಇಬ್ಬರು ಅದನ್ನು ಪ್ರಶಂಸಿಸಿದರು. ಇವರ ಹೊಗಳಿಕೆಗೆ ಮಾಧ್ಯಮಗಳಲ್ಲಿ ಅಪಾರ ಪ್ರಚಾರ ದೊರೆಯಿತು. ಇಂಥ ಪ್ರಚಾರ ನಿಷೇಧವನ್ನು ಕೋರಿ ಸಲ್ಲಿಸಿದ್ದ ಮನವಿಯನ್ನು ಸರ್ವೋಚ್ಚ ನ್ಯಾಯಾಲಯ ವಜಾಮಾಡಿತು. ಅದಕ್ಕೆ ನಾವು ಇಂತಹ ಮಾಧ್ಯಮಗಳಿಂದೆಲ್ಲಾ ಪ್ರಭಾವಿತರಾಗುವುದಿಲ್ಲ ಎಂಬ ಕಾರಣ ನೀಡಿತು. (ಸರ್ವೋಚ್ಚ ನ್ಯಾಯಾಲಯವು ತನ್ನ ನ್ಯಾಯಾಧೀಶರು ಮಾಧ್ಯಮದ ಪ್ರಭಾವಗಳಿಂದ ಅತೀತರಾದರು ಎಂದು ನಂಬಿರಬಹುದು ಆದರೆ "ಸಮಾಜದ ಸಾಮೂಹಿಕ ಪ್ರಜ್ಞೆ" ಹೀಗಿರಲಾರದು ಅಲ್ಲವೇ?)

ಝೀ ಟೀವಿಯ ರಾಷ್ಟ್ರೀಯ ವಾಹಿನಿಯಲ್ಲಿ 'ಡಿಸೆಂಬರ್- ೧೩' ದಾಖಲುನಾಟಕ ಪ್ರಸಾರವಾಯಿತು. ಅದೂ, ತ್ವರಿತ ವಿಚಾರಣಾ ನ್ಯಾಯಾಲಯ ಗಿಲಾನಿ, ಅಫ್ಜಲ್ ಮತ್ತು ಶೌಕತ್‌ಗೆ ಮರಣದಂಡನೆ ವಿಧಿಸುವ ಕೆಲವು ದಿನ ಮುಂಚಿತವಾಗಿ. ಇಲ್ಲಿಗಾಗಲೇ ಗಿಲಾನಿ ಜೈಲಿ

ನಲ್ಲಿ ೧೮ ತಿಂಗಳುಗಳನ್ನು ಕಳೆದಿದ್ದ. ಇವನ ಕಡೆಯವರೆಲ್ಲಾ ಸಾವಿನ ದಾರಿಯಲ್ಲಿದ್ದರು.

ಉಚ್ಚನ್ಯಾಯಾಲಯ ಖುಲಾಸೆಗೊಳಿಸಿದ ನಂತರ ಗಿಲಾನಿ ಮತ್ತು ಅಫ್ಜಲ್‌ಗುರುವನ್ನು ಬಿಡುಗಡೆ ಮಾಡಲಾಯಿತು. (ಅಫ್ಜಲ್‌ಗುರುವನ್ನು ಬಂಧಿಸಿದಾಗ ಆಕೆ ಗರ್ಭಿಣಿಯಾಗಿದ್ದಳು. ಅವಳು ಸೆರೆಮನೆಯಲ್ಲಿಯೇ ಮಗುವನ್ನು ಹಡೆಯಬೇಕಾಯಿತು. ಅಲ್ಲಿನ ಅನುಭವಗಳು ಅವಳನ್ನು ಛಿದ್ರಗೊಳಿಸಿದ್ದವು. ಅವಳು ಗಂಭೀರ ಮನೋವಿಕಾರದ ಸ್ಥಿತಿಯಲ್ಲಿದ್ದಳು.) ಸರ್ವೋಚ್ಚ ನ್ಯಾಯಾಲಯವು ಇವರ ಖುಲಾಸೆಯನ್ನು ಎತ್ತಿ ಹಿಡಿಯಿತು. ಗಿಲಾನಿಗೆ ಸಂಸತ್ ಭವನದ ಮೇಲೆ ನಡೆದ ದಾಳಿಯೊಂದಿಗಾಗಲೀ ಅಥವಾ ಅದಕ್ಕೆ ಸಂಬಂಧಿಸಿದ ಭಯೋತ್ಪಾದಕ ಗುಂಪುಗಳೊಂದಿಗಾಗಲಿ ಸಂಬಂಧವಿರುವುದನ್ನು ಖಚಿತಪಡಿಸುವ ಯಾವುದೇ ಸಾಕ್ಷಾಧಾರಗಳಾಗಲಿ/ದಾಖಲೆಗಳಾಗಲಿ ಖಡಾಖಂಡಿತವಾಗಿ ಇಲ್ಲ ಎಂದು ಹೇಳಿತು. ಗಿಲಾನಿ ವಿರುದ್ಧ ಷಡ್ಯಂತ್ರಗಳನ್ನು ರೂಪಿಸಿ ಬರೀ ಸುಳ್ಳುಗಳನ್ನು ಬರೆದಿದ್ದ ಈ ದೇಶದ ಯಾವುದೇ ಪತ್ರಿಕೆ, ಪತ್ರಕರ್ತರು ಅಥವಾ ಆ ಟೀವಿ ಚಾನಲ್‌ಗಳ ಜನಕ್ಕೆ ತಮ್ಮ ಅಮಾನವೀಯ ನಡವಳಿಕೆಗಳಿಗಾಗಿ ಗಿಲಾನಿಯ ಕ್ಷಮೆ ಕೇಳಬೇಕೆಂದು ಅನಿಸಲಿಲ್ಲ. ಅಲ್ಲದೆ ಗಿಲಾನಿಯ ಸಮಸ್ಯೆಗಳು ಇಲ್ಲಿಗೆ ಮುಗಿಯಲಿಲ್ಲ. ಅವನನ್ನು ದಾಳಿ ಯೋಜನೆಯ ಭಾಗೀದಾರನಲ್ಲವೆಂದು ಮಾತ್ರ ನ್ಯಾಯಾಲಯ ಖುಲಾಸೆಗೊಳಿಸಿತೇ

ವಿನಹ ಈ ಧಾಳಿಯ ಹಿಂದಿನ "ಮಾಸ್ಟರ್ ಮೈಂಡ್" ಇವನಲ್ಲ ಎಂದೇನು ಅಲ್ಲವೆಂದು ವಿಶೇಷ ಪೋಲೀಸ್ ಘಟಕ ಅವನ ಬೆನ್ನು ಹತ್ತಿತ್ತು. ಇದು ನಮಗೆ ಹೊರನೋಟಕ್ಕೆ ಸಮಸ್ಯೆ ಎಂದೇನೂ ಅನಿಸುವುದಿಲ್ಲ. ಆದರೆ ಇದು ಸಮಸ್ಯೆಯ ಒಂದು ಭಾಗವಾಗಿರಲೂಬಹುದು. ಮುಖ್ಯವಾದ ಸಂಗತಿ ಎಂದರೆ ಗಿಲಾನಿ ಈಗ ಸ್ವತಂತ್ರನಾದ ಮನುಷ್ಯ. ಅವನು ಪತ್ರಿಕೆಯವರನ್ನು ಭೇಟಿಯಾಗಬಹುದು, ತಮ್ಮ ವಕೀಲರನ್ನು ನೋಡಬಹುದು. ಆದರೆ ಫೆಬ್ರವರಿ-೮-೨೦೦೫, ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಮೊಕದ್ದಮೆಗೆ ಸಂಬಂಧಿಸಿದ ಅಂತಿಮ ವಿಚಾರಣೆಯ ದಿನ, ಅಂದು ಗಿಲಾನಿ ತನ್ನ ವಕೀಲರ ಮನೆಯ ಕಡೆಗೆ ಹೊರಟ್ಟಿದ್ದ. ಆಗ ಒಬ್ಬ ನಿಗೂಢ ಬಂದೂಕುಧಾರಿ ನೆರಳಿನಿಂದ ಹೊರಬಂದವನೇ ಇವನತ್ತ ೫ ಗುಂಡುಗಳನ್ನು ಹಾರಿಸಿದ. ಆದರೆ ಪವಾಡ ಸದೃಶವಾಗಿ ಗಿಲಾನಿ ಬದುಕುಳಿದ. ಈ ಕತೆಯಲ್ಲಿ ಇದೊಂದು ನಂಬಲಾಗದ ತಿರುವು. ತುಂಬಾ ಸ್ಪಷ್ಟವಾಗಿ, ಇವನಿಗೆ ತಿಳಿದಿರುವ ಸಂಗತಿಗಳ ಬಗ್ಗೆ ಯಾರಿಗೋ ಭೀತಿಯಿದೆ, ಇವನು ಏನು ಹೇಳಬಹುದು....?

ಯಾರಾದರು ಊಹಿಸಲು ಸಾಧ್ಯವೇ? ಈ ಘಟನೆಯನ್ನು ಪೋಲೀಸರು ವಿಶೇಷ ಆದ್ಯತೆಯಲ್ಲಿ ತನಿಖೆಗೆ ಒಳಪಡಿಸಿದರು. ಸಂಸತ್ ಮೇಲಿನ ದಾಳಿಗೆ ಸಂಬಂಧಿಸಿದಂತೆ ಇವರಿಂದ ಅಮೂಲ್ಯವಾದ ಮಾಹಿತಿ ಸಿಕ್ಕಬಹುದು ಎಂಬ ಕಾರಣದಿಂದಲ್ಲ. ಅವನ ಕೊಲೆಯ ಪ್ರಯತ್ನದಲ್ಲಿ ಆತನೇ ಪ್ರಮುಖ ಆರೋಪಿ ಎಂದು ವಿಶೇಷ ಪೋಲೀಸ್ ಘಟಕ ತೀರ್ಮಾನಿಸಿತು. ಕೂಡಲೇ ಅವನ ಕಂಪ್ಯೂಟರ್ ಮತ್ತು ಕಾರನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಆಸ್ಪತ್ರೆಯ ಮುಂದೆ ನೆರೆದಿದ್ದ ನೂರಾರು ಜನ ಸಾಮಾಜಿಕ ಕಾರ್ಯಕರ್ತರು ಈ ಕೊಲೆ ಪ್ರಯತ್ನದ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಕೊನೆಯದಾಗಿ ವಿಶೇಷ ಪೋಲೀಸ್ ಘಟಕವೇ ಈ ತನಿಖೆ ಮಾಡಲಿ ಎಂದು ಹೇಳಿದರು. (ಒಂದು ವರ್ಷ ಕಳೆದಿದೆ, ಅಂಥ ಯಾವ ತನಿಖೆಯೂ ನಡೆಯಲಿಲ್ಲ. ಯಾರೂ ಈ ವಿಷಯದಲ್ಲಿ ಆಸಕ್ತಿ ವಹಿಸಲಿಲ್ಲ).

ಈಗ ಇವನು ಇಲ್ಲಿದ್ದಾನೆ. ಸಾವಿನ ಬಾಯಿಂದ ಉಳಿದುಕೊಂಡು, ದೆಹಲಿಯ ಜಂತರ್ ಮಂತರ್‌ನಲ್ಲಿ ಸಾವಿರಾರು ಜನರ ಮುಂದೆ ನಿಂತು ಹೇಳುತ್ತಿದ್ದಾನೆ. ಮೊಹಮದ್ ಅಫ್ಜಲ್ ಮರಣದಂಡನೆಗೆ ಅರ್ಹನಲ್ಲ ಎಂದು. ತಲೆ ಬಗ್ಗಿಸಿಕೊಂಡು ಮನೆಯಲ್ಲಿ ಕೂರುವುದು ಇವನಿಗೆ ಎಷ್ಟು ಸುಲಭವಾಗಿತ್ತು. ನಾನು ದಿಟ್ಟಳಾಗಿ, ಒಂದಿಷ್ಟು ವಿನಯದೊಂದಿಗೆ ಧೈರ್ಯವನ್ನೂ ಪ್ರದರ್ಶಿಸುತ್ತ ಮುನ್ನಡೆದೆ.

ಗಿಲಾನಿಯ ಸುತ್ತ ಕಿಕ್ಕಿರಿದಿದ್ದ ಪತ್ರಕರ್ತರು ಹಾಗೂ ಛಾಯಾಚಿತ್ರಗಾರರ ನಡುವೆ ಎದ್ದು ಕಾಣದಂತಹ ನಿಂಬೆ ಬಣ್ಣದ ಟೀ ಶರ್ಟ್ ಹಾಗೂ ಗ್ಯಾಬರ್ಡೀನ್ ಪ್ಯಾಂಟು ತೊಟ್ಟು ಇರುವುದರಲ್ಲಿ ಚೆನ್ನಾಗಿ ಕಾಣುತ್ತಿದ್ದ, ಕೈಯಲ್ಲೊಂದು ಪುಟ್ಟ ಟೇಪ್‌ರೆಕಾರ್ಡರನ್ನು ಹಿಡಿದು ಮತ್ತೊಬ್ಬ ನಿಂತಿದ್ದ, ಇವನೂ ಗಿಲಾನಿ, ಇಫ್ತಿಕಾರ್ ಗಿಲಾನಿ. ಇವನೂ ಸಹ ಜೈಲಿನಲ್ಲಿದ್ದ. ಇವನನ್ನು ೯ ಜೂನ್ ೨೦೦೨ ರಂದು ಬಂಧಿಸಿ ಪೋಲೀಸರ ಕಸ್ಟಡಿಗೆ ತೆಗೆದುಕೊಳ್ಳಲಾಗಿತ್ತು. ಆಗ ಅವನು ಜಮ್ಮು ಮೂಲದ ಕಾಶ್ಮೀರ್ ಟೈಮ್ಸ್‌ನಲ್ಲಿ ವರದಿಗಾರನಾಗಿದ್ದ. ಇವನನ್ನು ಅಫಿಶಿಯಲ್ ಸೀಕ್ರೇಟ್ ಕಾಯ್ದೆ ಅಡಿಯಲ್ಲಿ ಬಂಧಿಸಲಾ

[illegible]

ವುದಾಗಿತ್ತು. ಈ "ಭಾರತದ ಹಿಡಿತದಲ್ಲಿರುವ ಕಾಶ್ಮೀರ"ದ ಮಾಹಿತಿಗಳು ಪಾಕಿಸ್ತಾನಿ ಸಂಶೋಧನಾ ಸಂಸ್ಥೆಯಿಂದ ಈಗಾಗಲೇ ಮುದ್ರಿತವಾಗಿದೆ. ಅಂತರ್ಜಾಲದ ಮೂಲಕ ಈ ಎಲ್ಲಾ ಮಾಹಿತಿಗಳು ಜಗತ್ತಿನಾದ್ಯಂತ ಹರಿದಾಡುತ್ತಿವೆ. ಈ ಮಾಹಿತಿಗಳನ್ನು ಬೇಕಾದವರು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಫ್ತಿಕಾರ್ ಗಿಲಾನಿಯ ಕಂಪ್ಯೂಟರನ್ನು ವಶಪಡಿಸಿಕೊಳ್ಳಲಾಯಿತು. ಅದರ ಹಾರ್ಡ್‌ಡಿಸ್ಕನ್ನು ತೆರೆದ ಇನ್‌ಫರ್‌ಮೇಶನ್ ಬ್ಯೂರೋ ಅಧಿಕಾರಿಗಳು ಅದರಲ್ಲಿದ್ದ ಮಾಹಿತಿಗಳನ್ನು ತಮಗಿಷ್ಟಬಂದಂತೆ ತಿದ್ದಿಕೊಂಡರು. ಡೌನ್‌ಲೋಡ್ ಮಾಡಿಕೊಂಡಿದ್ದ ದಾಖಲೆಗಳಲ್ಲಿ ತಮ್ಮ ಕೈಚಳಕ ತೋರಿಸಿ "ಭಾರತದ ಹಿಡಿತದಲ್ಲಿರುವ ಕಾಶ್ಮೀರ" ಎಂಬ ಶೀರ್ಷಿಕೆಯನ್ನು ತಿದ್ದಿ "ಜಮ್ಮು ಮತ್ತು ಕಾಶ್ಮೀರ" ಮಾಡಿದರು.

ಇದರ ಕೆಳಗೆ "ಪರಾ ಮರ್ಶೆಗೆ ಮಾತ್ರ-ಕಡ್ಡಾಯವಾಗಿ ಪ್ರಸಾರಕ್ಕಾಗಿ ಅಲ್ಲ." ಎಂಬುದನ್ನು ಸೇರಿಸಿದರು. ನೋಡಿದವರಿಗೆ ಇದೊಂದು ಗುಪ್ತ ದಾಖಲೆ ಹಾಗೂ ಗೃಹ ಇಲಾಖೆಯಿಂದ ಕದ್ದು ಹೊರಸಾಗಿಸುತ್ತಿರುವ ಮಾಹಿತಿಯಾಗಿ ಕಾಣುವಂತೆ ಮಾಡಿದರು. ಈ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಇಫ್ತಿಕಾರ್ ಗಿಲಾನಿಯವರ ವಕೀಲರು ರಕ್ಷಣಾ ಗುಪ್ತಾಚಾರ ವಿಭಾಗದ ಡೈರೆಕ್ಟರ್ಸ್ ಜನರಲ್‌ರನ್ನು ಬಾರಿ ಬಾರಿ ಮನವಿ ಮಾಡಿದಾಗಲೂ ಅವರು ಮೌನವಹಿಸಿದರು ಮತ್ತು ಇದು "ಸಾಮಾನ್ಯವಾಗಿ ದೊರಕುವ/ ಕೊಡಬಹುದಾದಂತಹ ದಾಖಲಾತಿ" ಎಂಬುದನ್ನು ಸ್ಪಷ್ಟ ಪಡಿಸಲು ಪೂರ್ತಿ ಆರು ತಿಂಗಳು ತೆಗೆದುಕೊಂಡರು.

ಮಾಧ್ಯಮಗಳು ಮತ್ತೊಮ್ಮೆ ವಿಶೇಷ ಘಟಕದಿಂದ ಹೊರಹಾಕಲ್ಪಟ್ಟ ದುರುದ್ದೇಶಪೂರಿತ ಸುಳ್ಳುಗಳನ್ನು ಯಥಾವತ್ತಾಗಿ ಪುನರ್‌ನಿರ್ಮಿಸಿದರು. ಅವರು ಹೇಳಿದ ಅಂಥಹ ಸುಳ್ಳುಗಳಲ್ಲಿ ಕೆಲವೆಂದರೆ.......

"೩೫ ವರ್ಷದ, ಹುರಿಯತ್‌ನ ಮುಂಚೂಣಿ ನಾಯಕರಲ್ಲಿ ಒಬ್ಬನಾದ ಸಯ್ಯದ್ ಆಲಿ ಷಾ ಗಿಲಾನಿಯ ಅಳಿಯನಾದ ಇಫ್ತಿಕಾರ್ ಗಿಲಾನಿಯೆಂಬುವನು ಪಾಕಿಸ್ತಾನ ಬೇಹುಗಾರಿಕೆ ಇಲಾಖೆಯ ಏಜೆಂಟ್‌ನಾಗಿದ್ದೇನೆಂದು ನಗರದ ಕೋರ್ಟಿನ ಮುಂದೆ ಒಪ್ಪಿಕೊಂಡಿದ್ದಾನೆ."

ದ ಹಿಂದೂಸ್ತಾನ್ ಟೈಮ್ಸ್, ಜೂನ್-೧೧-೨೦೦೨, -ನೀತಾಶರ್ಮಾ

ಇಫ್ತಿಕಾರ್ ಗಿಲಾನಿಯು ಸಯ್ಯದ್ ಸಲಾಹುದ್ದೀನನ ಹಿಜ್ ಬುಲ್ ಮುಜಾಹುದ್ದೀನ್ ಸಂಘಟನೆಯಲ್ಲಿ ಆಯಕಟ್ಟಿನ ಸ್ಥಾನದಲ್ಲಿರುವ ವ್ಯಕ್ತಿಯಾಗಿದ್ದಾನೆ. ತನಿಖೆಯಿಂದ ಹೊರಬಂದ ಸಂಗತಿಗಳೆಂದರೆ ಕಾಶ್ಮೀರದಲ್ಲಿ ಭಾರತೀಯ ಸೇನೆಯ ಚಲನವಲನಗಳನ್ನು ಸಲಾಹುದ್ದೀನ್‌ಗೆ ರವಾನಿಸುತ್ತಿದ್ದ ಎಂಬುದು.

ಇವನು ಪತ್ರಕರ್ತನ ಮುಖವಾಡದಲ್ಲಿ ಮುಚ್ಚಿಟ್ಟಿದ್ದ ಈ ದುರುದ್ದೇಶಗಳನ್ನು ಹೊರತೆಗೆಯಲು ಇಷ್ಟು ವರ್ಷ ಹಿಡಿಯಿತು ಎಂದು ಉನ್ನತ ಮೂಲಗಳು ಹೇಳಿವೆ.

ದ ಪಯನೀರ್, ಪ್ರಮೋದ್ ಕುಮಾರ್ ಸಿಂಗ್.

ಆದಾಯ ತೆರಿಗೆ ಇಲಾಖೆಯು ಗಿಲಾನಿ ಅಳಿಯನ ಮನೆಯ ಮೇಲೆ ದಾಳಿ ಮಾಡಿದಾಗ ಅಪಾರ ಸಂಪತ್ತು ಹಾಗೂ ಸಾಕ್ಷ್ಯಾಧಾರಗಳು ಸಿಕ್ಕಿವೆ. ಇವುಗಳನ್ನು ಇಲಾಖೆಯವರು ವಶಪಡಿಸಿಕೊಂಡಿದ್ದಾರೆ.



ಹಿಂದುಸ್ತಾನ್ ೧೧-ಜೂನ್-೨೦೦೨.

ಆದರೆ ಪೋಲೀಸರೇ ಸಲ್ಲಿಸಿದ ಆರೋಪಪಟ್ಟಿಯಲ್ಲಿ ಇವರ ಮನೆಯಿಂದ ವಶಪಡಿಸಿಕೊಂಡಿದ್ದು ಕೇವಲ ೩,೪೫೦ ರೂ.ಗಳೆಂದು ದಾಖಲಿಸಲಾಗಿದೆ. ಅದೇ ಸಂದರ್ಭದಲ್ಲಿ ಇತರ ಮಾಧ್ಯಮಗಳು ತಮ್ಮ ವರದಿಗಳಲ್ಲಿ ಇವನಿಗೆ ಮೂರು ಬೆಡ್‌ರೂಂಗಳ ಫ್ಲಾಟ್ ಇದೆ. ಗುಪ್ತ ಮೂಲಗಳಿಂದ ೨೨ ಲಕ್ಷಗಳ ವರಮಾನವಿದೆ. ಅವನು ೭೯ ಲಕ್ಷ ರೂ.ಗಳ ಆದಾಯ ತೆರಿಗೆಯನ್ನು ವಂಚಿಸಿದ್ದಾರೆ. ಹೀಗಾಗಿ ಬಂಧನವಾಗುವ ಭೀತಿಯಲ್ಲಿ ಗಂಡ ಹೆಂಡತಿ ತಲೆ ಮರೆಸಿಕೊಂಡು ನಾಪತ್ತೆಯಾಗಿದ್ದಾರೆ ಎಂದೆಲ್ಲಾ ವರದಿ ಮಾಡಿದ್ದರು.

ಆದರೆ ಆತ ಆ ಸಮಯದಲ್ಲಿ ಬಂಧಿತನಾಗಿ ಜೈಲಿನಲ್ಲಿದ್ದ. ಆ ಜೈಲಿನಲ್ಲಿ ಅವನನ್ನು ಕ್ರೂರವಾಗಿ ಥಳಿಸಲಾಗಿತ್ತು. ಹೀನಾಯವಾಗಿ ಅಪಮಾನಗೊಳಿಸಲಾಗಿತ್ತು. ಅವನು ಅಲ್ಲಿಂದ ಹೊರಬಂದ ನಂತರ ಬರೆದ "ಮೈ ಡೇಸ್ ಇನ್ ಪ್ರಿಸನ್"ನಲ್ಲಿ ದಾಖಲಿಸಿರುವಂತೆ ಇವೆಲ್ಲ ಹಿಂಸೆಗಳ ಜೊತೆಗೆ ನಾನು ತೊಟ್ಟ ಅಂಗಿಯನ್ನು ಬಿಚ್ಚಿ ಪಾಯಖಾನೆಯನ್ನು ತೊಳೆಯಬೇಕಿತ್ತು ಹಾಗೂ ಅದೇ ಅಂಗಿಯನ್ನು ಮತ್ತೆ ಹಾಕಿಕೊಳ್ಳಬೇಕಿತ್ತು. ೬ ತಿಂಗಳ ನಂತರ ನ್ಯಾಯಾಲಯದಲ್ಲಿ ನಡೆದ ವಾದಗಳು ಹಾಗೂ ಅವನ ಸಹದ್ಯೋಗಿಗಳು ನಡೆಸಿದ ಮಾತು ಕತೆಗಳಿಂದ ಇವನ ಕೇಸನ್ನು ಹೀಗೇ ಮುಂದುವರೆಸಿದರೆ ಮುಖಭಂಗವಾಗುವುದು ಖಂಡಿತ ಎಂಬ ಭೀತಿ ಹುಟ್ಟಿದ ಮೇಲೆ ಅವನನ್ನು ಬಿಡುಗಡೆಗೊಳಿಸಲಾಯಿತು.

ಗಿಲಾನಿಯ ಪರವಾಗಿ ಚಳುವಳಿ ಗಾರರು, ವಕೀಲರು ಹಾಗೂ ಪತ್ರಕರ್ತರು ಸಂಘಟಿತ ರಾಗಿ ಹೋರಾಟ ನಡೆಸಿದರು. ಇದರಲ್ಲಿ ಹೆಸ ರಾಂತ ವಕೀಲರುಗಳಾದ ರಾಮ್‌ಜೇಠ್ ಮಲಾನಿ, ಕೆ.ಜಿ. ಕಣ್ಣಬೀರನ್, ವೃಂದಾ ಗ್ರೋವರ್ ಮುಂತಾದವರು ಗಿಲಾನಿಯನ್ನು ಪ್ರತಿನಿಧಿಸಿದ್ದರು. ಇವರೆಲ್ಲರೂ ಸೇರಿ ಈ ಮೊಕದ್ದಮೆಯಲ್ಲಿ ಏನಿದೆ ಎಂದು ತೆರೆದಿಟ್ಟರು, ಪೋಲೀಸರ ವಿವೇಚನಾ ರಹಿತ ಅನಿಸಿಕೆಗಳು, ಮೂಢನಂಬಿಕೆಗಳು ಹಾಗೂ ಶುದ್ಧ ಸುಳ್ಳುಗಳ ಪೆಟಾರಿಗಳನ್ನು ಒಡೆದು ಹಾಕಿದರು. ಸಾಕ್ಷ್ಯಾಧಾರಗಳ ಸುಳ್ಳು ಸೃಷ್ಟಿಗಳನ್ನು ಚಿಂದಿಮಾಡಿದರು. ಬಹುಶಃ ಹಾಗಾಗಿ ನ್ಯಾಯಾಲಯದ ವಸ್ತು ನಿಷ್ಠತೆ ಉಳಿದುಕೊಂಡಿತು.

ಅಂದಿನ ಪ್ರತಿಭಟನಾ ಸಮಾವೇಶದಲ್ಲಿ ಆತನಿದ್ದು, ಸ್ವತಂತ್ರನಾಗಿ, ಪತ್ರಿಕೆಯೊಂದರ ವರದಿಗಾರನಾಗಿ ವರದಿ ಮಾಡಲು ಬಂದಿದ್ದ. ಆಗ ನಾನು ಮತ್ತು ಎಸ್.ಎ.ಆರ್. ಗಿಲಾನಿಯು ಅಲ್ಲಿದ್ದೆವು. ಇಫ್ತಿಕಾರ್ ಗಿಲಾನಿ ಮತ್ತು ಮೊಹಮದ್ ಅಫ್ಜಲ್ ಒಂದೇ ಅವಧಿಯಲ್ಲಿ ತಿಹಾರ್ ಜೈಲಿನಲ್ಲಿದ್ದರು. (ಇವರೊಂದಿಗೆ ಇವರಷ್ಟು ಹೆಸರಿನಲ್ಲಿದ್ದ ಇನ್ನೂ ಅನೇಕ ಕಾಶ್ಮೀರಿಗಳಿದ್ದರು, ಆದರೆ ಇವರ ಕತೆಗಳೆಂದೂ ನಮ್ಮ ಮುಂದೆ ಬರಲು ಸಾಧ್ಯವೇ ಇಲ್ಲ.)

ಹೀಗೂ ಹೇಳಬಹುದು ಮತ್ತು ಹೇಳುತ್ತಾರೆ. (ಇಫ್ತಿಕಾರ್ ಗಿಲಾನಿ ಮತ್ತು ಎಸ್.ಎ.ಆರ್. ಗಿಲಾನಿ ಇವರಿಬ್ಬರ ಪ್ರಕರಣಗಳಲ್ಲಿ)

-ಭಾರತೀಯ ನ್ಯಾಯಾಂಗದ ವಸ್ತುನಿಷ್ಠತೆ ಹಾಗೂ ಸ್ವತಃ ತಪ್ಪುಗಳನ್ನು ತಿದ್ದಿಕೊಳ್ಳುವ ಸಾಮರ್ಥ್ಯಗಳು ಎದ್ದು ಕಾಣುತ್ತವೆ. ಇದನ್ನು ಯಾರೂ ಸಂಶಯಿಸಲಾಗದು. ಆದರೂ ಇದು ಅರ್ಧ ಸತ್ಯ ಮಾತ್ರ. ಈ ಇಬ್ಬರೂ ಅದೃಷ್ಟವಶಾತ್ ದೆಹಲಿಯಲ್ಲಿ ವಾಸಿಸುವ ಕಾಶ್ಮೀರಿಗಳಾಗಿದ್ದು ಮಧ್ಯಮವರ್ಗದ ಸ್ಥಿತಿವಂತ ಸಮುದಾಯಗಳಿಂದ ಹಾಗೂ ಪತ್ರಕರ್ತರು ಮತ್ತು ವಿಶ್ವವಿದ್ಯಾಲಯಗಳ ಅಧ್ಯಾಪಕ ವರ್ಗದಬೆಂಬಲ ಹೊಂದಿದ್ದವರಾಗಿದ್ದಾರೆ. ಇವರೆಲ್ಲರ ಸಹಾಯ ಪಡೆಯುವಂತಹ ಸಾಧ್ಯತೆಗಳು ಅವರಿಗಿದ್ದವು, ಹಾಗೂ ಅವು ಸಕಾಲದಲ್ಲಿ ಅವರಿಗೆ ದೊರೆತವು.

-ಎಸ್.ಎ.ಆರ್. ಗಿಲಾನಿಯ ವಕೀಲೆ ನಂದಿತಾ ಹಕ್ಸರ್ ಆಗ ಇಂಡಿಯಾ ಡಿಫೆನ್ಸ್ ಕಮಿಟಿಯನ್ನು ಗಿಲಾನಿಯ ಪರವಾಗಿ ಒಗ್ಗೂಡಿಸಿದರು. (ಕಮಿಟಿಯಲ್ಲಿ ನಾನು ಸದಸ್ಯೆಯಾಗಿದ್ದೆ). ಗಿಲಾನಿಯ ಪರವಾಗಿ ಚಳುವಳಿಗಾರರು, ವಕೀಲರು ಹಾಗೂ ಪತ್ರಕರ್ತರು ಸಂಘಟಿತರಾಗಿ ಹೋರಾಟ ನಡೆಸಿದರು. ಇದರಲ್ಲಿ ಹೆಸರಾಂತ ವಕೀಲರುಗಳಾದ ರಾಮ್‌ಜೇಠ್‌ಮಲಾನಿ, ಕೆ.ಜಿ. ಕಣ್ಣಬೀರನ್, ವೃಂದಾಗ್ರೋವರ್ ಮುಂತಾದವರು ಗಿಲಾನಿಯನ್ನು ಪ್ರತಿನಿಧಿಸಿದ್ದರು. ಇವರೆಲ್ಲರೂ ಸೇರಿ ಈ ಮೊಕದ್ದಮೆಯಲ್ಲಿ ಏನಿದೆ ಎಂದು ತೆರೆದಿಟ್ಟರು, ಪೋಲೀಸರ ವಿವೇಚನಾ ರಹಿತ ಅನಿಸಿಕೆಗಳು, ಮೂಢನಂಬಿಕೆಗಳು ಹಾಗೂ ಶುದ್ಧ ಸುಳ್ಳುಗಳ ಪೆಟಾರಿಗಳನ್ನು ಒಡೆದು ಹಾಕಿದರು. ಸಾಕ್ಷ್ಯಾಧಾರಗಳ ಸುಳ್ಳು ಸೃಷ್ಟಿಗಳನ್ನು ಚಿಂದಿಮಾಡಿದರು. ಬಹುಶಃ ಹಾಗಾಗಿ ನ್ಯಾಯಾಲಯದ ವಸ್ತು ನಿಷ್ಠತೆ ಉಳಿದುಕೊಂಡಿತು.

ಇದೊಂದು ನಾಚಿಕೆಯ ಬಲಿಷ್ಟ ಪಶು, ಇದು ನಮ್ಮ ನ್ಯಾಯಾಂಗ ವ್ಯವಸ್ಥೆಯ ಚಕ್ರವ್ಯೂಹದ ಆಳದಲ್ಲೆಲ್ಲೋ ಅಡಗಿ ಕುಂತಿರುತ್ತದೆ. ಇದು ತಾನಾಗಿಯೇ ಹೊರಗೆ ಬಂದು ಕಾಣಿಸಿಕೊಳ್ಳುವುದು ಅಪರೂಪ. ಇದನ್ನು ಪುಸಲಾಯಿಸಿ ಇದರ ಅಡಗುದಾಣದಿಂದ ಹೊರತರಲು ವಕೀಲರು ಭಗೀರಥ ಪ್ರಯತ್ನವನ್ನೇ ಮಾಡಬೇಕಾಗುತ್ತದೆ. ವೃತ್ತ ಪತ್ರಿಕೆಗಳು ಇಡೀ ಪ್ರಕ್ರಿಯೆಯನ್ನು ಭಗೀರತ ಪ್ರಯತ್ನವೆಂದೇ ಹೇಳಿದ್ದವು. ಆದರೆ ಮೊಹಮದ್ ಅಫ್ಜಲ್‌ನಿಗೆ ಭಗೀರಥನ ನೆರವು ಸಿಕ್ಕಿಲ್ಲ ಅಷ್ಟೇ.

ಬಂಧನದ ದಿನದಿಂದ ೫ ತಿಂಗಳವರೆಗೆ ಪೋಲೀ

ಸರು ಇವನನ್ನು ವಿಶೇಷ ಕಾರಾಗೃಹದಲ್ಲಿ ಇಟ್ಟಿದ್ದರು. ಈ ಅವಧಿಯಲ್ಲಿ ಇವನಿಗೆ ಕಾನೂನಿನ ಸಮರ್ಥನೆಯಾಗಲೀ, ಕಾನೂನು ಸಲಹೆಗಳಾಗಲೀ, ಪ್ರಸಿದ್ಧ ವಕೀಲರ ನೆರವಾಗಲೀ, ಸಮರ್ಥನಾ ಸಮಿತಿಯ ನೆರವಾಗಲೀ ಸಿಗಲಿಲ್ಲ. (ಭಾರತದಲ್ಲಿ ಮತ್ತು ಕಾಶ್ಮೀರದಲ್ಲೂ). ಇವನ ಪರವಾಗಿ ಯಾವ ಚಳವಳಿಯೂ ನಡೆಯಲಿಲ್ಲ. ಉಳಿದ ನಾಲ್ಕು ಮಂದಿ ಆಪಾದಿತರಲ್ಲಿ ಇವನು ಸುಲಭ ಶಿಕಾರಿಯಾಗಿ ಬಿಟ್ಟಿದ್ದ. ಇವನ ಮೊಕದ್ದಮೆ ಗಿಲಾನಿಯ ಕೇಸಿಗಿಂತ ಹೆಚ್ಚು ಸಂಕೀರ್ಣವಾದುದಾಗಿತ್ತು. ಇದೇ ಸಂದರ್ಭದಲ್ಲಿ ವಿಶೇಷ ಕಾರ್ಯ ತಂಡವು ಅಫ್ಜಲ್‌ನ ಕಿರಿಯ ಸೋದರ ಹಿಲಾಲ್‌ನನ್ನು ಕಾಶ್ಮೀರದಲ್ಲಿ ಬಂಧಿಸಿತು. ಆರೋಪ ಪಟ್ಟಿಯನ್ನು ಸಲ್ಲಿಸಿದ ನಂತರ ಇವನನ್ನು ಬಿಡುಗಡೆಗೊಳಿಸಿತು (ಇದು ಕತೆಯ ವಿಲಕ್ಷಣ ತಿರುವು ಪಡೆದ ಘಟ್ಟ).

ನಿರಂತರ ಕಾನೂನು ಕ್ರಮಗಳ ಉಲ್ಲಂಘನೆಯ ನಂತರ ೨೦ನೇ ಡಿಸೆಂಬರ್ ೨೦೦೧ ಇದರ ತನಿಖಾಧಿಕಾರಿಯಾಗಿದ್ದ ಸಹಾಯಕ ಪೋಲೀಸ್ ಕಮಿಷನರ್ (ಎಸಿಪಿ) ರಾಜ್‌ಬೀರ್‌ಸಿಂಗ್ (ಇವರಿಗೆ ದೆಹಲಿಯಲ್ಲಿ ಎನ್‌ಕೌಂಟರ್ ಪ್ರವೀಣ ಎಂಬ ಅನ್ವರ್ಥನಾಮವಿದೆ. ಅನೇಕ ಭಯೋತ್ಪಾದಕರನ್ನು ಎನ್‌ಕೌಂಟರ್‌ನಲ್ಲಿ ಕೊಂದಿರುವುದು ಇವನ ಹೆಗ್ಗಳಿಕೆ) ವಿಶೇಷ ಘಟಕದಲ್ಲಿ ಪತ್ರಿಕಾಗೋಷ್ಠಿಯೊಂದನ್ನು ಕರೆದಿದ್ದರು. ಮೊಹಮದ್ ಅಫ್ಜಲ್ ತನ್ನ ತಪ್ಪೊಪ್ಪಿಗೆ ಹೇಳಿಕೆಯನ್ನು ಮಾಧ್ಯಮಗಳ ಮುಂದೆ ಹೇಳುತ್ತಾನೆ ಎಂಬುದು ಗೋಷ್ಠಿಯ ಉದ್ದೇಶವಾಗಿತ್ತು. ಅಷ್ಟರಲ್ಲಿ ಅಲ್ಲಿಗೆ ಬಂದ ಡಿಸಿಪಿ ಅಶೋಕ್ ಚಂದ್ 'ಅಫ್ಜಲ್ ಈಗಾಗಲೇ ತನ್ನ ತಪ್ಪೊಪ್ಪಿಗೆ ಮಾಡಿಕೊಂಡಿದ್ದಾನೆ' ಎಂದು ಮಾಧ್ಯಮದವರ ಮುಂದೆ ಹೇಳಿದ. ನಂತರ ಅದು ಸುಳ್ಳೆಂದು ತಿಳಿಯಿತು. ನಿಜವಾಗಿ ಅಫ್ಜಲ್ ತನ್ನ ಹೇಳಿಕೆ ನೀಡಿದ್ದು ಮರುದಿನ (ಆ ದಿನವೂ ಅವನನ್ನು ಪೋಲೀಸ್ ಕಷ್ಟಡಿಯಲ್ಲಿಯೇ ಇಟ್ಟುಕೊಳ್ಳಲಾಗಿತ್ತು. ಅವರ ಹಿಂಸೆಗೆ ಇವನು ಸುಲಭ ಬಲಿಯಾಗಿದ್ದ. ಕಾನೂನು ಪ್ರಕ್ರಿಯೆಯಲ್ಲಿ ಮತ್ತೊಂದು ಗಂಭೀರ ಲೋಪ ಜರುಗಿತು) ಮಾಧ್ಯಮದ ಮುಂದೆ ನೀಡಿದ ತನ್ನ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ಅಫ್ಜಲ್ ಸಂಸತ್ ಮೇಲಿನ ದಾಳಿಯ ಸಂಪೂರ್ಣ ಹೊಣೆಯನ್ನು ತನ್ನ ಮೇಲೆ ಹಾಕಿಕೊಂಡಿದ್ದ.

ಈ ಮಾಧ್ಯಮಗಳ ಮುಂದೆ ನಡೆದ ಈ 'ಪಾಪ ನಿವೇದನೆ' ಪ್ರಕ್ರಿಯೆಯ ನಡುವೆ ಅಚಾತುರ್ಯವೊಂದು ಸಂಭವಿಸಿತು. ನೇರ ಪ್ರಶ್ನೆಯೊಂದರಲ್ಲಿ "ಗಿಲಾನಿಗೂ ಈ ದಾಳಿಗೂ ಯಾವುದೇ ಸಂಬಂಧವಿಲ್ಲ. ಈ ವಿಷಯದಲ್ಲಿ ಅವನು ಸಂಪೂರ್ಣ ಮುಗ್ಧ" ಎಂದು ಅಫ್ಜಲ್ ಮಾಧ್ಯಮಗಳ ಮುಂದೆ ಹೇಳಿಬಿಟ್ಟ. ಕೂಡಲೇ ಎಸಿಪಿ ರಾಜ್‌ಬೀರ್‌ಸಿಂಗ್ ಅವನತ್ತ ಕೂಗಾಡುತ್ತಾ ಬಾಯಿ ಮುಚ್ಚುವಂತೆ ಅಫ್ಜಲ್‌ನನ್ನು ಒತ್ತಾಯಿಸಿದ ಹಾಗೂ ಮಾಧ್ಯಮದವರನ್ನು ಕುರಿತು 'ಈ ಸಂಗತಿಯನ್ನು ಪ್ರಕಟಿಸಬೇಡಿ' ಎಂದು ಬೇಡಿಕೊಂಡರು. ಅವರು ಅದನ್ನು ಶಿರಸಾವಹಿಸಿ ಮಾಡಿದರು. ಈ ವಿಷಯ ಬಹಿರಂಗವಾಗಿದ್ದು ಮೂರು ತಿಂಗಳ ನಂತರ ಆಜ್‌ತಕ್ ಟೀವಿ ಚಾನಲ್‌ನಲ್ಲಿ "ದಾಳಿಯ ನೂರನೇ ದಿನ" ಎಂಬ ಕಾರ್ಯಕ್ರಮದಲ್ಲಿ ಇದರ ಒಂದು ಭಾಗವನ್ನು ಪ್ರಸಾರ ಮಾಡಿದಾಗ. ಇಲ್ಲಿಯವರೆಗೂ ಜನಸಾಮಾನ್ಯರ ದೃಷ್ಟಿಯಲ್ಲಿ –ಅಷ್ಟು ಇಷ್ಟು ಕಾನೂನು, ಅಪರಾಧ ತನಿಖೆ ಪ್ರಕ್ರಿಯೆಗಳ ತಿಳಿದವರೂ

ಸಹ– ಅಫ್ಜಲ್ ಕೇವಲ ತನ್ನ ಪಾಪ ನಿವೇದನೆ ಮಾಡಿಕೊಂಡಿದ್ದಾನೆ ಎಂದಷ್ಟೇ ಆಗಿತ್ತು. ತೀರ್ಪಿನಲ್ಲಿ ಹೇಳಿದ "ಸಮಾಜದ ಸಾಮೂಹಿಕ ಪ್ರಜ್ಞೆ"ಗೆ ಈ ಬಗ್ಗೆ ಎರಡನೇ ಆಲೋಚನೆ ಮಾಡುವುದು ಕಷ್ಟವಾಗಿತ್ತು.

ಈ 'ಮಾಧ್ಯಮಗಳ ಮುಂದಿನ' ಪಾಪ ನಿವೇದನೆಯ ಮರುದಿನ ಅಫ್ಜಲ್‌ನಿಂದ ಅಧಿಕೃತ ಪಾಪ ನಿವೇದನೆಯನ್ನು ಕಕ್ಕಿಸಲಾಯಿತು. ಕಾನೂನಿನ ಪ್ರಕಾರ ಲೋಪದೋಷಗಳಿಲ್ಲದಂತೆ, ಸರಾಗ ನಿರೂಪಣೆಯಲ್ಲಿ ವಿನ್ಯಾಸಿತ ಇಂಗ್ಲಿಷ್ ಭಾಷೆಯಲ್ಲಿ ಬರೆದ ಇದನ್ನು ಡಿ.ಸಿ.ಪಿ. ಅಶೋಕ್ ಚಂದ್ (ಇವರ ಮಾತುಗಳಲ್ಲಿ, ಅವನು ವಿವರಿಸುತ್ತಾ ಹೋದ... ನಾನು ಬರೆದುಕೊಳ್ಳುತ್ತಾ ಹೋದೆ....) ಸೀಲ್ ಮಾಡಿದ ಲಕೋಟೆಯಲಿಟ್ಟ ವಿಚಾರಣಾ ನ್ಯಾಯಾಧೀಶರ ಮುಂದೆ ಇಟ್ಟರು. ಈ ಪಾಪ ನಿವೇದನೆ ಅಫ್ಜಲ್ ವಿಚಾರಣೆಯ ನಡುವೆ "ಕಾಗದ ನಿರೂಪಕ"ನಾಯಿತು. ಈ ಹೊಸೆದ ಕತೆಯ ಒಂದೊಂದು ನೇಯ್ಗೆ ಎಷ್ಟು ಕಲಾತ್ಮಕವಾಗಿತ್ತೆಂದರೆ ಗಾಜಿ ಬಾಬಾ, ಮೌಲಾನಾ ಮಸೂದ್ ಅಜರ್‌ರನ್ನು ತಂದು ಅಫ್ಜಲ್‌ನ ಕುತ್ತಿಗೆಗೆ ಕುಣಿಕೆಹಾಕಲಾಗಿತ್ತು.

ಇವರೊಂದಿಗೆ ತಾರಿಖ್ ಹೆಸರಿನ ಒಬ್ಬ ಮನುಷ್ಯ ಹಾಗೂ ಸತ್ತ ಐದು ಜನ ಭಯೋತ್ಪಾದಕರನ್ನು, ಅವರ ಶಸ್ತ್ರಾಸ್ತ್ರಗಳನ್ನು, ಗೃಹ ಮಂತ್ರಾಲಯದ ಖೋಟಾ ಪಾಸುಗಳನ್ನು, ಒಂದು ಲ್ಯಾಪ್‌ಟಾಪನ್ನು, ಖೋಟಾ ಗುರುತಿನ ಚೀಟಿಗಳನ್ನು ಸೇರಿಸಿ ಸುಸಂಬದ್ಧವಾಗಿ ನೇಯಲಾಗಿತ್ತು. ಹಾಗೆಯೇ ಎಷ್ಟು ಕೆ.ಜಿ? ಎಂತಹ ಸ್ಫೋಟಕ? ಎಲ್ಲಿಂದ ತಂದಿದ್ದು? ಮತ್ತು ಇದನ್ನು ಸ್ಫೋಟಿಸಲು ನಿಖರವಾದ ಮಿಶ್ರಣ ಅನುಪಾತವೆಷ್ಟು? ಯಾರಿಗೆ ಯಾವ ಮೊಬೈಲ್‌ನಿಂದ ಯಾವ ಮೊಬೈಲಿಗೆ ನಿರ್ದಿಷ್ಟವಾಗಿ ಎಷ್ಟು ಹೊತ್ತಿಗೆ ಕರೆ ಮಾಡಲಾಯಿತು ಎಂಬ ವಿವರಗಳೊಂದಿಗೆ ಖಚಿತವಾಗಿ ಬರೆಯಲಾಗಿತ್ತು. (ಈ ಹಂತದಲ್ಲಿ ಬೇರೆ ಕೆಲವು



ಕಾರಣಗಳಿಂದ ಅಫ್ಜಲ್ ತನ್ನ ಮನಸ್ಸನ್ನು ಬದಲಾಯಿಸಿ, ಗಿಲಾನಿಯನ್ನು ಇಡೀ ಪ್ರಕರಣದಲ್ಲಿ ಸಿಕ್ಕಿಹಾಕಿಸಲು ಬಯಸಿದ್ದ.)

ಇಲ್ಲಿನ ಪಾಪ ನಿವೇದನೆಯ ಒಂದೊಂದು ಅಂಶವು ಈಗಾಗಲೇ ಪೋಲೀಸರು ಸಂಗ್ರಹಿಸಿದ ಸಾಕ್ಷ್ಯಧಾರಗಳಿಗೆ ಅನುರೂಪವಾಗಿದ್ದವು. ಇನ್ನೊಂದು ಅರ್ಥದಲ್ಲಿ ಈಗಾಗಲೇ ಮಾಧ್ಯಮಗಳ ಮುಂದೆ ಅಫ್ಜಲ್ ತಪ್ಪೊಪ್ಪಿಗೆಯನ್ನು ಪೋಲೀಸರು ಹೇಗೆ ಹೇಳಿದ್ದರೋ ಅದಕ್ಕೆ ನಿಖರ ಹೊಂದಿಕೊಳ್ಳುತ್ತಿದ್ದವು. ಹೇಗೆಂದರೆ ಸಿಂಡ್ರೆಲಾಳ ಕಾಲು ಅಪೂರ್ವ ಗಾಜಿನ ಚಪ್ಪಲಿಗೆ ಹೊಂದಿಕೊಳ್ಳುತ್ತದಲ್ಲಾ... ಹಾಗೆ. (ಇದೂ ಸಿನೆಮಾ ಆಗಿದ್ದರೆ ನೀವು ಇದನ್ನು ಉತ್ತಮ ಸ್ಕ್ರೀನ್ ಪ್ಲೇ ಎಂದು ಹೇಳುತ್ತಿದ್ದಿರಿ, ಅದರಲ್ಲೂ ಇದು ತಾನೇ ನಿರ್ಮಾಪಕರ ಮತ್ತು ಪ್ರದರ್ಶಕನಾಗಿರುವ ಸಿನೆಮಾ, ಈಗ ನಮಗೆ ತಿಳಿದಿರುವಂತೆ, ಇದನ್ನೇ ಆಧರಿಸಿ ಝೀ ಟಿವಿ ತನ್ನ ಸಿನಿಮಾ ಮಾಡಿದ್ದರಿಂದ ನಿಯಮದ ಪ್ರಕಾರ ಅದು ಅಫ್ಜಲ್‌ಗೆ ರಾಯಲ್ಟಿ ಹಣ ಕೊಡಬೇಕಿದೆ.)

ಕೊನೆಗೆ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳು ಕೂಡ ಅಫ್ಜಲ್‌ನ ತಪ್ಪೊಪ್ಪಿಗೆಯಲಿದ್ದ ಕಾನೂನು ಪ್ರಕ್ರಿಯಾ ದೋಷ ಮತ್ತು ಅವುಗಳ ಉಲ್ಲಂಘನೆಗಳನ್ನು ಬದಿಗಿಟ್ಟುಬಿಟ್ಟವು. ಅದು ಅಫ್ಜಲ್‌ನ ತಪ್ಪೊಪ್ಪಿಗೆ ಮೊಕದ್ದಮೆಯ ವಿಚಾರಣೆಯಲ್ಲಿ ದೊಡ್ಡ ಸಾಕ್ಷ್ಯವಾಗಿ ಉಳಿದುಕೊಂಡುಬಿಟ್ಟಿತು. ತಾಂತ್ರಿಕವಾಗಿ ಮತ್ತು ನ್ಯಾಯಿಕವಾಗಿ ಪಕ್ಕಕ್ಕಿಡುವ ಮೊದಲೇ ಇದು ಪ್ರಮುಖ– ವಿಶೇಷ ಕಾನೂನು ಕಾರಣಗಳಿಂದ ಇಡೀ ಮೊಕದ್ದಮೆಯ ದೊಡ್ಡ ದಾಖಲೆಯಾಗಿ ಬಿಟ್ಟಿತು. ೨೧ನೇ ಡಿಸೆಂಬರ್ ೨೦೦೧ ಭಾರತ ಸರ್ಕಾರ ಪಾಕಿಸ್ತಾನ ವಿರುದ್ಧ ಯುದ್ಧ ಘೋಷಿಸುತ್ತ "ಇದರಲ್ಲಿ ಪಾಕಿಸ್ತಾನದ ಕೈವಾಡವಿರುವುದು ವಿವಾದಿತ ದಾಖಲೆಗಳಿಂದ ಖಚಿತವಾಗಿದೆ" ಎಂದು ಹೇಳಿತು. ಇಲ್ಲಿ ನಮ್ಮ ಸರ್ಕಾರಕ್ಕೆ ಅಫ್ಜಲ್‌ನ ತಪ್ಪೊಪ್ಪಿಗೆಯೊಂದೇ ಪಾಕಿಸ್ತಾನದ ಪಾತ್ರದ ಬಗ್ಗೆ ಇರುವ ಏಕೈಕ ದಾಖಲೆಯಾಗಿತ್ತು. ಇಲ್ಲಿರುವುದು ಎರಡೇ ದಾಖಲೆಗಳು ಒಂದು; ಅಫ್ಜಲ್‌ನ ತಪ್ಪೊಪ್ಪಿಗೆ, ಎರಡು; ಕಾರಿನ ಮೇಲೆ ಅಂಟಿಸಲಾಗಿರುವ ಸ್ಟಿಕ್ಕರ್.

ಯೋಚಿಸಿ: ಹಿಂಸೆಕೊಟ್ಟು ಬರೆದುಕೊಳ್ಳಲಾದ ಒಂದು ತಪ್ಪೊಪ್ಪಿಗೆಯನ್ನು ಆಧರಿಸಿ ಸಾವಿರಾರು ಮಂದಿ ಭಾರತೀಯ ಸೈನಿಕರು ಅಪಾರ ಸಾರ್ವಜನಿಕರ ಹಣವನ್ನು ವ್ಯರ್ಥಗೊಳಿಸುತ್ತಾ ಪಾಕಿಸ್ತಾನದ ಗಡಿಯಲ್ಲಿ ಜಮಾಯಿಸಿದರು. ಇದರಿಂದ ಇಡೀ ಉಪಖಂಡ ಅಣುಯುದ್ಧದ ಅಂತಿಮ ಘಟ್ಟಕ್ಕೆ ತಲುಪಿದಂತಾಗಿತ್ತು, ಇಡೀ ಜಗತ್ತು ಒತ್ತೆಯಾಳಿನಂತೆ ಇತ್ತ ನೋಡುತ್ತಾ ನಿಂತಿತು. ಇಲ್ಲಿನ ರಹಸ್ಯಮಯ ಪ್ರಶ್ನೆಯೆಂದರೆ, ಇದಕ್ಕೆ ಇನ್ನೊಂದು ಮುಖವೂ ಇರಬಹುದೇ? ಇಲ್ಲಿ ಒಂದು ತಪ್ಪೊಪ್ಪಿಗೆ ಯುದ್ಧದ ಸಾಧ್ಯತೆಯನ್ನು ಸೃಷ್ಟಿಸಿತೇ ಅಥವಾ ಯುದ್ಧದ ಅಗತ್ಯವೊಂದು ಈ ತಪ್ಪೊಪ್ಪಿಗೆಯನ್ನು ಸೃಷ್ಟಿಸಿತೇ. ಅಫ್ಜಲ್‌ನ ತಪ್ಪೊಪ್ಪಿಗೆಯ ನಂತರ ಎಲ್ಲಾ ನ್ಯಾಯಾಲಯಗಳೂ ಅವನನ್ನು ಪಕ್ಕಕ್ಕಿಟ್ಟವು. ಎಲ್ಲರೂ ಜೈಷ್–ಎ–ಮೊಹಮದ್, ಲಷ್ಕರ್–ಎ–ತೊಯ್ಬಾ ಬಗ್ಗೆ ಚರ್ಚೆ ಆರಂಭಿಸಿದರು. ಪಾಕಿಸ್ತಾನವನ್ನು ಈ ಪ್ರಕರಣದೊಂದಿಗೆ ಸಂಪರ್ಕಿಸುತ್ತಿದ್ದ ಏಕೈಕ ದಾಖಲೆಯೆಂದರೆ ಆ ಐದು ಮಂದಿ ಮೃತ ಭಯೋತ್ಪದಕರು. ಇವರೆಗೂ ಪೋಲೀಸ್ ಕಸ್ಟಡಿಯಲ್ಲಿದ್ದ ಅಫ್ಜಲ್ ಅವರನ್ನು, ಮೊಹಮದ್, ರಾಣಾ, ರಾಜಾ,

ತುಂಡುಖು ಮತ್ತು ಹೈದರ್ ಎಂದು ಗುರುತಿಸಿದ್ದ ಎಂಬುದು ಮುಖ್ಯ ಸಂಗತಿಯಾಯಿತು. ಗೃಹ ಮಂತ್ರಿಗಳು ಹೇಳಿದರು "ಅವರು ಪಾಕಿಸ್ತಾನಿಗಳಂತೆ ಕಾಣುತ್ತಾರೆ". ಪೋಲೀಸರು ಹೇಳಿದರು "ಅವರು ಪಾಕಿಸ್ತಾನಿಗಳು", ವಿಚಾರಣಾ ನ್ಯಾಯಾಧೀಶರು ಹೇಳಿದರು "ಅವರು ಪಾಕಿಸ್ತಾನದವರು". ಅಲ್ಲಿಗೆ ಈ ಸಂಗತಿ ನೇಪಥ್ಯಕ್ಕೆ ಸರಿಯಿತು. ತಕಸ್ಮಿಕ ತವರು ಆ ಮೃತರ ಹೆಸರನ್ನು ಸ್ಕಾಂಡಿನೇವಿಯಾದ ಹ್ಯಾಪಿ, ಬೌನ್ಸಿ, ಲಕ್ಕಿ, ಜೋಲಿ ಮತ್ತು ಕಿದಿನ್‌ಗಮಾನಿ ಎಂದು ಹೇಳಿದ್ದರೂ ನಾವು ಅದನ್ನು ಒಪ್ಪಿಕೊಳ್ಳುತ್ತಿದ್ದೆವು. ಇಂದಿಗೂ ನಮಗೆ ಗೊತ್ತಿಲ್ಲ, ಅವರು ಯಾರು? ಎಲ್ಲಿಯವರು? ಎಂದು. ಈ ಬಗ್ಗೆ ಯಾರಿಗಾದರು ಕುತೂಹಲವಾದರೂ ಇದೆಯೇ? ಹಾಗೇನೂ ಅನ್ನಿಸುವುದಿಲ್ಲ. ಹೈಕೋರ್ಟು ಹೇಳಿತು "ಐದೂ ಮಂದಿ ಮೃತರ ಗುರುತು ರುಜುವಾತಾಗಿದೆ. ಆಗಿಲ್ಲದಿದ್ದರೂ ಏನೂ ವ್ಯತ್ಯಾಸವಾಗುತ್ತಿರಲಿಲ್ಲ, ಆಪಾದಿತನಿಗೆ ಅವರೊಂದಿಗಿದ್ದ ಸಂಬಂಧ ಮುಖ್ಯವೇ ಹೊರತು ಅವರ ಹೆಸರುಗಳಲ್ಲ".

ಅಫ್ಜಲ್ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯ ಪ್ರಕಾರ (ಪೋಲೀಸ್ ಕಸ್ಟಡಿಯಲ್ಲಿ ನೀಡಿದ ಹೇಳಿಕೆಯಲ್ಲ) "ನಾನು ಯಾವ ಭಯೋತ್ಪಾದಕನನ್ನೂ ಗುರುತಿಸಿಲ್ಲ. ಪೋಲೀಸರೇ ಕೆಲವು ಭಯೋತ್ಪಾದಕರ ಹೆಸರನ್ನು ಹೇಳಿ ಅವರನ್ನು ಗುರುತಿಸುವಂತೆ ಒತ್ತಾಯಿಸಿದರು" ಎಂದು ಹೇಳಿದ. ಆದರೆ ಇದು ಅವನ ವಿಷಯಕ್ಕೆ ಸಂಬಂಧಿಸಿದಂತೆ ತುಂಬಾ ತಡವಾಗಿತ್ತು. ಮೊದಲನೆಯ ವಿಚಾರಣೆಯ ದಿನದಂದೇ ನ್ಯಾಯಾಲಯದಿಂದ ನಿಯುಕ್ತರಾಗಿದ್ದ ಸರ್ಕಾರಿ ವಕೀಲರು ಅಫ್ಜಲ್‌ನ "ದೇಹಗಳ ಗುರುತು ಹಿಡಿಯುವಿಕೆ" ಮತ್ತು "ಮರಣೋತ್ತರ ಪರೀಕ್ಷಾ ವರದಿಗಳನ್ನು" ವಿವಾದಾತೀತ ಸಾಕ್ಷ್ಯಗಳೆಂದು ಒಪ್ಪಿಕೊಳ್ಳಲಾಗಿದೆ ಎಂದು ಹೇಳಿಬಿಟ್ಟಿದ್ದರು, ಯಾವುದೇ ರೂಢಿಗತ ಆಧಾರಗಳಿಲ್ಲದೆ. ಈ ದಿಗ್ಭ್ರಮೆಯ ಅನಿರೀಕ್ಷಿತ ನಡವಳಿಕೆಗಳು ಅಫ್ಜಲ್‌ನನ್ನು ಗಂಭೀರ ಪರಿಣಾಮಗಳಿಗೆ ಈಡು ಮಾಡಿದವು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿದ್ದ "ಮೊಟ್ಟ ಮೊದಲ ಸಾಂದರ್ಭಿಕ ಸಾಕ್ಷ್ಯಗಳು ಅಫ್ಜಲ್‌ನಿಗೆ ವಿರುದ್ಧವಾಗಿದ್ದವು, ಅದೆಂದರೆ; ಅಫ್ಜಲ್‌ಗೆ ಮೃತರ ಪರಿಚಯವಿತ್ತು ಎಂಬುದು. ಈತನೇ ಮೃತ ಭಯೋತ್ಪಾದಕರನ್ನು ಗುರುತು ಹಿಡಿದಿದ್ದಾನೆ. ಈ ಹಿನ್ನೆಲೆಯಲ್ಲಿ ಈ ಸಾಕ್ಷ್ಯಾಧಾರವು ಅಭಂಜಕವಾಗಿ ಉಳಿಯುತ್ತದೆ."

ಒಂದು ಪಕ್ಷ ಮೃತ ಭಯೋತ್ಪಾದಕರು ವಿದೇಶಿಯರಿರಬಹುದು, ಅಲ್ಲದೆಯೂ ಇರಬಹುದು. ಮನುಷ್ಯರನ್ನು ಕೊಂದು ಮೃತರನ್ನು ವಿದೇಶಿ ಭಯೋತ್ಪಾದಕರೆಂದು ತಪ್ಪಾಗಿ ಗುರುತು ಹೇಳುವುದು ಅಥವಾ ಜೀವಂತ ವ್ಯಕ್ತಿಗಳನ್ನು ವಿದೇಶಿ ಭಯೋತ್ಪಾಕರೆಂದು ತಪ್ಪಾಗಿ ಗುರುತಿಸಿ ಅವರನ್ನು ಕೊಲ್ಲುವುದು ಜಮ್ಮು-ಕಾಶ್ಮೀರ ಮತ್ತು ದೆಹಲಿಯ ನಮ್ಮ ಭದ್ರತಾ ಪಡೆಗಳಿಗೆ ಹೊಸದೇನು ಅಲ್ಲ.

ಇಂತಹ ಅಸಂಖ್ಯಾತ ಉದಾಹರಣೆಗಳು ಕಾಶ್ಮೀರದಲ್ಲಿದ್ದರೂ ಚಿತ್ತೀಸಿಂಗ್‌ಪುರದ ನರಮೇಧದ ನಂತರ ನಡೆದ ಹತ್ಯೆಗಳು ಅಂತಾರಾಷ್ಟ್ರೀಯ ವಿವಾದವಾಗಿ ಪರಿಣಮಿಸಿದ್ದು ಇಲ್ಲಿ ಉಲ್ಲೇಖನೀಯ. ಅಂದು ೨೦ನೇ ಏಪ್ರಿಲ್ ೨೦೦೦. ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ ದೆಹಲಿಗೆ ತಲುಪುವ ಸ್ವಲ್ಪ ಮುಂಚೆ, ಗುರುತು ಹಿಡಿಯಲಾಗದ ಭಯೋತ್ಪಾದಕರು ಚಿತ್ತೀಸಿಂಗ್‌ಪುರದಲ್ಲಿ ೩೫ ಮಂದಿ ಸಿಖ್ ನಾಗರೀಕರನ್ನು ಹತ್ಯೆ ಮಾಡಿದರು. ಈ ಭಯೋತ್ಪಾದಕರೆಲ್ಲಾ ಭಾರತೀಯ ಸೈನ್ಯದ ಸಮವಸ್ತ್ರ ತೊಟ್ಟಿದ್ದರು. (ಈ ನರಮೇಧದ ಹಿಂದೆ ಭಾರತೀಯ ರಕ್ಷಣಾ ಪಡೆಗಳ ಕೈವಾಡವಿದೆ ಎಂಬುದು ಬಹುಪಾಲು



ಕಾಶ್ಮೀರಿಗಳ ಗುಮಾನಿ). ಇದಾದ ೫ ದಿನಗಳ ನಂತರ ವಿಶೇಷ ಕಾರ್ಯಾಚರಣೆ ತಂಡ ಮತ್ತು ೧೭ನೇ ರಾಷ್ಟ್ರೀಯ ರೈಫಲ್ ಬೆಟಾಲಿಯನ್‌ಗಳು (ಈ ಸೈನ್ಯದ ಬಂಡಾಯ ದಮನ ವಿಭಾಗ) ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಪಾತ್ರಿಬಲ್ ಎಂಬ ಹಳ್ಳಿಯ ಹೊರಭಾಗದಲ್ಲಿ ಐದು ಜನರನ್ನು ಕೊಂದುಹಾಕಿತು. ಮರು ದಿನ "ಇವರು ಪಾಕಿಸ್ತಾನಿ ಮೂಲದ ಭಯೋತ್ಪಾದಕರಾಗಿದ್ದು, ಇವರೇ ಚಿತ್ತೀಸಿಂಗ್‌ಪುರದ ನರಮೇಧದ ರೂವಾರಿಗಳು" ಎಂದು ಹೇಳಿತು. ಇವರ ದೇಹಗಳು ಅರೆಬರೆ ಸುಟ್ಟ ವಿರೂಪಗೊಂಡ ಸ್ಥಿತಿಯಲ್ಲಿ ಸಿಕ್ಕಿದವು. ಅವರ ಮೇಲಿದ್ದ ಸೈನ್ಯದ ಸಮವಸ್ತ್ರದ (ಇವು ಮಾತ್ರ ಸುಟ್ಟಿರಲಿಲ್ಲ) ಒಳಗೆ ನಾಗರೀಕರ ಸಾಮಾನ್ಯ ಉಡುಪುಗಳಿದ್ದವು. ಇವರು ಅನಂತನಾಗ್ ಜಿಲ್ಲೆಯ ಸ್ಥಳೀಯರೆಂದು ಗುರುತು ಸಿಕ್ಕಿತ್ತು. ಅವರೆಲ್ಲರನ್ನು ಕಲೆಹಾಕಿ, ತಣ್ಣಗೆ ಕೊಲ್ಲಲಾಗಿತ್ತು.

ಇಂಥ ಇನ್ನು ಅನೇಕರಿದ್ದಾರೆ.

೨೦ ಅಕ್ಟೋಬರ್ ೨೦೦೩ರಂದು ಶ್ರೀನಗರದಿಂದ ಪ್ರಕಟವಾಗುವ ಆಲ್-ಸಫ ಎಂಬ ಪತ್ರಿಕೆಯಲ್ಲಿ ಒಂದು "ಪಾಕಿಸ್ತಾನಿ ಭಯೋತ್ಪಾದಕ"ನ ಚಿತ್ರ ಪ್ರಕಟವಾಯಿತು. 'ಸೈನಿಕ ನೆಲೆಯನ್ನು ಸ್ಫೋಟಿಸಲು ಬಂದಿದ್ದಾಗ ಇವನನ್ನು ಕೊಲ್ಲಲಾಯ್ತು' ಎಂದು ೧೮ನೇ ರಾಷ್ಟ್ರೀಯ ರೈಫಲ್ಸ್ ತಂಡ ಹೇಳಿಕೆ ನೀಡಿತು.

ಕುಪ್ವಾರದ ಬೇಕರಿ ಮಾಲಿಕ ವಾಲೀಖಾನ್ ಈ ಚಿತ್ರವನ್ನು ಗುರುತಿಸಿದ. ಇವನು ನನ್ನ ಮಗ ಫರೂಖ್ ಅಹಮದ್ ಖಾನ್ ಎಂದೂ, ಎರಡು ತಿಂಗಳ ಹಿಂದೆ ಸೈನಿಕರು ಮಾರುತಿ ಜಿಪ್ಸಿ ವಾಹನದಲ್ಲಿ ಬಂದು ಅವನನ್ನು ಕರೆದುಕೊಂಡು ಹೋಗಿದ್ದರೆಂದು ಹೇಳಿದ. ಇವನ ದೇಹವನ್ನು ೧ ವರ್ಷದ ನಂತರ ಹೊರತೆಗೆಯಲಾಯಿತು.

ಇದೇ ೧೮ನೇ ರಾಷ್ಟ್ರೀಯ ರೈಫಲ್ಸ್ ತಂಡವನ್ನು ಲೊಲಬ್ ಕಣಿವೆಗೆ ಸ್ಥಳಾಂತರಿಸಲಾಗಿತ್ತು. ೨೦ನೇ ಏಪ್ರಿಲ್ ೨೦೦೪ರಂದು ಇವರು ೪ ಮಂದಿ ವಿದೇಶಿ ಭಯೋತ್ಪಾದಕರನ್ನು ಗುಂಡಿನ ಚಕಮುಕಿಯಲ್ಲಿ ಕೊಂದಿದ್ದೇವೆ ಎಂದು ಹೇಳಿಕೊಂಡರು. ನಂತರ ತಿಳಿದು ಬಂದಿದ್ದೇನೆಂದರೆ ಅವರು ಜಮ್ಮುವಿನ ಸಾಮಾನ್ಯ ಕೂಲಿಕಾರರು, ಅವರನ್ನು ಸೈನ್ಯವೇ ಕೆಲಸಕ್ಕೆ ನೇಮಿಸಿಕೊಂಡು ಕುಪ್ವಾರಕ್ಕೆ ಕರೆದುಕೊಂಡು ಹೋಗಿತ್ತು. ಆ ನಂತರ ಒಂದು ಬೇನಾಮಿ ಪತ್ರ ಅವರ ಕುಟುಂಬದವರಿಗೆ ಬಂದಿತ್ತು. ಹೀಗಾಗಿ ಆ ಕುಟುಂಬಗಳು ಹೆಣವನ್ನು ಹೊರತೆಗೆಸಲು ಸಾಧ್ಯವಾಯಿತು.

ದಿನಾಂಕ ೬ನೇ ನವೆಂಬರ್ ೨೦೦೧ರಂದು ಜಮ್ಮುವಿನ ನಾಗ್ರೋಟದಲ್ಲಿ ೪೨ ಮಂದಿ ಶರಣಾಗತ ಭಯೋತ್ಪಾದಕರನ್ನು ಮಾಧ್ಯಮಗಳ ಮುಂದೆ ಪ್ರದರ್ಶಿಸಲಾಯಿತು. ಇಲ್ಲಿ ೧೫ನೇ ಕಮ್ಯಾಂಡಿಂಗ್ ಜನರಲ್ ಆಫೀಸರ್, ಜಮ್ಮು ಕಾಶ್ಮೀರದ ಪೋಲೀಸ್ ಮಹಾ ನಿರ್ದೇಶಕರು ಹಾಗೂ ಮತ್ತಿತರ ಉನ್ನತ ಅಧಿಕಾರಿಗಳು ಹಾಜರಿದ್ದರು. ಆದರೆ ಆನಂತರದಲ್ಲಿ ಜಮ್ಮು-ಕಾಶ್ಮೀರದ ಪೋಲೀಸರಿಗೆ ಸಿಕ್ಕ ಮಾಹಿತಿ ಎಂದರೆ ಇದರಲ್ಲಿ ೨೭ ಮಂದಿ ಸ್ಥಳೀಯ ನಿರುದ್ಯೋಗಿ ಯುವಕರೆಂಬುದು. ಅವರಿಗೆ ಖೋಟಾ ಹೆಸರು, ಖೋಟಾ ಗುರುತುಗಳನ್ನು ನೀಡಿ ಮಾಧ್ಯಮಗಳ ಮುಂದೆ ಪ್ರದರ್ಶಿಸಲಾಗಿತ್ತು. 'ತಮ್ಮ ನಾಟಕದಲ್ಲಿ ಸರಿಯಾಗಿ ನಟಿಸಿದರೆ ಆನಂತರ ನಿಮಗೆ ಸರ್ಕಾರಿ ಉದ್ಯೋಗ ಕೊಡುತ್ತೇವೆ' ಎಂದು ಆಮಿಷ ಒಡ್ಡಲಾಗಿತ್ತು.

ಅಫ್ಜಲ್ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯ ಪ್ರಕಾರ (ಪೋಲೀಸ್ ಕಸ್ಟಡಿಯಲ್ಲಿ ನೀಡಿದ ಹೇಳಿಕೆಯಲ್ಲ) "ನಾನು ಯಾವ ಭಯೋತ್ಪಾದಕನನ್ನೂ ಗುರುತಿಸಿಲ್ಲ. ಪೋಲೀಸರೇ ಕೆಲವು ಭಯೋತ್ಪಾದಕರ ಹೆಸರನ್ನು ಹೇಳಿ ಅವರನ್ನು ಗುರುತಿಸುವಂತೆ ಒತ್ತಾಯಿಸಿದರು" ಎಂದು ಹೇಳಿದ. ಆದರೆ ಇದು ಅವನ ವಿಷಯಕ್ಕೆ ಸಂಬಂಧಿಸಿ ದಂತೆ ತುಂಬಾ ತಡವಾಗಿತ್ತು. ಮೊದಲನೆಯ ವಿಚಾ ರಣೆಯ ದಿನ ದಂದೇ ನ್ಯಾಯಾಲಯದಿಂದ ನಿಯುಕ್ತರಾಗಿದ್ದ ಸರ್ಕಾರಿ ವಕೀಲರು ಅಫ್ಜಲ್‌ನ "ದೇಹಗಳ ಗುರುತು ಹಿಡಿಯುವಿಕೆ" ಮತ್ತು "ಮರಣೋತ್ತರ ಪರೀಕ್ಷಾ ವರದಿಗಳನ್ನು" ವಿವಾದಾತೀತ ಸಾಕ್ಷ್ಯಗಳೆಂದು ಒಪ್ಪಿಕೊಳ್ಳಲಾ ಗಿದೆ ಎಂದು ಹೇಳಿಬಿಟ್ಟಿದ್ದರು, ಯಾವುದೇ ರೂಢಿಗತ ಆಧಾರಗಳಿಲ್ಲದೆ. ಈ ದಿಗ್ಭ್ರಮೆಯ ಅನಿರೀಕ್ಷಿತ ನಡವಳಿಕೆ ಗಳು ಅಫ್ಜಲ್‌ನನ್ನು ಗಂಭೀರ ಪರಿಣಾಮಗಳಿಗೆ ಈಡು ಮಾಡಿದವು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿದ್ದ "ಮೊಟ್ಟ ಮೊದಲ ಸಾಂದರ್ಭಿಕ ಸಾಕ್ಷ್ಯಗಳು ಅಫ್ಜಲ್‌ನಿಗೆ ವಿರುದ್ಧವಾಗಿದ್ದವು, ಅದೆಂದರೆ; ಅಫ್ಜಲ್‌ಗೆ ಮೃತರ ಪರಿಚ ಯವಿತ್ತು ಎಂಬುದು. ಈತನೇ ಮೃತ ಭಯೋತ್ಪಾದ ಕರನ್ನು ಗುರುತು ಹಿಡಿದಿದ್ದಾನೆ.

ಸರಿಯಾದ ಸಾಕ್ಷ್ಯಾಧಾರಗಳಿಲ್ಲದ ಸಮಯದಲ್ಲಿ ಪೋಲೀಸರು ಪರಿಸ್ಥಿತಿಯನ್ನು ಹೇಗೆ ಚಿತ್ರಿಸುತ್ತಾರೆ ಎಂಬುದಕ್ಕೆ ಇವು ತಕ್ಷಣದ ಕೆಲವು ಉದಾರಣೆಗಳು. ಇವು ಪೋಲೀಸರ ಮಾತುಗಳು ಅವರು ಹೇಳುವಷ್ಟು ನಂಬಲರ್ಹವಲ್ಲ ಎಂಬುದನ್ನು ಹೇಳುತ್ತವೆ.

೨೦೦೨ರ ಮೇ ತಿಂಗಳಿನಲ್ಲಿ ತ್ವರಿತ ನ್ಯಾಯಾಲಯ ವಿಚಾರಣೆಯನ್ನು ಆರಂಭಿಸಿತು. ಅಂದಿನ ವಾತಾವರಣ ಹೇಗಿತ್ತೆಂಬುದನ್ನು ನಾವು ಮರೆಯಲಾಗದು. ಅಮೆರಿಕಾದ ಮೇಲೆ ನಡೆದ ೯/೧೧ ದಾಳಿಯ ಮೋಡಗಳು ಇನ್ನು ಗಾಳಿಯಲ್ಲಿ ತೇಲುತ್ತಿದ್ದವು. ಅಮೆರಿಕಾ ಆಫ್ಘಾನಿಸ್ತಾನದ ಮೇಲೆ ಯುದ್ಧ ಹೂಡಿ ಅದನ್ನು ಧೂಳೀಪಟ ಮಾಡುತ್ತಿತ್ತು, ಗುಜರಾತ್ ಕೋಮು ದಳ್ಳುರಿಯಲ್ಲಿ ದಹಿಸಿ ಹೋಗುತ್ತಿತ್ತು. ಇದಕ್ಕೆ ಕೆಲವು ತಿಂಗಳುಗಳ ಮುಂಚೆ ಸಾಬರಮತಿ ಎಕ್ಸ್‌ಪ್ರೆಸ್‌ನ ಎಸ್-೬ ಬೋಗಿಗೆ ಬೆಂಕಿ ಹಚ್ಚಿ, ೫೮ ಮಂದಿ ಹಿಂದು ಯಾತ್ರಾರ್ಥಿಗಳನ್ನು ಜೀವಂತವಾಗಿ ದಹಿಸಲಾಗಿತ್ತು. ಇದಕ್ಕೆ ಪ್ರತೀಕಾರವಾಗಿ ಗುಜರಾತಿನಲ್ಲಿ ೨೦೦೦ ಮಂದಿ ಮುಸ್ಲೀಮರನ್ನು ಸಾರ್ವಜನಿಕವಾಗಿ ವಧಿಸಲಾಗಿತ್ತು. ಒಂದೂವರೆ ಲಕ್ಷ ಕುಟುಂಬಗಳನ್ನು ಬೀದಿಗೆ ತಳ್ಳಲಾಗಿತ್ತು.

ಅಫ್ಜಲ್‌ನ ವಿಷಯದಲ್ಲಿ ಒಂದರ ಮೇಲೊಂದು ತಪ್ಪುಗಳು ಸಂಭವಿಸುತ್ತಿದ್ದವು. ಇವನನ್ನು ವಿಶೇಷ ಭದ್ರತೆಯ ಕಾರಾಗೃಹದಲ್ಲಿ ಬಂಧಿಸಲಾಗಿತ್ತು. ಇವನಿಗೆ ಹೊರ ಜಗತ್ತಿನ ಸಂಪರ್ಕವೇ ಇರಲಿಲ್ಲ. ಒಬ್ಬ ವೃತ್ತಿಪರ ವಕೀಲನನ್ನು ನೇಮಿಸಿಕೊಳ್ಳಲು ಹಣಕಾಸಿನ ನೆರವೂ ಇರಲಿಲ್ಲ. ನ್ಯಾಯಾಲಯದಿಂದ ನಿಯುಕ್ತಳಾಗಿದ್ದ ವಕೀಲೆ ಮೂರು ವಾರಗಳು ವಿಚಾರಣೆಗೆ ಹಾಜರಾದ ನಂತರ "ತಾನು ಎಸ್.ಎ.ಆರ್. ಗಿಲಾನಿಯನ್ನು ಬೆಂಬಲಿಸುವ ವಕೀಲರ ತಂಡದಲ್ಲಿ ವೃತ್ತಿಪರವಾಗಿ ಸೇರ್ಪಡೆಯಾಗಿರುವುದರಿಂದ" ತನ್ನನ್ನು ಈ ವಕಾಲತ್ತಿನಿಂದ ಬಿಡುಗಡೆಗೊಳಿಸುವಂತೆ ಕೋರಿಕೆ ಸಲ್ಲಿಸಿದರು. ನ್ಯಾಯಾಲಯ ಈಕೆಯ ಸಹಾಯಕನನ್ನೇ ಮತ್ತೆ ಈ ಸ್ಥಳಕ್ಕೆ ನೇಮಿಸಿತು. ಅಫ್ಜಲ್‌ನ ಮೊಕದ್ದಮೆಯನ್ನು ನಿರ್ವಹಿಸುವಷ್ಟು ಆತ ಅನುಭವಿಯಾಗಿರಲಿಲ್ಲ. ಇವನು ಒಮ್ಮೆಯೂ ತನ್ನ ಕಕ್ಷೀದಾರನ ಸಲಹೆ ಸೂಚನೆಗಳನ್ನು ಪಡೆಯಲು ಸೆರೆಮನೆಯಲ್ಲಿ ಅವನನ್ನು ಭೇಟಿಮಾಡಲಿಲ್ಲ. ಇವನು ಅಫ್ಜಲ್‌ಗೆ ಪೂರಕವಾದ ಯಾವುದೇ ಸಾಕ್ಷ್ಯಾಧಾರಗಳನ್ನೂ ನ್ಯಾಯಾಲಯದ ಮುಂದೆ ಮಂಡಿಸಲಿಲ್ಲ. ಹಾಗೂ ಪ್ರಾಸಿಕ್ಯೂಟರ್ ಪರ ವಕೀಲರು ಪ್ರಸ್ತುತಪಡಿಸಿದ ಯಾವೊಂದು ಸಾಕ್ಷ್ಯವನ್ನೂ ಮರು ಪ್ರಶ್ನಿಸಲಿಲ್ಲ. ಇವರ ೫ ದಿನಗಳ ಹಾಜರಿಯ ನಂತರ ಅಫ್ಜಲ್ ಈ ವಕೀಲರನ್ನು ಬದಲಿಸುವಂತೆ ಮನವಿ ಮಾಡಿದ ಹಾಗೂ ಇದೇ ನ್ಯಾಯಾಲಯದಲ್ಲಿರುವ ಇತರೆ ಕೆಲವು ವಕೀಲರ ಪಟ್ಟಿಯನ್ನು ನೀಡಿ ಇವರಲ್ಲಿ ಯಾರಾದರೊಬ್ಬರನ್ನು ನನ್ನ ಪರವಾಗಿ ವಾದಿಸಲು ನೇಮಿಸಿಕೊಡಬೇಕೆಂದು ಕೇಳಿಕೊಂಡ. ಆದರೆ ಇವನ ಪಟ್ಟಿಯಲ್ಲಿದ್ದ ಯಾವ ವಕೀಲರೂ ಅದನ್ನು ಒಪ್ಪಲಿಲ್ಲ (ಆಶ್ಚರ್ಯಕರವಾಗಿ ಮಾಧ್ಯಮಗಳು ಇದಕ್ಕೆ ವಿಲಕ್ಷಣ ಪ್ರಚಾರ ನೀಡಿದವು. ಆನಂತರದಲ್ಲಿ ಗಿಲಾನಿಯ ಪರವಾಗಿ ವಕಾಲತ್ತು ವಹಿಸಲು ಮುಂದೆ ಬಂದ ವಕೀಲ ರಾಮ್ ಜೇಠ್ ಮಲಾನಿಯ ಮುಂಬೈ ಕಛೇರಿಯ ಮೇಲೆ ಶಿವಸೇನೆಯ ದಂಡು ದಾಳಿ ಮಾಡಿತು).

ನ್ಯಾಯಾಧೀಶರು ತಮ್ಮ ಅಸಹಾಯಕತೆಯನ್ನು ಹೇಳಿಕೊಂಡರು ಹಾಗೂ ಆತನೇ ಸಾಕ್ಷಿಗಳನ್ನು ಮರು



ಪ್ರಶ್ನೆಗೆ ಒಳಪಡಿಸಬಹುದೆಂದು ಅಫ್ಜಲ್‌ಗೆ ಅನುಮತಿ ನೀಡಿದರು. ನ್ಯಾಯಾಧೀಶರ ಈ ನಡವಳಿಕೆ ವಿಸ್ಮಯಕಾರಿಯಾಗಿದೆ. ಕಾನೂನಿನ ಗಂಧ ಗಾಳಿ ಗೊತ್ತಿಲ್ಲದ ಒಬ್ಬನಿಗೆ ತನ್ನ ವಿರುದ್ಧದ ಸಾಕ್ಷ್ಯಗಳನ್ನು ತಾನೇ ಮರು ಪ್ರಶ್ನೆ ಮಾಡಲು ಅನುಮತಿ ನೀಡುವುದು ಹೇಗೆ? ಅದೂ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಇದು ಸಾಧ್ಯವೇ? ಅಕ್ಷರಶಃ ಇದು ಅಸಾಧ್ಯ!! ಇತ್ತೀಚೆಗೆ ಜಾರಿಗೆ ಬಂದ ಪೋಟೋ ಕಾಯ್ದೆ ಮತ್ತು ಸಾಕ್ಷ್ಯಾಧಾರಗಳ ಕಾಯ್ದೆಗೆ ತಂದಿರುವ ಹೊಸ ತಿದ್ದುಪಡಿಗಳು ಹಾಗೂ ಟೆಲಿಗ್ರಾಫ್ ಆಕ್ಟ್ ಸೇರಿದಂತೆ ಅಪರಾಧ ಸಂಹಿತೆಯ ಸೂಕ್ಷ್ಮ ನಾಜೂಕಾದ ಪರಿಜ್ಞಾನವಿಲ್ಲದ ಯಾರೂ ಇದನ್ನು ಮಾಡಲು ಸಾಧ್ಯವೇ ಇಲ್ಲ. ಅನೇಕ ನುರಿತ ಕಾನೂನು ಪಂಡಿತರೇ ಇವನ್ನೆಲ್ಲಾ ಅರ್ಥ ಮಾಡಿಕೊಂಡು ತಮ್ಮನ್ನು ಸಮಕಾಲೀನಗೊಳಿಸಿಕೊಳ್ಳಲು ವಿಶೇಷ ಶ್ರಮವಹಿಸಬೇಕಿದೆ.

ನ್ಯಾಯಾಧೀಶರ ಈ ನಡವಳಿಕೆ ವಿಸ್ಮಯಕಾರಿಯಾಗಿದೆ. ಕಾನೂನಿನ ಗಂಧ ಗಾಳಿ ಗೊತ್ತಿಲ್ಲದ ಒಬ್ಬನಿಗೆ ತನ್ನ ವಿರುದ್ಧದ ಸಾಕ್ಷ್ಯಗಳನ್ನು ತಾನೇ ಮರು ಪ್ರಶ್ನೆ ಮಾಡಲು ಅನುಮತಿ ನೀಡುವುದು ಹೇಗೆ? ಅದೂ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಇದು ಸಾಧ್ಯವೇ? ಅಕ್ಷರಶಃ ಇದು ಅಸಾಧ್ಯ!! ಇತ್ತೀಚೆಗೆ ಜಾರಿಗೆ ಬಂದ ಪೋಟೋ ಕಾಯ್ದೆ ಮತ್ತು ಸಾಕ್ಷ್ಯಾಧಾರಗಳ ಕಾಯ್ದೆಗೆ ತಂದಿರುವ ಹೊಸ ತಿದ್ದುಪಡಿಗಳು ಹಾಗೂ ಟೆಲಿಗ್ರಾಫ್ ಆಕ್ಟ್ ಸೇರಿದಂತೆ ಅಪರಾಧ ಸಂಹಿತೆಯ ಸೂಕ್ಷ್ಮ ನಾಜೂಕಾದ ಪರಿಜ್ಞಾನವಿಲ್ಲದ ಯಾರೂ ಇದನ್ನು ಮಾಡಲು ಸಾಧ್ಯವೇ ಇಲ್ಲ. ಅನೇಕ ನುರಿತ ಕಾನೂನು ಪಂಡಿತರೇ ಇವನ್ನೆಲ್ಲಾ ಅರ್ಥ ಮಾಡಿಕೊಂಡು ತಮ್ಮನ್ನು ಸಮಕಾಲೀನಗೊಳಿಸಿಕೊಳ್ಳಲು ವಿಶೇಷ ಶ್ರಮವಹಿಸ ಬೇಕಿದೆ.

ವಿಚಾರಣಾ ನ್ಯಾಯಾಲಯದಲ್ಲಿ ಅಫ್ಜಲ್‌ನ ಮೊಕದ್ದಮೆಯನ್ನು ೮೦ ಸಾಕ್ಷ್ಯ ಪುರಾವೆಗಳು, ಪ್ರಮಾಣಿತ ಹೇಳಿಕೆಗಳ ಮೂಲಕ ಪ್ರಬಲವಾಗಿ ಕಟ್ಟಲಾಗಿತ್ತು. ಇದರಲ್ಲಿ ಭೂಮಾಲೀಕರು, ಅಂಗಡಿಗಳ ಮಾಲೀಕರು, ಮೊಬೈಲ್ ಫೋನ್ ಕಂಪನಿಗಳ ತಂತ್ರಜ್ಞರು ಹಾಗೂ ಸ್ವತಃ ಪೋಲೀಸರು ಸೇರಿದ್ದರು. ಇದು ಮೊಕದ್ದಮೆಯ ನಿರ್ಣಾಯಕ ಹಂತ. ಮೊಕದ್ದಮೆಗೆ ಕಾನೂನು ತಳಹದಿ ಹಾಕುವಂತ ಹದ್ದು. ಇಲ್ಲಿ ಕಾನೂನಿನ ಅತ್ಯಂತ ಪ್ರಬಲವಾದ ಕುಶಲ ಪ್ರಜ್ಞೆಯ ಅಗತ್ಯವಿರುತ್ತದೆ. ಸಮರ್ಥವಾದ ಸಾಕ್ಷ್ಯ ಪುರಾವೆಗಳನ್ನು ಕಲೆಹಾಕಿ ಅವುಗಳನ್ನು ದಾಖಲುಗೊಳಿಸಬೇಕು. ಪ್ರಾಸಿಕ್ಯೂಟರ್ ಪರವಾಗಿ ಪ್ರಸ್ತುತಪಡಿಸುವ ಪ್ರತಿಯೊಂದು ಸಾಕ್ಷ್ಯಾಧಾರ, ಪ್ರಮಾಣ ಪತ್ರ ಹಾಗೂ ಹೇಳಿಕೆಗಳನ್ನು ಗಂಭೀರವಾದ ಮರುಪರೀಕ್ಷೆ/ಮರು ಪ್ರಶ್ನೆಗೆ ಒಳಪಡಿಸಬೇಕು. ಆಕಸ್ಮಿಕ ವಿಚಾರಣಾ ನ್ಯಾಯಾಲಯ ಆಪಾದಿತನ ವಿರುದ್ಧ ಹೋದರೂ (ಸಾಮಾನ್ಯವಾಗಿ ವಿಚಾರಣಾ ನ್ಯಾಯಾಲಯಗಳು ಭಯಂಕರ ಸಂಪ್ರದಾಯವಾದಿಗಳಾಗಿರುತ್ತವೆ). ಮೇಲಿನ ನ್ಯಾಯಾಲಯಗಳಲ್ಲಿ ಸಾಕ್ಷ್ಯಾಧಾರಗಳು ವಕೀಲರ ನೆರವಿಗೆ ಬರುವಂತಿರಬೇಕು. ಈ ಎಲ್ಲಾ ಕಾರಣಗಳಿಂದ ನಿಜಕ್ಕೂ ಇದು ನಿರ್ಣಾಯಕ ಅವಧಿ. ಇಲ್ಲಿ ಅಫ್ಜಲ್ ಅಕ್ಷರಶಃ ಅಸಮರ್ಥನೀಯನಾದ. ಈ ಹಂತದಲ್ಲಿಯೇ ಇವನ ಮೊಕದ್ದಮೆ ಬುಡಕಿತ್ತುಕೊಂಡು ಇವನ ಮೇಲೆ ಬಿದ್ದಿದ್ದು, ಇವನ ಉಸಿರು ಕಟ್ಟಿಸಿ ಕುತ್ತಿಗೆ ಹಿಸುಕಿದ್ದು.

ಅಂದಿನಿಂದ ಇಂದಿನವರೆಗೂ ಪೋಲೀಸ್ ವಿಶೇಷ ಘಟಕದ ಕಪಾಟಿನಲ್ಲಿರುವ ಅಸ್ತಿ ಪಂಜರಗಳು ಹೊರಬರಲು ಭಯಂಕರ ಒತ್ತಡದಿಂದ ತಹತಹಿಸುತ್ತಿವೆ. ತನಿಖೆಯ ಮೊದಲ ದಿನದಿಂದಲೇ ಇದು ಆರಂಭವಾಗಿದೆ. ಇಲ್ಲಿರುವುದು ಕೇವಲ ದೋಷಪೂರಿತ ಕಾನೂನು ಜಾರಿ ಕ್ರಮಗಳು, ಸುಳ್ಳುಗಳ ಅಗಾಧ ರಾಶಿ, ಕೆತ್ತಿಕೊರೆದು ರೂಪಿಸಲಾಗಿರುವ ಖೊಟ್ಟಿ ಸಾಕ್ಷ್ಯಾ ಪುರಾವೆಗಳು ಹಾಗೂ ಫೋರ್ಜರಿಮಾಡಿದ ದಾಖಲೆಗಳೆಂದು ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳು ತಮ್ಮ ತೀರ್ಪಿನಲ್ಲಿ ಇವನ್ನು ಗುರುತಿಸಿವೆ. ಇವುಗಳ ಮಹತ್ವ ಕೇವಲ ಪೋಲೀಸರತ್ತ ಎಚ್ಚರಿಕೆಯ ಬೆರಳು ತೋರಿಸುವುದಕ್ಕೆ ಮಾತ್ರ ಸೀಮಿತವಾಗಿವೆ. ಇಲ್ಲವೆ ಅಪರೂಪಕ್ಕೆ "ಗೊಂದಲದ ವಿವರಣೆ" ಎಂದು ಹೇಳುವ ಮಟ್ಟಿಗೆ ಸೀಮಿತಗೊಂಡಿವೆ. ಸ್ವತಃ ಇವೇ "ಗೊಂದಲದ ವಿವರಣೆಗಳು ಆಗಿದ್ದರೂ ಸಹ." ಯಾವ ಹಂತದಲ್ಲೂ ವಿಚಾರಣಾ ನ್ಯಾಯಾಲಯ ಪೋಲೀಸರಿಗೆ ಅಧಿಕೃತವಾಗಿ ಛೀಮಾರಿ ಹಾಕಲಿಲ್ಲ. ದಂಡಾರ್ಹರನ್ನು ಅವರ ಪಾಡಿಗೆ ಬಿಟ್ಟುಬಿಟ್ಟಿತು. ನಿಜ ಹೇಳಬೇಕೆಂದರೆ ವಿಚಾರಣೆಯ ಪ್ರತಿ ಹಂತದಲ್ಲಿ ಈ ವಿಶೇಷ ನ್ಯಾಯಾಲಯ ತನಿಖೆಯ ಕಾನೂನು ಬದ್ಧತೆಯಲ್ಲಾಗಿದ್ದ ಗಂಭೀರ ಲೋಪದೋಷಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರಿತು. ತನಿಖೆಯಲ್ಲಿದ್ದ ನೀಚ-ನಿರ್ದಯತೆಯನ್ನು ಅದು "ಹುಡುಕಲಿಲ್ಲ." ಹೀಗೆ ಮಾಡಲಿಲ್ಲ ಎಂಬುದೇ ಗಾಬರಿ ಹುಟ್ಟಿಸುವ ಸಂಗತಿ. ಹುಡುಕಿದ್ದರೂ ಅದೇನು ದೊಡ್ಡ ಸಂಗತಿಯಾಗುತ್ತಿರಲಿಲ್ಲ, ಯಾರ ವಿಶ್ವಾಸಕ್ಕೂ ಧಕ್ಕೆ ತರುತ್ತಿರಲಿಲ್ಲ.

ಪೋಲೀಸರು ತನಿಖೆಯ ಪ್ರತಿಯೊಂದು ಹಂತ'ದಲ್ಲಿಯೂ ಅಡ್ಡಕಸುಬಿಗಳಂತೆ ವರ್ತಿಸಿದ್ದರು. ಮೊದಲಿಗೆ ಇವರ "ಬಂಧನ" ಮತ್ತು 'ಸ್ವಾಧೀನಕ್ಕೆ ತೆಗೆದುಕೊಳ್ಳುವುದು' ಎಂಬಂಥ ಕ್ರಿಯೆಗಳಲ್ಲಿದ್ದ 'ಕಾಲ ಮತ್ತು ಸ್ಥಳ'ಗಳ

ಅಸಂಬದ್ಧತೆಯನ್ನು ಗಮನಿಸಬೇಕು. ಅಫ್ಜಲ್ ಮತ್ತು ಶೌಕತ್‌ರ ಬಂಧನಕ್ಕೆ ಸಂಬಂಧಿಸಿದಂತೆ ದೆಹಲಿ ಪೋಲಿಸರು 'ಗಿಲಾನಿ ಕೊಟ್ಟ ಮಾಹಿತಿಯನ್ನಾಧರಿಸಿ ಅವರನ್ನು ಶ್ರೀನಗರದಲ್ಲಿ ಬಂಧಿಸಲಾಯಿತು' ಎಂದು ಹೇಳಿದರು. ಆದರೆ ಡಿ.೧೫ರ ಮುಂಜಾನೆ ೫.೪೫ರಲ್ಲಿ ಶೌಕತ್ ಮತ್ತು ಅಫ್ಜಲ್ ಶ್ರೀನಗರ ಪೋಲೀಸರ ಕಣ್ಗಾವಲಿನಲ್ಲಿದ್ದರು. ದೆಹಲಿ ಪೋಲೀಸರು ಗಿಲಾನಿಯನ್ನು ಬಂಧಿಸಿದ್ದು ಅದೇ ಡಿಸೆಂಬರ್ ೧೫ರ ಬೆಳಿಗ್ಗೆ ೧೦ ಗಂಟೆಯಲ್ಲಿ (ಅಂದರೆ ೪ ಗಂಟೆಗಳ ನಂತರ ಇವರು ಮತ್ತೆ ಅಫ್ಜಲ್ ಮತ್ತು ಶೌಕತ್‌ರನ್ನು ಮತ್ತೆ ಶ್ರೀನಗರದಲ್ಲಿ ಹುಡುಕಲು ಆರಂಭಿಸಿದ್ದರೇ?) ಈ ಅಸಂಬದ್ಧತೆಗೆ ಅಲ್ಲಿ ಯಾವುದೇ ವಿವರಣೆಗಳಿರಲಿಲ್ಲ. ಇದನ್ನು ಉಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ ದಾಖಲುಗೊಳಿಸುತ್ತಾ ಪೋಲೀಸರ ಹೇಳಿಕೆಯಲ್ಲಿ "ವಸ್ತುಶಃ ವಿರೋಧಾಭಾಸವಿದೆ ಇವನ್ನು ನಂಬಲಾಗದು" ಎಂದು ಹೇಳಿತು. ಅದನ್ನು ಕೇವಲ "ಗೊಂದಲದ ವಿವರಗಳು" ಎಂಬ ಮಟ್ಟದಲ್ಲಿಯಷ್ಟೇ ಸ್ವೀಕರಿಸಿತು. ದೆಹಲಿ ಪೋಲೀಸರು ಈ ವಿಷಯದಲ್ಲಿ ಏಕೆ ಸುಳ್ಳು ಹೇಳಿದರು? ಎಂದು ಕೇಳಲಿಲ್ಲ. ಅದು ಉತ್ತರವಿಲ್ಲದ ಪ್ರಶ್ನೆಯಾಗಿಯೇ ಉಳಿಯಿತು.

ಪೋಲೀಸರು ಯಾರನ್ನಾದರು ಬಂಧಿಸಿದಾಗ ಕಾನೂನಿನ ಪ್ರಕಾರ ಅಲ್ಲಿದ್ದ ಸಾರ್ವಜನಿಕರ ಸಾಕ್ಷ್ಯ ಪಡೆದು ಅವರ ಸಹಿಪಡೆಯಬೇಕು. ಅಲ್ಲದೆ ಬಂಧಿತರಿಂದ ಯಾವ ಯಾವ ವಸ್ತುಗಳನ್ನು, ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದೂ ಅದರಲ್ಲಿ ನಮೂದಿಸಿರಬೇಕು. ಆದರೆ ಇಲ್ಲಿ ಪೋಲೀಸರು ಅಫ್ಜಲ್ ಮತ್ತು ಶೌಕತ್ ೧೫ ಡಿಸೆಂಬರ್ ಬೆಳಿಗ್ಗೆ ೧೧ ಗಂಟೆಯಲ್ಲಿ ಲಾರಿಯೊಂದರಲ್ಲಿ ಶ್ರೀನಗರದಿಂದ ಪರಾರಿಯಾಗುತ್ತಿದ್ದಾಗ ಬಂಧಿಸಲಾಯಿತು ಎಂದೂ, (ಇದೇ ಹೇಳಿಕೆ ಶೌಕತ್‌ನ ಪತ್ನಿಯ ಯುರೋಪ ಪಟ್ಟಿಯಲ್ಲಿಯೂ ಇದೆ) ಇವರಿಂದ ಒಂದು ನೋಕಿಯೋ ಮೊಬೈಲ್ ಫೋನ್, ಒಂದು ಲ್ಯಾಪ್ ಟಾಪ್ ಹಾಗೂ ಹತ್ತು ಲಕ್ಷ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು. ಆದರೆ ಅಫ್ಜಲ್ ಕೋರ್ಟಿನಲ್ಲಿ ನೀಡಿದ ಹೇಳಿಕೆಯ ಪ್ರಕಾರ ಆತನನ್ನು ಶ್ರೀನಗರದ ಬಸ್‌ಸ್ಟಾಂಡಿನಲ್ಲಿ ಬಂಧಿಸಲಾಗಿದ್ದು ಅವನ ಬಳಿ ಪೋಲೀಸರು ಹೇಳುವ ಯಾವುದೇ ವಸ್ತುಗಳಿರಲಿಲ್ಲ.

ಇನ್ನೂ ವಿವಾದಾತ್ಮಕ ಸಂಗತಿಯೆಂದರೆ ಅಫ್ಜಲ್ ಮತ್ತು ಶೌಕತ್‌ರ ಬಂಧನವ ವಾರಂಟಿಗೆ ಸಹಿ ಮಾಡಿರುವುದು ದೆಹಲಿಯಲ್ಲಿ, ಗಿಲಾನಿಯ ಕಿರಿಯ ತಮ್ಮ ಬಿಸ್ಮಿಲ್ಲಾ ಎಂಬುವನು. ಹೀಗೆಂದು ಪೋಲೀಸ್ ದಾಖಲೆಗಳು ಹೇಳುತ್ತವೆ. ಆದರೆ ಈ ಅವಧಿಯಲ್ಲಿ ಈ ಬಿಸ್ಮಿಲ್ಲಾನನ್ನು ಪೋಲಿಸರು ಕಾನೂನು ಬಾಹಿರವಾಗಿ ಬಂಧಿಸಿ ಲೋಧಿ ರಸ್ತೆಯ ಪೋಲೀಸ್ ಠಾಣೆಯಲ್ಲಿಟ್ಟಿದ್ದರು. ಅಲ್ಲದೆ ಶೌಕತ್ ಮತ್ತು ಅಫ್ಜಲ್‌ರಿಂದ ಪೋಲಿಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳುವ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿದ್ದಕ್ಕೆ ಸಾಕ್ಷ್ಯ ಹಾಕಿರುವ ಇಬ್ಬರೂ ಜಮ್ಮು-ಕಾಶ್ಮೀರದ ಪೋಲೀಸರು. ಇದರಲ್ಲಿ ಒಬ್ಬ, ಹೆಡ್‌ಕಾನ್ಸೆಟೇಬಲ್ ಹೆಸರು: ಮೊಹಮದ್ ಅಕ್ಬರ್ (ಪ್ರಾಸಿಕ್ಯೂಟರ್ ಪರ ೭ನೇ ಸಾಕ್ಷಿ), ಆನಂತರ ತಿಳಿದು ಬಂದಂತೆ ಈತ ಅಫ್ಜಲ್‌ಗೆ ಅಪರಿಚಿತನೇನಲ್ಲ, ಅಲ್ಲದೆ ಅಫ್ಜಲ್‌ನನ್ನು ಪೋಲಿಸರು ಬಂಧಿಸಿದಾಗ ಇವನು ಅವರ ಪಕ್ಕದಲ್ಲಿಯೇ ಹಾದು ಹೋಗುತ್ತಿದುದು ಹೇಗೆ? ಜಮ್ಮು-ಕಾಶ್ಮೀರದ ಪೋಲಿಸರು ಒಪ್ಪಿಕೊಂಡಂತೆ ಅವರು ಮೊದಲು ಅಫ್ಜಲ್



ನನ್ನು ಕಂಡಿದ್ದು ಪರಿಪುರ ಹಣ್ಣಿನ ಮಂಡಿಯಲ್ಲಿ. ಆದರೆ ಅವನನ್ನು ಅಲ್ಲಿ ಬಂಧಿಸಲಿಲ್ಲ, ಅದಕ್ಕೆ ಅವರು ಹೇಳಿದ್ದು ಅವನನ್ನು "ಜನರಿಲ್ಲದ ಜಾಗದವರೆಗೂ ಹಿಂಬಾಲಿಸುತ್ತಾ ಬಂದೆವು" ಎಂದು. ಅಂದರೆ ಇದಕ್ಕೆ ಯಾರು ಸಾರ್ವಜನಿಕ ಸಾಕ್ಷಿಗಳಿರಬಾರದೆಂದೇ?

ಇಲ್ಲಿ ಗಂಭೀರವಾದ ಇನ್ನೊಂದು ಅಸ್ಥಿರತೆ ಇದೆ. ಉಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ "ಆಪಾದಿತರ ಬಂಧನದ ಸಮಯ ಮತ್ತು ಸ್ಥಳಗಳು ಗಂಭೀರವಾದ ಸಾಕ್ಷ್ಯಗಳು" ಎಂದು ಹೇಳಿದೆ. ಆಘಾತದ ಸಂಗತಿ ಎಂದರೆ ಪೋಲೀಸರು ಹೇಳುವ ಅವರ ಬಂಧನದ ಸಮಯ ಮತ್ತು ಸ್ಥಳ ಹಾಗೂ ಅವರು ಈ ಕೃತ್ಯದಲ್ಲಿ ಭಾಗಿಗಳಾಗಿದ್ದಾರೆ ಎಂದು ಖಚಿತಪಡಿಸುವಂತಹ ಅವರಿಂದ ಮುಟ್ಟುಗೋಲು ಹಾಕಿಕೊಳ್ಳಲಾದ ಮೊಬೈಲ್ ಫೋನ್, ಲ್ಯಾಪ್ ಟಾಪ್ ಮತ್ತು ಹತ್ತು ಲಕ್ಷ ರೂಪಾಯಿಗಳು ಪ್ರಧಾನ ಸಾಕ್ಷ್ಯಗಳಾಗಿರುವುದು. ಆದರೆ ಈ ಬಂಧನದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿರುವ ಗೊಂದಲವನ್ನು ನೋಡಿದರೆ ಇವೆಲ್ಲಾ "ಭಯೋತ್ಪಾದನೆ" ಎಂಬ ಪದದ ವಿರುದ್ಧ ಪೋಲೀಸರು ಹುಟ್ಟುಹಾಕಿರುವ ಮತ್ತೊಂದು 'ಪದ' ಮಾತ್ರವಾಗಿ ಕಾಣುತ್ತದೆ.

ಈ 'ಮುಟ್ಟುಗೋಲು'ಗಳ ಮುಂದುವರಿಕೆಯಲ್ಲಿ

ಆಘಾತದ ಸಂಗತಿ ಎಂದರೆ ಪೋಲೀಸರು ಹೇಳುವ ಅವರ ಬಂಧನದ ಸಮಯ ಮತ್ತು ಸ್ಥಳ ಹಾಗೂ ಅವರು ಈ ಕೃತ್ಯದಲ್ಲಿ ಭಾಗಿಗಳಾಗಿದ್ದಾರೆ ಎಂದು ಖಚಿತಪಡಿಸುವಂತಹ ಅವರಿಂದ ಮುಟ್ಟುಗೋಲು ಹಾಕಿಕೊಳ್ಳಲಾದ ಮೊಬೈಲ್ ಫೋನ್, ಲ್ಯಾಪ್‌ಟಾಪ್ ಮತ್ತು ಹತ್ತು ಲಕ್ಷ ರೂಪಾಯಿಗಳು ಪ್ರಧಾನ ಸಾಕ್ಷ್ಯಗಳಾಗಿರುವುದು. ಆದರೆ ಈ ಬಂಧನದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿರುವ ಗೊಂದಲವನ್ನು ನೋಡಿದರೆ ಇವೆಲ್ಲಾ "ಭಯೋತ್ಪಾದನೆ" ಎಂಬ ಪದದ ವಿರುದ್ಧ ಪೋಲೀಸರು ಹುಟ್ಟುಹಾಕಿರುವ ಮತ್ತೊಂದು 'ಪದ' ಮಾತ್ರವಾಗಿ ಕಾಣುತ್ತದೆ.

...ಲ್ಯಾಪ್‌ಟಾಪ್‌ನಿಂದ ಮತ್ತೊಂದು ಮಹತ್ವದ ಸಾಕ್ಷ್ಯವನ್ನು ಪೋಲೀಸರು ಮಂಡಿಸಿದ್ದಾರೆ. 'ಈ ಲ್ಯಾಪ್‌ಟಾಪ್‌ನಲ್ಲಿಯೇ ಭಯೋತ್ಪಾದಕರು ಕಾರಿನ ಮೇಲೆ ಅಂಟಿಸಿದ್ದ ಖೋಟಾ ಪಾಸನ್ನು ಸೃಷ್ಟಿಸಿದ್ದರು ಎಂಬುದಕ್ಕೆ ಇದರಲ್ಲಿ ಆಧಾರಗಳಿವೆ, ಇದರ ಹೊರತು ಮತ್ಯಾವುದೇ ಪ್ರಮುಖ ಮಾಹಿತಿಗಳು ಇದರಲ್ಲಿ ಇಲ್ಲ" ಹಾಗೂ "ಇದನ್ನು ಅಫ್ಜಲ್ ಶ್ರೀನಗರದಲ್ಲಿದ್ದ ಗಾಝೀ ಬಾಬನಿಗೆ ಹಿಂತಿರುಗಿಸಲು ಕೊಂಡೊಯ್ಯುತ್ತಿದ್ದ" ಎಂದು ವಾದಿಸಿದ್ದಾರೆ.

ಅದರೆ ಈ ಪ್ರಕರಣದ ಮುಖ್ಯ ತನಿಖಾಧಿಕಾರಿ ಎಸಿಪಿ ರಾಜ್‌ಬೀರ್ ಸಿಂಗ್‌ರ ಹೇಳಿಕೆಯ ಪ್ರಕಾರ "ಈ ಲ್ಯಾಪ್‌ಟಾಪ್‌ನ ಹಾರ್ಡ್‌ಡಿಸ್ಕನ್ನು ೧೬ನೇ ಜನವರಿ ೨೦೦೨ ಸೀಲ್ ಮಾಡಲಾಯಿತು" (ಅಂದರೆ ಇದನ್ನು ವಶಪಡಿಸಿಕೊಂಡ ಒಂದು ತಿಂಗಳ ನಂತರ) ಆದರೆ ಕಂಪ್ಯೂಟರ್ ದಾಖಲೆಗಳು ಆನಂತರದ ದಿನಗಳಲ್ಲಿಯೂ ಇದನ್ನು ಬಳಸಲಾಗಿದೆ ಎಂಬುದನ್ನು ದೃಢೀಕರಿಸುತ್ತವೆ.

(ಇಲ್ಲಿನ ವಿಚಿತ್ರವನ್ನು ಗಮನಿಸಬೇಕು, ಭಯೋತ್ಪಾದಕರು ಕೇವಲ ಖೋಟಾ ಗುರುತಿನ ಚೀಟಿಯನ್ನು ಸೃಷ್ಟಿಸುವುದಕ್ಕಾಗಿಯೇ ಆ ಲ್ಯಾಪ್‌ಟಾಪನ್ನು ಇಟ್ಟುಕೊಂಡಿದ್ದರೇ? ಮತ್ಯಾವುದೇ ಮಹತ್ವದ ಮಾಹಿತಿಗಳು ಅದರಲ್ಲಿ ಇಲ್ಲ ಎಂದು ಪೋಲೀಸರೇ ಹೇಳಿರುವಾಗ ಅಂತಹ ಮಾಹಿತಿಗಳನ್ನೆಲ್ಲಾ ಡಿಲಿಟ್-ಅಳಿಸಿ ಹಾಕುವುದು-ಮಾಡಿದ್ದಾರೆ ಎನ್ನುವುದಾದರೆ ಈ ಗುರುತಿನ ಚೀಟಿಯನ್ನೂ ಡಿಲಿಟ್ ಮಾಡಲು ಸಾಧ್ಯವಿರಲಿಲ್ಲವೇ? ಇಷ್ಟೇ ಅಲ್ಲದೇ ಝೀ ಟಿವಿ ಈ ಕುರಿತ ತನ್ನ 'ಡಾಕ್ಯೂಡ್ರಾಮಾ'ದಲ್ಲಿ ಆ ಲ್ಯಾಪ್‌ಟಾರಿನ ಮೇಲೆ ಸಂಸತ್ ಭವನದ ಚಿತ್ರವಿರುವುದನ್ನು ತೋರಿಸಿತ್ತು. ಒಂದು ಅಂತಾರಾಷ್ಟ್ರೀಯ ಭಯೋತ್ಪದಕ ಸಂಘಟನೆಯ ಮುಖ್ಯಸ್ಥನೊಬ್ಬ ಇಂತಹ ಒಂದು ಕೆಟ್ಟ ಚಿತ್ರವನ್ನು ತನ್ನ ಲ್ಯಾಪ್‌ಟಾಪಿನ ಮೇಲೆ ಏಕೆ ಅಂಟಿಸಿಕೊಳ್ಳುತ್ತಾನೆ?)

ಮೊಬೈಲ್ ಫೋನ್ ಕರೆಗಳ ದಾಖಲೆಗಳನ್ನು ಗಮನಿಸುವುದಾದರೆ.... ಅವರ ಪ್ರಕಾರ ಇವು ಪ್ರಮುಖವಾದ 'ಗಟ್ಟಿ ದಾಖಲೆಗಳು' ಆಗಿದ್ದವು. ಆದರೆ ಪೋಲೀಸ್ ವಿಶೇಷ ಘಟಕ ಇದನ್ನು ಮಂಡಿಸಿದಾಗ ಸಹಜವಾಗಿಯೇ ಇವು ಸಂಶಯಾಸ್ಪದವಾಗಿ ಕಾಣತೊಡಗಿದವು. ಆದರೆ ಇಡೀ ಪ್ರಕರಣದಲ್ಲಿ ಈ ಸೆಲ್‌ಫೋನ್, ಇದರ ಸಿಮ್ ಕಾರ್ಡ್, ಕರೆಗಳ ಕಂಪ್ಯೂಟರೀಕೃತ ದಾಖಲೆಗಳು, ಈ ಬಗ್ಗೆ ಫೋನ್ ಕಂಪನಿಗಳ ತಂತ್ರಜ್ಞರ ಹೇಳಿಕೆಗಳು ಹಾಗೂ ಅಫ್ಜಲ್ ಮತ್ತು ಅವನ ಸಹಚರರಿಗೆ ಸಿಮ್ ಕಾರ್ಡ್ ಮಾರಿದ ಅಂಗಡಿಗಳವರು ಅತೀ ಮುಖ್ಯ ಸಾಕ್ಷಿಗಳಾಗಿದ್ದವು. ಕರೆ ವಿವರಗಳ ಕಂಪ್ಯೂಟರ್ ದಾಖಲೆಗಳ ಮೂಲಕ ಶೌಕತ್, ಗಿಲಾನಿ, ಅಫ್ಜಲ್ ಮತ್ತು ಮೊಹಮದ್ (ಮೃತ ಭಯೋತ್ಪಾದಕ) ಇವರ ನಡುವೆ ದಾಳಿಯ ಕೊನೆಯ ಕ್ಷಣಗಳಲ್ಲಿ ಹತ್ತಿರದ ಸಂಪರ್ಕವಿತ್ತು ಎನ್ನುವುದನ್ನು ರುಜುವಾತು ಪಡಿಸಲು ಹೊರಟಿತ್ತು. ಇದಕ್ಕೆ ಪೋಲೀಸರು ಮಂಡಿಸಿದ ದಾಖಲೆ ಎಂದರೆ ಪ್ರಮಾಣೀಕರಿಸಿಲ್ಲದ ಒಂದು ಪುಟ ಕಂಪ್ಯೂಟರಿನ ಪ್ರಿಂಟ್‌ಔಟ್ ಮಾತ್ರ, ಕನಿಷ್ಟ ಇದರ ಪ್ರಾಥಮಿಕ ದಾಖಲೆಗಳನ್ನೂ ಅಲ್ಲ. ಈ ಬಿಲ್ಲಿಂಗ್ ವ್ಯವಸ್ಥೆಯಲ್ಲಿ ವಿವರಗಳು 'ಟೆಕ್ಸ್ಟ್'(ಪಠ್ಯ) ಸ್ವರೂಪದಲ್ಲಿರುತ್ತವೆ. ಇವನ್ನು ಯಾವಾಗ ಬೇಕಾದರೂ ಸುಲಭವಾಗಿ ತಿದ್ದಬಹುದು. ಉದಾಹರಣೆಗೆ ಒಂದು ಫೋನ್‌ನಂಬರಿನಿಂದ ಅಂದರೆ ಒಂದು ಸಿಮ್ ಕಾರ್ಡಿನಿಂದ ನಿರ್ದಿಷ್ಟ ಸಮಯದಲ್ಲಿ ಎರಡು ಬೇರೆ ಬೇರೆ

ನಂಬರುಗಳಿಗೆ ಕರೆ ಮಾಡಲಾಗಿದೆ, ಅದೂ ಬೇರೆ ಬೇರೆ ಹ್ಯಾಂಡ್‌ಸೆಟ್‌ಗಳಿಂದ. ಇದು ಏನನ್ನು ಹೇಳುತ್ತದೆ? ಇದರ ಅರ್ಥ ಒಂದೋ ಸಿಮ್‌ಕಾರ್ಡನ್ನೇ 'ಕ್ಲೋನ್' ಮಾಡಿರಬೇಕು, ಇಲ್ಲವೇ ದಾಖಲೆಯನ್ನು ತಿದ್ದಿರಬೇಕು.

ಈಗ ಸಿಮ್‌ಕಾರ್ಡಿನ ಕತೆಯನ್ನು ನೋಡೋಣ..., ಅವರು ಹೇಳುವ ಕತೆಗೆ ಆಧಾರ ನೀಡಲು ಇದನ್ನು ಪ್ರಮುಖ ಸಾಕ್ಷ್ಯವಾಗಿ ಮಂಡಿಸಿದ್ದಾರೆ. ಇದರಲ್ಲಿ ನಿರ್ದಿಷ್ಟವಾಗಿ ಎಂದು ಮೊಬೈಲ್ ಫೋನ್ ನಂಬರನ್ನು ನಮೂದಿಸಲಾಗಿದೆ. ಆ ನಂಬರ್ ೯೮೧೧೪೮೯೪೨೯. ಇದನ್ನು ಪೋಲೀಸರು ಅಫ್ಜಲ್‌ನ ನಂಬರ್ ಎಂದು ಹೇಳಿದ್ದಾರೆ. ಇದು ಅಫ್ಜಲ್‌ನಿಂದ ಮೊಹಮದ್‌ಗೆ, ಅಫ್ಜಲ್‌ನಿಂದ ಶೌಕತ್‌ಗೆ ಮತ್ತು ಶೌಕತ್‌ನಿಂದ ಗಿಲಾನಿಗೆ ಸಂಪರ್ಕ ಕಲ್ಪಿಸುತ್ತಿತ್ತು ಎಂದು ಹೇಳಿದ್ದಾರೆ. ಹಾಗೇ ಇದನ್ನು ಮೃತ ಭಯೋತ್ಪಾದಕರ ಬಳಿ ಸಿಕ್ಕಿದ ಗುರುತಿನ ಚೀಟಿಯ ಹಿಂದೆ ಬರೆಯಲಾಗಿತ್ತು ಎಂದೂ ಹೇಳಿದ್ದಾರೆ. ಇದು ಎಷ್ಟು ಹಾಸ್ಯಾಸ್ಪದ ಸಂಗತಿ ಎಂದರೆ 'ನಮ್ಮದೊಂದು ಬೆಕ್ಕಿನ ಮರಿ ಕಳೆದುಹೋಗಿದೆ ಕಂಡವರು ೯೮೧೧೪೮೯೪೨೯ ಈ ಫೋನ್ ನಂಬರಿಗೆ ಕರೆ ಮಾಡಿ' ಎಂದು ಜಾಹೀರಾತು ಕೊಟ್ಟಂತಿದೆ. (ಅಪರಾಧ ನಡೆದ ಸ್ಥಳದ ಸಾಕ್ಷ್ಯಾಧಾರಗಳನ್ನು ವಶಪಡಿಸಿಕೊಂಡು ಸೀಲ್ ಮಾಡಬೇಕು ಎಂಬ ಕಾನೂನಿನ ಸಾಮಾನ್ಯ ಕ್ರಮಗಳನ್ನು ಪಾಲಿಸದೇ ಇರುವುದಕ್ಕೆ ಇದು ಅತ್ಯುತ್ತಮ ಉದಾಹರಣೆ. ಇಲ್ಲಿ ಗುರುತಿನ ಚೀಟಿಗಳನ್ನು ಹಾಗೇಯೇ ಸೀಲ್ ಮಾಡಿಲ್ಲ. ಹೀಗೆ ಸೀಲ್ ಮಾಡದ ಸಾಕ್ಷ್ಯಗಳನ್ನು ಯಾವಾಗ ಬೇಕಾದರೂ ತಿದ್ದಬಹುದು).

ಇಡೀ ಪ್ರಕರಣಕ್ಕೆ ಅಫ್ಜಲ್‌ನ ವಿರುದ್ಧ ಇರುವ ಈ ಸಾಕ್ಷ್ಯಗಳಲ್ಲಿ ಈ ಫೋನ್ ನಂಬರ್ ಪ್ರಮುಖವಾದದ್ದು. ಆದರೆ ಅಫ್ಜಲ್‌ನ ತಪ್ಪೊಪ್ಪಿಗೆ ಮತ್ತು ನಂತರದ ಸಾಕ್ಷ್ಯಗಳಲ್ಲಿ ಇದಕ್ಕೆ ಯಾವುದೇ ದೃಢೀಕರಣ ದೊರೆಯುವುದಿಲ್ಲ. ಈ ಸಿಮ್‌ಕಾರ್ಡಿನ ಸಾಕ್ಷಿಯನ್ನು ರುಜುವಾತು ಪಡಿಸಲು ಪೋಲೀಸರು ಕಮಲ್ ಕಿಶೋರ್ ಎಂಬ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ನಿಲ್ಲಿಸಿದರು. ಈತ ಅಫ್ಜಲ್‌ನನ್ನು ಗುರುತು ಹಿಡಿಯುವುದರೊಂದಿಗೆ ೪ ಡಿಸೆಂಬರ್ ೨೦೦೧ರಂದು ಈ ಸಿಮ್‌ಕಾರ್ಡಿನ ಜೊತೆಗೆ ಮೋಟೊರೋಲಾ ಹ್ಯಾಂಡ್‌ಸೆಟ್ಟನ್ನು ಮಾರಾಟ ಮಾಡಿದ್ದಾಗಿ ಸಾಕ್ಷಿ ಹೇಳಿದ. ಆದರೆ ವಿಚಾರಣೆಯ ಅವಧಿಯಲ್ಲಿ ಈ ಸಿಮ್‌ಕಾರ್ಡ್ ನವೆಂಬರ್ ೬ ರಿಂದಲೇ ಬಳಕೆಯಲ್ಲಿರುವುದು ಹೊರಬಿದ್ದಿತು. ಅಂದರೆ ಅವನು ಅದನ್ನು ಮಾರುವ ಪೂರ್ತಿ ಒಂದು ತಿಂಗಳು ಮುಂಚೆಯೇ ಅಫ್ಜಲ್ ಇದನ್ನು ಕೊಂಡಿದ್ದಾನೆ ಎಂದಾಯಿತು. ಹಾಗಾದರೆ ಇಲ್ಲಿ ಒಂದೋ, ಸಾಕ್ಷಿ ಸುಳ್ಳು ಹೇಳುತ್ತಿರಬೇಕು ಅಥವಾ ಕರೆಯ ಕಂಪ್ಯೂಟರೀಕೃತ ದಾಖಲೆಗಳು ಸುಳ್ಳು ಹೇಳುತ್ತಿರಬೇಕು. ಉಚ್ಚ ನ್ಯಾಯಾಲಯ ಈ ವಿರೋಧಾಭಾಸದ ಬಗ್ಗೆ ಬೆಳಕು ಚೆಲ್ಲುತ್ತಾ... ಕಮಲ್ ಕಿಶೋರ್ ಹೇಳಿದ್ದು "ನಾನು ಅಫ್ಜಲ್‌ಗೆ ಒಂದು ಸಿಮ್ ಕಾರ್ಡ್ ಮಾರಿದ್ದೇನೆ ಎಂದೇ ಹೊರತು ನಿರ್ದಿಷ್ಟವಾಗಿ ಇದೇ ನಂಬರಿನ ಸಿಮ್‌ಕಾರ್ಡ್ ಎಂದು ಅಲ್ಲ" ಎಂದು ಹೇಳಿತು. ಸರ್ವೋಚ್ಚ ನ್ಯಾಯಾಲಯ "ಅಗತ್ಯವಾಗಿ ೪-೧೧-೨೦೦೧ರ ಮೊದಲೇ ಇದು ಅಫ್ಜಲ್‌ಗೆ ಮಾರಲ್ಪಟ್ಟಿರಬೇಕು." ಎಂದು ಹೇಳಿತು. ಆದರೆ ಗೆಳೆಯರೆ, ಇದು ನಿಜಕ್ಕೂ ಹೌದಾ?

ಇನ್ನು ಆಪಾದಿತನನ್ನು ಗುರುತು ಹಿಡಿಯುವ

ಇಡೀ ಪ್ರಕರಣಕ್ಕೆ ಅಫ್ಜಲ್‌ನ ವಿರುದ್ಧ ಇರುವ ಈ ಸಾಕ್ಷ್ಯಗಳಲ್ಲಿ ಈ ಫೋನ್ ನಂಬರ್ ಪ್ರಮುಖವಾದದ್ದು. ಆದರೆ ಅಫ್ಜಲ್‌ನ ತಪ್ಪೊಪ್ಪಿಗೆ ಮತ್ತು ನಂತರದ ಸಾಕ್ಷ್ಯಗಳಲ್ಲಿ ಇದಕ್ಕೆ ಯಾವುದೇ ದೃಢೀಕರಣ ದೊರೆಯುವುದಿಲ್ಲ. ಈ ಸಿಮ್‌ಕಾರ್ಡಿನ ಸಾಕ್ಷಿಯನ್ನು ರುಜುವಾತು ಪಡಿಸಲು ಪೋಲೀಸರು ಕಮಲ್ ಕಿಶೋರ್ ಎಂಬ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ನಿಲ್ಲಿಸಿದರು. ಈತ ಅಫ್ಜಲ್‌ನನ್ನು ಗುರುತು ಹಿಡಿಯುವುದರೊಂದಿಗೆ ೪ ಡಿಸೆಂಬರ್ ೨೦೦೧ ರಂದು ಈ ಸಿಮ್‌ಕಾರ್ಡಿನ ಜೊತೆಗೆ ಮೋಟೊರೋಲಾ ಹ್ಯಾಂಡ್‌ಸೆಟ್ಟನ್ನು ಮಾರಾಟ ಮಾಡಿದ್ದಾಗಿ ಸಾಕ್ಷಿ ಹೇಳಿದ. ಆದರೆ ವಿಚಾರಣೆಯ ಅವಧಿಯಲ್ಲಿ ಈ ಸಿಮ್‌ಕಾರ್ಡ್ ನವೆಂಬರ್ ೬ ರಿಂದಲೇ ಬಳಕೆಯಲ್ಲಿರುವುದು ಹೊರಬಿದ್ದಿತು.

ಬಗ್ಗೆ...., ಈ ಬಗ್ಗೆ ವಿಚಾರಣೆಗೆ ಹಾಜರಾದ ಎಲ್ಲರೂ ಅಂದರೆ ಅಫ್ಜಲ್‌ಗೆ ಅಮೋನಿಯಮ್ ನೈಟ್ರೇಟ್, ಅಲ್ಯೂಮಿನಿಯಂ ಪುಡಿ, ಗಂಧಕ, ಸುಜಾತಾ ಮಿಕ್ಸರ್ ಗೆಂಡರ್, ಒಣ ಹಣ್ಣುಗಳು ಹಾಗೂ ಇತ್ಯಾದಿಗಳನ್ನು ಮಾರಿದ ಅಂಗಡಿಗಳ ಮಾಲೀಕರು ಇವನನ್ನು ಗುರುತು ಹಿಡಿದರು. ಸಾಮಾನ್ಯವಾಗಿ ಕಾನೂನಿನ ಪ್ರಕಾರ ಈ ಗುರುತು ಹಿಡಿಯುವ ಪ್ರಕ್ರಿಯೆ ಹೇಗೆ ನಡೆಯಬೇಕೆಂದರೆ, ಅನೇಕ ಜನರ ನಡುವೆ ಆಪಾದಿತನನ್ನೂ ನಿಲ್ಲಿಸಿ, ಗುರುತು ಹಿಡಿಯುವ ಪೆರೇಡ್ ಮಾಡಬೇಕು. ಆದರೆ ಅಫ್ಜಲ್‌ನ ವಿಷಯದಲ್ಲಿ ಇದು ನಡೆಯಲಿಲ್ಲ. ಬದಲಾಗಿ ಪೋಲೀಸ್ ಕಸ್ಟಡಿಯಲ್ಲಿದ್ದ ಅಫ್ಜಲನನ್ನು ಪೋಲೀಸರು ಅಂಗಡಿ ಮಾಲೀಕರುಗಳ ಮುಂದೆ ನಿಲ್ಲಿಸಿ, 'ನೋಡಿ ಇವನು ಸಂಸತ್ ಮೇಲೆ ನಡೆದ ದಾಳಿಯ ಆಪಾದಿತ' ಎಂದು ಹೇಳಿದರು. (ಇಲ್ಲಿನ ಮತ್ತೊಂದು ವಿವಾದಿತ ಸಮಸ್ಯೆ ಎಂದರೆ ಈ ಅಂಗಡಿಗಳ ಹೆಸರನ್ನು ಅಫ್ಜಲ್ ಪೋಲೀಸರಿಗೆ ಹೇಳಿದನೇ ಅಥವಾ ಪೋಲೀಸರೇ ಅವರ



ಗುರುತಿನ ಅಂಗಡಿಯವರ ಬಳಿಗೆ ಇವನನ್ನು ಕರೆದುಕೊಂಡು ಹೋಗಿದ್ದರೇ? ಎಂಬುದು. ಅಲ್ಲದೆ ಆ ಕ್ಷಣದಲ್ಲಿಯೂ ಸಹ ಪೋಲೀಸರ ಕಸ್ಟಡಿಯಲ್ಲಿದ್ದ ಅವನು ಯಾವುದೇ ಹಿಂಸೆಗೆ ಸುಲಭ ಲಭ್ಯನಾಗಿದ್ದ. ಇಂತಹ ಸನ್ನಿವೇಶದಲ್ಲಿ ಪಡೆದ ಇವನ ತಪ್ಪೊಪ್ಪಿಗೆ ಹೇಳಿಕೆಯೇ ಕಾನೂನಿನ ಪ್ರಕಾರ ಸಂಶಯಾಸ್ಪದವಾಗಿರುವಾಗ ಇದು ನಂಬಿಕೆಗೆ ಅರ್ಹವೇ?)

ಇಂತಹ ಲೋಪಗಳನ್ನು ನ್ಯಾಯಾಧೀಶರು ಗುರುತಿಸಿದರೂ ಸಹ ಗಂಭೀರವಾಗಿ ಪರಿಗಣಿಸಲಿಲ್ಲ. ಬದಲಾಗಿ 'ಏಕೆ ಜನ ಸಾಮಾನ್ಯರು ಸುಳ್ಳು ಹೇಳಿ ಒಬ್ಬ ಮುಗ್ಧನನ್ನು ಅಪರಾಧಕ್ಕೆ ಸಿಕ್ಕಿಸಲು ಬಯಸುತ್ತಾರೆ?' ಎಂದು ಕೇಳಿದರು. ಆದರೆ ಇದು ಸತ್ಯವೇ? ಈ ವಿಷಯದಲ್ಲಿ ಮಾಧ್ಯಮಗಳು ಮಾಡಿದ ಉನ್ಮತ್ತ ವರದಿಗಳನ್ನು ನೋಡಿದ ನಂತರವೂ ಜನಸಾಮಾನ್ಯರು ಹಾಗೆ ವರ್ತಿಸಬಹುದೇ? (ಅದರಲ್ಲೂ ದೇಶದ ಸಂಸತ್ ಭವನದ ಮೇಲೆ ನಡೆದ ದಾಳಿಯಾದ್ದರಿಂದ) ನ್ಯಾಯಾಧೀಶರ ಮಾತನ್ನು ತಾರ್ಕಿಕವಾಗಿ ಒಪ್ಪಲು ಸಾಧ್ಯವೇ? ಅಲ್ಲದೆ ಇಂತಹ ಅಪಾಯಕಾರಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಅಧಿಕೃತ ಬಿಲ್ಲುಗಳಿಲ್ಲದೆ ಕಾಳಸಂತೆಯಲ್ಲಿ ಮಾರುವ ವ್ಯಾಪಾರಿಗಳ ಸಾಕ್ಷಿಗಳನ್ನು ಒಪ್ಪುವುದು ಸಾಧ್ಯವೇ? ಯಾವ ಕಾಳಸಂತೆಕೋರರ ಮೇಲೆ ಪೋಲೀಸರಿಗೆ ಅಪಾರ ಹಿಡಿತವಿರುತ್ತದೋ ಅಂತಹವರನ್ನು.

ಈ ಮೇಲೆ ನಾನು ಹೇಳಿರುವ ಯಾವೂ ನನ್ನ ಪತ್ತೆದಾರಿಕೆಯ ಮೂಲಕ ಕಂಡು ಹಿಡಿದ ಸಂಗತಿಗಳೇನಲ್ಲ. ಇವೆಲ್ಲವೂ ನಿರ್ಮಲಾಂಶು ಮುಖರ್ಜಿ ಬರೆದಿರುವ "೧೩ ಡಿಸೆಂಬರ್– ಪ್ರಜಾಪ್ರಭುತ್ವದ ಮೇಲೆ ಭಯೋತ್ಪಾದನೆ" ಎಂಬ ಪುಸ್ತಕ ಹಾಗೂ ನವದೆಹಲಿಯ 'ಯೂನಿಯನ್ ಡೆಮೊಕ್ರೆಟಿಕ್ ರೈಟ್ಸ್' ಎಂಬ ಸಂಸ್ಥೆಯ 'ಟ್ರಯಲ್ ಆಫ್ ಎರರ್ಸ್ ಮತ್ತು ಬ್ಯಾಲನ್ಸಿಂಗ್ ಆಕ್ಟ್' ಎಂಬ ಎರಡು ವರದಿಗಳನ್ನು, ಇವೆರಡಕ್ಕಿಂತ ಮುಖ್ಯವಾಗಿ ನನ್ನ ಮುಂದಿರುವ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳ ಅಗಾಧ ಗಾತ್ರದ ಮೂರು ಸಂಪುಟಗಳಲ್ಲಿರುವ ವಿಚಾರಣಾ ಹಾಗೂ ತೀರ್ಪುಗಳ ದಾಖಲೆಗಳನ್ನು ಆಧರಿಸಿವೆ. ಈಗ ಇವೆಲ್ಲವೂ ಸಾರ್ವಜನಿಕ ದಾಖಲೆಗಳು.

ಈ ಇಡಿಯ ಕತ್ತಲ ಜಗತ್ತು ಬೆಳಕಿಗೆ ಬರಲು ಅಂಗಲಾಚುತ್ತಿರುವಾಗ ಏಕೆ ಈ ಟೀವಿಗಳು ಈ ಬಗ್ಗೆ ಸಮವಸ್ತ್ರದಂತಹ ಜನರ ಮತ್ತು ಪಟ್ಟಭದ್ರ ರಾಜಕಾರಣಿಗಳ ನಡುವೆ ಹುಸಿ ಚರ್ಚೆಯನ್ನು ಹುಟ್ಟುಹಾಕಿ, ಪ್ರದರ್ಶಿಸುತ್ತಿದ್ದಾರೆ? ಏಕೆ ಈ ಪತ್ರಿಕೆಗಳು (ಕೆಲವರನ್ನು ಹೊರತುಪಡಿಸಿ) ನೇಣುಗಂಬದಂತೆ ಹೊರಟ ಮನುಷ್ಯನ ಬಗ್ಗೆ ಮುಖಪುಟದಲ್ಲಿ ಲೇಖನಗಳನ್ನು ಪ್ರಕಟಿಸುತ್ತಿವೆ? ಏಕೆ ಅವನ ಕೊರಳಿಗೆ ಹಾಕುವ ಹಗ್ಗದ ಉದ್ದ (೬೦ಮೀ), ಗಾತ್ರ (೩.೭೫ ಕೆ.ಜಿ.)ಗಳ ಬಗ್ಗೆ ಬರೆಯುತ್ತಿವೆ (ಇಂಡಿಯನ್ ಎಕ್ಸ್‌ಪ್ರೆಸ್ ೧೬-೧೦-೨೦೦೬). ಈ ಎಲ್ಲಾ ದುರಂತಗಳನ್ನು ಕ್ಷಣಕಾಲ ಬದಿಗಿಟ್ಟು ಈ "ಸ್ವತಂತ್ರ ಮಾಧ್ಯಮಗಳಿಗೆ' ಪರಾಕು ಹೇಳೋಣವೇ?

ಅಷ್ಟೊಂದು ನಿಷ್ಪಕ್ಷಪಾತದಿಂದ ವರ್ತಿಸುವುದು ಮನುಷ್ಯ ಮಾತ್ರರಿಗೆ ಅಷ್ಟು ಸುಲಭವಲ್ಲ. ಹಾಗೊಂದು ಪಕ್ಷ ನಾವು ಮಾಡಬಯಸುವುದಾದರೆ ಒಂದು ಕ್ಷಣವಾದರೂ ಈ 'ಪೋಲೀಸರು ದೇವರು- ಭಯೋತ್ಪಾದಕರು. ಪಿಶಾಚಿಗಳು' ಎಂಬ ಸೈದ್ಧಾಂತಿಕ ಪರಿಕಲ್ಪನೆಯನ್ನು

ಮರೆಯಬೇಕಾಗುತ್ತದೆ. ಈ ಸೈದ್ಧಾಂತಿಕ ಹಿಡಿತಗಳಿಂದ ಕ್ಷಣಕಾಲ ತಪ್ಪಿಸಿಕೊಳ್ಳುವುದಾದರೆ ಕಣ್ಣ ಮುಂದಿರುವ ಸಾಕ್ಷ್ಯಾಧಾರಗಳು ಚೆಲ್ಲುವ ಹೊಸ ಬೆಳಕಿನಲ್ಲಿ ಭಯಾನಕ ಸತ್ಯಗಳನ್ನು ನೋಡಲು ಸಾಧ್ಯ. ಇದು ನಾವೆಲ್ಲ ಯಾವ ದಿಕ್ಕಿನಲ್ಲಿ ನೋಡಲು ಇಷ್ಟಪಡುವುದಿಲ್ಲವೋ ಆ ಕಡೆಗೆ ನೋಡಲು ನಮ್ಮನ್ನು ಸಿದ್ಧಗೊಳಿಸುತ್ತವೆ.

ಈ ಒಟ್ಟೂ ಪ್ರಕರಣದಲ್ಲಿ ನಮ್ಮ ಗಮನ ಸೆಳೆಯುವ ಆದರೆ ಅಷ್ಟೇ ನಿರ್ಲಕ್ಷಿಸಲಾದ ಕಾನೂನು ಬದ್ಧ ದಾಖಲೆ ಎಂದರೆ..., ಅಪರಾಧ ಸಂಹಿತೆ ೩೧೩ ರ ಪ್ರಕಾರ ಆಪಾದಿತ ಮೊಹಮದ್ ಅಫ್ಜಲ್ ನೀಡಿದ ಹೇಳಿಕೆಯ ಭಾಗ. ಅವನಿಗೆ ಸಹಜವಾಗಿ ತನ್ನ ಆವೃತ್ತಿಯ ಕತೆಯನ್ನು ಹೇಳಿಕೊಳ್ಳಲು ನೀಡಬೇಕಾಗಿದ್ದ ಅವಕಾಶ ಸಿಕ್ಕಿರಲಿಲ್ಲ. ಪ್ರಾಸಿಕ್ಯೂಟರ್ ಪರವಾಗಿದ್ದ ದಾಖಲೆಗಳನ್ನು ಆಪಾದಿತನ ವಿರುದ್ಧವಾದ ಸಾಕ್ಷ್ಯಾಧಾರಗಳಾಗಿ ನ್ಯಾಯಾಲಯ ಒಪ್ಪಿಕೊಳ್ಳುತ್ತಾ 'ನೀನು ಇದನ್ನು ಒಪ್ಪಿಕೊಳ್ಳುತ್ತೀಯೋ? ಇಲ್ಲ ಪ್ರಶ್ನಿಸುತ್ತೀಯೋ?' ಎಂದು ಕೇಳುತ್ತಿತ್ತು. ಇದು ಅಫ್ಜಲ್‌ನಿಗೆ ತನ್ನ ಆವೃತ್ತಿಯ ಕತೆಯನ್ನು ಹೇಳಿಕೊಳ್ಳಲು ಸಿಕ್ಕಿದ ಕ್ಷೀಣ ಅವಕಾಶವಾಗಿತ್ತು. ಈ ದಾಖಲೆ ಅವನ ಕತೆಯನ್ನು ಅವನದೇ ಧ್ವನಿಯಲ್ಲಿ ಹೇಳುತ್ತದೆ.

ಈ ದಾಖಲೆಯಲ್ಲಿ ಪ್ರಾಸಿಕ್ಯೂಟರ್ ಮಾಡಿದ ಕೆಲವು ಆಪಾದನೆಗಳನ್ನು ಅಫ್ಜಲ್ ಸ್ವತಃ ಒಪ್ಪಿಕೊಂಡಿದ್ದಾನೆ. ತಾರೀಖ್ ಎಂಬ ವ್ಯಕ್ತಿಯನ್ನು ಭೇಟಿಯಾಗಿದ್ದು, ಆತ ಮೊಹಮದ್ ಎಂಬ ವ್ಯಕ್ತಿಯನ್ನು ಪರಿಚಯಿಸಿದ್ದು, ಹಾಗೂ ಮೊಹಮದ್ ದೆಹಲಿಗೆ ಬರಲು ಸಹಾಯ ಮಾಡಿದ್ದು, ಇಲ್ಲಿ ಅವನು ಬಿಳಿಯ ಸೆಕೆಂಡ್ ಹ್ಯಾಂಡ್ ಅಂಬಾಸಿಡರ್ ಕಾರನ್ನು ಕೊಳ್ಳಲು ನೆರವು ನೀಡಿದ್ದು.... ಎಲ್ಲವನ್ನೂ ಒಪ್ಪಿಕೊಂಡಿದ್ದಾನೆ. ಹಾಗೂ ಈ ಮೊಹಮದ್ ಐದು ಜನ ಮೃತ ಭಯೋತ್ಪಾದಕರಲ್ಲಿ ಒಬ್ಬನೆಂದೂ ಗುರುತಿಸಿದ್ದಾನೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಡೀ ಪ್ರಕರಣದಲ್ಲಿ ನಾನು ಸಂಪೂರ್ಣ ನಿರ್ದೋಷಿ ಎಂದು ಋಜುವಾತು ಪಡಿಸುವ ಪ್ರಯತ್ನವನ್ನು ಆಪಾದಿತ ಮಾಡಿಲ್ಲ ಎಂಬುದು. ಆದರೆ ಈ ವಿಧ್ವಂಸಕ ಕೃತ್ಯದಲ್ಲಿ ತನ್ನ ಪಾತ್ರವಿತ್ತು ಎಂಬುದನ್ನು ಹೇಳಿದ್ದಾನೆ. ಆದರೆ ಅಫ್ಜಲ್‌ನ ಹೇಳಿಕೆ ಈ ಕೃತ್ಯದಲ್ಲಿದ್ದ ಅವನ ಪಾತ್ರದ ಚೌಕಟ್ಟಿನ ವಿವರಣೆಯನ್ನು ನೀಡುತ್ತದೆ. ಹಾಗೆಯೇ ಏಕೆ ಇಡೀ ತನಿಖೆ/ವಿಚಾರಣೆಯಲ್ಲಿ ಅಲ್ಲಲ್ಲಿ ಕತ್ತಲಿದೆ? ಏಕೆ ನಿರ್ಣಾಯಕ ಹಂತದಲ್ಲಿ ಇದು ಅಪೂರ್ಣವಾಗಿದೆ? ಏಕೆ ಈ ಕತ್ತಲೆ-ಅಪೂರ್ಣತೆಗಳು ನಾವು ನಿರ್ಲಕ್ಷಿಸಲಾಗದಷ್ಟು ಮಹತ್ವಪೂರ್ಣವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳುವ ಮಾರ್ಗವಾಗಿದೆ. ಒಂದು ಪಕ್ಷ ಅಫ್ಜಲ್‌ನನ್ನು ನಂಬದಿದ್ದರೂ ಸಹ, ಈ ತನಿಖೆಯಲ್ಲಿ ಪೊಲೀಸ್ ವಿಶೇಷ ಘಟಕದ ಪಾತ್ರ ನಮಗೆ ಗೊತ್ತಿಲ್ಲದಿದ್ದರೂ ಸಹ, ಅಫ್ಜಲ್‌ನ ಹೇಳಿಕೆ ಬೆರಳುಮಾಡುವ ಅಂಶಗಳತ್ತ ಗಮನಿಸದೇ ಹೋದರೆ ಅದು ಅಕ್ಷಮ್ಯ ಅಲಕ್ಷ್ಯವಾಗುತ್ತದೆ. ಇವನ ಹೇಳಿಕೆಯಲ್ಲಿರುವ ಮಾಹಿತಿಗಳು ಖಚಿತವಾಗಿವೆ, ಹೆಸರು, ಸ್ಥಳ, ದಿನಾಂಕ, ಇತ್ಯಾದಿಗಳು ಸಹ. (ತನ್ನ ಕುಟುಂಬ, ಸೋದರರು, ಹೆಂಡತಿ, ಪುಟ್ಟ ಮಗು ಇವರೆಲ್ಲರೂ ಜನರಿಗೆ ಸುಲಭ ಬಲಿಪಶುಗಳಾಗುವ ಸಾಧ್ಯತೆ ಇದ್ದಾಗಲೂ ಹೀಗೆ ಹೇಳುವುದು ಅಷ್ಟು ಸುಲಭವಲ್ಲ)

ರಾಜ್‌ಮೋಹನ್ ರಾಯ್ ಎಂಬ ಸೈನ್ಯಾಧಿಕಾರಿ ನನ್ನನ್ನು ಕರೆದು ಭಯೋತ್ಪಾದಕರ ಬಗ್ಗೆ ಮಾಹಿತಿ ನೀಡುವಂತೆ ಹೇಳಿದ್ದರು. ನಾನೊಬ್ಬ ಶರಣಾಗತ ಭಯೋತ್ಪಾದಕ. ಎಲ್ಲಾ ಶರಣಾಗತ ಭಯೋತ್ಪಾದಕರೂ ಪ್ರತಿ ಭಾನುವಾರ ಮಿಲಿಟರಿ ಕ್ಯಾಂಪಿಗೆ ಹೋಗಿ ಹಾಜರಿ ಹಾಕಬೇಕಿತ್ತು. ನಾನು ನನ್ನನ್ನು ದೈಹಿಕವಾಗಿ ಹಿಂಸಿಸಿಕೊಳ್ಳಲು– ಅವನ ಪರ ದಂಡಿಸಿಕೊಳ್ಳಲು–ಇಷ್ಟವಾಗಲಿಲ್ಲ. ನನಗೆ ಪತ್ರಿಕೆಗಳಲ್ಲಿ ಸಿಕ್ಕಿದ ಸಣ್ಣಪುಟ್ಟ ಮಾಹಿತಿಗಳನ್ನು ಅವರಿಗೆ ನೀಡುತ್ತಿದ್ದೆ.

ಅಫ್ಜಲ್‌ನ ಹೇಳಿಕೆ

ನಾನು ೨೦೦೦ಇಸವಿಯಲ್ಲಿ ಜಮ್ಮು-ಕಾಶ್ಮೀರದ ಸೊಪ್ರೆ ಎಂಬಲ್ಲಿದ್ದೆ. ಅಲ್ಲಿದ್ದಾಗ ಸೈನ್ಯ ನನಗೆ ದಿನನಿತ್ಯ ಹಿಂಸೆ ಕೊಡುತ್ತಿತ್ತು, ಕೆಲವೊಮ್ಮೆ ವಾರಕ್ಕೊಂದು ಸಾರಿ. ರಾಜ್‌ಮೋಹನ್ ರಾಯ್ ಎಂಬ ಸೈನ್ಯಾಧಿಕಾರಿ ನನ್ನನ್ನು ಕರೆದು ಭಯೋತ್ಪಾದಕರ ಬಗ್ಗೆ ಮಾಹಿತಿ ನೀಡುವಂತೆ ಹೇಳಿದ್ದರು. ನಾನೊಬ್ಬ ಶರಣಾಗತ ಭಯೋತ್ಪಾದಕ. ಎಲ್ಲಾ ಶರಣಾಗತ ಭಯೋತ್ಪಾದಕರೂ ಪ್ರತಿ ಭಾನುವಾರ ಮಿಲಿಟರಿ ಕ್ಯಾಂಪಿಗೆ ಹೋಗಿ ಹಾಜರಿ ಹಾಕಬೇಕಿತ್ತು. ನಾನು ನನ್ನನ್ನು ದೈಹಿಕವಾಗಿ ಹಿಂಸಿಸಿಕೊಳ್ಳಲು– ಅವನ ಪರ ದಂಡಿಸಿಕೊಳ್ಳಲು– ಇಷ್ಟವಾಗಲಿಲ್ಲ. ನನಗೆ ಪತ್ರಿಕೆಗಳಲ್ಲಿ ಸಿಕ್ಕಿದ ಸಣ್ಣಪುಟ್ಟ ಮಾಹಿತಿಗಳನ್ನು ಅವರಿಗೆ ನೀಡುತ್ತಿದ್ದೆ. ಈ ಹಿಂಸೆಯಿಂದ ನನ್ನನ್ನು ರಕ್ಷಿಸಿಕೊಳ್ಳಲು ಜೂನ್/ ಜುಲೈ ೨೦೦೦ರಲ್ಲಿ ನಾನು ಹತ್ತಿರದ ಪಟ್ಟಣವಾದ ಬಾರಾಮುಲ್ಲಾಗೆ ವಲಸೆ ಬಂದೆ. ಇಲ್ಲಿ ವೈದ್ಯಕೀಯ ಉಪಕರಣಗಳನ್ನು ಮಾರುವ ಏಜನ್ಸಿಯನ್ನು ತೆರೆದೆ. ಇದು ಕಮಿಷನ್ ಆಧಾರಿತವಾಗಿತ್ತು. ಒಂದು ದಿನ ನಾನು ನನ್ನ ಸ್ಕೂಟರಿನಲ್ಲಿ ಹೋಗುತ್ತಿದ್ದಾಗ ಎಸ್.ಟಿ.ಎಫ್(ಸ್ಟೇಟ್ ಟಾಸ್ಕ್ ಫೋರ್ಸ್)ನ ಜನರು ನನ್ನನ್ನು ಎಳೆದುಕೊಂಡು ಹೋದರು. ಐದು ದಿನ ನಿರಂತರವಾಗಿ ಹಿಂಸೆ ಕೊಟ್ಟರು.



ನಾನು ಉಗ್ರಗಾಮಿಗಳೊಂದಿಗೆ ಮತ್ತೆ ಸೇರಿದ್ದೇನೆ ಎಂಬ ಮಾಹಿತಿಯನ್ನು ಯಾರೋ ನೀಡಿದ್ದರಂತೆ. ಮತ್ತೆ ನನ್ನನ್ನು ಕಾರ್ಯನಿರತ ಉಗ್ರಗಾಮಿಗಳ ಪಟ್ಟಿಗೆ ಸೇರಿಸಿದರು. ಈ ಮಾಹಿತಿ ನೀಡಿದವನು ನನಗೆ ಎದುರಾಗಿ, ನನ್ನ ಕಣ್ಮುಂದೆಯೇ ಬಿಡುಗಡೆಯಾಗಿ ಹೊರಗೆ ಹೋದ. ನನ್ನನ್ನು ೨೫ ದಿನ ಕಸ್ಟಡಿಯಲ್ಲಿಟ್ಟರು. ಆನಂತರ ನಾನು ಒಂದು ಲಕ್ಷ ರೂಪಾಯಿ ಕೊಟ್ಟು ಹೊರಬಂದೆ. (ಇದನ್ನು ಪೊಲೀಸ್ ವಿಶೇಷ ಘಟಕ ಧೃಢೀಕರಿಸಿದೆ). ಅನಂತರ ಎಸ್.ಟಿ.ಎಫ್ ನನಗೆ ಪ್ರಮಾಣಪತ್ರ ನೀಡಿತು ಹಾಗೂ ನನ್ನನ್ನು ವಿಶೇಷ ಪೊಲೀಸ್ ಅಧಿಕಾರಿಯನ್ನಾಗಿ ನೇಮಿಸಿತು; ನಾನು ಈ ಕೆಲಸ ಮಾಡುವುದು ಸಾಧ್ಯವಿಲ್ಲವೆಂದು ಅವರಿಗೆ ತಿಳಿದಿದ್ದರೂ ಸಹ.

ನಾನು ಪೆಹಲಾನ್‌ನ ಎಸ್.ಟಿ.ಎಫ್ ಕ್ಯಾಂಪಿನಲ್ಲಿ ಕಸ್ಟಡಿಯಲ್ಲಿದ್ದಾಗ ತಾರೀಖ್ ನನ್ನನ್ನು ಭೇಟಿಯಾಗಿದ್ದರು. ಅನಂತರ ಅವರು ಶ್ರೀನಗರದಲ್ಲಿ ನನ್ನನ್ನು ಭೇಟಿಮಾಡಿದರು, ಆಗ ತಾನು ಎಸ್.ಟಿ.ಎಫ್‌ಗಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿದರು. ಸಂಸತ್ ಭವನದ ಮೇಲೆ ನಡೆದ ದಾಳಿಯಲ್ಲಿ ಸತ್ತು ಹೋದ ಮಹಮದ್ ಅವರ ಜೊತೆಯಲ್ಲಿದ್ದ. ತಾನು ಕಾಶ್ಮೀರದ ಕೇರನ್ ಭಾಗದವನೆಂದೂ, ಮೊಹಮದ್‌ನನ್ನು ನಾನು ಡೆಲ್ಲಿಗೆ ಕರೆದುಕೊಂಡು ಹೋಗಬೇಕೆಂದೂ, ಅವನು ಸ್ವಲ್ಪ ಸಮಯದಲ್ಲೇ ಹೊರದೇಶಕ್ಕೆ ಹೊರಟು ಹೋಗುತ್ತಾನೆಂದೂ ಹೇಳಿದರು. ನನಗೆ ಏಕೆಂದು ಗೊತ್ತಿಲ್ಲ; ೧೫-೧೨-೨೦೦೦ರಲ್ಲಿ ಶ್ರೀನಗರ ಪೋಲೀಸರು ನನ್ನನ್ನು ಮತ್ತೆ ಬಂಧಿಸಿದರು. ಆಗ ನಾನು ಬಸ್ಸಿನಲ್ಲಿ ಕುಳಿತು ಮನೆಯತ್ತ ಹೊರಟಿದ್ದೆ. ನನ್ನ ವಿರುದ್ಧ ಸಾಕ್ಷಿ ಹೇಳಿರುವ ಅಕ್ಬರ್ ಡಿಸೆಂಬರ್-೨೦೦೧ ಕ್ಕೆ ಒಂದು ವರ್ಷ ಮುಂಚೆ ನನ್ನ ಅಂಗಡಿಯ ಮೇಲೆ ಧಾಳಿ ಮಾಡಿದ ಸಂದರ್ಭದಲ್ಲಿ ನನ್ನೊಂದಿಗೆ ಶೌಕತ್‌ನನ್ನು ನೋಡಿದ್ದೇನೆಂದು ಹೇಳಿದ್ದಾನೆ. ನಾನು ನನ್ನ ಅಂಗಡಿಯಲ್ಲಿ ನಕಲಿ ವೈದ್ಯಕೀಯ ಉಪಕರಣಗಳನ್ನು ಮಾರುತ್ತಿದ್ದೇನೆ ಎಂಬ ಕಾರಣ ನೀಡಿ ನನ್ನ ಅಂಗಡಿಯ ಮೇಲೆ ಧಾಳಿಮಾಡಿದ್ದ ಸಂದರ್ಭದಲ್ಲಿ ಈತನೂ ಇದ್ದ. ಈ ಸಮಯದಲ್ಲಿ ಅತನು ನನ್ನಿಂದ ೫೦೦೦ ರೂಪಾಯಿಗಳನ್ನು ಪಡೆದುಕೊಂಡಿದ್ದ.

ನನ್ನನ್ನು ವಿಶೇಷ ಘಟಕದಲ್ಲಿ ತೀವ್ರವಾಗಿ ಹಿಂಸಿಸಲಾಯಿತು. ಭೂಪ್‌ಸಿಂಗ್ ಎಂಬುವನು ನನ್ನನ್ನು ಮೂತ್ರ ಕುಡಿಯುವಂತೆ ಒತ್ತಾಯಿಸಿದ. ನಾನು ಇಲ್ಲಿಯೇ ಎಸ್.ಎ.ಆರ್. ಗಿಲಾನಿ ಮತ್ತು ಅವನ ಕುಟುಂಬವನ್ನು ನೋಡಿದ್ದು. ಗಿಲಾನಿ ಚಿಂತಾಜನಕ ಸ್ಥಿತಿಯಲ್ಲಿದ್ದ. ಅವನಿಂದ ನಿಂತುಕೊಳ್ಳುವುದೂ ಸಾಧ್ಯವಿರಲಿಲ್ಲ. ನಮ್ಮಿಬ್ಬರನ್ನೂ ಪರೀಕ್ಷೆಗಾಗಿ ವೈದ್ಯರಲ್ಲಿಗೆ ಕರೆದುಕೊಂಡು ಹೋಗಲಾಯಿತು. ಅದಕ್ಕೆ ಮುಂಚೆ ನಾವು 'ವೈದ್ಯರ ಬಳಿ ಎಲ್ಲವೂ ಸರಿಯಾಗಿದೆ' ಎಂದು ಹೇಳಬೇಕೆಂದೂ, ಇಲ್ಲದಿದ್ದರೆ ಹಿಂತಿರುಗಿದ ಮೇಲೆ ಮತ್ತೆ ಹಿಂಸೆ ಕೊಡುವುದಾಗಿಯೂ ಬೆದರಿಸುತ್ತಾ ಹೇಳಿದರು.

ಆನಂತರ ಅಫ್ಜಲ್ ಇನ್ನಷ್ಟು ಮಾಹಿತಿ ಹೇಳಲು ಅನುಮತಿ ಕೇಳಿದ.

"ಈ ನಡುವೆ ಮೃತ ಭಯೋತ್ಪಾದಕ ನನ್ನೊಂದಿಗೆ ದೆಹಲಿಗೆ ಬಂದ. ಇವನನ್ನು ನನಗೆ ವಹಿಸಿದ್ದು ತಾರೀಖ್. ಇವನು ರಕ್ಷಣಾಪಡೆಗಳ ಹಾಗೂ ಜಮ್ಮು-ಕಾಶ್ಮೀರದ ಎಸ್.ಟಿ.ಎಫ್‌ನೊಂದಿಗೆ ಕೆಲಸ ಮಾಡುತ್ತಿದ್ದಾನೆ. ಆಗ ಇವನು... 'ಮೊಹಮದ್ ಕಾರಣದಿಂದ ನಿನಗೇನಾದರೂ

ತೊಂದರೆಯಾದರೆ ನಾನು ನಿನಗೆ ಸಹಾಯ ಮಾಡುತ್ತೇನೆ. ನನಗೆ ರಕ್ಷಣಾಪಡೆ ಮತ್ತು ಎಸ್.ಟಿ.ಎಫ್‌ಗಳಲ್ಲಿ ಬಹಳಷ್ಟು ಪರಿಚಯವಿದೆ' ಎಂದು ಹೇಳಿದ್ದ. ಅಲ್ಲದೆ ಇವನು 'ಮೊಹಮದ್‌ನನ್ನು ದೆಹಲಿಗೆ ತಲುಪಿಸುವುದಷ್ಟೇ ನನ್ನ ಕೆಲಸ, ಬೇರೇನೂ ಮಾಡಬೇಕಾಗಿಲ್ಲ' ಎಂದೂ ತಿಳಿಸಿದ್ದ. ಒಂದು ಪಕ್ಷ ನಾನು ಈಗ ಈ ಕೆಲಸವನ್ನು ಮಾಡದಿದ್ದರೆ ನನ್ನನ್ನು ಬೇರೊಂದು ಕೇಸಿನಲ್ಲಿ ಸಿಕ್ಕಿಸಿ, ಒಳಹಾಕುವುದಾಗಿ ಹೇಳಿದ. ಈ ಸನ್ನಿವೇಶಗಳ ಒತ್ತಡದ ಹಿನ್ನೆಲೆಯಲ್ಲಿ ನಾನು ಮೊಹಮದ್‌ನನ್ನು ದೆಹಲಿಗೆ ಕರೆತಂದೆ; ಅವನೊಬ್ಬ ಆತಂಕವಾದಿ ಎಂದೂ ನನಗೆ ತಿಳಿಯದು".

ಈಗ ಈ ನಾಟಕದ ಕೆಲವು ಪ್ರಧಾನ ಪಾತ್ರ/ಸೂತ್ರಧಾರಿಗಳ ಪರಿಚಯ ನಮಗಾಗುತ್ತಿದೆ.... 'ಸಾಕ್ಷಿ ಅಕ್ಬರ್' (ಸಾಕ್ಷಿ ಸಂಖ್ಯೆ-೬೨); ಅಂದರೆ ಮೊಹಮದ್ ಅಕ್ಬರ್; ಹೆಡ್ ಕಾನ್ಸ್‌ಟೇಬಲ್, ಪರಿಂಪೊರಾ ಪೋಲೀಸ್ ಠಾಣೆ, ಜಮ್ಮು-ಕಾಶ್ಮೀರ ಪೋಲೀಸರ ವ್ಯಕ್ತಿ. ಈತನೇ ಅಪ್ಜಲ್‌ನನ್ನು ಬಂಧಿಸಿ-ವಸ್ತುಗಳನ್ನು ವಶಪಡಿಸಿಕೊಂಡಿದಕ್ಕೆ ಸಾಕ್ಷಿದಾರ. ಈ ನಡುವೆ ಅಪ್ಜಲ್ ಸುಪ್ರೀಂಕೋರ್ಟಿನಲ್ಲಿ ತನ್ನ ವಕೀಲರಾಗಿದ್ದ ಸುಶಿಲ್‌ಕುಮಾರ್‌ಗೆ ಬರೆದ ಪತ್ರದಲ್ಲಿ ಒಂದು ವಿಶಿಷ್ಟ ಅಂಶವನ್ನು ನಮೂದಿಸಿದ್ದ. ಹನ್ನೊಂದರ ಇವನ ಬಂಧನ, ಸಾಮಗ್ರಿಗಳ ಮುಟ್ಟುಗೋಲಿಗೆ ಸಾಕ್ಷಿ ಹಾಕಿದ್ದ ಈ ಅಕ್ಬರ್ ಇದನ್ನು ನ್ಯಾಯಾಲಯದ ಮುಂದೆ ಧೃಡೀಕರಿಸುವ ಸಾಕ್ಷಿ ಹೇಳಲು ಬಂದಾಗ; ಅಪ್ಜಲ್‌ಗೆ 'ನಿನ್ನ ಕುಟುಂಬ ಚೆನ್ನಾಗಿದೆ' ಎಂದು ಕಾಶ್ಮೀರಿ ಭಾಷೆಯಲ್ಲಿ ಹೇಳಿದ್ದ. ಅಪ್ಜಲ್ ತಕ್ಷಣ ಇದೊಂದು ಪರೋಕ್ಷ ಬೆದರಿಕೆ ಎಂದು ಗುರುತಿಸಿದ. ಬಂಧನದ ನಂತರ ಇವನನ್ನು ಪಾರಿಂಪೊರ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾಗ ಅಲ್ಲಿ ಚೆನ್ನಾಗಿ ಥಳಿಸಿದ್ದಲ್ಲದೆ, 'ನಮ್ಮೊಂದಿಗೆ ಸಹಕರಿಸದೆ ಹೋದರೆ ನಿನ್ನ ಹೆಂಡತಿ ಮಕ್ಕಳು ಭೀಕರ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದು ನೇರವಾಗಿ ಹೇಳಿದ್ದರು. ಎಂಬುದನ್ನೂ ಹೇಳಿದ್ದ. (ಈಗಾಗಲೇ ನಮಗೆ ತಿಳಿದಿರುವಂತೆ ಅಪ್ಜಲ್‌ನ ಸೋದರ ಹಿಲಾಲ್‌ನನ್ನು ಆ ಅವಧಿಯಲ್ಲಿ ಕಾನೂನು ಬಾಹಿರವಾಗಿ ವಿಶೇಷ ಕಾರ್ಯಾಚರಣೆ ಪಡೆದು ಹಿಡಿದು ಹಾಕಿತ್ತು).

ಈ ಪತ್ರದಲ್ಲಿ ಅಪ್ಜಲ್ ಎಸ್.ಟಿ.ಎಫ್.ಕ್ಯಾಂಪಿನಲ್ಲಿ ತನಗೆ ಹೇಗೆ ಚಿತ್ರ ಹಿಂಸೆ ನೀಡಿದರು ಎಂಬುದನ್ನು ವಿವರಿಸಿದ್ದ. ಅವನ ಜನನಾಂಗಕ್ಕೆ ಎಲೆಕ್ಟ್ರೋಡ್‌ಗಳನ್ನು ತಗುಲಿಸಿ ಆಘಾತ ಮಾಡಲಾಗಿತ್ತು, ಗುದದ್ವಾರಕ್ಕೆ ಹಸಿಮೆಣಸಿನ ಕಾಯಿಗಳನ್ನು ತುರುಕಿ; ಪೆಟ್ರೋಲ್ ಹೊಯ್ಯಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಆತ ದ್ರಾವಿಂದರ್ ಸಿಂಗ್ ಎಂಬ ಡಿ.ಎಸ್.ಪಿ.ಯನ್ನು ಹೆಸರಿಸಿದ್ದಾನೆ. ಇವನು ದೆಹಲಿಯಲ್ಲಿ ತನ್ನದೊಂದು 'ಸಣ್ಣಕೆಲಸ' ಮಾಡಿಕೊಡಬೇಕೆಂದು ನನ್ನನ್ನು ಒತ್ತಾಯಿಸಿದ್ದ ಎಂದು ಹೇಳಿದ್ದಲ್ಲದೆ, ಆರೋಪ ಪಟ್ಟಿಯಲ್ಲಿ ನಮೂದಿಸಿರುವ ಫೋನ್ ನಂಬರ್‌ಗಳು ಎಸ್.ಟಿ.ಎಫ್.ಕ್ಯಾಂಪಿನಲ್ಲಿಯೇ ಹುಡುಕಿದರೆ ಸಿಗುತ್ತವೆ ಎಂದೂ ಅಪ್ಜಲ್ ಹೇಳಿದ್ದ.

ಅಪ್ಜಲ್‌ನ ಈ ಕತೆ ನಿಜಕ್ಕೂ ಕಾಶ್ಮೀರ ಕಣಿವೆಯಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಕೆಲವು ಹೊಳಹುಗಳನ್ನು ನೀಡುತ್ತದೆ. ಕಾಶ್ಮೀರದ ಸ್ಥಿತಿಗತಿಯ ಬಗ್ಗೆ ಇರುವ ವಿವಿಧ ಆವೃತ್ತಿಗಳಲ್ಲಿ ರಕ್ಷಣಾ ಪಡೆಗಳು -ಆತಂಕವಾದಿಗಳ ನಡುವೆ ನಡೆಯುತ್ತಿರುವ ಹೋರಾಟದಲ್ಲಿ ಗುಂಡಿನ ಚಕಮುಕಿಯಲ್ಲಿ ಕೊಲ್ಲಲ್ಪಡುತ್ತಿರುವ ಮುಗ್ಧ



ನಾಗರಿಕರ ಬಗ್ಗೆ ತಿಳಿಯುವುದು ತೀರಾ ಕಡಿಮೆ. ಆದರೆ ಮತ್ತೊಂದು ಮುಖದಲ್ಲಿ ಕಾಶ್ಮೀರ: ಬರೀ ಭಯೋತ್ಪಾದಕರು, ದೇಶಭ್ರಷ್ಟರು, ರಕ್ಷಣಾಪಡೆಗಳು, ಎರಡೂ ಕಡೆಯಿಂದ ತಿವಿಯುವವರು, ಮಾಹಿತಿದಾರರು, ಬೇಹುಗಾರರು, ಬ್ಲಾಕ್ ಮೇಲರ್‌ಗಳು, ಸುಲಿಗೆಕೋರರು, ಎರಡೂ ದೇಶಗಳ ಗುಪ್ತಾಚಾರ ದಳಗಳು, ಮಾನವ ಹಕ್ಕುಗಳ ಕಾರ್ಯಕರ್ತರು, ಎನ್‌ಜಿಓಗಳು ಹಾಗೂ ಅಪಾರ ಹಣ-ಆಯುಧಗಳಿಂದ ಕಿಕ್ಕಿರಿದಿರುವ ಕಣಿವೆಯಾಗಿ ಬಿಂಬಿಸಲ್ಪಡುತ್ತಿದೆ. ಈ ಎರಡೂ ಆವೃತ್ತಿಗಳ ನಡುವೆ ಎಲ್ಲಿಯೂ ಸ್ಪಷ್ಟವಾದ ಗಡಿರೇಖೆ ಎಳೆಯಲು ಸಾಧ್ಯವಿಲ್ಲ. ಯಾರು? ಯಾರಿಗಾಗಿ? ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದು ಅಷ್ಟು ಸುಲಭವಲ್ಲ.

ಸತ್ಯ ಎಂಬುದು ಕಾಶ್ಮೀರ ಕಣಿವೆಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಅಪಾಯಕಾರಿ. ಆಳಕ್ಕೆ ಅಗೆದಷ್ಟೂ ಬರೀ ಕೆಟ್ಟದ್ದೇ ಸಿಗುತ್ತದೆ. ತಳದಲ್ಲಿ ಅಪ್ಜಲ್ ಅನುಭವಿಸಿದಂಥ ಎಸ್.ಓ.ಜಿ ಮತ್ತು ಎಸ್.ಟಿ.ಎಫ್‌ಗಳ ನಡವಳಿಕೆಗಳಿರುತ್ತವೆ. ಇಲ್ಲಿ ಅತ್ಯಂತ ಕ್ರೂರವಾದ, ಅಶಿಸ್ತಿನ ಮತ್ತು ಭಯಜನಕ ಶಕ್ತಿಗಳು ರಕ್ಷಣಾ ಪಡೆಯ ವ್ಯವಸ್ಥೆಯಡಿಯಲ್ಲಿ ಕಾರ್ಯನಿರತವಾಗಿವೆ. ಇದು ಸಾಮಾನ್ಯವಾದ ಸೈನಿಕ ಕಾರ್ಯಚರಣೆಯಾಗಿರದೆ ಪೋಲೀಸರು, ಶರಣಾಗತ ಆತಂಕವಾದಿಗಳು, ದೇಶಭ್ರಷ್ಟರು ಹಾಗೂ ಇನ್ನಿತರ ಕ್ರಿಮಿನಲ್‌ಗಳು ವ್ಯವಹರಿಸುವ ಜಾಗವಾಗಿದ್ದು ಇಂಥ ಸಂದಿಗ್ಧ ವಲಯದಲ್ಲಿ ರಕ್ಷಣಾಪಡೆ ಕಾರ್ಯನಿರತವಾಗಿದೆ. ಇದು ಕಾಶ್ಮೀರದ ಸ್ಥಳೀಯರಿಗಾಗಿ; ಅದರಲ್ಲೂ ಗ್ರಾಮಾಂತರ ಕಾಶ್ಮೀರಿಗಳಿಗಾಗಿ ಪ್ರಾರ್ಥಿಸಬೇಕಿದೆ. ಈ ಪಡೆಗಳ ಮೊದಲ ಬಲಿಪಶುಗಳೆಂದರೆ ೯೦ರ ದಶಕದ ಮೊದಲ ವರ್ಷಗಳ ಅರಾಜಕ ಧಂಗೆಗಳಲ್ಲಿ ಭಾಗಿಯಾಗಿದ್ದ ಸಾವಿರಾರು ಮಂದಿ ಕಾಶ್ಮೀರಿ ಯುವಕರು ಹಾಗೂ ಈವರೆಗೂ ಶರಣಾಗತರಾದವರು ಮತ್ತು ಸಾಮಾನ್ಯ ಬದುಕನ್ನು ಕಂಡುಕೊಳ್ಳಲು ಹೆಣಗುತ್ತಿರುವವರು.

೧೯೯೦ರಲ್ಲಿ ಅಪ್ಜಲ್ ಗಡಿದಾಟಿ ಸಶಸ್ತ್ರ ತರಬೇತಿಗಾಗಿ ಹೋಗಿದ್ದ. ಆದರೆ ಅಲ್ಲಿನ ಅನುಭವಗಳಿಂದ ಭ್ರಮಾನಿರಸನಾಗಿ; ಯಾವ ತರಬೇತಿಯನ್ನೂ ಪಡೆಯದೆ ಹಿಂತಿರುಗಿದ. ಆಗ ಅವನಿಗೆ ಇಪ್ಪತ್ತು ವರ್ಷ ವಯಸ್ಸು. ಹಿಂತಿರುಗಿದವನು ಬಂದೂಕದ ತಂಟೆಯನ್ನು ಬದಿಗೆ ಸರಿಸಿ ದೆಹಲಿ ವಿಶ್ವವಿದ್ಯಾಲಯಕ್ಕೆ ದಾಖಲಾದ. ತಾನು ಎಂದೂ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿಲ್ಲದಿದ್ದರೂ ೧೯೯೩ ರಲ್ಲಿ ಸ್ವಯಂ ಪ್ರೇರಣೆಯಿಂದ ಬಿಎಸ್‌ಎಫ್‌ಗೆ ಶರಣಾಗತನಾದ. ಅಲ್ಲಿಂದ ಅವನ ಸಮಸ್ಯೆಗಳು ಆರಂಭವಾದವು. ಇವನ ಶರಣಾಗತಿಯನ್ನು ಅವರು ಅಪರಾಧವೆಂದು ಭಾವಿಸಿದರು. ಅವನ ಬದುಕು ನರಕವಾಯಿತು.

ಅಪ್ಜಲ್‌ನ ಕತೆಯಿಂದ ಯುವ ಕಾಶ್ಮೀರಿಗಳು ಕಲಿಯುವ ಪಾಠವನ್ನು ನಾವು ದೂಷಿಸುವುದಾದರೆ ಅದು ಮೂರ್ಖತನ ಮಾತ್ರವಲ್ಲ ಹುಚ್ಚಿನ ಪರಮಾವಧಿಯಾಗುತ್ತದೆ. ಇರುವ ಆಯುಧಗಳನ್ನು ಒಪ್ಪಿಸಿ ಶರಣಾಗತರಾದರೆ; ಕೂಡಲೇ ಅವರು ಅಸಂಖ್ಯಾತ ಕ್ರೌರ್ಯಗಳಿಗೆ ತಮ್ಮನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದೇ ಏನು ನಮ್ಮ ಪ್ರಭುತ್ವ ಅವರಿಗೆ ಕೊಡುವ ಕಾಣಿಕೆ?

ಅಪ್ಜಲ್‌ನ ಕತೆ ಕಾಶ್ಮೀರಿಗಳಲ್ಲಿ ಕ್ರೋಧ ಹುಟ್ಟಿಸುವುದೇಕೆಂದರೆ ಅದು ಅವರ ಕತೆ ಸಹ. ಅವನೊಂದಿಗೆ ಏನು ಸಂಭವಿಸಿದೆಯೋ ಅದು ಬೇರೆಯವರಿಗೂ ಸಂಭವಿಸಿದೆ ಹಾಗೂ ಸಂಭವಿಸುತ್ತಲೇ ಇರುತ್ತದೆ. ಇವರೊಂದಿಗೆ ಮಾತ್ರವಲ್ಲ ಸಾವಿರಾರು ಕಾಶ್ಮೀರಿ ಯುವಕರಿಗೆ ಮತ್ತು ಅವರ ಕುಟುಂಬಗಳೊಂದಿಗೆ ಸಹ. ಅಪ್ಜಲ್‌ನಿಗೂ ಮತ್ತು ಇವರಿಗೂ ಇರುವ ಒಂದೇ ವ್ಯತ್ಯಾಸವೆಂದರೆ ಇವರು ಜಂಟಿ ವಿಚಾರಣಾ ಕೇಂದ್ರಗಳ ಕತ್ತಲ-ಕೋಳಕು ಕೋಣೆಗಳಲ್ಲಿ, ಸೈನಿಕ ಶಿಬಿರಗಳಲ್ಲಿ ಮತ್ತು ಪೋಲೀಸ್ ಠಾಣೆಗಳಲ್ಲಿ ಹಿಂಸಿಸಲ್ಪಡುತ್ತಾರೆ. ಎಲ್ಲಿ ಅವರನ್ನು ದಹಿಸುತ್ತಾರೋ, ಥಳಿಸುತ್ತಾರೋ, ಕರಂಟ್ ಕೊಡುತ್ತಾರೋ, ಬ್ಲಾಕ್ ಮೇಲ್ ಮಾಡುತ್ತಾರೋ ಹಾಗೂ ಕೊಲ್ಲುತ್ತಾರೋ ಅಲ್ಲಿ. ಕೊನೆಗೆ ಯಾರಾದರೂ ದಾರಿಹೋಕರು ಗುರುತಿಸಲಿ ಎಂದು ಟ್ರಕ್‌ಗಳ ಕೆಳಗೆ ಹೆಣಗಳನ್ನು ಬಿಸಾಕುತ್ತಾರೋ ಅಲ್ಲಿ. ಆದರೆ ಅಪ್ಜಲ್‌ನ ಕತೆ ಹೀಗಲ್ಲ..., ಇವನ ಕತೆ ಮಧ್ಯಯುಗೀಯ ನಾಟಕದ ತುಣುಕಿನಂತೆ ರಾಷ್ಟ್ರೀಯ ರಂಗಭೂಮಿಯ ಮೇಲೆ ಹಾಡು ಹಗಲಿನ ಬೆಳ್ಳಂಬೆಳಕಿನಲ್ಲಿ 'ನ್ಯಾಯೋಚಿತ ವಿಚಾರಣೆ' ಎಂಬ ಕಾನೂನಿನ ಹೇಳಿಕೆಯಡಿಯಲ್ಲಿ ಅಭಿನಯಿಸಲ್ಪಟ್ಟಿತು... 'ಪತ್ರಿಕಾ ಸ್ವಾತಂತ್ರ್ಯದ' ಶೂನ್ಯ ಸಂಪಾದನೆಯೊಂದಿಗೆ... ಪ್ರಜಾಪ್ರಭುತ್ವದ ಎಲ್ಲಾ ವೈಭವ ಹಾಗೂ ಕ್ರಿಯಾವಿಧಿಗಳೊಂದಿಗೆ.

ಒಂದು ಪಕ್ಷ ಅಪ್ಜಲ್‌ನನ್ನು ಗಲ್ಲಿಗೇರಿಸಿಯೇ ಬಿಟ್ಟರೆ ಒಂದು ಪ್ರಶ್ನೆ ಉತ್ತರವಿಲ್ಲದೇ ಉಳಿದು ಹೋಗುತ್ತದೆ; ಭಾರತದ ಸಂಸತ್ತಿನ ಮೇಲೆ ದಾಳಿ ಮಾಡಿದ್ದು ಯಾರು? ಅದು ಲಷ್ಕರ್-ಎ-ತೊಯ್ಬಾವೇ? ಜೈಷ್-ಎ-ಮೊಹಮದ್ ಸಂಘಟನೆಯೇ? ಅಥವಾ ಈ ದೇಶದ ಹೃದಯದಾಳದಲ್ಲೆಲ್ಲೋ ಇದು ಇರಬಹುದೇ? ನಮ್ಮಂತೆ ಸುಂದರವಾಗಿ; ಸೂಕ್ಷ್ಮವಾಗಿ; ವೈವಿಧ್ಯಮಯವಾಗಿ; ಕಠಿಣವಾಗಿ ಯೋಚಿಸುವ, ಬದುಕುವ, ಪ್ರೀತಿಸುವ ಅಥವಾ ದ್ವೇಷಿಸುವ ಹೃದಯಗಳಲ್ಲೆಲ್ಲಾದರೂ....

ಡಿಸೆಂಬರ್ ೧೩ ಸಂಸತ್ ಭವನದ ಮೇಲೆ ನಡೆದ ದಾಳಿಯ ಬಗ್ಗೆ ಸಂಸದೀಯ ತನಿಖೆಯಾಗಬೇಕಿತ್ತು. ಆದರೆ ಇದು ಇನ್ನೂ ಬಾಕಿ ಇದೆ. ಆದ್ದರಿಂದ ಅಸಹಾಯಕ ಸ್ಥಿತಿಯಲ್ಲಿರುವ ಅಪ್ಜಲ್‌ನ ಕುಟುಂಬಕ್ಕೆ ರಕ್ಷಣೆ ನೀಡಬೇಕಾಗಿದೆ. ಏಕೆಂದರೆ ಇವರು ನಿರ್ದಯ ವ್ಯವಸ್ಥೆಯ ರುದ್ರ ನಾಟಕದಲ್ಲಿ ಸುಲಭಸಾಧ್ಯ ಒತ್ತೆಯಾಳುಗಳಾಗಿದ್ದಾರೆ.

ಶೇಕಡಾ ಹತ್ತು ಅಭಿವೃದ್ಧಿ ದರವಿದ್ದರೂ...., ನಿಜವಾಗಿಯೂ ಏನು ನಡೆದಿದೆ ಎಂದು ತಿಳಿಯದೆ ಮೊಹಮದ್ ಅಪ್ಜಲ್‌ನನ್ನು ಗಲ್ಲಿಗೇರಿಸುವುದು ಎಂದೂ ಮರೆಯಲಾಗದ, ಕ್ಷಮಿಸಲಾಗದ ಮತ್ತು ಕ್ಷಮಿಸಬಾರದ ದುಷ್ಕೃತ್ಯವಾಗುತ್ತದೆ. □

ಕಳೆದ ತಿಂಗಳಲ್ಲಿ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳಲ್ಲಿ ನಡೆದ ದಲಿತರ ಪ್ರತಿಭಟನೆಗಳು, ಏಕಾಏಕಿ ಪ್ರಕಟವಾದದ್ದಲ್ಲ ಎಂಬ ಅಂಶವನ್ನು ಮನಗಾಣಬೇಕಾಗಿದೆ. ಕಳೆದ ಒಂದು ವರ್ಷದಿಂದ ಅಂಬೇಡ್ಕರ್‌ರವರ ಅನುಯಾಯಿಗಳೊಡನೆ ಮತ್ತು ದೇಶದ ದಲಿತರೊಡನೆ ನಡೆಯುತ್ತಿರುವ ಅನ್ಯಾಯಗಳನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ದಲಿತರ ಇಂದಿನ ಆಕ್ರೋಶಗಳಿಗೆ ಕಾರಣ ತಿಳಿಯುತ್ತದೆ. ಆದಾಗ್ಯೂ ಈ ಬಾರಿಯ ಪ್ರತಿಭಟನೆಯಲ್ಲಿ ದಲಿತರ ಆಕ್ರೋಶ ಮುಗಿಲು ಮುಟ್ಟಿದ್ದನ್ನು ನೋಡಿದ್ದೇವೆ. ಅಂಬೇಡ್ಕರ್ ಬೌದ್ಧ ಧಮ್ಮವನ್ನು ಸ್ವೀಕರಿಸಿದ ಅಕ್ಟೋಬರ್ ೨ ರಂದು, ಅಂಬೇಡ್ಕರ್ ಮತಾಂತರ ಪ್ರಕ್ರಿಯೆಗೆ ಚಾಲನೆ ನೀಡಿದ ಅಕ್ಟೋಬರ್ ೧೪ ರಂದು, ಈ ಸಂದರ್ಭಗಳನ್ನು ಆಚರಿಸಲು ಮುಂಬೈ, ನಾಗಪುರಗಳಲ್ಲಿ ಲಕ್ಷಾಂತರ ಜನ ಸೇರಿದ್ದರೂ, ಆ ವೇಳೆಗೆ ಖೈರಲಾಂಜಿ ಪ್ರಕರಣ ನಡೆದು ಹಲವು ದಿನಗಳೇ ಕಳೆದಿದ್ದರೂ ಸಹ ಯಾವುದೇ ಗಲಭೆಗಳಾಗಿರಲಿಲ್ಲ.

ಖೈರಲಾಂಜಿ ಪ್ರಕರಣದ ವಿರುದ್ಧ ಪ್ರತಿಭಟನೆ ಶುರುವಾದದ್ದು ಘಟನೆ ನಡೆದ ಒಂದು ತಿಂಗಳ ನಂತರ. ನಾಗಪುರ ಅಮರಾವತಿ ಮತ್ತು ಯವತ್ಮಾಳ್‌ಗಳಲ್ಲಿ ದಲಿತರ ಪ್ರತಿಭಟನೆಗಳನ್ನು ಹತ್ತಿಕ್ಕಲು ತಮ್ಮ ಎಲ್ಲಾ ಸಾಮರ್ಥ್ಯವನ್ನು ಉಪಯೋಗಿಸಿದ ಪೋಲೀಸ್ ಇಲಾಖೆ, ಮತ್ತು ದಲಿತರ ಬೇಡಿಕೆಗಳನ್ನು ಗಮನಿಸದೆ ನಿರ್ಲಕ್ಷಿಸಿದ ಆಡಳಿತಾಧಿಕಾರಿಗಳ ವರ್ತನೆ ದಲಿತರ ಆಕ್ರೋಶಕ್ಕೆ ಪ್ರಮುಖ ಕಾರಣವಾಗಿ ಪರಿಣಮಿಸಿತ್ತು. ಆದರೆ ಈ ಪ್ರತಿಭಟನಾ ಹೋರಾಟಕ್ಕೆ ಒಂದು ತಿರುವು ಕಂಡು ಬಂದಿದ್ದು, ಕಾನ್ಪುರದಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ವಿರೂಪಗೊಳಿಸಿದ ಪ್ರಕರಣ. ಅಂಬೇಡ್ಕರ್ ಪರಿನಿರ್ವಾಣದ ೫೦ ನೆಯ ವಾರ್ಷಿಕದ ಒಂದು ವಾರದ ಮುನ್ನ ನಡೆದ ಈ ಘಟನೆ ದಲಿತ ಸಮುದಾಯವನ್ನು ಕೆರಳಿಸಿದ್ದು ಅಚ್ಚರಿಯ ಅಂಶವೇನಲ್ಲ. ಈ ಸಂಬಂಧದಲ್ಲಿ ಮಾಧ್ಯಮಗಳೂ ಸಹ ಪ್ರತಿಭಟನಾಕಾರರ ಬಗ್ಗೆ ವರದಿ ಮಾಡಿದ್ದವೇ ಹೊರತು, ಅವರ ಮೇಲೆ ಪೋಲೀಸರು ಮಾಡಿದ ಆಕ್ರಮಣವನ್ನಾಗಲೀ, ಪೋಲೀಸರ ಗುಂಡೇಟಿಗೆ ಬಲಿಯಾದ ದಲಿತ ಯುವಕನ ಬಗ್ಗೆಯಾಗಲೀ, ಯವತ್ಮಾಳ್‌ನಲ್ಲಿ ಪೋಲೀಸರು ರಾತ್ರೋರಾತ್ರಿ ೫೦ ಜನ ಅಮಾಯಕ ದಲಿತ ಯುವಕರನ್ನು ಯಾವುದೇ ಕಾರಣ, ಸಾಕ್ಷ್ಯಾಧಾರಗಳಿಲ್ಲದೆ ಬಂಧಿಸಿ ಕರೆದೊಯ್ದದ್ದನ್ನಾಗಲೀ ವರದಿ ಮಾಡಲಿಲ್ಲ. ಸಾವಿರಾರು ದಲಿತ ಯುವಕರು ತಮ್ಮಲ್ಲಿ ಸುಪ್ತವಾಗಿದ್ದ ಆಕ್ರೋಶದ ಕಿಡಿಗಳಿಗೆ ಜೀವ ನೀಡುವಂತೆ ಪ್ರತಿಭಟನಾ ಹೋರಾಟ ನಡೆಸಲು ಕಾರಣ ಇಲ್ಲದಿಲ್ಲ. ಖೈರಲಾಂಜಿ ಪ್ರಕರಣವನ್ನು ಅವಲೋಕಿಸಿದಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ.

ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯಲ್ಲಿ, ನಾಗಪುರದಿಂದ ನೂರು ಕಿಲೋಮೀಟರ್ ದೂರದಲ್ಲಿರುವ ಗ್ರಾಮ ಖೈರಲಾಂಜಿಯಲ್ಲಿ, ೧೨೫ ಮನೆಗಳಿದ್ದು ಬಹುತೇಕ ಒ.ಬಿ.ಸಿಗಳು ಇಲ್ಲಿ ನೆಲೆಸಿದ್ದಾರೆ. ಎಲ್ಲ ಗ್ರಾಮಗಳಲ್ಲೂ ಇರುವಂತೆ ಒಂದು ಮುಖ್ಯ ವೃತ್ತ ಕಂಡುಬರುತ್ತದೆ. ಇಲ್ಲಿ ಶಾಲೆ, ಒಂದು ಬಾವಿ, ಗ್ರಾಮ ಪಂಚಾಯ್ತಿ ಕಾರ್ಯಾಲಯ, ಗ್ರಾಮ ಸಭಾಂಗಣ ಎಲ್ಲವು ಕಂಡು ಬರುತ್ತವೆ. ಈ ವೃತ್ತದಲ್ಲಿ ನಡೆಯುವ ಯಾವುದೇ ಘಟನೆ ಇಡೀ ಗ್ರಾಮದ ಜನತೆಯ ಗಮನಕ್ಕೆ ಬಾರದಿರುವುದಿಲ್ಲ. ಏಕೆಂದರೆ ಈ ವೃತ್ತದಲ್ಲಿ ನಡೆಯುವ ಯಾವುದೇ ಘಟನೆ ಇಡೀ ಗ್ರಾಮದ ಜನತೆಯ ಗಮನಕ್ಕೆ ಬಾರದಿರುವುದಿಲ್ಲ. ಏಕೆಂದರೆ ಈ ವೃತ್ತ ಖೈರಲಾಂಜಿ ಗ್ರಾಮದ ಕೇಂದ್ರ ಸ್ಥಾನ. ಆದಾಗ್ಯೂ ಸೆಪ್ಟೆಂಬರ್ ೨೯,೧೦೦೬ ರಂದು ನಡೆದ ಘಟನೆಯನ್ನು ನಾವು ನೋಡಿಯೇ ಇಲ್ಲ ಎಂದು ಹೇಳುವ ಭೂಪರೂ ಈ ಗ್ರಾಮದಲ್ಲಿದ್ದಾರೆ. ಆ ದಿನ ನಡೆದದ್ದಾದರೂ ಏನು?

ಕೆರಳಿದ ದಲಿತ ಸ್ವಾಭಿಮಾನ

ಖೈರಲಾಂಜಿ ಪ್ರಕರಣದ ವಿರುದ್ಧ ಪ್ರತಿಭಟನೆ ಶುರುವಾದದ್ದು ಘಟನೆ ನಡೆದ ಒಂದು ತಿಂಗಳ ನಂತರ. ನಾಗಪುರ ಅಮರಾವತಿ ಮತ್ತು ಯವತ್ಮಾಳ್‌ಗಳಲ್ಲಿ ದಲಿತರ ಪ್ರತಿಭಟನೆಗಳನ್ನು ಹತ್ತಿಕ್ಕಲು ತಮ್ಮ ಎಲ್ಲಾ ಸಾಮರ್ಥ್ಯವನ್ನು ಉಪಯೋಗಿಸಿದ ಪೋಲೀಸ್ ಇಲಾಖೆ, ಮತ್ತು ದಲಿತರ ಬೇಡಿಕೆಗಳನ್ನು ಗಮನಿಸದೆ ನಿರ್ಲಕ್ಷಿಸಿದ ಆಡಳಿತಾಧಿಕಾರಿಗಳ ವರ್ತನೆ ದಲಿತರ ಆಕ್ರೋಶಕ್ಕೆ ಪ್ರಮುಖ ಕಾರಣವಾಗಿ ಪರಿಣಮಿಸಿತ್ತು. ಆದರೆ ಈ ಪ್ರತಿಭಟನಾ ಹೋರಾಟಕ್ಕೆ ಒಂದು ತಿರುವು ಕಂಡು ಬಂದಿದ್ದು, ಕಾನ್ಪುರದಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ವಿರೂಪಗೊಳಿಸಿದ ಪ್ರಕರಣ. ಅಂಬೇಡ್ಕರ್ ಪರಿನಿರ್ವಾಣದ ೫೦ನೆಯ ವಾರ್ಷಿಕದ ಒಂದು ವಾರದ ಮುನ್ನ ನಡೆದ ಈ ಘಟನೆ ದಲಿತ ಸಮುದಾಯವನ್ನು ಕೆರಳಿಸಿದ್ದು ಅಚ್ಚರಿಯ ಅಂಶವೇನಲ್ಲ.

ನಾ. ದಿವಾಕರ



ಸೆಪ್ಟೆಂಬರ್ ೨೯ರ ಸಂಜೆ ಸುಮಾರು ೬ ಗಂಟೆಯ ಹೊತ್ತಿನಲ್ಲಿ ಸುಮಾರು ೪೦ ಜನ ಕುನ್‌ಬಿ ಸಮುದಾಯದ ಯುವಕರು ಭಯ್ಯಾಲಾಲ್‌ನ ಗುಡಿಸಲಿಗೆ ನುಗ್ಗಿ, ಮನೆಯಲ್ಲಿದ್ದ ಭಯ್ಯಲಾಲ್‌ನ ಪತ್ನಿ ೪೦ ವರ್ಷದ ಸುರೇಖಾ, ೧೭ ವರ್ಷದ ಮಗಳು ಪ್ರಿಯಾಂಕ, ೧೯ ವರ್ಷದ ಮಗ ರೋಷನ್ ಮತ್ತು ೨೧ ವರ್ಷದ ಇನ್ನೊಬ್ಬ ಮಗ ಸುಧೀರ್, ಈ ನಾಲ್ಕೂ ಜನರನ್ನು ಗುಡಿಸಿಲಿನಿಂದ ಹೊರಗೆಳೆದು, ಅವರನ್ನು ಬೆತ್ತಲೆಗೊಳಿಸಿ, ಗ್ರಾಮದ ವೃತ್ತದಲ್ಲಿ ಮೆರವಣಿಗೆ ಮಾಡಿ, ಇಬ್ಬರು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಲಾಯಿತು. ಸೈಕಲ್ ಚೈನು ಮತ್ತಿತರ ಮಾರಕ ವಸ್ತುಗಳಿಂದ ನಾಲ್ಕೂ ಜನರನ್ನು ಹೊಡೆದು, ಅವರು ತಪ್ಪಿಸಿಕೊಳ್ಳಲಾರದಂತೆ ಕಾಲುಗಳನ್ನು ಮುರಿಯಲಾಯಿತು. ಈ ಎಲ್ಲಾ ಘಟನೆಗಳನ್ನು, ಆಗ ತಾನೇ ಹೊಲದಿಂದ ಕೆಲಸ ಮುಗಿಸಿ ಬರುತ್ತಿದ್ದ ಭಯ್ಯಾಲಾಲ್ ದೂರದಲ್ಲಿ ನಿಂತು ನೋಡುತ್ತಲೇ ಇದ್ದ. ಈ ಆಕ್ರಮಣವನ್ನು ತಡೆಯುವ ಶಕ್ತಿಯಾಗಲೀ, ಸಾಮರ್ಥ್ಯವಾಗಲೀ, ಬೆಂಬಲವಾಗಲೀ ಆತನಿಗಿರಲಿಲ್ಲ. ನಾಲ್ಕೂ ಜನರನ್ನು ಎತ್ತಿನ ಗಾಡಿಯಲ್ಲಿ ಕೊಂಡೊಯ್ಯಲಾಯಿತು. ಮಾರನೆಯ ದಿನ ಭಯ್ಯಾಲಾಲನ ಹೆಂಡತಿ, ಪುತ್ರಿ ಮತ್ತು ಒಬ್ಬ ಪುತ್ರನ ನಗ್ನ ಶವಗಳು ಊರಾಚೆಯ ಕಾಲುವೆಯ ಬಳಿ ದೊರೆತವು.

ಈ ಘಟನೆಯನ್ನು ಕಣ್ಣಾರೆ ನೋಡುತ್ತಿದ್ದರೂ ಅಸಹಾಯಕನಂತಿದ್ದ ಭಯ್ಯಾಲಾಲ್ ತನ್ನ ರಕ್ಷಣೆಗಾಗಿ ಬಚ್ಚಿಟ್ಟುಕೊಂಡು ಊರಿನೊಳಗೆ ಅವರಿವರ ಸಹಾಯ ಬೇಡಿದ ನಂತರ ಕೆಲವು ದಲಿತ ಕಾರ್ಯಕರ್ತರು ಪೋಲೀಸರಿಗೆ ದೂರು ನೀಡುವುದಕ್ಕೆ ಸಹಾಯ ಮಾಡಿದ್ದರು. ಆಗಲೇ ಕತ್ತಲಾಗಿದ್ದರಿಂದ ಯಾವುದೇ ಮಹಜರು ಸಾಧ್ಯವಿಲ್ಲವೆಂದು ಪೋಲೀಸ್ ಪೇದೆ ಜಾರಿಕೊಂಡಿದ್ದನ್ನು ಅಲ್ಲಿನ ದಲಿತ ಯುವಕರು ಖಂಡಿಸುತ್ತಾರೆ. ಇದಕ್ಕೆ ಪೂರಕವಾಗಿ ದೂರು ನೀಡಿದ ನಂತರವೂ ಪೋಲೀಸರು ಯಾವುದೇ ಕ್ರಮ ಕೈಗೊಳ್ಳದಿದ್ದುದು ದಲಿತರ ಬಗ್ಗೆ ಆಡಳಿತ ಯಂತ್ರಗಳಿಗಿರುವ ನಿರ್ಲಕ್ಷವನ್ನು ತೋರಿಸುತ್ತದೆ ಎನ್ನುತ್ತಾರೆ ಸುರೇಶ್ ಸಾಗರ್ ಮರಣೋತ್ತರ ಪರೀಕ್ಷೆಯಲ್ಲೂ ಯುವತಿಯ ಮೇಲೆ ಅತ್ಯಾಚಾರ ನಡೆದಿರಬಹುದಾದ ಸಾಧ್ಯತೆಯನ್ನು ತಿಳಿದುಕೊಳ್ಳಲು ವೈದ್ಯರು ಯಾವುದೇ ಪರೀಕ್ಷೆ ನಡೆಸಲಿಲ್ಲ. ಭಯ್ಯಾಲಾಲನ ಮಗಳ ಮತ್ತು ಹೆಂಡತಿಯ ದೇಹದಲ್ಲಿ ಗಾಯವಿಲ್ಲದ ಭಾಗವೇ ಇರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಆದಾಗ್ಯೂ ಮರಣೋತ್ತರ ಪರೀಕ್ಷೆಯಲ್ಲಿ ಈ ಸಂಗತಿಗಳನ್ನು ಮುಚ್ಚಿ ಹಾಕಲಾಗಿತ್ತು. ಭಯ್ಯಾಲಾಲನ ದೂರಿನ ಮೇರೆಗೆ ಹೂತಿದ್ದ ಶವಗಳನ್ನು ಮರುಪರೀಕ್ಷೆಗೆ ಒಳಪಡಿಸಿದಾಗ, ವೈದ್ಯರು ಯುವತಿಯ ಮೇಲೆ ಅತ್ಯಾಚಾರ ನಡೆದಿರಬಹುದೆಂದು ಸಾಂದರ್ಭಿಕ ಸಾಕ್ಷಿಗಳು ನಿರೂಪಿಸುತ್ತವೆ ಎಂದು ವರದಿ ನೀಡಿದ್ದರು. ಈ ಆಕ್ರಮಣದಲ್ಲಿ ಗ್ರಾಮದ ಸರಪಂಚರಾದ ಉಪಾಸ ರಾವ್ ಖಾನ್‌ದಾತೆ ಭಾಗಿಯಾಗಿದ್ದರೂ, ಆ ಸಮಯದಲ್ಲಿ ತಾನು ಗ್ರಾಮದಲ್ಲೇ ಇರಲಿಲ್ಲ ಎಂಬ ಹೇಳಿಕೆ ನೀಡಿರುವುದು ಪೋಲೀಸ್ ಇಲಾಖೆಯಲ್ಲಿ ದಾಖಲಾಗಿದೆ. ಮರಣೋತ್ತರ ಪರೀಕ್ಷೆಯಲ್ಲೂ ಸಹ ವೈದ್ಯಾಧಿಕಾರಿಗಳು ತಮ್ಮ ಜಾತಿ ಪ್ರಜ್ಞೆಯನ್ನು ಹೊರಗಡೆಹಿರುವುದು ಕಂಡು ಬರುತ್ತದೆ.

ಇಷ್ಟಕ್ಕೂ ಭಯ್ಯಾಲಾಲನ ಕುಟುಂಬದ ಮೇಲೆ ಈ ರೀತಿಯ ಅಮಾನವೀಯ ಆಕ್ರಮಣ ಮಾಡುವುದರ ಹಿಂದಿನ ಕಾರಣವೇನು ಎನ್ನುವುದು ಇಲ್ಲಿ ಮೂಲಭೂತ ಪ್ರಶ್ನೆ. ಇಪ್ಪತ್ತು ವರ್ಷಗಳ ಹಿಂದೆ ಉತ್ತರ ಪ್ರದೇಶದಿಂದ ವಲಸೆ ಬಂದು ಇಲ್ಲಿ ನೆಲೆಸಿದ ಭಯ್ಯಾಲಾಲ್ ಭೂತ್ ಮಾಂಗೆ ಮಹರ್ ಜಾತಿಗೆ ಸೇರಿದ ಒಬ್ಬ ಸಣ್ಣ ರೈತ. ಮಹಾರಾಷ್ಟ್ರದ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮಹರ್ ಜಾತಿಯನ್ನು ಅತ್ಯಂತ ಕೀಳು ಜಾತಿಯೆಂದು ಪರಿಗಣಿಸಲಾಗುತ್ತದೆ. ಡಾ|| ಅಂಬೇಡ್ಕರ್‌ರವರೂ ಇದೇ ಜಾತಿಗೆ ಸೇರಿದವರಾಗಿದ್ದರು. ಭಯ್ಯಾಲಾಲ್ ಬಳಿ ಐದು ಎಕರೆ ಜಮೀನ ಇದ್ದು, ಅದರಲ್ಲಿ ಕಬ್ಬು, ಹತ್ತಿ ಬೆಳೆದು ತನ್ನ ಸಂಸಾರ ಸಾಗಿಸುತ್ತಿದ್ದ. ಕೆಲವು ವರ್ಷಗಳ ಹಿಂದೆ ಗ್ರಾಮದ ಮುಖ್ಯ ರಸ್ತೆ ನಿರ್ಮಿಸಲು ಭಯ್ಯಾಲಾಲನ ಹೊಲದ ಮೂಲಕವೇ ಹಾದು ಹೋಗಬೇಕಾದ್ದರಿಂದ, ಆತನ ಎರಡು ಎಕರೆ ಜಮೀನನ್ನು ಬಿಟ್ಟುಕೊಡಲು ಗ್ರಾಮದ ಮುಖ್ಯಸ್ತರು ಆಗ್ರಹಿಸಿದ್ದರು. ತನ್ನ ಜೀವನೋಪಾಯದ ಆಧಾರವಾದ ಜಮೀನನ್ನು ಮಾರಲು ಇಷ್ಟವಿಲ್ಲ ದಿದ್ದರೂ, ಗ್ರಾಮದ ಹಿರಿಯರ ಮಾತಿಗೆ ಕಟ್ಟುಬಿದ್ದು ಭಯ್ಯಾಲಾಲ್ ಎರಡು ಎಕರೆ ಭೂಮಿಯನ್ನು ಬಿಟ್ಟುಕೊಟ್ಟಿದ್ದ. ಹಾಗಾಗಿ ಈ ಕಾರಣಕ್ಕಾಗಿ ಆತನ ಕುಟುಂಬದ ಮೇಲೆ ಆಕ್ರಮಣ ಮಾಡಿರುವ ಸಾಧ್ಯತೆಗಳು ಕಡಿಮೆಯೇ.

ಭಯ್ಯಾಲಾಲನ ಹೆಂಡತಿಯ ಸೋದರ ಸಂಬಂಧಿ ಸಿದ್ಧಾರ್ಥ ಗಜನೀಯೆ ಆಗಾಗ್ಗೆ ಈತನ ಮನೆಗೆ ಬರುತ್ತಿದ್ದುದು ಊರಿನ ಮೇಲ್ಜಾತಿ ಗಳವರ ಕೆಂಗಣ್ಣಿಗೆ ಕಾರಣವಾಗಿತ್ತು. ಸೆಪ್ಟೆಂಬರ್ ೩ ರಂದು ಪಕ್ಕದ ಊರಿನ ಜಮೀನಿನ ವಿವಾದದಲ್ಲಿ, ಪೋಲೀಸ್ ಪಾಟೀಲನಾದ ಸಿದ್ಧಾರ್ಥ ಗಜಬೀಯೆನ ಮೇಲೆ ಖೈರಲಾಂಜಿಯ ಮೇಲ್ಜಾತಿಯವರು ಹಲ್ಲೆ ನಡೆಸಿದ್ದು, ಇದನ್ನು ಪ್ರತ್ಯಕ್ಷವಾಗಿ ಕಂಡಿದ್ದ ಭಯ್ಯಾಲಾಲನ ಮಗಳು ಪ್ರಿಯಾಂಕ ಪೋಲೀಸರಿಗೆ ದೂರು ನೀಡುವುದರಲ್ಲಿ ಸಹಕರಿಸಿದ್ದೇ ಅಲ್ಲದೆ, ಸಾಕ್ಷಿಯನ್ನೂ ಹೇಳಿದ್ದಳು. ಈ ಪ್ರಕರಣದಲ್ಲಿ ಹಲವರನ್ನು ಬಂಧಿಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ತದನಂತರದಲ್ಲಿ ಸಿದ್ಧಾರ್ಥ್ ಗಜಬೀಯ ಆಗಾಗ್ಗೆ ಭಯ್ಯಾಲಾಲನ ಮನೆಗೆ ಭೇಟಿ ನೀಡು ತ್ತಿದ್ದುದು ಕುನ್‌ಬಿ ಸಮುದಾಯದವರ ಸಿಟ್ಟಿಗೆ ಕಾರಣವಾಗಿತ್ತು.

ಭಯ್ಯಾಲಾಲ್ ಭೂತ್ ಮಾಂಗೆ ಕುಟುಂಬದವರ ಮೇಲೆ ಅಮಾನವೀಯ ಹಲ್ಲೆ ನಡೆಸಲು ಇವಾವುದೂ ಪ್ರಮುಖ ಕಾರಣವಾಗಿರಲಿಲ್ಲ, ಎಂದರೆ ಅಚ್ಚರಿಯಾಗುವುದಲ್ಲವೇ? ಸ್ಥಳೀಯರು ಹೇಳಿಕೆಗಳ ಪ್ರಕಾರ ಭಯ್ಯಾಲಾಲ್ ಭೂತ್ ಮಾಂಗೆ ಯಾರ ತಂಟೆಗೂ ಹೋಗದೆ ತನ್ನ ಪಾಡಿಗೆ ತಾನು ಜೀವನ ನಡೆ ಸುತ್ತಿದ್ದ ಸೌಜನ್ಯ ಜೀವಿಯಾಗಿದ್ದ. ಎಂದಿಗೂ ಯಾರೊ ಡನೆಯೂ ಜಗಳ ಮಾಡಿದವನಲ್ಲ. ತನ್ನ ಜೀವನದ ಆಧಾ ರವಾಗಿದ್ದ ಎರಡು ಎಕರೆ ಭೂಮಿಯನ್ನೇ ಊರಿನ ಹಿತ ದೃಷ್ಟಿಯಿಂದ ಬಿಟ್ಟುಕೊಟ್ಟಿದ್ದ. ಆದರೂ ಆತನ ಕುಟುಂಬದ ನಾಲ್ಕು ಸದಸ್ಯರ ಘೋರ ಹತ್ಯೆಗೈಯುಲು ಕಾರಣವೇನು

ದಲಿತರ ಬಗ್ಗೆ ಆಡಳಿತ ಯಂತ್ರಗಳಿಗಿರುವ ನಿರ್ಲಕ್ಷವನ್ನು ತೋರಿಸುತ್ತದೆ ಎನ್ನುತ್ತಾರೆ ಸುರೇಶ್ ಸಾಗರ್ ಮರಣೋತ್ತರ ಪರೀಕ್ಷೆಯಲ್ಲೂ ಯುವತಿಯ ಮೇಲೆ ಅತ್ಯಾಚಾರ ನಡೆದಿರಬಹುದಾದ ಸಾಧ್ಯತೆಯನ್ನು ತಿಳಿದುಕೊಳ್ಳಲು ವೈದ್ಯರು ಯಾವುದೇ ಪರೀಕ್ಷೆ ನಡೆಸಲಿಲ್ಲ. ಭಯ್ಯಾಲಾಲನ ಮಗಳ ಮತ್ತು ಹೆಂಡತಿಯ ದೇಹದಲ್ಲಿ ಗಾಯವಿಲ್ಲದ ಭಾಗವೇ ಇರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ.

ಭಯ್ಯಾಲಾಲನ ಮಗಳು ಪ್ರಿಯಾಂಕ ಹತ್ತನೆ ತರಗತಿಯಲ್ಲಿ ಪ್ರತಿಭಾವಂತಳೆಂದು ಎಲ್ಲರಿಂದ ಮೆಚ್ಚುಗೆ ಗಳಿಸಿದ್ದಳು. ಅತಿ ಹೆಚ್ಚು ಅಂಕ ಗಳಿಸಿ ಎಲ್ಲರ ಹೊಗಳಿಕೆಗೆ ಪಾತ್ರಳಾಗಿದ್ದಳು. ಮಗಳಿಗೆ ಉನ್ನತ ಹಂತದ ಶಿಕ್ಷಣ ಕೊಡಿಸಬೇಕೆಂದು ಭಯ್ಯಾಲಾಲ್ ಆಕೆಯನ್ನು ಕಾಲೇಜಿಗೆ ಕಳುಹಿಸುತ್ತಿದ್ದ. ಭಯ್ಯಾಲಾಲನ ಇನ್ನೊಬ್ಬ ಮಗನೂ ಸಹ ಪಿ.ಯು.ಸಿ ಓದುತ್ತಿದ್ದು ಪ್ರತಿಭಾಶಾಲಿಯಾಗಿದ್ದ. ಭಯ್ಯಾಲಾಲ್ ಕುಟುಂಬದ ಮೇಲೆ ಆಕ್ರಮಣ ಮಾಡಲು ಮೇಲ್ಜಾತಿಯವರಿಗೆ ಇದೊಂದೇ ಕಾರಣ ಸಾಕಾಗಿತ್ತೆನಿಸುತ್ತದೆ. ದಲಿತರು ವಿದ್ಯಾವಂತರಾಗುವುದನ್ನು ಸಹಿಸದಷ್ಟು ಜಾತಿ ಪ್ರಜ್ಞೆ ಇಂದಿಗೂ ನಮ್ಮ ಸಮಾಜದಲ್ಲಿ ಜೀವಂತವಾಗಿರುವುದು ಖೈರಲಾಂಜಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ.

ದಲಿತರು ೭೦ರ ದಶಕದಿಂದಲೂ ತಮ್ಮ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು ದರಿಂದ ಪಂಚಾಯಿತು ಅಧಿಕಾರಿಗಳು ಈ ಜಮೀನನ್ನು ದಲಿತರ ವಶಕ್ಕೆ ನೀಡಿದ್ದರು. ಈ ಸ್ಥಳದಲ್ಲಿ ಬುದ್ಧ ವಿಹಾರ ನಿರ್ಮಿಸಲು ಆಯೋಜಿಸಿದ ದಲಿತರು ಅದಕ್ಕಾಗಿ ಧನ ಸಂಗ್ರಹಣೆಯಲ್ಲಿ ತೊಡಗಿದ್ದರು. ಈ ಜಮೀನಿನ ಅಂಚಿ ನಲ್ಲೇ ಅರಣ್ಯಕ್ಕೆ ಹೋಗುವ ಹಾದಿಯೂ ಇದ್ದುದರಿಂದ, ದಲಿತರಿಗೆ ನೀಡಿದ ಜಮೀನನ್ನೂ ರಸ್ತೆಗೆ ಉಪಯೋಗಿಸಿ ಕೊಳ್ಳುವ ಕಾಮಗಾರಿಯನ್ನು ಫೆಬ್ರವರಿ ತಿಂಗಳಲ್ಲಿ ಪ್ರಾರಂಭಿಸಲಾಯಿತು.

ಒಂದು ರೀತಿಯಲ್ಲಿ ಅಂಬೇಡ್ಕರ್‌ರವರ ಜನ್ಮ ಭೂಮಿಯಾದ ಮಹಾರಾಷ್ಟ್ರದಲ್ಲಿ ಕಳೆದ ಎರಡು ದಶಕ ಗಳಲ್ಲಿ ದಲಿತರ ಮೇಲಿನ ಆಕ್ರಮಣ ಹೆಚ್ಚಾಗುತ್ತಲೇ ಇದೆ. ೧೯೮೧ ರಲ್ಲಿ ದಲಿತರ ಮೇಲಿನ ಆಕ್ರಮಣಗಳು ೬೦೪ ರಷ್ಟಿದ್ದು, ೨೦೦೦ದ ಹೊತ್ತಿಗೆ ೧೦೩೪ಕ್ಕೇರಿತ್ತು. ದಲಿತರು ನೀರಿಗಾಗಿ, ಕೂಲಿಗಾಗಿ ನಡೆದ ಹೋರಾಟಗಳ ಪರಂಪರೆ ಮಹಾರಾಷ್ಟ್ರದಲ್ಲಿ ಮೊದಲಿನಿಂದಲೂ ಕಂಡು ಬರುತ್ತದೆ. ರಾಜ್ಯ ಜನಸಂಖ್ಯೆಯ ಶೇ ೧೧ ರಷ್ಟಿದ್ದರೂ, ತನ್ನ ರಾಜಕೀಯ ಪ್ರಾಬಲ್ಯಧಿಂದ ಎಲ್ಲಾ ಆಕ್ರಮಣಗಳನ್ನೂ ಮೆಟ್ಟಿನಿಂತ ದಲಿತರು, ಸಂಘಟನಾ ಹಿನ್ನಡೆ ಕಾಣಲಾರಂಭಿಸಿದ್ದು, ೧೯೯೦ರ ನಂತರ. ಅಂದರೆ ಹಿಂದುತ್ವವಾದಿ ಗಳ ರಾಜಕೀಯ ಪ್ರಾಬಲ್ಯ ರಾಜ್ಯದಲ್ಲಿ ಹೆಚ್ಚಾದ ನಂತರದಲ್ಲಿ. ಪ್ರಬಲ ರಾಜಕೀಯ ಪಕ್ಷವಾಗಿದ್ದ ಭಾರತೀಯ ರಿಪಬ್ಲಿಕನ್ ಪಕ್ಷ (RPI) ೯೦ರ ದಶಕದ ನಂತರ ಛಿದ್ರವಾಗಿ, ಹಲವಾರು ಪಕ್ಷದ ಕಾರ್ಯಕರ್ತರು ಮತ್ತು ನಾಯಕರುಗಳನ್ನು ಕಾಂಗ್ರೆಸ್ ಮತ್ತು ಎನ್.ಸಿ.ಪಿ ಪಕ್ಷಗಳು ಸೆಳೆದು ಕೊಂಡಿದ್ದವು. ಇದರೊಂದಿಗೆ ಜಾಗತೀಕರಣ ಪ್ರಕ್ರಿಯೆ ತೀವ್ರಗೊಳ್ಳುತ್ತಿದ್ದಂತೆ ಸರ್ಕಾರಿ ನೌಕರಿ ಯಲ್ಲಿ ದಲಿತರ ಸಂಖ್ಯೆ ಇಳಿಮುಖವಾಗಿದ್ದು, ದಲಿತ ಸಮುದಾಯಕ್ಕೆ ಶಿಕ್ಷಿತ ದಲಿತರಿಂದ ದೊರೆಯುತ್ತಿದ್ದ ಸೈದ್ಧಾಂತಿಕ ಹಾಗೂ ಮಾನಸಿಕ ಬೆಂಬಲ ಕ್ಷೀಣಿಸುತ್ತಾ ಹೋಯಿತು. ಒಂದು ವರದಿಯ ಪ್ರಕಾರ ಮಹಾರಾಷ್ಟ್ರ ಸರ್ಕಾರದಲ್ಲಿ ಒಂದು ಲಕ್ಷ ಮೂವತ್ತು ಸಾವಿರ ಮೀಸಲು ಹುದ್ದೆಗಳು ಖಾಲಿಯಾಗಿವೆ.

ಇದೇ ಅವಧಿಯಲ್ಲಿ ರಾಜ್ಯದಲ್ಲಿ ದಲಿತರ ಮೇಲಿನ ಆಕ್ರಮಣಗಳೂ ಹೆಚ್ಚಾಗಿವೆ. ದಲಿತರ ಕೋಟೆ ಎನಿಸಿದ್ದ ಅಂಕೋಲ ಜಿಲ್ಲೆಯಲ್ಲಿ ಕಳೆದ ವರ್ಷ ಬೆಲ್ ಕೆಡ್ ಗ್ರಾಮದಲ್ಲಿ ಇಪ್ಪತ್ತು ದಲಿತರ ಗುಡಿಸಲುಗಳನ್ನು ಸುಟ್ಟು ಹಾಕಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಜಲ್ನಾ ಗ್ರಾಮದಲ್ಲಿ ನೀರಿಗಾಗಿ ನಡೆದ ಹೋರಾಟ, ರಾಯಗಡದಲ್ಲಿ ಕೂಲಿಕಾರರ ಮೇಲೆ ಹೇರಿದ್ದ ಬಹಿಷ್ಕಾರ, ಇವೆಲ್ಲವೂ ಕೆಲವು ನಿದರ್ಶನಗಳಷ್ಟೆ. ಖೈರಲಾಂಜಿ ಘಟನೆ ಸಂಭವಿಸಿದ ಕೆಲವು ತಿಂಗಳುಗಳ ಹಿಂದೆ ಕೋಹೋಲ್‌ಗಾಂವ್ ಎಂಬ ಗ್ರಾಮದಲ್ಲಿ ನಡೆದ ಘಟನೆಯನ್ನು ಇಲ್ಲಿ ಸ್ಮರಿಸುವುದು ಸೂಕ್ತ.

ಗೋಂಡಿಯಾ ಜಿಲ್ಲೆಯಲ್ಲಿರುವ ಕೋಹೋಲ್ ಗಾಂವ್ ಗ್ರಾಮದಲ್ಲಿ ೯೦೦ ಜನರಿದ್ದು, ೧೦೦ ಜನ ದಲಿತರಿದ್ದಾರೆ. ಇಲ್ಲಿ ಯಾವುದೇ ಜಾತಿ ಗಲಭೆ, ಸಂಘರ್ಷಗಳು ನಡೆದ ಇತಿಹಾಸವಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ. ೧೯೭೭ರಲ್ಲಿ ಅಲ್ಲಿ ಪಾಂಚಾಯಿತಿಯು ೨೨ ದಲಿತ ಕುಟುಂಬಗಳಿಗೆ ಅರ್ಧ ಎಕರೆ ಜಮೀನನ್ನು ನೀಡಿತ್ತು. ಈ ಸ್ಥಳದಲ್ಲಿ ದಲಿತರು ೭೦ರ ದಶಕದಿಂದಲೂ ತಮ್ಮ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು ದರಿಂದ ಪಂಚಾಯಿತು ಅಧಿಕಾರಿಗಳು ಈ ಜಮೀನನ್ನು ದಲಿತರ ವಶಕ್ಕೆ ನೀಡಿದ್ದರು. ಈ ಸ್ಥಳದಲ್ಲಿ ಬುದ್ಧ ವಿಹಾರ ನಿರ್ಮಿಸಲು ಆಯೋಜಿಸಿದ ದಲಿತರು ಅದಕ್ಕಾಗಿ ಧನ ಸಂಗ್ರಹಣೆಯಲ್ಲಿ ತೊಡಗಿದ್ದರು. ಈ ಜಮೀನಿನ ಅಂಚಿನಲ್ಲೇ ಅರಣ್ಯಕ್ಕೆ ಹೋಗುವ ಹಾದಿಯೂ ಇದ್ದುದರಿಂದ, ದಲಿತರಿಗೆ ನೀಡಿದ ಜಮೀನನ್ನೂ ರಸ್ತೆಗೆ ಉಪಯೋಗಿಸಿ ಕೊಳ್ಳುವ ಕಾಮಗಾರಿಯನ್ನು ಫೆಬ್ರವರಿ ತಿಂಗಳಲ್ಲಿ ಪ್ರಾರಂಭಿಸಲಾಯಿತು. ದಲಿತರ ಪ್ರತಿಭಟನೆಗಳನ್ನು ಲೆಕ್ಕಿಸದ ಪಂಚಾಯತಿ ಅಧಿಕಾರಿಗಳು ತಮ್ಮ ಕಾಮಗಾರಿಯನ್ನು ನಿಲ್ಲಿಸದಿದ್ದುದರಿಂದ ಕುಪಿತಗೊಂಡ [illegible] ಮೇಲಧಿಕಾರಿಗಳ [illegible] ಹೋಗಬೇಕಾಯಿತು. ಈ ಸಂದರ್ಭದಲ್ಲಿ ದಲಿತರು ಮತ್ತು ಮೇಲ್ಜಾತಿಯವರು ಕೈಕೈ ಮಿಲಾಯಿಸಿದ್ದೂ ಆಯಿತು. ಸೆಪ್ಟಂಬರ್ ೨೪ ರಂದು ಮೂರು ಪೋಲೀಸ್ ಠಾಣೆಗಳ ಮೂವರು [illegible] ಅಲ್ಲಿನ ಮಹಿಳೆಯರಿಗೆ, ಠಾಣೆಗೆ ಬಂದು ದೂರು ನೀಡುವಂತೆ [illegible] ಹೋದರು. ಆದರೆ ಠಾಣೆಗೆ ಹೋಗುತ್ತಿದ್ದ ಮಹಿಳೆಯರನ್ನು ದಾರಿಯಲ್ಲೇ ತಡೆದ ಜನರ ಗುಂಪು ಅವರ ಮೇಲೆ ಹಲ್ಲೆ ನಡೆಸಿ, ಗ್ರಾಮದಲ್ಲಿಯೂ ಸಹ ಸುಮಾರು ೪೦ ಕ್ಕೂ ಹೆಚ್ಚು ಜನ ದಲಿತ ಕೇರಿಯ ಮೇಲೆ ಆಕ್ರಮಣ ನಡೆಸಿದರು. ಆದರೂ ಈ ಪ್ರಕರಣದಲ್ಲಿ ಒಬ್ಬನನ್ನು ಮಾತ್ರ ಬಂಧಿಸಲಾಯಿತು. ಈಗ ಈ ಗ್ರಾಮ ದಲ್ಲಿ ಎರಡೂ ಕೋಮುಗಳ ನಡುವೆ ಸಂಘರ್ಷ ತನ್ನ ಪರಾಕಾಷ್ಠೆ ಮುಟ್ಟಿದೆ. ದಲಿತರ ಮಕ್ಕಳೊಡನೆ ಆಟವಾಡದಿರಲು ಕುನ್‌ಬಿ ಮತ್ತು ಆದಿವಾಸಿ ಮಕ್ಕಳಿಗೆ ಆದೇಶಿಸಲಾಗುತ್ತಿದೆ. ಇತರ ಜಾತಿಯ ಮಹಿಳೆಯರು ನೀರಿಗಾಗಿ ಬರುವ ದಲಿತ ಮಹಿಳೆ ಯರನ್ನು ಗೇಲಿ ಮಾಡುವುದು, ಅಪಹಾಸ್ಯ ಮಾಡುವುದು ಸಾಮಾನ್ಯವಾಗಿದೆ. ಇಷ್ಟಾದರೂ ಅಲ್ಲಿನ ಸರಪಂಚರಾದ ಶಕುಂತಲಾ ದೊನಾಡ್ ಕರ್‌ರವರು, ಗ್ರಾಮದಲ್ಲಿ ಯಾವುದೇ ಜಾತಿ ಸಮಸ್ಯೆ ಇಲ್ಲವೆಂದೇ ಪ್ರತಿಪಾದಿಸುತ್ತಾರೆ. (ವರದಿ **ಆಧಾರ ಫ್ರಂಟ್ ಲೈನ್** ೨೦೦೬ ಡಿ.೧).

ಈ ಘಟನೆಗಳೊಂದಿಗೆ ಕರ್ನಾಟಕದಲ್ಲಿ ನಡೆಯುತ್ತಿರುವ ದಲಿತ ವಿರೋಧಿ ಪ್ರಕ್ರಿಯೆ ಗಳನ್ನು ತುಲನೆ ಮಾಡಿ ನೋಡಬೇಕಾಗುತ್ತದೆ. ಕಡಕೋಳದಲ್ಲಿ ಕುಡಿಯುವ ನೀರನ್ನು ಮುಟ್ಟಿದ ತಪ್ಪಿಗಾಗಿ ದಲಿತರಿಗೆ ಬಹಿಷ್ಕಾರ ಹಾಕಿದ ಘಟನೆ ರಾಜ್ಯದ ಪ್ರಜ್ಞಾವಂತರನ್ನು ಕಂಗೆಡಿಸಿದೆ. ಸರ್ಕಾ ರದ ಮಧ್ಯಸ್ಥಿಕೆಯಿಂದ ಪರಿಸ್ಥಿತಿ ಸುಧಾರಿಸಿದ್ದರೂ, ಕೇವಲ ಆರ್ಥಿಕ ಪರಿಹಾರ ನೀಡುವುದರಿಂದ, ಸಂಘರ್ಷದ ಕಾವು ಕಡಿಮೆಯಾಗು ವುದೇ ಹೊರತು ಜಾತಿ ಪ್ರಜ್ಞೆ ಹೋಗಲಾಡಿಸ ಲಾಗುವುದಿಲ್ಲ ಎಂಬ ಅಂಶವನ್ನು ಆಳುವ ವರ್ಗಗಳು ಗ್ರಹಿಸಬೇಕಾಗಿದೆ. ಹಿಂದುತ್ವವಾದಿಗಳು ಭಾರತದ ರಾಜಕಾರಣದಲ್ಲಿ ಭದ್ರವಾದ ಬುನಾದಿ ಕಂಡುಕೊಂಡ ನಂತರದಲ್ಲಿ ದಲಿತರ ಮೇಲಿನ ಆಕ್ರಮಣಗಳು ಹೊಸ ತಿರುವನ್ನು ಪಡೆದುಕೊಂಡಿವೆ.

ಒಂದೆಡೆ ಪೇಜಾವರರಂತಹ ಮಠಾಧೀಶರುಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು, ದಲಿತರನ್ನು ಎಲ್ಲರಂತೆ ಸಮಾನವಾಗಿ ಕಾಣಬೇಕು ಎಂದು ಉಪನ್ಯಾಸ ನೀಡುತ್ತಿರುವಂತೆಯೇ, ಅವರ ಮೂಗಿನಡಿಯಲ್ಲೇ ದಲಿತರ ಮೇಲೆ ಬಹಿಷ್ಕಾರ ಹೇರಲಾಗುತ್ತದೆ. ಇನ್ನೊಂದೆಡೆ ಸಂಘ ಪರಿವಾರ ದಲಿತರನ್ನು ಅಪ್ಪಿಕೊಳ್ಳುತ್ತಲೇ, ಕೋಮುಗಲಭೆಗಳಲ್ಲಿ ಮುಸ್ಲಿಮರ ವಿರುದ್ಧ ಹೋರಾಡಲು ಅವರನ್ನೇ ಅಸ್ತ್ರವನ್ನಾಗಿ ಬಳಸುತ್ತಾರೆ. ಆದರೂ ಖೈರಲಾಂಜಿಯಂತಹ ಘಟನೆಗಳಾದಾಗ, ಕಡ ಕೋಳದಲ್ಲಿ ಬಹಿಷ್ಕಾರ ಹೇರಿದಾಗ, ಕಂಬಾಲಪಲ್ಲಿಯ ಅಪರಾಧಿಗಳನ್ನು ಬಿಡುಗಡೆ ಮಾಡಿದಾಗ, ಪೇಜಾವರರಾಗಲೀ, ಅವರ ಶಿಷ್ಯ ಪರಂಪರೆಯಾಗಲೀ, ಸಂಘಪರಿವಾಗಲೀ,

ಯಾವುದೇ ಪ್ರತಿಕ್ರಿಯೆ ನೀಡದೆ ದಿವ್ಯ ಮೌನ ವಹಿಸುವುದು, ಭಾರತೀಯ ಜಾತಿ ವ್ಯವಸ್ಥೆಯ ನೈಜ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ.

ಅಂಬೇಡ್ಕರ್ ಪರಿನಿರ್ವಾಣದ ದಿನದಂದೇ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ್ದುದರ ಹಿಂದಿನ ಕುತಂತ್ರ ಈಗ ಪ್ರಕಟಗೊಳ್ಳುತ್ತಿದೆ. ಅಂಬೇಡ್ಕರ್ ಜನ್ಮ ದಿನಾಚರಣೆಯ ಮುನ್ನ ದೇಶದ ಹಲವಾರು ಭಾಗಗಳಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ವ್ಯವಸ್ಥಿತವಾಗಿ ವಿರೂಪಗೊಳಿಸಲಾಗುತ್ತದೆ. ಹಾಗೆಯೇ ಅಂಬೇಡ್ಕರ್ ಪರಿನಿರ್ವಾಣ ದಿನದ ಮುನ್ನವೂ ಇದೇ ಕೃತ್ಯವೆಸಗಲಾಗುತ್ತದೆ. ಈ ಘಟನೆಗಳನ್ನು ಪ್ರತಿಭಟಿಸುವುದರಲ್ಲಿ ಈ ಎರಡೂ ಸಂದರ್ಭಗಳ ಆಚರಣೆಗೆ ಧಕ್ಕೆ ತರುವುದೇ ಈ ಕೈಂಕರ್ಯಗಳ ಉದ್ದೇಶ ಎಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಪ್ರಧಾನಮಂತ್ರಿ ಒಂದು ಪತ್ರಿಕಾ ಹೇಳಿಕೆಯನ್ನು ಹಿಗ್ಗಾಮುಗ್ಗಾ ಎಳೆದು, ಸಂಸತ್ ಕಲಾಪವನ್ನು ನಡೆಯಲು ಬಿಡದ ಭಾಜಪದ ಸದಸ್ಯರುಗಳಿಗೆ, ಖೈರಲಾಂಜಿ ಪ್ರಕರಣ ಒಂದು ವಿಷಯವೆನಿಸುವುದೇ ಇಲ್ಲ.

ಇತ್ತ ಕರ್ನಾಟಕದಲ್ಲಿ ಹಿಂದೂಗಳ ಮೇಲೆ ಅನ್ಯಾಯ, ಅಕ್ರಮಣ ನಡೆಯುತ್ತಿದೆ ಎಂದು ದಿನ ಬೆಳಗಾದರೆ ಬೊಬ್ಬೆ ಹೊಡೆಯುವ ಸಂಘ ಪರಿವಾರದವರಿಗೆ, (ಇತ್ತೀಚೆಗೆ ಇವರ ತಂಡದಲ್ಲಿ ಮಾನ್ಯ ಚಿದಾನಂದ ಮೂರ್ತಿಗಳೂ ಸೇರಿದ್ದಾರೆ), ಅಫ್ಜಲ್ ಗುರುಗೆ ಮರಣ ದಂಡನೆ ವಿಧಿಸದಿದ್ದರೆ ಭಯೋತ್ಪಾದಕರಿಂದ ಹತ್ಯೆಗೊಳಗಾದ ಕುಟುಂಬಗಳಿಗೆ ಸಾಂತ್ವನ ಸಿಗುವುದಿಲ್ಲ ಎಂದು ಪ್ರತಿಭಟನೆ ಮಾಡುವ ಹಿಂದುತ್ವವಾದಿಗಳಿಗೆ, ಗೋವುಗಳನ್ನು ರಕ್ಷಿಸಲು ಭಾರತ ಪರ್ಯಟನ ಮಾಡುವ ಗೋರಕ್ಷಕ ಸ್ವಾಮಿಗಳಿಗೆ, ಮೀಸಲಾತಿ ವಿವಾದ ಎದುರಾದಾಗ ಸಮಾನತೆಗಾಗಿ ಮೋಂಬತ್ತಿ ಮೆರವಣಿಗೆ ನಡೆಸುವ ಶ್ವೇತ ವಸ್ತ್ರಧಾರಿಗಳಿಗೆ, ಐಶ್ವರ್ಯರಾಯ್ ಮತ್ತು ಅಭಿಷೇಕ್ ಬಚ್ಚನ್ ವಾರಣಾಸಿಯಲ್ಲಿ ದೇವಾಯಲಕ್ಕೆ ಒಟ್ಟಿಗೆ ಹೋದದನ್ನೇ ಪ್ರಮುಖ ಸುದ್ದಿ ಮಾಡುವ ಟಿ.ವಿ. ಮಾಧ್ಯಮಗಳಿಗೆ, ಖೈರಲಾಂಜಿಯಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲ್ಲಲ್ಪಟ್ಟ ದಲಿತರಿಗೆ, ಕಡಕೋಳದಲ್ಲಿ ಬಹಿಷ್ಕಾರ ಎದುರಿಸಿ ಆರು ತಿಂಗಳ ಕಾಲ ನರಕಯಾತನೆ ಅನುಭವಿಸಿದ ದಲಿತರಿಗೆ, ನ್ಯಾಯ ದೊರಕಿಸುವಲ್ಲಿ ನಮ್ಮ ನ್ಯಾಯಾಂಗ ವಿಫಲವಾಗಿರುವುದರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದಿರುವುದು, ಆಧುನಿಕ ಇಪ್ಪತ್ತೊಂದನೆಯ ಶತಮಾನದ ಭಾರತೀಯ ಸಮಾಜದ ಜಾತಿ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ.

ಯಾವುದೇ ಅಂಬೇಡ್ಕರ್ ಪ್ರತಿಮೆಯಲ್ಲಿ ಸಂವಿಧಾನ ಶಿಲ್ಪಿಯು ಒಂದು ಕೈಯಲ್ಲಿ ಸಂವಿಧಾನವನ್ನು ಹಿಡಿದ್ದು ಇನ್ನೊಂದು ಕೈಯನ್ನು ಎತ್ತಿ ತೋರಿಸುತ್ತಿರುವುದು ಕಂಡು ಬರುತ್ತದೆ. ಬಹುಶಃ ಆ ಕೈ ತೋರಿಸುತ್ತಿರುವುದು ಈ ಅಂಶವನ್ನೇ ಇರಬಹುದು. ಧಾರ್ಮಿಕ ಮೂಲಭೂತ ವಾದ, ಕೋಮು ವಾದ ಮತ್ತು ಸಂಘಪರಿವಾರದ ಫ್ಯಾಸಿ ಸಂನ ಭೂತವನ್ನು ಎದುರಿಸುವ ಭರದಲ್ಲಿ, ದೇಶದಾ ದ್ಯಂತ, ಗ್ರಾಮೀಣ-ನಗರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರಕಟಗೊಳ್ಳುತ್ತಿರುವ ಜಾತಿವಾದದ ಫ್ಯಾಸಿಸಂನ ಬೆಳವಣಿಗೆಯನ್ನು ಪ್ರಜಾಶಾಂತ್ರಿಕ ಸಂಘಟನೆಗಳು ನಿರ್ಲಕ್ಷಿಸುತ್ತಿವೆಯೇನೋ ಎಂದು ಭಾಸವಾಗುತ್ತದೆ. ಈ ಅಂಶವನ್ನು ಕುರಿತು ಗಂಭೀರವಾದ ಆಲೋಚನೆ ಮಾಡುವ ಸಂದರ್ಭವನ್ನು ಖೈರಲಾಂಜಿ, ಕಡಕೋಳ, ಕಂಬಾಲಪಲ್ಲಿಗಳು ಒದಗಿಸಿವೆ. □

ಮನವಿ

ಕಾವ್ಯ

ನನ್ನ
ಮನದಾಳದ ಬಯಕೆಯನ್ನು
ಸಜ್ಜನರ ಹೃದಯಗಳಲ್ಲಿ
ಬಿತ್ತಿ ಬೆಳೆಯ ಬೇಕೆಂದುಕೊಂಡೆ
ನನ್ನ
ಧ್ವನಿಯನ್ನೇ ಸೂತಕ
ಅಂದು ಬಿಟ್ಟರು!!
ನನ್ನ ಮುಖದ ಮಂದಸ್ಮಿತವನ್ನ
ಸಜ್ಜನರ ಮುಖಗಳಿಗೆ
ಕನ್ನಡಿಯಾಗಿಸಬೇಕೇಂದು ಕೊಂಡೆ
ನನ್ನ
ಮುಖವೇ
ಅವಲಕ್ಷಣ ಅಂದು ಬಿಟ್ಟರು!!
ಧ್ವನಿ, ದರ್ಶನ
ಬದುಕು, ಬಾಂಧವ್ಯಕೆ
ಮಾರಕವಾದರೆ
ಬದುಕಲುಂಟೆ?
ಬಾಳಲುಂಟೆ?
ಜಗದೊಳಗೆ!!
ಸಾಧು ಸಂತರೇ
ಪುಣ್ಯ ಪುರುಷರೇ
ಸಜ್ಜನರೇ ಸಹೃದಯಿಗಳೇ
ಇನ್ನಾದರೂ ತಿಳಿಸಬಲ್ಲಿರಾ
ನನ್ನ ಅಪರಾಧಗಳನ್ನಾ?

○ ಲಕ್ಷ್ಮಣ್



ಸುತ್ತೂರು ಮಠಕ್ಕೆ ಕೋಮುವಾದಿ ರಾಜಕಾರಣ ಅನಿವಾರ್ಯವೇ?

...ನೂರು ಕೂಸಣ್ಣ

ಸುತ್ತೂರು ಶ್ರೀಗಳು ಸೂಚಿಸಿದ ವ್ಯಕ್ತಿಯೇ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆಂದು ಮಾಧ್ಯಮಗಳ ಮೂಲಕ ಈ ಪಕ್ಷ ಅಭಿಮತಿಸಿರುವುದು ಜಾತ್ಯತೀತ ಮನೋಧರ್ಮದ ಮತದಾರರಲ್ಲಿ ಅನೇಕ ಸಂಶಯಗಳು ಹುಟ್ಟುವುದಕ್ಕೆ ಆಸ್ಪದ ನೀಡಿವೆ (ದಿನಾಂಕ: ೭-೧೧-೦೬). ಶತ-ಶತಮಾನಗಳಿಂದಲೂ ರಾಜಕಾರಣ ಮತ್ತು ಧರ್ಮಕಾರಣಗಳೆರಡೂ ಅವಳಿ ಶಿಶುಗಳಂತೆ ದೇಶೋದ್ಧಾರಕ್ಕಾಗಿ ದುಡಿಯುತ್ತಿವೆ. ಹಾಗೂ ಅದರ ವಿನಾಶಕ್ಕೂ ಕಾರಣೀಭೂತರಾಗಿದ್ದಾರೆ. ನಮ್ಮ ಸಂವಿಧಾನ ಮಠ-ಮಾನ್ಯಗಳಿಗೆ ರಾಜಕಾರಣ ಮಾಡಬಾರದೆಂದು ನಿಷೇಧವೇರಿಲ್ಲ.

ಸುತ್ತೂರು ಶ್ರೀಮಠ ಹಾಗೂ ಇತರ ಮಠಗಳೆಲ್ಲವೂ ರಾಜ್ಯದ ಅಭಿವೃದ್ಧಿಗೆ ಸಲ್ಲಿಸಿರುವ ಸೇವೆಯನ್ನು ಯೊರೊಬ್ಬರೂ ತಿರಸ್ಕರಿಸುವಂತಿಲ್ಲ. ಈ ಸಾಧನೆ ಕೇವಲ ಅವರವರ ಜಾತಿ-ಮತಗಳಿಂದ ದಕ್ಕಿರುವ ಕೊಡುಗೆಗಳೇನಲ್ಲ. ಇದರ ಹಿಂದೆ ಎಲ್ಲಾ ಸಮುದಾಯಗಳ ರಾಜಕಾರಣಿಗಳು, ಅಧಿಕಾರಿಗಳು, ವರ್ತಕರು, ಕೃಷಿಕರು ಹಾಗೂ ಬಡವ-ಬಲ್ಲಿದರೆಂಬ ಭೇದ ಭಾವಗಳನ್ನು ತೋರಿಸದೆ ತಮ್ಮ ಶಕ್ತ್ಯಾನುಸಾರ ಇವರೆಲ್ಲರೂ ಸೇವೆಸಲ್ಲಿಸುತ್ತಾ ಬಂದಿದ್ದಾರೆ. ಇವರೆಲ್ಲರ ಪೈಕಿ ರಾಜಕಾರಣಿಗಳಿಗೆ ಮಾತ್ರ ಅತಿ ಹೆಚ್ಚಿನ ಪ್ರಚಾರ ಸಿಕ್ಕುತ್ತಿದೆ. ಇನ್ನುಳಿದವರೆಲ್ಲರೂ ತಮ್ಮ ಆತ್ಮಪ್ರಸಂಶನೆಗಳಿಂದ ಸಂತೃಪ್ತಿ ಕಂಡುಕೊಳ್ಳುತ್ತಿರುತ್ತಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಸಿದ್ಧಾಂತ ರಹಿತ ರಾಜಕಾರಣಿಗಳು ತಮ್ಮ ಸಹವಾಸ ಮಾಡದ ವ್ಯಕ್ತಿ-ಸಮುದಾಯ; ಮಠ-ಮಾನ್ಯಗಳೆಲ್ಲವನ್ನು ಅದಷ್ಟು ಬೇಗನೆ ಅಪಮೌಲ್ಯಗೊಳಿಸುತ್ತ ಹೋಗುತ್ತಿರುತ್ತಾರೆ. ಈ ಮಹಾ ಪುಣ್ಯ ಕಾರ್ಯದಿಂದ ಅವರ ಅಧಿಕಾರ ಜೋಪಾನವಾಗುತ್ತಿರುತ್ತದೆ; ವೈಯಕ್ತಿಕ ಸಂಪತ್ತಿನ ಗಳಿಕೆ ಎಲ್ಲೆ ಮೀರಿ ನಿಲ್ಲುವುದು. ಸತ್ತೂರು ಮಠ ಹಾಗೂ ಇತರ ಮಠ ಮಾನ್ಯಗಳೆಲ್ಲವೂ ರಾಜಕೀಯ ನಿಲುವು ತಾಳುವುದಕ್ಕೆ ಅಧಿಕಾರ ಹೊಂದಿವೆ. ಜನರೆಲ್ಲರಿಗೂ ಸಮಾನ ಧರ್ಮಕಾರುಣ್ಯಗಳನ್ನು ಧಾರೆ ಎರೆಯಬೇಕಾದ ಇಂತಹ ಪುಣ್ಯಕ್ಷೇತ್ರಗಳೆಲ್ಲವೂ ಸಾರ್ವಜನಿಕವಾಗಿ ಪಕ್ಷವೊಂದರ ಸಾರಥ್ಯವಹಿಸುವುದಂತೂ ಇವುಗಳ ಸಮಸ್ತ ಭಕ್ತ ಸಮುದಾಯಕ್ಕೆ ಸಾರ್ವಜನಿಕವಾಗಿ ನುಂಗಲಾರದ ತುತ್ತಾಗಿ ಬಿಡುವುದು. ಇಂತಹ ವಿಷಮ ಮತ್ತು ಗೊಂದಲಮಯ ವಾತಾವರಣಗಳಲ್ಲಿ ಈ ಸಮುದಾಯ [illegible] ಭಕ್ತ; [illegible]-[illegible]ಗಳಿಗೆ [illegible] [illegible] ಸ್ವಾತಂತ್ರ್ಯಗಳನ್ನು ಸಂಪೂರ್ಣವಾಗಿ ಧಾರೆ ಎರೆಯಲು ಮುಂದಾಗುತ್ತಾರೆ. ಈ ರಾಜ್ಯದಲ್ಲಿ ಚುನಾವಣೆಗಳು ಸಮೀಪಿಸಿದಾಗಲೆಲ್ಲ ಮಠ-ಮಾನ್ಯ ಕೇಂದ್ರಗಳೆಲ್ಲವೂ ಜಾತಿವರಸೆ ಪ್ರದರ್ಶಿಸುವ ಗರಡಿ ಮನೆಗಳಂತಾಗಿ ಬಿಡುತ್ತವೆ.

ಅದರಲ್ಲಿ ಸುತ್ತೂರು ಮಠ ರಾಜ್ಯದ ಇತರ ಮಠಗಳಿಗಿಂತ ಭಾರಿ ಪ್ರಚಾರದಲ್ಲಿರುತ್ತದೆ. ಈ ಭಾಗದಲ್ಲಿ ರಾಜಕೀಯ ಪಕ್ಷಗಳೆಲ್ಲವೂ ಮತದಾರರನ್ನು ತಮ್ಮತ್ತ ಸೆಳೆಯಲು ಶ್ರೀಮಠ ಬಹಿರಂಗವಾಗಿ ಫರ್ಮಾನು ಹೊರಡಿಸಿದೆ ಎಂಬಂತೆ ಪ್ರಚಾರ ಮಾಡುತ್ತವೆ. ಇಂತಹ ವಿಚಾರಗಳು ಪ್ರತಿ ಚುನಾವಣೆಗಳು ಬಂದಾಗಲೆಲ್ಲ ಸುದ್ದಿ ಮಾಧ್ಯಮಗಳಲ್ಲಿ ಅತಿರೋಚಕವಾಗಿ ಪ್ರಚಾರಗೊಂಡಂತೆಲ್ಲ ಮತದಾನ ಮೂಲಭೂತ ಹಕ್ಕುಗಳೆಲ್ಲವೂ ಧೂಳೀಪಟವಾಗಿ ಬಿಡುತ್ತಿರುತ್ತವೆ.

ಮತ್ತೊಂದು ಕಡೆ ಈ ದೇಶದ ಬಹುತೇಕ ಮತದಾರರೆಲ್ಲರೂ ಪಕ್ಷಗಳ ಪ್ರನಾಳಿಕೆ ಓದಿ ಮತ ಚಲಾಯಿಸುವಷ್ಟು ಪ್ರಭುತ್ವಗಳಿಸಿಕೊಂಡಿಲ್ಲ. ಹಾಗೆಯೇ ರಾಜಕೀಯ ಪಕ್ಷಗಳೆಲ್ಲವೂ ಮತದಾರರನ್ನು ಮರಳು ಮಾಡುವ ಕಲೆಗಳನ್ನಷ್ಟೇ ಮೈಗೂಡಿಸಿಕೊಂಡಿವೆ. ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಮತದಾರರನ್ನು ಎದರಿಸುವ ಸಂಸದೀಯ ಬೆಳವಣಿಗೆಗಳನ್ನು ಯಾವೊಂದು ಪಕ್ಷವೂ ಗಳಿಸಿಕೊಂಡಿಲ್ಲ. "ಮಾಧ್ಯಮಗಳ ಮೂಲಕ ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ಸುತ್ತೂರು ಮಠಕ್ಕೆ ಸ್ವಪ್ರತಿಷ್ಠೆಯ ಪ್ರಶ್ನೆ ಎಂಬರ್ಥದಲ್ಲಿ ಪ್ರಸಾರವಾಗಿರುವುದು ಈ ಮಠವನ್ನು ಬೀದಿಗೆಳೆದು ಹರಾಜು ಹಾಕುವ ಹುನ್ನಾರು ಕೂಡ ಅಡಗಿತು" ಈ ಪ್ರಾಂತ್ಯದ ಸಮಸ್ತ ಲಿಂಗಾಯಿತರೆಲ್ಲರೂ ಸುತ್ತೂರು ಮಠದ ಶ್ರೀಗಳು ನಿರ್ದೇಶಿಸಿದಂತೆ, ಕಟ್ಟಪ್ಪಣೆ ಹೊರಡಿಸಿದಂತೆ ಮತಚಲಾಯಿಸುತ್ತಾರೆನ್ನುವ ಮಾತುಗಳೆಲ್ಲವೂ ಮಹಾ ಸುಳ್ಳಿನ ಕಂತೆ. ಈ ಹಿಂದೆಯೂ ಇಂತಹ ಬಿಟ್ಟಿ ಪ್ರಚಾರ ಗಿಟ್ಟಿಸಿದ್ದ ಬಹುತೇಕ ಅಭ್ಯರ್ಥಿಗಳೆಲ್ಲರೂ ನೆಲಕಚ್ಚಿದ್ದಾರೆ. ಕಳೆದ

ವಿಶ್ವ ಗುರು ಬಸವಣ್ಣ ರಾಜಕಾರಣದಲ್ಲಿದ್ದಾಗಲೂ ತನ್ನ ಧರ್ಮ ಕಾರಣವನ್ನು ಬಲಿಗೊಡಲಿಲ್ಲ. ಅವರು ಜಾತ್ಯಾಂಧರ ಮರ್ಮದ ಪ್ರಭುತ್ವಕ್ಕೆ ತಲೆಭಾಗದ ತಪ್ಪಿಗಾಗಿ ಶಿಕ್ಷೆ ಅನುಭವಿಸಿದರು. ಅಣ್ಣನವರು ರಾಜಕಾರಣದಲ್ಲಿದ್ದರೂ ಜಾತ್ಯತೀತರಾಗಿ ಕೋಮುವಾದಿ ಸಾಮಾಜಿಕ ಚಿಂತನೆಗಳನ್ನು ಬಿತ್ತಿದವರಲ್ಲ. ಧರ್ಮಕಾರಣವನ್ನು ಬೀಜಮಂತ್ರವನ್ನಾಗಿ ಪಟಿಸುತ್ತಿದ್ದರೂ ಕರ್ಮಠ ಜಾತಿವಾದವನ್ನು ಬೆಂಬಲಿಸಿ ದವರಲ್ಲ. ಅವರು ಜಾತಿತಾರತಮ್ಯ, ಭೇದ ನೀತಿಗಳ ವಿರುದ್ಧ ದುಡಿದ ತಪ್ಪಿಗಾಗಿ ಬಹುಬೇಗನೆ ಜಗತ್ತಿನಿಂದ ದೂರವಾದರು. ಅವರು ಬಿಟ್ಟು ಹೋಗಿರುವ ಪರಂಪರೆ ಮಾತ್ರ ಚಿರಾಯುವಾಗಿದೆ. ...ನಿಜಕ್ಕೂ ಸುತ್ತೂರು ...ಮಠಕ್ಕೆ ಈ ರಾಜ್ಯದ ...ಸ್ತುತ ರಾಜಕಾರಣದಲ್ಲಿ ...ನ ಹೊಲಸನ್ನು ...ಡೆದು ಹಾಕಬೇಕಿದ್ದರೆ, ... ಈ ಶ್ರೀಮಠವನ್ನು ...ವಿನ ದೇಗುಲವನ್ನಾಗಿ ...ಸುವ ಸಂಕಲ್ಪ ಮಾಡ...ದೆ.

ವಿಧಾನ ಸಭಾ ಚುನಾವಣೆಯಲ್ಲಿ ಈ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿ ಶ್ರೀ ಎಲ್. ರೇವಣಸಿದ್ದಯ್ಯನವರ ಪರವಾಗಿಯೂ ಹೀಗೆಯೆ ಪ್ರಚಾರವಾಗಿತ್ತು. ಆದರೆ, ಪ್ರಬುದ್ಧ ಮತದಾರರು, ತಮ್ಮ ಸುತ್ತಲೂ ಹೆಣೆದಿದ್ದ ನೇಪತ್ಯದ ಸುಳ್ಳಿನ ಸಮುದ್ರ ದಾಟಿ ಸ್ಪಷ್ಟ ತೀರ್ಪು ನೀಡಿ ಬಿಟ್ಟರು.

ಬಿ.ಜೆ.ಪಿ. ಈ ದೇಶಾದ್ಯಂತ ತನ್ನ ನೆಲೆ ಕಂಡುಕೊಳ್ಳುವ ಮುನ್ನ ಈ ಮಠ ಹಾಗೂ ರಾಜ್ಯದ ಇತರ ಮಠಗಳ್ಲೆಲವು ಬಹುತೇಕ ಕೇಂದ್ರ–ರಾಜ್ಯ ಸರ್ಕಾರಗಳಿಂದ ಆದಷ್ಟು ಮಟ್ಟಿಗೆ ಸಹಾಯ ಪಡೆದಿವೆ. ಸುತ್ತೂರು ಮಠ ರಾಜ್ಯದ ಇತರ ಲಿಂಗಾಯಿತರ ಮಠಗಳು ಸ್ವೀಕರಿಸಿರುವುದಕ್ಕಿಂತ ಸಿಂಹ ಪಾಲನ್ನು ಇದು ಪಡೆದಿದೆ. "ಈ ಹಿಂದೆ ಉಮ್ಮತ್ತೂರು ಮತ್ತು ಬದನವಾಳು ಘಟನೆಗಳಾದಗಲೂ ಈ ಭಾಗದ ಲಿಂಗಾಯಿತರು ತಮ್ಮ ಪಕ್ಷಗಳ ಸಿದ್ಧಾಂತಗಳಿಗೆ ಧಕ್ಕೆ ತರಲು ಮುಂದಾಗಲಿಲ್ಲ." ಆದರೂ ಪ್ರತಿ ಚುನಾವಣೆಗಳಲ್ಲಿಯೂ ಸುತ್ತೂರು ಮಠವನ್ನು ಬೀದಿಗೆಳೆದು ಬೆತ್ತಲಗೊಳಿಸುವ ರಾಜಕಾರಣಿಗಳೆ ಜಾಸ್ತಿ. ಇಂತಹ ನಡಾವಳಿಕೆಗಳು ಆಗಾಗ ಮರುಕಳಿಸುತ್ತಿದ್ದರೆ, ಇದರ ಮೂಲ ಧರ್ಮ ಸಂಸ್ಕೃತಿ ನೈಜವಾಗಿ ಉಳಿಯುವುದಾದರೂ ಹೇಗೆ? ಸದಾ ಕೋಮುವಾದಿ ರಾಜಕಾರಣದ ಬಗ್ಗೆ ಚಿಂತಿಸ ತೊಡಗಿದರೆ ಇದರ ಭಕ್ತರ ಮನದೊಳಗೆ ಸಂಶಯಗಳು ಹೆಚ್ಚಾಗಿ ಹುಟ್ಟುತ್ತಿರುತ್ತವೆ. ಈ ಸಂಶಯಗಳನ್ನು ಬಗೆಹರಿಸಲು ಯಾವೊಬ್ಬ ರಾಜಕಾರಣಿಯಿಂದಲ್ಲೂ ಸಾಧ್ಯವಿಲ್ಲ. ಇದಕ್ಕೆ ಉತ್ತರ ಸಿಗುವುದೇನಿದ್ದರೂ ಶ್ರೀ ಮಠ ತನ್ನ ಧಾರ್ಮಿಕ ಜವಾಬ್ದಾರಿಯನ್ನು ಅರಿತು ಜಾತ್ಯತೀತವಾಗಿ ಹಾಕಲಿರುವ ಗಂಭೀರ ಹೆಜ್ಜೆ ಗುರುತುಗಳಲ್ಲಿ ಮಾತ್ರವೇ ಸಿಗಬಲ್ಲದು.

ಜಾಗತಿಕ ಮಟ್ಟದಲ್ಲಿ ಜಾತ್ಯತೀತವಾಗಿ ಕೋಟ್ಯಂತರ ಜನರ ಮನದೊಳಗೆ ಅಮೂರ್ತಗೊಂಡಿರುವ ಈ ಕಾರುಣ್ಯ ಸ್ಥಾನ ಸ್ಥಳೀಯವಾಗಿ ಹೇಗೆ ವರ್ತಿಸಿದರೆ, ಅದರ ವರ್ಚಸ್ಸು ಉಳಿಯುವುದಾದರೂ ಹೇಗೆ? ಹಾಗಂತ ಇದು ತನ್ನ ಪ್ರಜಾಪ್ರಭುತ್ವ ನಿಷ್ಠೆಗಳನ್ನು ಕೈಬಿಡಬೇಕಿಲ್ಲ. ಬಸವ ಸಂಸ್ಕೃತಿ ಅರಿಯದಿದ್ದ ನಾಡಿಗೆ ಅದರ ಜಾತ್ಯತೀತ ಪರಂಪರೆ ಬಿತ್ತಿ ಬೆಳೆಸಲು ಮುಂದಾದ ಮಠವಿದು. ವಿಶ್ವಗುರು ಬಸವಣ್ಣ ರಾಜಕಾರಣದಲ್ಲಿದ್ದಾಗಲೂ ತನ್ನ ಧರ್ಮಕಾರಣವನ್ನು ಬಲಿಗೊಡಲಿಲ್ಲ. ಅವರು ಜಾತ್ಯಾಂಧರ ಮರ್ಮದ ಪ್ರಭುತ್ವಕ್ಕೆ ತಲೆ ಬಾಗದ ತಪ್ಪಿಗಾಗಿ ಶಿಕ್ಷೆ ಅನುಭವಿಸಿದರು. ಅಣ್ಣನವರು ರಾಜಕಾರಣದಲ್ಲಿದ್ದರೂ ಜಾತ್ಯತೀತರಾಗಿ ಕೋಮುವಾದಿ ಸಾಮಾಜಿಕ ಚಿಂತನೆಗಳನ್ನು ಬಿತ್ತಿದವರಲ್ಲ ಧರ್ಮಕಾರಣವನ್ನು ಬೀಜಮಂತ್ರವನ್ನಾಗಿ ಪಠಿಸುತ್ತಿದ್ದರೂ ಕರ್ಮಠ ಜಾತಿವಾದವನ್ನು ಬೆಂಬಲಿಸಿದವರಲ್ಲ. ಅವರು ಜಾತಿತಾರತಮ್ಯ, ಭೇದ ನೀತಿಗಳ ವಿರುದ್ಧ ದುಡಿದ ತಪ್ಪಿಗಾಗಿ ಬಹುಬೇಗನೆ ಜಗತ್ತಿನಿಂದ ದೂರವಾದರು. ಅವರು ಬಿಟ್ಟು ಹೋಗಿರುವ ಪರಂಪರೆ ಮಾತ್ರ ಚಿರಾಯುವಾಗಿದೆ. ನಿಜಕ್ಕೂ ಸುತ್ತೂರು ಮಠಕ್ಕೆ ಈ ರಾಜ್ಯದ ಪ್ರಸ್ತುತ ರಾಜಕಾರಣದಲ್ಲಿರುವ ಹೊಲಸನ್ನು ತೊಡೆದು ಹಾಕಬೇಕಿದ್ದರೆ, ಅದು "ಈ ಶ್ರೀಮಠವನ್ನು ಅರಿವಿನ ದೇಗುಲವನ್ನಾಗಿ ಬೆಳೆಸುವ ಸಂಕಲ್ಪ ಮಾಡಬೇಕಿದೆ."

ಇಲ್ಲಿಗೆ ಆಗಮಿಸುವ ಭಕ್ತ ಕೋಟಿಯ ಮನದೊಳಗೆ ನೈಜ ಬಸವ ತತ್ವಗಳನ್ನು ಬಿತ್ತಿ, ಅದರ ಫಸಲಿನಿಂದ ನಿರ್ಮಲ ಸಮಾಜವನ್ನು ಸ್ಥಾಪಿಸಲು ಮುಂದಾಗಬೇಕಿದೆ. ಆವಾಗ ಪ್ರತಿಯೊಬ್ಬ ಮತದಾರ ತನ್ನ ಮತದ ಮೌಲ್ಯವನ್ನು ಸರಿಯಾಗಿ ತೂಗುತ್ತಾನೆ. ಇಂತಹ ಪ್ರಬುದ್ಧ ಕಾಯಕದಿಂದ ಮಾತ್ರವೇ ಶ್ರೀಮಠ ಮತ್ತಷ್ಟು ಲೋಕಮಾನ್ಯವಾಗುತ್ತದೆ. ಆವಾಗ ಜ್ಞಾನ ಪೂರ್ವ ಸಮಾಜ ನಿರ್ಮಾಣಗೊಂಡು, ಜಾತಿ ತಾರತಮ್ಯತೆ, ಅಸ್ಪೃಶ್ಯತೆ ಹಾಗೂ ಸ್ತ್ರೀ ಭೇದಗಳೆಲ್ಲವೂ ಇಲ್ಲಿಂದ ಹೊರ ನಡೆಯುತ್ತವೆ. ಒಂದುವೇಳೆ, ಶ್ರೀಮಠ ನೆಪ ಮಾತ್ರಕ್ಕೆ ಧರ್ಮಕಾರಣ ಮಾಡಿ, ಕೋಮುವಾದಿ ಚಿಂತನೆಗಳನ್ನೇ ಪ್ರಧಾನ ಆಹಾರವಾಗಿ ಸ್ವೀಕರಿಸಿದರೆ, ಅದರಿಂದ ಅದು ಏನನ್ನು ಈ ದೇಶಕ್ಕೆ ನೀಡಲು ಸಾಧ್ಯವಿಲ್ಲ.

> **ತತ್ವ ಹೀನ ರಾಜಕಾರಣಕ್ಕೆ ಮತ್ತು ಕೋಮುವಾದಿ ನಡವಳಿಕೆಗಳಿಗೆ ಸುತ್ತೂರು ಮಠ ಹೀಗೆಯೇ ಪ್ರಚಾರ ನೀಡುತ್ತಾ ಮುನ್ನೆಡೆದರೆ, ಅದು ಧರ್ಮದ ಹಾದಿಯಲ್ಲಿ ವಿಷದ ಮುಳ್ಳುಗಳನ್ನು ತುಳಿದು ನಡೆಯಬೇಕಾಗುತ್ತದೆ.**

ತತ್ವ ಹೀನ ರಾಜಕಾರಣಕ್ಕೆ ಮತ್ತು ಕೋಮುವಾದಿ ನಡವಳಿಕೆಗಳಿಗೆ ಸುತ್ತೂರು ಮಠ ಹೀಗೆಯೇ ಪ್ರಚಾರ ನೀಡುತ್ತಾ ಮುನ್ನೆಡೆದರೆ, ಅದರ ಧರ್ಮ ಸಂಸ್ಕೃತಿಯ ಹಾದಿಯಲ್ಲಿ ಆಗೋಚರವಾಗಿ ವಿಷ ಮುಳ್ಳುಗಳನ್ನು ತುಳಿದು ನೆಡೆಯಬೇಕಾಗುತ್ತದೆ. "ಅದರ ಬದಲು ಭ್ರಷ್ಟ ಭಕ್ತರ ಕೊಪ್ಪರಿಕೆ ಸಂಪತ್ತಿಗಿಂತ ಬೇಡಿ ನೀಡುವ ನೈಜ ಭಕ್ತರ ಕಾಣಿಕೆ ಸರ್ವಶ್ರೇಷ್ಠವಾದದ್ದು"– ಎಂಬ ಈ ಮಾತುಗಳನ್ನು ಇದು ಎಚ್ಚರಿಕೆಯಿಂದ ಆಲಿಸಬೇಕಾದ ಅನಿವಾರ್ಯತೆಯಿದೆ. ಎಲ್ಲವನ್ನು ಬಿಟ್ಟ ಮಗ ತನ್ನ ಭಂಗಿ ನಟ್ಟ ಎಂಬಂತೆ ಈ ಮಠವೇನಾದರೂ ಕೋಮುವಾದಿ ರಾಜಕಾರಣಕ್ಕೆ ಕೈ ಜೋಡಿಸಿದರೆ; ಅದರ ಧಾರ್ಮಿಕ ನೈತಿಕತೆಗಳೆಲ್ಲವೂ ಪ್ರಶ್ನೆರ್ಹವಾಗಿ ಬಿಡುತ್ತವೆ. □



ಹೊಗೆ

ಬೀಡಿ ಕಟ್ಟುವ
ಬಹುಮಂದಿ ಹೆಂಗಸರ ಬದುಕು
ಹೊಗೆಯಾಗಿ ಹೋಗುತ್ತದೆ!
ಗಂಧದ ಕಡ್ಡಿ ಹೊಸೆಯವವರ
ಬದುಕೇನೂ ಭಿನ್ನವಲ್ಲ!

ಡಾ॥ ಸಿ.ಪಿ.ಕೆ

ಸಂವಾದ




ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಬ್ರಾಹ್ಮಿನ್ ಫೋಬಿಯಾ–೨ ರ ಮುಂದುವರೆದ ಭಾಗ:

ಬ್ರಾಹ್ಮಣರು ಹಿಂದೂಗಳಲ್ಲವೇ?

ಡಾ|| ಸಿ.ಜಿ. ಲಕ್ಷ್ಮಿಪತಿ

"ಪವಿತ್ರ ಕೃಷ್ಣಾನದಿ ತೀರದಲ್ಲಿ ನಾವು ಭಾಗವಹಿಸಿದ ಒಂದು ಪಂಡಿತ ಸಭೆಯಲ್ಲಿ ಹಿಂದೂ ಶಬ್ದದ ಸಾಧು ಅಸಾಧುತ್ವಗಳ ಬಗ್ಗೆ ಪ್ರಸ್ತಾಪ ಬಂದಿತು. ಆವಾಗ ಮಹಾನುಭಾವರೂ ಮಹಾಪಂಡಿತರೂ ಆದ ಡೊಂಗ್ರೆ ಕೃಷ್ಣ ವಿಶ್ವೇಶ್ವರ ಶಾಸ್ತ್ರಿಗಳು ಈ ಹಿಂದೂಮತ, ಹಿಂದೂಗಳು ಎಂಬ ಪದವನ್ನು ಬಳಸಲು ಪ್ರಾರಂಭಿಸಿದವರು ವಿದೇಶಿಯರು. ಈ ಪದಗಳು ಭಾರತೀಯ ಸಂಸ್ಕೃತಿಗೆ ಸೇರಿದವಲ್ಲವೆಂದು ಸೋದಾಹರಣವಾಗಿ ವಿವರಿಸಿದರು. ಆದರೆ ವೈಯಾಕರಣಿಗಳು ಅಪಶಬ್ದಗಳಿಗೂ ಸಹ ವಾಚಕತ್ವವಿದೆಯೆಂದು ಒಪ್ಪುತ್ತಿದ್ದಾರೆ. ಆದ್ದರಿಂದ ಶಾಸ್ತ್ರದಲ್ಲಿ ಇಲ್ಲದ್ದು ಜನಶ್ರುತಿಯಲ್ಲಿದ್ದಾಗ ಇಂತಹ ಅಪಶಬ್ದಗಳ ಬಗ್ಗೆ ಪಂಡಿತರು ನಿರ್ಲಿಪ್ತರಾಗಿರಬೇಕು. ವರ್ಣವ್ಯವಸ್ಥೆಯನ್ನು ಅನುಸರಿಸುವ ಸನಾತನ ಧಾರ್ಮಿಕರನ್ನು ಹಿಂದೂಗಳೆಂದು ಕರೆದು ಅದನ್ನು ಹಾಗೇ ನಿರ್ಲಿಪ್ತವಾಗಿ ಸ್ವೀಕರಿಸಿದರೆ ಮುಗಿಯಿತು.

ಬ್ರಾಹ್ಮಣ ಅಥವಾ ಸನಾತನ ಧರ್ಮವು ನಾವು ಹಿಂದೂ ಧರ್ಮವೆಂದು ಕರೆಯಲ್ಪಡುತ್ತಿರುವ ಜನಸಮುದಾಯಕ್ಕಿಂತ ಭಿನ್ನವೆಂದು ನಾನು ಈ ಲೇಖನ ಮಾಲೆಯಲ್ಲಿ ನಿರೂಪಿಸಲು ಪ್ರಯತ್ನಿಸುತ್ತಿರುವಾಗಲೇ, ನನ್ನ ಅನುಮಾನಿತ ಸತ್ಯಕ್ಕೆ ಪೂರಕವಾಗಿ ದೊರಕಿದ ಮಾಹಿತಿಯೊಂದನ್ನು ಸಮಾಜಶಾಸ್ತ್ರಜ್ಞನ ಸಂಭ್ರಮಾಶ್ಚರ್ಯಗಳಿಂದ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ ನನಗೆ ಇತ್ತೀಚೆಗೆ ದೊರೆತ ಅಕ್ಷರ ಪ್ರಕಾಶನ ಪ್ರಕಟಿಸಿರುವ 'ಕೊನೆಯ ಬ್ರಾಹ್ಮಣ' ಎಂಬುದೇ ಆ ಕೃತಿ. ರಾಣಿ ಶಿವಶಂಕರ ಶರ್ಮ ಅವರು ಬರೆದ 'ದ ಲಾಸ್ಟ್ ಬ್ರಾಹ್ಮಿನ್' ಎಂಬ ಆತ್ಮಕಥನ/ಜೀವನ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಅದರ ಕೆಲವು ಭಾಗಗಳ ಅನುವಾದದಿಂದ 'ಕೊನೆಯ ಬ್ರಾಹ್ಮಣ' ಎಂಬ ಪುಟ್ಟ ಪುಸ್ತಕ ರಚಿತವಾಗಿದೆ. ಅದರ ಹಿನ್ನಲೆಯನ್ನು ಕುರಿತು ಕೆ.ವಿ ಅಕ್ಷರ್ ಹೀಗೆ ಹೇಳುತ್ತಾರೆ 'ದ ಲಾಸ್ಟ್ ಬ್ರಾಹ್ಮಿನ್' ಎಂಬ ಹೆಸರಿನ ಆ ಕೃತಿಯು ರಾಣಿನರಸಿಂಹಶಾಸ್ತ್ರಿ ಎಂಬ ಸಂಸ್ಕೃತ ಪಂಡಿತರ ಜೀವನ ಕಥನ ಸಾಂಪ್ರದಾಯಿಕ ಬ್ರಾಹ್ಮಣನೊಬ್ಬ ಹೊಸ ಕಾಲದಲ್ಲಿ ಅನುಭವಿಸಿದ ಒಳತೋಟಗಳ ನಿರೂಪಣೆ' ಆ ಪುಸ್ತಕದ ಮುಖ್ಯವಾದ ಚರ್ಚೆಯೆಂದರೆ ಅಕ್ಷರ ಅವರ ಪ್ರಕಾರ 'ಬ್ರಾಹ್ಮಣ ಸಂಪ್ರದಾಯ' ಮತ್ತು ಹಿಂದೂ ಧರ್ಮಗಳ ನಡುವಿನ ಭಿನ್ನತೆ' ಆ ಪುಸ್ತಕವನ್ನು ಪೂರ್ತಿಯಾಗಿ ಓದುವವರೆಗೆ ನಾನು ಏನನ್ನೂ ಹೇಳಲಾರೆ. ಆದರೆ 'ಕೊನೆಯ ಬ್ರಾಹ್ಮಣ' ಪುಸ್ತಕದಲ್ಲಿ ದೊರೆಯುವ ಮಾಹಿತಿಗಳು ಬ್ರಾಹ್ಮಣ ಧರ್ಮ ಮತ್ತು ಹಿಂದೂ ಧರ್ಮ ಹೇಗೆ ಬೇರೆ ಬೇರೆ ಅನ್ನುವುದನ್ನು ಅರಿತುಕೊಳ್ಳಲು ಸಾಕಷ್ಟು ನೆರವಾಗುತ್ತವೆ. ಆ ಪುಸ್ತಕದಲ್ಲಿ ಬರುವ ಸಂಭಾಷಣೆಗಳನ್ನು ನೋಡಿ.

"ಅಪ್ಪಾ ಹಿಂದೂ ಮತವೆಂಬ ಶಬ್ದವನ್ನು ನಿಮ್ಮ ಸನಾತನ ಧಾರ್ಮಿಕರು ಒಪ್ಪುವರೆ?" ಪುಸ್ತಕದ ಲೇಖಕನ ಪ್ರಶ್ನೆಗೆ ಅವರ ತಂದೆ ರಾಣಿ ನರಸಿಂಹಶಾಸ್ತ್ರಿಗಳು ಕೆಳಕಂಡಂತೆ ಉತ್ತರಿಸುತ್ತಾರೆ.

"ಪವಿತ್ರ ಕೃಷ್ಣಾನದಿ ತೀರದಲ್ಲಿ ನಾವು ಭಾಗವಹಿಸಿದ ಒಂದು ಪಂಡಿತ ಸಭೆಯಲ್ಲಿ ಹಿಂದೂ ಶಬ್ದದ ಸಾಧು ಅಸಾಧುತ್ವಗಳ ಬಗ್ಗೆ ಪ್ರಸ್ತಾಪ ಬಂದಿತು. ಆವಾಗ ಮಹಾನುಭಾವರೂ ಮಹಾಪಂಡಿತರೂ ಆದ ಡೊಂಗ್ರೆ ಕೃಷ್ಣ ವಿಶ್ವೇಶ್ವರ ಶಾಸ್ತ್ರಿಗಳು ಈ ಹಿಂದೂಮತ, ಹಿಂದೂಗಳು ಎಂಬ ಪದವನ್ನು ಬಳಸಲು ಪ್ರಾರಂಭಿಸಿದವರು ವಿದೇಶಿಯರು. ಈ ಪದಗಳು ಭಾರತೀಯ ಸಂಸ್ಕೃತಿಗೆ ಸೇರಿದವಲ್ಲವೆಂದು ಸೋದಾಹರಣವಾಗಿ ವಿವರಿಸಿದರು. ಆದರೆ ವೈಯಾಕರಣಿಗಳು ಅಪಶಬ್ದಗಳಿಗೂ ಸಹ ವಾಚಕತ್ವವಿದೆಯೆಂದು ಒಪ್ಪುತ್ತಿದ್ದಾರೆ. ಆದ್ದರಿಂದ ಶಾಸ್ತ್ರದಲ್ಲಿ ಇಲ್ಲದ್ದು ಜನಶ್ರುತಿಯಲ್ಲಿದ್ದಾಗ ಇಂತಹ ಅಪಶಬ್ದಗಳ ಬಗ್ಗೆ ಪಂಡಿತರು ನಿರ್ಲಿಪ್ತರಾಗಿರಬೇಕು. ವರ್ಣವ್ಯವಸ್ಥೆಯನ್ನು ಅನುಸರಿಸುವ ಸನಾತನ ಧಾರ್ಮಿಕರನ್ನು ಹಿಂದೂಗಳೆಂದು ಕರೆದು ಅದನ್ನು ಹಾಗೇ ನಿರ್ಲಿಪ್ತವಾಗಿ ಸ್ವೀಕರಿಸಿದರೆ ಮುಗಿಯಿತು. ಸರಿಹೋಗುತ್ತದೆ. ಎಂದು ವಿಶ್ವೇಶ್ವರ ಶಾಸ್ತ್ರಿಗಳು ಚರ್ಚೆಗೆ ಮುಕ್ತಾಯ ಹಾಡಿದರು... ಆದ್ದರಿಂದ ಸನಾತನಧಾರ್ಮಿಕರನ್ನು ಇತರರು ಹಿಂದೂಗಳೆಂದು ಕರೆದಾಗ ಹಿಂದೂಗಳೆಂದು ಭಾವಿಸುವುದಿಲ್ಲ...

ರಾಣಿ ಶಿವಶಂಕರ ಶರ್ಮ ಅವರು ತಮ್ಮ ತಂದೆಗೂ ತಮಗೂ ನೆಡೆದ ಸಂಭಾಷಣೆಯ ವಿವರಗಳ ಜೊತೆಗೆ ತಮ್ಮ ಆತ್ಮ ಕಥನಾನುಭವಗಳನ್ನು ಹೀಗೆ ವಿವರಿಸುತ್ತಾರೆ.

"ಆದರೆ ನಾನು ಮತವಿಲ್ಲದ ಮನೆಯಲ್ಲಿ ಹುಟ್ಟಿದೆ. ನಮ್ಮದು ಸನಾತನ ಧರ್ಮ ಮತವೆಂಬುದು ನಮಗೆ ತಿಳಿಯದು. ಆದಿಶಂಕರಾಚಾರ್ಯರಿಗೆ ಸೇರಿದ ಸನಾತನ ಧರ್ಮ ನಮ್ಮದು ನನಗೆ ನನ್ನ ತಂದೆಯಾಗಿಲಿ, ತಾಯಿಯಾಗಲಿ, ಚಿಕ್ಕಂದಿನಲ್ಲಾಗಲಿ ದೊಡ್ಡವನಾದಗಲಿ 'ಹಿಂದೂ' ಎಂಬ ಪದದ ಕುರಿತು ಎಂದೂ ಹೇಳಿರಲಿಲ್ಲ. ನಮ್ಮ ತಂದೆಯವರು ನನಗೆ ಭೋದಿಸಿದ ರಘುವಂಶ, ಕುಮಾರ ಸಂಭವ, ಮೊದಲಾದ ಪಂಚಮಹಾಕಾವ್ಯಗಳಲ್ಲಾಗಲಿ ಭಗವದ್ಗೀತೆ ಉಪನಿಷತ್ತುಗಳಂತಹ ವೇದಾಂತ ಗ್ರಂಥಗಳಲ್ಲಾಗಲಿ ಎಂದೂ 'ಹಿಂದೂ' ಎಂಬ ಶಬ್ದವೇ ಕಂಡು ಬಂದಿಲ್ಲ. ಅವರು ಭೋದನೆ ಮಾಡುವಾಗಲಾಗಲಿ, ಹರಟೆ ಮಾಡುವಾಗಲಾಗಲಿ ಎಂದೂ ಆ ಶಬ್ದವನ್ನು ಉಚ್ಚರಿಸಿದ್ದಿಲ್ಲ. ನಾವು ಈ ಪದ ನನಗೆ ಎದುರಾದಿದಲ್ಲ. ನಾನು ಚಿಕ್ಕಂದಿನಲ್ಲೆ ಪಾರಾಯಣ ಮಾಡಿದ ನಮಕ ಚಮಕಗಳಲ್ಲಾಗಲಿ, ಸಂಧ್ಯಾ ವಂದನದಲ್ಲಾಗಲಿ, ಶಂಕರ ಭಗವತ್ಪಾದರ ಸ್ತೋತ್ರಗಳಲ್ಲಾಗಲಿ, ತೋಟ ಕಾಪಟಕಗಳಲ್ಲಾಗಲಿ ಬೇರೆಲ್ಲೂ 'ಹಿಂದೂ' ಎಂಬ ಪದ ಕಂಡು ಬಂದಿಲ್ಲ. 'ಹಿಂದೂ' ಎಂಬುದು ಒಂದು ಅಪಭ್ರಂಶ ಮ್ಲೇಚ್ಛ ಪದವೆಂದು ನಮ್ಮ ತಂದೆಯವರು ಭಾವಿಸುತ್ತಾರೆ. ನಮ್ಮ ಸನಾತನ ಬ್ರಾಹ್ಮಣ ಕುಟುಂಬಕ್ಕೆ ಈ ಹಿಂದೂಧರ್ಮ ಅಥವಾ 'ಹಿಂದೂ' ಎಂಬುದು ಒಂದು ಅಪಭ್ರಂಶ ಮ್ಲೇಚ್ಛ ಪದವೆಂದು ನಮ್ಮ ತಂದೆಯವರು ಭಾವಿಸುತ್ತಾರೆ. ನಮ್ಮ ಸನಾತನ ಬ್ರಾಹ್ಮಣ ಕುಟುಂಬಕ್ಕೆ ಈ ಹಿಂದೂ ಧರ್ಮ ಅಥವಾ ಹಿಂದೂ ಮತದೊಂದಿಗೆ ಯಾವ ರೀತಿಯಲ್ಲೂ ಸಂಬಂಧವಿಲ್ಲ...."

ಬ್ರಾಹ್ಮಣಧರ್ಮಕ್ಕೂ ಹಿಂದೂ ಧರ್ಮಕ್ಕೂ ಯಾವ ರೀತಿಯಲ್ಲೂ ಸಂಬಂಧವಿಲ್ಲವೆಂದು ಸ್ವತಃ ಬ್ರಾಹ್ಮಣರಾದ ರಾಣಿ ಶಿವಶಂಕರ ಶರ್ಮಾ ಬಲವಾಗಿ ಪ್ರತಿಪಾದಿಸುತ್ತಾರೆ. ಹಾಗೆ ಮುಂದುವರೆದು

"ಬ್ರಾಹ್ಮಣರಿಗೂ ಹಿಂದೂ ಧರ್ಮವೆಂಬುದಕ್ಕೂ ಐತಿಹಾಸಿಕವಾಗಿ ಸಂಬಂಧವಿಲ್ಲವೆಂದು ತಿಳಿದು ಬರುತ್ತದೆ. ಆದರೆ ಈ ವಿಷಯ ಮರೆಯಾಗಿ ಬ್ರಾಹ್ಮಣರೆಂದರೇನೇ ಹಿಂದೂ ಧರ್ಮ/ಮತದ ಪ್ರತಿನಿಧಿಗಳು ಎನ್ನುವಷ್ಟರ ಮಟ್ಟಿಗೆ ಅಲಕ್ಷ್ಯ ವಿಸ್ಮೃತಿ ವ್ಯಾಪಿಸಿ ಬಿಟ್ಟಿದೆ. ಆ ಕಾರಣದಿಂದಲೆ ನನ್ನ ಶೂದ್ರ ಮಿತ್ರನು ಬ್ರಾಹ್ಮಣರು ಹಿಂದೂಗಳಲ್ಲವೆಂದರೇನು ಎಂದು ಆಶ್ಚರ್ಯ ಪಡುತ್ತಾನೆ. ಆದರೆ, ಇಂದಿಗೂ ಹಿಂದೂಧರ್ಮ ಮತವೆಂಬುದಕ್ಕೆ ಸೇರದೇನೆ ಒಬ್ಬ ಸನಾತನ ಧಾರ್ಮಿಕ ಬ್ರಾಹ್ಮಣನು ಜೀವಂತವಾಗಿದ್ದುದುಂಟಲ್ಲ. ಆ ಅಂತಹ ಬ್ರಾಹ್ಮಣ–ನನ್ನ ತಂದೆ....

....ಕ್ರೈಸ್ತರ ಭಾಷೆಯಲ್ಲಿನ 'ರಿಲಿಜನ್', 'ಮತ' ಎಂಬ ಪದಕ್ಕೆ ಸಮಾನಾರ್ಥಕ ಪದ ಸನಾತನ ಧರ್ಮ. ಬ್ರಾಹ್ಮಣ ಸಂಪ್ರದಾಯಗಳಲ್ಲಿ ಕಂಡು ಬರುವುದಿಲ್ಲ. ಏಕೆಂದರೆ ಅದು ಮತವಲ್ಲ" ಇಷ್ಟು ಸುಸ್ಪಷ್ಟವಾಗಿ ಬ್ರಾಹ್ಮಣ ಧರ್ಮಕ್ಕೂ, ಹಿಂದೂ ಧರ್ಮಕ್ಕೂ ಇರುವ ವ್ಯತ್ಯಾಸವನ್ನು ತರ್ಕಬದ್ಧವಾಗಿ ಈ ಪುಸ್ತಕವು ಮಂಡಿಸುತ್ತದೆ. ಓರಿಯಂಟಲಿಸ್ಟರು ಮತ್ತು ಇಂಡಾಲಜಿಸ್ಟರು ಜಾತಿಯ ಕುರಿತು ಅಧ್ಯಯನ ಮಾಡಿರುವವರು, ನನ್ನ ತಿಳುವಳಿಕೆಗೆ ಬಂದಂತೆ ಬ್ರಾಹ್ಮಣಧರ್ಮ ಮತ್ತು ಹಿಂದೂಧರ್ಮವೆಂದು ಕರೆಯಲ್ಪಡುತ್ತಿರುವ ಅಸಂಖ್ಯಾತ ಭಾರತೀಯ ಕುಲಸಮುದಾಯಗಳನ್ನು ಒಟ್ಟಿಗೇ ಇಟ್ಟು ಚರ್ಚಿಸುತ್ತಾರೆ. ಈ ಚರ್ಚೆಯಿಂದ ಇವುಗಳ ನಡುವಿನ ಭಿನ್ನ ಮತ್ತು ಸಮಾನ ಅಂಶಗಳು ಗ್ರಹಿಕೆ ಸಿಗದೆ ಮುಸುಕಾಗುತ್ತವೆ. ಸನಾತನ ಬ್ರಾಹ್ಮಣಧರ್ಮವನ್ನು ಪ್ರತ್ಯೇಕಿಸುವುದರೊಂದಿಗೆ ಅನೇಕ ಸಮಸ್ಯೆಗಳಿಗೆ ಉತ್ತರ ದೊರಕುವ ಸಾಧ್ಯತೆ

ಇದೆ. ಅದರಲ್ಲೂ ಮುಖ್ಯವಾಗಿ ಈ ಪ್ರಬಂಧದಲ್ಲಿ ಮಂಡಿಸಲಾಗುತ್ತಿರುವ ಬಹುಮುಖ್ಯ ಪ್ರಶ್ನೆ ಬ್ರಾಹ್ಮಣಧರ್ಮಕ್ಕೊಂದು ಪವಿತ್ರಗ್ರಂಥವಿರುವುದನ್ನು ಖಚಿತ ಪಡಿಸಿಕೊಳ್ಳುವುದು. ಮನುಸ್ಮೃತಿಯು ಬ್ರಾಹ್ಮಣಧರ್ಮದ ಪವಿತ್ರಗ್ರಂಥವಾಗಿದೆ. ಮತ್ತು ಅದನ್ನು ಅನುಸರಿಸಲಾಗುತ್ತಿದೆ. ಕೊನೆಯ ಬ್ರಾಹ್ಮಣ ಪುಸ್ತಕದ ಭಾಗಗಳು ಇದನ್ನಂತೂ ಸ್ಪಷ್ಟವಾಗಿ ನಿರೂಪಿಸುತ್ತವೆ. ಅದಕ್ಕೂ ಮೊದಲು ನಾನು ಸ್ವತ: ಕಂಡಿರುವ ಉದಾಹರಣೆ ಹೇಳಿ ಬಿಡುತ್ತೇನೆ. ಬೆಂಗಳೂರಿನ ಮಾರುಕಟ್ಟೆ ಪ್ರದೇಶದಲ್ಲಿ ಮಹಾರಾಜ ಸಂಸ್ಕೃತ ಪಾಠಶಾಲೆ ಇದೆ. ಸ್ವಾತಂತ್ರ್ಯ ಬಂದ ಮೇಲೆ ತೀರಾ ಇತ್ತೀಚಿನ ದಶಕಗಳಲ್ಲಿ ಕೆಲವು ಶೂದ್ರರು ಅಲ್ಲಿ ಸಂಸ್ಕೃತ ಪದವಿ ಶಾಲೆಗೆ ಸೇರಿದರು. ಅದು ತಿಳಿದ ಕೂಡಲೇ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಸರ್ಕಾರದಿಂದ ಸಂಬಳ ಪಡೆಯುವ ಬ್ರಾಹ್ಮಣ ಸನಾತನಧರ್ಮ ಪರಿಪಾಲಕ ಹಿರಿಯ ಅಧ್ಯಾಪಕರು ರಾಜೀನಾಮೆ ನೀಡಿದರು. ಶೂದ್ರನಿಗೆ ಸಂಸ್ಕೃತವನ್ನು ವೇದವನ್ನು ಕಲಿಸಲಾರೆನೆಂಬುದು ಅವರ ಸ್ಪಷ್ಟ ನಿಲುವಾಗಿತ್ತು.

ಮನುಸ್ಮೃತಿಯಲ್ಲಿ ೪ನೇ ಅಧ್ಯಯದಲ್ಲಿನ ೮೦ನೇ ಶ್ಲೋಕವು ಹೇಗೆ ಹೇಳುತ್ತದೆ.

ನ ಶೂದ್ರಾಯ ಮತಿಂ ದದ್ಯಾನ್ನೋಚ್ಛಿಷ್ಟಂ ನ ಹವಿಷ್ಕೃತಂ।
ನ ಚಾಸ್ಯೋಪದಿಶೇದ್ಧರ್ಮಂ ನಚಾಸ್ಯವ್ರತ ಮಾದಿಶೇತ್

ಶೂದ್ರನಿಗೆ ಓದುಕಲಿಸಬಾರದು, ಭುಜ್ಜದ ಹವಿಸ್ಸಿನ ಶೇಷವನ್ನು ಹಾಗೂ ಎಂಜಲನ್ನು ಕೊಡಬಾರದು, ಧರ್ಮೋಪದೇಶ ಮಾಡಬಾರದು. ವ್ರತಾಚರಣೆಯನ್ನು ಹೇಳಿಕೊಡಬಾರದು

ಯೋ ಹ್ಯಸ್ಯಧರ್ಮಾಮಾಚಷ್ಟೆ ಯಶ್ಚೈವಾದಿಶತಿ ವ್ರತಂ।
ಸೋ ಅಸವೃತಂ ನಾಮ ತಮಃ ಸಹ ತೇನೈವ ಮಚ್ಚತಿ.

ಶೂದ್ರನಿಗೆ ಧರ್ಮೋಪದೇಶ ಮಾಡುವವನು. ವ್ರತಾಚರಣೆಗಳನ್ನು ಹೇಳಿಕೊಡುವವನು ಶೂದ್ರನ ಜೊತೆಗೆ ಸೇರಿ ತಾನು ಸಹಿತ ಅಸಂವೃತವೆಂಬ ನರಕಕ್ಕೆ ಹೋಗುತ್ತಾನೆ. 'ಕೊನೆಯ ಬ್ರಾಹ್ಮಣ'ದ ಪುಸ್ತಕದಲ್ಲಿ ರಾಣಿ ಶಿವಶಂಕರ ಶರ್ಮಾ ಹೀಗೆ ಬರೆಯುತ್ತಾರೆ.

"ನಮ್ಮ ತಂದೆಯವರು ಸಂಸ್ಕೃತ ಭಾಷೆ ಬರದವರಿಗೆ ಭಾಷ್ಯ ಉಪನಿಷತ್ತುಗಳನ್ನು ಭೋದಿಸುವುದಿಲ್ಲ.... ವೇದಗಳನ್ನು ಯಾರಿಗೆ ಹೇಳಬೇಕು ಯಾರು ಶ್ರೋತೃಗಳಾಗಿರಬೇಕು ಎಂಬುದನ್ನು ಬ್ರಾಹ್ಮಣರು ನಿರ್ದೇಶಿಸಿದ್ದಾರೆ.

ಇದರಿಂದ ಮನುಸ್ಮೃತಿ ಬ್ರಾಹ್ಮಣಧರ್ಮದ ಪವಿತ್ರ ಗ್ರಂಥವೆಂದು ತಿಳಿಯಬಹುದೇ? ಎಂದರೆ ಖಂಡಿತವಾಗಿಯೂ ಹೌದು ಎಂದು ಉತ್ತರ ನೀಡಬೇಕಾಗುತ್ತದೆ. ಹಾಗಾದರೆ ಭಾರತದಲ್ಲಿರುವ ಬ್ರಾಹ್ಮಣರೆಲ್ಲರೂ ಮನುಸ್ಮೃತಿಗೆ ಅನುಗುಣವಾಗಿ ನಡೆಯುತ್ತಿದ್ದಾರೆಯೇ? ಅದಕ್ಕೆ ಇಲ್ಲ-ಹೌದು ಎಂದೇ ಉತ್ತರ ನೀಡಬೇಕಾಗುತ್ತದೆ. ಮನುಸ್ಮತಿಯನ್ನು ಹಲವಾರು ಬಾರಿ ಓದಿರುವ ನಾನು ಬ್ರಾಹ್ಮಣ ಧರ್ಮದ ಸಾಹಿತ್ಯಗಳು ರಚಿಸಿರುವ ಸಾಹಿತ್ಯ ಮತ್ತು ಬ್ರಾಹ್ಮಣಗೆಳೆಯರೊಡನೆ ಒಡನಾಟದಿಂದ ನಾನು ಅರಿತುಕೊಂಡಿರುವುದೇನೆಂದರೆ ಅವರು ಮನುಸ್ಮೃತಿಯನ್ನು "Word of the law" ಆಗಿ ಅನುಸರಿಸದೇ ಹೋದರೂ ಖಂಡಿತವಾಗಿಯೂ ಅದು "Spirit of the law" ಆಗಿ ಕಾರ್ಯನಿರ್ವಹಿಸುತ್ತದೆ ಅದು ಹೇಗೆಂದು ನೋಡುವ.

ಬ್ರಾಹ್ಮಣರು ವೇದಾಧ್ಯಯದಲ್ಲಿ ನಿರತರಾಗಬೇಕೆಂದೂ ಅವರಿಗೆ ಶಸ್ತ್ರ ಬಳಕೆಯ ಅವಶ್ಯಕತೆಯೇ ಇಲ್ಲವೆಂಬಂತೆ ಬರೆಯುವ ಮನುವು ತನ್ನ ಧರ್ಮಶಾಸ್ತ್ರದ ೮ನೇ ಅಧ್ಯಯದಲ್ಲಿ ಆತ್ಮರಕ್ಷಣೆ, ಬಾಲಕ ಅಥವಾ ವೃದ್ಧರ ರಕ್ಷಣೆಗೆ ಲೈಂಗಿಕ ನಿಷೇಧಗಳ ರಕ್ಷಣೆಗಾಗಿ ಬ್ರಾಹ್ಮಣರು ಶಸ್ತ್ರ ಬಳಸಬಹುದೆಂದು ಹೇಳುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ ಯಾರು ವರ್ಣಧರ್ಮವನ್ನು ಮೀರುತ್ತಾರೋ ಅವರ ವಿರುದ್ಧ ಶಸ್ತ್ರ ಎತ್ತಬೇಕೆಂದು ಕರೆಕೊಡುತ್ತಾನೆ. ನೀವು ಎಲ್ಲಿಂದ ಎಲ್ಲಿಗಾದರೂ ಹೋಗಿ ಮೀಸಲಾತಿ, ಅಂಬೇಡ್ಕರ್, ಗಾಂಧಿಯನ್ನು ಕಾಯ ವಾಚ ಮಾನಸ ಬ್ರಾಹ್ಮಣ ಧರ್ಮಿಯರು ದ್ವೇಷಿಸುವುದಾದರೂ ಏಕೆ? ಉತ್ತರ ಸರಳವಾಗಿದೆ. ಮನುಧರ್ಮ ಶಾಸ್ತ್ರದದಲ್ಲಿ ಹೇಳಿರುವಂತೆ ವರ್ಣಾಶ್ರಮಧರ್ಮಕ್ಕೆ ಅಂಬೇಡ್ಕರ್-ಗಾಂಧಿ ಚ್ಯುತಿ ತಂದವರೇ ಆಗಿದ್ದಾರೆ. ಅರುಣ್ ಶೌರಿಯಂತಹ ಪತ್ರಕರ್ತ ಮತ್ತು ರಾಜಕಾರಣಿಯಿಂದ ಹಿಡಿದು ವಿಜಯಕರ್ನಾಟಕದ ವಿಶ್ವೇಶ್ವರಭಟ್ಟರೂ ಅಧ್ಯಯನ ಸಂಶೋಧನೆ ಎಂದರೇನೆಂದು ತಿಳಿಯದ ಒಂದು ಪುಸ್ತಕವನ್ನು ಸರಿಯಗಿ ಓದಿ ಅರ್ಥೈಸಿಕೊಳ್ಳಲಾಗದ ಪ್ರತಾಪಸಿಂಹನೆಂಬ ಕಾಲಮಿಸ್ಟನು ಮೀಸಲಾತಿಯ ವಿರುದ್ಧ ಕಾರಿಕೊಳ್ಳುತ್ತಾನೆ. ಪರೋಕ್ಷವಾಗಿ ಇವರ ಕೆಲಸ ಮನು ಹೇಳಿರುವ ವರ್ಣಾಶ್ರಮ ಧರ್ಮಕ್ಕೆ ಧಕ್ಕೆ ಬಂದಾಗ ಬ್ರಾಹ್ಮಣ ಕತ್ತಿಯೆತ್ತುವ ರೀತಿಯಲ್ಲಿಯೇ ಇದೆ. ನಾನು ಸೀಮಿತ ಅಧ್ಯಯನದ ವ್ಯಾಪ್ತಿಯಲ್ಲಿ ನನಗೆ ಜೀವನಾನುಭವದಿಂದದಕ್ಕಿರುವ ಒಳನೋಟದಿಂದಷ್ಟೆ ಎಂದು ಧೈರ್ಯವಾಗಿ ಹೇಳಬಲ್ಲೆ. ಭಾರತದಾದ್ಯಂತ ಶೇಕಡ ೯೫% ಬ್ರಾಹ್ಮಣ ಧರ್ಮೀಯರು ನಿಶ್ಚಿತವಾಗಿಯೂ ಮೇಲೆ ಹೇಳಿದ ಎಲ್ಲ ವಿಷಯಗಳಿಗೂ ಯಾವಾಗ ಬೇಕಾದರೂ ಕತ್ತಿ ಎತ್ತಬಲ್ಲವರಾಗಿದ್ದಾರೆ. ಏಕೆಂದರೆ ಅವರ ಸಾಮಾಜೀಕರಣವೇ ಹಾಗಿದೆ. ಮನುಧರ್ಮಶಾಸ್ತ್ರದಲ್ಲಿ ಬ್ರಾಹ್ಮಣರ ಧರ್ಮದ ಬಾಲಕರ ಸಾಮಾಜಿಕರಣ ಕುರಿತು ಸೂಚಿಸಲಾಗಿದೆ.

ಕ್ಲಾಸ್ಟ್ ಕೆಮಿಸ್ಟ್ರಿ

೪

ಮಕ್ಕಳಿಗೆ ಹುಟ್ಟಿದಾಗ ಜಾತಿಧರ್ಮ ಅಂದರೆ ಹೊಕ್ಕಳನ್ನು ಕೊಯ್ಯುವ ಶಾಸ್ತ್ರ, ನಾಮಕರಣ, ಅದರಲ್ಲಿಯೂ ಬ್ರಾಹ್ಮಣನಿಗೆ 'ಶರ್ಮ' ಎಂದು ಮಂಗಳ ಸೂಚಕವಾದ ಹೆಸರನ್ನು ಇಡಬೇಕು. ನಿಷ್ಕ್ರಮಣ ಸಂಸ್ಕಾರ (ಮಗುವಿಗೆ ಸೂರ್ಯದರ್ಶನ) ಅನ್ನಪ್ರಾಶನ (ಅನ್ನತಿನ್ನಿಸುವುದು) ಚೌಲಕರ್ಮ (ಕೂದಲು ತೆಗೆಸಿಕೊಳ್ಳುವದು) ಉಪನಯನ ಮಾಡಬೇಕು. ಬ್ರಾಹ್ಮಣನು ನೂಲಿನ ಯಜ್ಞೋಪವಿತವೆಂದರೆ ಜನಿವಾರವನ್ನು ಧರಿಸಬೇಕು.

> **ಮನುವು ತನ್ನ ಧರ್ಮಶಾಸ್ತ್ರದ ೮ನೇ ಅಧ್ಯಯದಲ್ಲಿ ಆತ್ಮರಕ್ಷಣೆ, ಬಾಲಕ ಅಥವಾ ವೃದ್ಧರ ರಕ್ಷಣೆಗೆ ಲೈಂಗಿಕ ನಿಷೇಧಗಳ ರಕ್ಷಣೆಗಾಗಿ ಬ್ರಾಹ್ಮಣರು ಶಸ್ತ್ರ ಬಳಸಬಹುದೆಂದು ಹೇಳುತ್ತಾನೆ.**

ಈ ನಿಯಮಗಳನ್ನು ಸ್ಪಷ್ಟವಾಗಿ ಮನುಧರ್ಮಶಾಸ್ತ್ರದಲ್ಲಿ ಹೇಳಲಾಗಿದೆ ಈ ನಿಯಮವನ್ನು ಮೀರಿರುವ ಬ್ರಾಹ್ಮಣಧರ್ಮೀಯರು ಬಹಳ ಕಡಿಮೆ ಮನುಧರ್ಮದ ಶ್ಲೋಕಗಳನ್ನು ಮತ್ತೆ ಮತ್ತೆ ಉಲ್ಲೇಖಿಸಲು ಹೋಗುವುದಿಲ್ಲ. ವರ್ತಮಾನದ ನಮ್ಮ ಸುತ್ತಮುತ್ತ ಇರುವ ಗೆಳೆಯರು ನಿಜವಾಗಿಯೂ ಸಜ್ಜನ ಬ್ರಾಹ್ಮಣಧರ್ಮೀಯರು. ಆದರೆ ಮನುಧರ್ಮದ ನಿಯಮಗಳನ್ನು ತಮ್ಮ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಅಂತರ್ಗತ ಮಾಡಿಕೊಂಡಿದ್ದಾರೆ. ಎಂಬುದನ್ನು ಕಂಡುಕೊಂಡಿದ್ದೇನೆ. ಪ್ರತಿ ಸಂದರ್ಭದಲ್ಲೂ ಈ ಧರ್ಮದ ವ್ಯಕ್ತಿಗಳನ್ನು ಗೆಳೆಯರ ಮನೆಗಳಿಗೆ ಹೋದಾಗ ಯಾರಾದರೂ ಇವನಿಗೆ ಜಾತಿಯ ಅಬ್ಸೆಷನ್ ಎನ್ನುವಷ್ಟರ ಮಟ್ಟಿಗೆ ಅಧ್ಯಯನ ಮಾಡಿದ್ದೇನೆ ಗೆಳೆಯರಿಂದ ನಿಂದೆಗೂ ಒಳಗಾಗಿದ್ದೇನೆ. ಇಷ್ಟೆಲ್ಲಾ ಏಕೆ ಸಮರ್ಥನೆ ನೀಡಬೇಕಾಯಿತೆಂದರೆ, ನಾನು ಸಾಂಪ್ರದಾಯಿಕ ಸಮಾಜಶಾಸ್ತ್ರಿಯ ಎಂಪಿರಿಸಿಸ್ಟ್ ಮೆಥಡ್‌ನಲ್ಲಿ ನಂಬಿಕೆಯಿಟ್ಟವನಲ್ಲ. ಅಥವಾ ಅದನ್ನು ಅನುಸರಿಸಿದರೂ ಈ ಥರದ ಅಧ್ಯಯನಗಳು ಸ್ವಲ್ಪ ಕಷ್ಟವೇ. ಸಾಮಾನ್ಯವಾಗಿ ಬ್ರಾಹ್ಮಣ ಮನೆಗೆ ಭೇಟಿಕೊಟ್ಟ ಅವರ ಜೊತೆ ಒಡನಾಟವಿಟ್ಟುಕೊಂಡಿರುವ ಗೆಳೆಯರ ದೂರು ಭೋಜನಕ್ಕೆ ಸಂಬಂಧಿಸಿದ್ದು. ಅವರ ಮನೆಯ ಹತ್ತಿರದವರೆಗೂ ಕರೆದುಕೊಂಡು ಹೋಗಿದ್ದ/ಳು ಆದರೆ ಮನೆಯೊಳಗೆ ಕರೆಯಲಿಲ್ಲ, ಊಟದ ಸಮಯದಲ್ಲಿಯೂ ಊಟ ಬಡಿಸಲಿಲ್ಲ. ಅಥವಾ ಸೌಜನ್ಯಕ್ಕಾದರೂ ನನ್ನನ್ನು ಊಟ ಮಾಡು ಎಂದು ಹೇಳಲಿಲ್ಲ. ಇವರ ದೂರುಗಳು ನಿಜವಾಗಿಯೂ ಸತ್ಯವೆ. ಏಕೆಂದರೆ ಮನುಧರ್ಮಶಾಸ್ತ್ರದ ಅಧ್ಯಾಯ-೩ರಲ್ಲಿ ಊಟಕ್ಕೆ ಸಂಬಂಧಿಸಿದಂತೆ ಕಟುವಾದ ನಿಯಮಗಳೇ ಇವೆ.

ಎಲ್ಲಿಯೂ ವರ್ಣಗಳ ನಡುವಿನ ಸಾಮೂಹಿಕ ಭೋಜನಕ್ಕೆ ಆಸ್ಪದವೇ ಇಲ್ಲ. ಆದ್ದರಿಂದಲೇ ಅಪ್ಪಟ ಸನಾತನಿ ಬ್ರಾಹ್ಮಣ ಧರ್ಮ ಪ್ರಚಾರಕ ಶಂಕರಾಚಾರ್ಯ ಸ್ಥಾಪಿಸಿರುವ ಶೃಂಗೇರಿ-ಮಠದಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಇರುವುದು. ಹೇಗೆ ವರ್ತಮಾನದ ವಿದ್ಯಮಾನಗಳ ಜೊತೆ ಹೋಲಿಸಿಕೊಳ್ಳುತ್ತಲೇ ದಿನನಿತ್ಯದ ಜೀವನದಲ್ಲಿ ಬ್ರಾಹ್ಮಣ ಧರ್ಮಿಯರು ಮನುಧರ್ಮಶಾಸ್ತ್ರವನ್ನು ಅಲ್ಪಸ್ವಲ್ಪ ಬದಲಾವಣೆಗಳೊಡನೆ ಆಧುನಿಕ ಕಾಲದ ಅಗತ್ಯಗಳಿಗೆ ರೂಪಾಂತರ ಹೊಂದಿ ಅನುಸರಿಸುತ್ತಿದ್ದಾರೆ. ಅದನ್ನು ಅರ್ಥಮಾಡಿಕೊಳ್ಳಬೇಕಾಗಿರುವುದು ಸ್ವಲ್ಪ ಮಟ್ಟಿಗಿನ ಓದು ಜೊತೆಗೆ ಪಂಚೇಂದ್ರಿಯಗಳ ಜ್ಞಾನವಷ್ಟೆ. ಹಾಗಾದರೆ ಹುಟ್ಟಿನಿಂದ ಬ್ರಾಹ್ಮಣರಾದ ಮಾರ್ಕ್ಸ್‌ವಾದಿ-ಉದಾರವಾಗಿ-ಅಂಬೇಡ್ಕರ್ ವಾದಿ ಬ್ರಾಹ್ಮಣರ ನಿಲುವು ಏನು? ಸಾರಾಸಗಟಾದ ಈ ಬಗೆಯ ನಿಲುವು ತಳೆಯುವುದು ಫ್ಯಾಸಿಸ್ಟ್ ಅಲ್ಲವೇ? ಎಂದರೆ ಅದಕ್ಕೆ ಸನಾತನ ಬ್ರಾಹ್ಮಣಧರ್ಮದ ಭಾಷೆ ವ್ಯಾಕರಣದಲ್ಲೇ ಉತ್ತರಿಸಬೇಕೆಂದರೆ, ಮಾರ್ಕ್ಸ್ ಅಂಬೇಡ್ಕರ್ ಗಾಂಧಿ ಎಂದಿಗೂ 'ಬ್ರಾಹ್ಮಣ' ಎನ್ನಿಸಿಕೊಳ್ಳಲಾರ. ಮೇಲೆ ಹೇಳಿದವರೆಲ್ಲರೂ ಮ್ಲೇಚ್ಛರೂ, ಶೂದ್ರರೂ, ಧರ್ಮಭಂಜಕರೂ ಆಗಿರುತ್ತಾರೆ. ಅದಕ್ಕಾಗಿ ಅವರನ್ನು ಬ್ರಾಹ್ಮಣಧರ್ಮದ ವ್ಯಾಪ್ತಿಯಲ್ಲಿಟ್ಟು ಚರ್ಚಿಸಲು ಆಗುವುದೇ ಇಲ್ಲ. ಅದನ್ನು ಚರ್ಚಿಸಬೇಕಾದರೆ ಮತ್ತೆ ಜಾತಿಯಂದರೆ ಅಭಿವ್ಯಕ್ತಿಕ್ರಮ ಎಂದು ನಿರ್ವಚಿಸಿಕೊಂಡು ಮುಂದುವರಿಯಬೇಕಾಗುತ್ತದೆ. □

(ಮುಂದುವರಿವುದು)

'ಗುಡ್‌ಬಯ್' 'ಪ್ರಣಾಮ್'

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಹಿಂದಿ ಪದ 'ಪ್ರಣಾಮ್' ಎನ್ನುವುದು ವಿಂಗಡಿಸುವ, ಪಕ್ಷಪಾತಿ ಮತ್ತು ತಾರತಮ್ಯದಿಂದ ಕೂಡಿದ ಪದವಾಗಿದೆ. ಆದರೆ ಆಂಗ್ಲ ಭಾಷೆಯ **'ಗುಡ್-ಮಾರ್ನಿಂಗ್'** ಪದ ಜಾತಿರಹಿತ ವಿಮೋಚಕ ಪದವಾಗಿ ಕಾಣುತ್ತದೆ.

ಈ 'ಪ್ರಣಾಮ್'ನ ಬಲಿಪಶುಗಳಾದವರಿಗೆ ಪ್ರಣಾಮ್ ಮತ್ತು ಗುಡ್‌ಮಾರ್ನಿಂಗ್ ಅಥವಾ ಹಾಯ್ ಎನ್ನುವ ಪದಗಳ ನಡುವೆ ಇರುವ ವ್ಯತ್ಯಾಸವನ್ನು ಊಹಿಸಿಕೊಳ್ಳಬಲ್ಲರು. ಗುಡ್‌ಮಾರ್ನಿಂಗ್ ಅಥವಾ ಹಾಯ್ ಎನ್ನುವುದು ಯಾರಿಗಾದರೂ ಸಹ ಶುಭವನ್ನು ಕೋರುವಂಥದ್ದು. ಆದರೆ ಪ್ರಣಾಮ್ ಹಾಗಲ್ಲ. ಅದು ಮೂಲಭೂತವಾಗಿ ಜಾತಿ, ಹಿರಿತನ ಮತ್ತು ಲಿಂಗೀಯ ಪಕ್ಷಪಾತಿ ನಿಲುವುಗಳನ್ನು ವ್ಯಕ್ತಪಡಿಸುವುದಲ್ಲದೆ, ವಿಧೇಯತೆಯನ್ನು ನಿರೀಕ್ಷಿಸುತ್ತದೆ. ದಲಿತರು ದಲಿತೇತರರಿಗೆ ಅದರಲ್ಲೂ ದ್ವಿಜರಿಗೆ ಪ್ರಣಾಮ್ ಎನ್ನುವುದರ ಮೂಲಕ ವಂದಿಸಬೇಕಾಗುತ್ತದೆ. ಇದು ಅನುವಂಶೀಯತೆಯಿಂದ ಕೂಡಿದೆಯೆಂದರೂ ತಪ್ಪಿಲ್ಲ. ಈ ಪ್ರಣಾಮ್ ಪರಿಭಾಷೆಯ ವಿಧಿಬದ್ಧತೆ ಹೇಗಿದೆಯೆಂದರೆ ಎರಡು ಕೈಗಳನ್ನು ಜೋಡಿಸಿ, ಸ್ವಲ್ಪ ತಲೆ ಬಗ್ಗಿಸಿ ನಮಸ್ಕರಿಸಬೇಕಾಗುತ್ತದೆ. ವರ್ಣವ್ಯವಸ್ಥೆಯಲ್ಲಿ ಅದು ಹೇಗಿದೆಯೆಂದರೆ ಕಿರಿಯ ವ್ಯಕ್ತಿ ಹಿರಿಯ ವ್ಯಕ್ತಿಗೆ ಪ್ರಣಾಮ್ ಸಲ್ಲಿಸಬೇಕು. ಹಾಗೆಯೇ ಮಹಿಳೆಯೊಬ್ಬಳು ಪುರುಷನಿಗೆ ಪ್ರಣಾಮ ಸಲ್ಲಿಸಬೇಕು.

ಅದನ್ನು ಪಡೆದುಕೊಳ್ಳುವಾತ ಪ್ರಣಾಮವನ್ನು ಹಿಂತಿರುಗಿಸಬೇಕೆಂಬ ನಿರೀಕ್ಷೆಯಿಲ್ಲ. ಬದಲು ಪ್ರಣಾಮವನ್ನು ಪಡೆದಾತ, ಪ್ರಣಾಮ್ ಸಲ್ಲಿಸಿದವನಿಗೆ, "ದೇವರು ಆಶೀರ್ವದಿಸಲಿ, ಸಂತೋಷವಾಗಿರು" ಎಂದು ಹರಸಬೇಕೆಂಬ ನಿರೀಕ್ಷೆಯಿದೆ. ಹೀಗೆ ಪ್ರಣಾಮ್ ಎನ್ನುವುದು ಜಾತಿ, ವಯಸ್ಸು ಮತ್ತು ಲಿಂಗೀಯ ಶ್ರೇಣಿಯಲ್ಲಿ ವ್ಯಕ್ತಿ ಸ್ಥಾನವನ್ನು ನಿರ್ಧರಿಸುತ್ತದೆ. ಅಂದರೆ ಪ್ರಣಾಮ ಸಲ್ಲಿಸಿದವರು ಪ್ರಣಾಮ ಸ್ವೀಕರಿಸಿದವರಿಗೆ ಅಧೀನರು. ಈ ಜಾತಿ ಪೂರ್ವಗ್ರಹವು ದಲಿತರಿಗೆ ವಿರೋಧಿಯಾದುದು. ಹಾಗೆಯೇ ಆ ಪ್ರಣಾಂ ಪರಿಭಾಷೆಯೊಳಗಿರುವ ವಯಸ್ಸು ಮತ್ತು ಲಿಂಗೀಯ ಪೂರ್ವಗ್ರಹಗಳೂ ಸಹ ದಲಿತರ ವಿರೋಧಿಯಾದುದು. ಅಂದರೆ ಒಬ್ಬ ಸವರ್ಣೀಯ ಹಿಂದೂ ಗಂಡಸು ದಲಿತ ಮಹಿಳೆಗೆ ಪ್ರಣಾಮ್ ಹೇಳುವುದಿಲ್ಲ. ವರ್ಣ/ಜಾತಿಯ ಮೌಲ್ಯ ವ್ಯವಸ್ಥೆಯಲ್ಲಿ ಮೈಲಿಗೆಯಿಂದ ಕೂಡಿದ ದಲಿತ ಹರಸುವ ಹಕ್ಕನ್ನು ಹೊಂದಿರುವುದಿಲ್ಲ. ಆದ್ದರಿಂದ ಪ್ರಣಾಮ್ ಪದವು ಕೇವಲ ಹಿಂದಿಗೆ ಮಾತ್ರ ಸಂಬಂಧಿಸಿದ್ದು ಅಲ್ಲ. ಈ ಹಿಂದಿ ಪ್ರಣಾಮ್ ಜಾತಿಗಳು ಮತ್ತು ಜಾತಿ ಬಹಿಷ್ಕೃತರನ್ನು ಕುರಿತದ್ದಾಗಿದೆ.

ಇಂಗ್ಲಿಷ್ ಜಗತ್ತಿನಲ್ಲಿ ಗುಡ್‌ಮಾರ್ನಿಂಗ್ ಎಂದಕ್ಷಣ, ಅದಕ್ಕೆ ಗುಡ್‌ಮಾರ್ನಿಂಗ್ ಎಂಬ ಪ್ರತಿಕ್ರಿಯೆ ಸಿಗುತ್ತದೆ. ಹಾಯ್ ಎಂದಲ್ಲಿ ಹಾಯ್ ಎಂದೂ, ಗುಡ್ ಬಾಯ್‌ಗೆ ಗುಡ್ ಬಾಯ್ ಎಂದು ಪ್ರತ್ಯುತ್ತರ ದೊರೆಯುತ್ತದೆ. ಅಲ್ಲಿ ಯಾವುದೇ ರೀತಿಯ ಜಾತಿ, ವಯಸ್ಸು ಅಥವಾ ಲಿಂಗೀಯ ಪೂರ್ವಗ್ರಹ ಕಾಣುವುದಿಲ್ಲ.

ದಲಿತ ದೇವತೆಯಾದ ಇಂಗ್ಲಿಷ್ ಸವರ್ಣೀಯ ಹಿಂದೂಗಳಿಗೂ ಸಹ ಮುಕ್ತಿಯನ್ನು ನೀಡುವಂತಾಗಿದೆ. ಇಂಗ್ಲಿಷ್ ಶಿಕ್ಷಣ ಪಡೆದ ದಲಿತರು ತಮ್ಮ ಸಹಪಾಠಿಗಳು ಮತ್ತು ಸ್ನೇಹಿತರಿಂದ ಸಮಾನತೆಯ ಹೊಂದಿರುತ್ತಾರಲ್ಲದೆ ತಮ್ಮ ಕೆಳಗಿನವರಿಂದ ಮತ್ತು ಕಿರಿಯರಿಂದ ಗೌರವವನ್ನು ಪಡೆಯುತ್ತಾರೆ.

ಕೈಗಾರಿಕೆ ಮತ್ತು ನಗರೀಕರಣಗಳ ವಿಸ್ತಾರದೊಂದಿಗೆ ಹಾಗೂ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಸಕಾರಾತ್ಮಕ ಕ್ರಿಯೆಯಿಂದಾಗಿ ದಲಿತ ಮಧ್ಯಮ ವರ್ಗವೊಂದು ಸಣ್ಣದಾಗಿ ಉದಯಿಸಿದೆ. ಆದು ಎಷ್ಟೇ ಸಣ್ಣದಾದರೂ ಸಹ ಒಂದು ಹೊಸ ಸನ್ನಿವೇಶವೊಂದು ಸೃಷ್ಟಿಯಾಗಿ ದಲಿತ ಅವಕಾಶ(ಸ್ಪೇಸ್)ವೊಂದು ಒದಗಿಬಂದಿದೆ. ಅವರ‍್ಯಾರನ್ನು ಅಮಾನವೀಯತೆಯಿಂದ ಪರಿಗಣಿಸಲಾಗುವುದಿಲ್ಲ.

ಈ ಹೊಸ ಸಾಮಾಜಿಕ ಸನ್ನಿವೇಶದಿಂದಾಗಿ ದಲಿತೇತರರೂ ಸಹ ಈ ಸಶಕ್ತ ದಲಿತರಿಗೆ ವಂದನೆಯನ್ನು ಸಲ್ಲಿಸಬೇಕಾಗುತ್ತದೆ. ಅವರು **ಗುಡ್‌ಮಾರ್ನಿಂಗ್** ಅಥವಾ ಹಾಯ್/ಹಲೋ ಎಂದು ತಮ್ಮ ದಲಿತ ಸಹವರ್ತಿಗಳಿಗೆ ಹೇಳುತ್ತಾರೆ. ದಲಿತರನ್ನು ಅವರು ಸರ್/ಸ್ನೇಹಿತರೆಂದು ದಲಿತರನ್ನು ಕರೆಯಲು ಇಚ್ಛಿಸುತ್ತಾರೆ.

ಇಂಗ್ಲಿಷ್ ಜಾತಿರಹಿತ ಸಮಾಜದಲ್ಲಿ ಹುಟ್ಟಿದೆಯಾದ್ದರಿಂದ ಗುಡ್‌ಮಾರ್ನಿಂಗ್, ಹಾಯ್/ಹಲೋ, ಸರ್ ಪದಗಳು ಜಾತಿರಹಿತ ಪದಗಳಾಗಿ ಬಳಕೆಯಾಗುತ್ತವೆ. ಭಾಷೆಗಳು ತಾವು ಹುಟ್ಟಿದ ಸಮಾಜಕ್ಕೆ ಆಂತರಿಕವಾಗಿ ಹೊಂದಿಕೊಂಡಿರುತ್ತವೆ. ಆದ್ದರಿಂದ ಅವುಗಳ ಮೌಲ್ಯ ನಿರಪೇಕ್ಷವಾಗಿರಲು ಸಾಧ್ಯವಿಲ್ಲ.

ಹೀಗಿರುವಾಗ ಇಂಗ್ಲಿಷ್ ಮಾತನಾಡುವ ಭಾರತೀಯನೊಬ್ಬ ಕೆಲವು ಇಂಗ್ಲಿಷ್ ರೀತಿ-ನೀತಿಗಳನ್ನು, ಉಡುಗೆ-ಆಹಾರ ಪದ್ಧತಿಗಳನ್ನು ಮತ್ತು ಮನೋಭಾವಗಳನ್ನು ಅನುಸರಿಸಲಾರಂಭಿಸುತ್ತಾರೆ. ಹಾಗಾಗಿ ಇಂಗ್ಲಿಷ್ ಮಾತನಾಡುವ ಅನೇಕ ಮಂದಿ ಬ್ರಾಹ್ಮಣರು ದನದ ಬಾಡು ಮತ್ತು ಹಂದಿ ಬಾಡನ್ನು ಯಾವುದೇ ಸಂಕೋಚವಿಲ್ಲದೆ ತಿನ್ನುವುದನ್ನು ಕಾಣಬಹುದು. ಭಾರತೀಯ ಭಾಷೆ ಮಾತನಾಡುವ ಬ್ರಾಹ್ಮಣರು ಎಷ್ಟೇ ಪ್ರಗತಿಪರರೆಂದು ಕಂಡರೂ ಸಹ ಸಣ್ಣಪುಟ್ಟ ಸಬೂಬುಗಳಾದ 'ನಾನಿಂದು ಉಪವಾಸವಿದ್ದೇನೆ', 'ಆರೋಗ್ಯ ಸರಿಯಿಲ್ಲ' ... ಎಂದು ಮಾಂಸಹಾರವನ್ನು ತಿನ್ನುವುದಿಲ್ಲ.

ಯಾವುದೇ ಹಿಂದಿ ಪುಸ್ತಕ ಬಿಡುಗಡೆಯಾಗುವಾಗ ಊಟವೇನಾದರೂ ಇದ್ದಲ್ಲಿ ಅಲ್ಲಿ ಆಹಾರ ಪದ್ಧತಿಯೊಂದು ಆಚರಣೆಗೆ ಬಂದುಬಿಡುತ್ತದೆ. ಅಂತೆಡೆ ಖಂಡಿತವಾಗಿಯೂ ಮಾಂಸದ ಊಟ ಅಥವಾ ಬಿಯರ್ ಇರುವುದಿಲ್ಲ. ಬದಲು ಆಲೂ-ಪನ್ನೀರ್, ರಸಗುಲ್ಲಾ ಮತ್ತು ಹಣ್ಣಿನ ರಸ ಆ ಸನ್ನಿವೇಶವನ್ನು ನಾಚಿಸುತ್ತದೆ. ಈ ರೀತಿಯಿಂದಾಗಿ ರಸಗುಲ್ಲಾ ಜಾತಿಯತೆಯಿಂದ ಕೂಡಿದ್ದಾಗಿ ಚಿಕನ್ ಫ್ರೈ ಸೆಕ್ಯುಲರ್ ಆಗಿ ಕಾಣುತ್ತದೆ. ಹಣ್ಣಿನ ರಸ ಜಾತಿಯತೆಯಿಂದ ಕೂಡಿದ್ದಾಗಿ ಸ್ಕಾಚ್ ಸೆಕ್ಯುಲರ್ ಆಗಿಬಿಡುತ್ತದೆ.

ಹೀಗೆ ಭಾರತೀಯ ಎಲ್ಲಾ ಭಾಷೆಗಳೂ ಸಹ ಮೌಲ್ಯ ಭಾರದಿಂದ ನರಳುತ್ತವೆ. ಭಾರತೀಯ ಭಾಷೆಗಳಾದ ಹಿಂದಿ ಅಥವಾ ತಮಿಳು- ಎಲ್ಲವೂ ಸಹ ಜಾತಿ ರಾಯಭಾರಿಗಳೇ! ಇಲ್ಲಿರುವ ಸಂಗತಿಯೆಂದರೆ ಜಾತಿ ವ್ಯವಸ್ಥೆ ಭಾರತೀಯ ಭವಿಷ್ಯವನ್ನು ನಿರ್ಧರಿಸಬೇಕೆ ಎನ್ನುವುದು. ಇಲ್ಲಿ ದಲಿತರು/

> **ದಲಿತ ದೇವತೆಯಾದ ಇಂಗ್ಲಿಷ್ ಸವರ್ಣೀಯ ಹಿಂದೂಗಳಿಗೂ ಸಹ ಮುಕ್ತಿಯನ್ನು ನೀಡುವಂತಾಗಿದೆ. ಇಂಗ್ಲಿಷ್ ಶಿಕ್ಷಣ ಪಡೆದ ದಲಿತರು ತಮ್ಮ ಸಹಪಾಠಿಗಳು ಮತ್ತು ಸ್ನೇಹಿತರಿಂದ ಸಮಾನತೆಯನ್ನು ಹೊಂದಿರುತ್ತಾರಲ್ಲದೆ ತಮ್ಮ ಕೆಳಗಿನವರಿಂದ ಮತ್ತು ಕಿರಿಯರಿಂದ ಗೌರವವನ್ನು ಪಡೆಯುತ್ತಾರೆ. ಕೈಗಾರಿಕೆ ಮತ್ತು ನಗರೀಕರಣಗಳ ವಿಸ್ತಾರದೊಂದಿಗೆ ಹಾಗೂ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಸಕಾರಾತ್ಮಕ ಕ್ರಿಯೆಯಿಂದಾಗಿ ದಲಿತ ಮಧ್ಯಮ ವರ್ಗವೊಂದು ಸಣ್ಣದಾಗಿ ಉದಯಿಸಿದೆ. ಆದು ಎಷ್ಟೇ ಸಣ್ಣದಾದರೂ ಸಹ ಒಂದು ಹೊಸ ಸನ್ನಿವೇಶವೊಂದು ಸೃಷ್ಟಿಯಾಗಿ ದಲಿತ ಅವಕಾಶ(ಸ್ಪೇಸ್)ವೊಂದು ಒದಗಿಬಂದಿದೆ. ಅವರ‍್ಯಾರನ್ನು ಅಮಾನವೀಯತೆಯಿಂದ ಪರಿಗಣಿಸಲಾಗುವುದಿಲ್ಲ.**

ಅನು: ಡೊಮಿನಿಕ್. ಡಿ

ಆದಿವಾಸಿಗಳು ಪರಿಗಣನೆಗೆ ಬರುವುದಿಲ್ಲ ಬಿಡಿ.

ಆಂತರಿಕವಾಗಿ ವಿಂಗಡಿಸುವ, ಪಕ್ಷಪಾತಿಯಾದ ಮತ್ತು ತಾರತಮ್ಯಕ್ಕೆ ಎಡೆಮಾಡಿಕೊಡುವ ಈ ಜಾತಿ ಪದ್ಧತಿಯಿಂದಾಗಿ ಭಾರತಕ್ಕೇನೂ ಉಪಯೋಗವಿಲ್ಲ. ಅಂದರೆ ಸಮಾಜವನ್ನು ಸೀಳುವ, ಜನರನ್ನು ತಾರತಮ್ಯಕ್ಕೊಳಪಡಿಸುವ ಮತ್ತು ದೇಶವನ್ನು ನಾಚಿಸುವ ಈ ಭಾರತೀಯ ಭಾಷೆಗಳನ್ನು ಮುಂದುವರಿಸಬೇಕೇ? ಎನ್ನುವ ಪ್ರಶ್ನೆ ನಮ್ಮೆದುರು ನಿಲ್ಲುತ್ತದೆ.

ಭಾರತವೇನಾದರೂ ಒಳ್ಳೆಯ ಸಮಾಜವಾಗುತ್ತ ವಿಕಾಸಹೊಂದುವುದಾದರೆ ಮತ್ತು ದೇಶ ಸ್ವ-ಗೌರವ ಹೊಂದಬೇಕಾದರೆ ಭಾರತೀಯ ಭಾಷೆಗಳನ್ನು ನಾಶ ಮಾಡಬೇಕಾಗುತ್ತದೆ. ನಾಶಮಾಡದೆ ನಿರ್ಮಾಣದ ಬಗ್ಗೆ ಯೋಚಿಸಲಾಗುವುದಿಲ್ಲ. ಹಾಗೆ ಮಾಡಿದ ನಂತರವೇ ಇಂಗ್ಲಿಷ್ ನಮ್ಮೆಲ್ಲರನ್ನು ರಕ್ಷಿಸಬಹುದಾಗಿದೆ. ೨೧೦೦ರ ವೇಳೆಗೆ ಭಾರತೀಯರೆಲ್ಲರೂ ಸಹ ಇಂಗ್ಲಿಷ್ ಮಾತನಾಡಲು ಕಲಿಯಲೇ ಬೇಕಾಗುತ್ತದೆ. ಅಂದರೆ ಮುಂಬರಲಿರುವ ತಲೆಮಾರಾದರೂ ಪ್ರಣಾಮ್‌ಗೆ ಗುಡ್‌ಬಾಯ್ ಹೇಳಬಹುದು.

ಇಂಗ್ಲಿಷ್-ಯಶಸ್ಸಿನ ಮಾರ್ಗ

ಇದು ತಮಿಳುನಾಡಿನ ತುತ್ತುಕೋರಿನ್ ಜಿಲ್ಲೆಯ ಷಣ್ಮುಗಪುರ ಹಳ್ಳಿಯಲ್ಲಿ ಜೂನ್ ೨೦೦೪ ರಂದು ಸವರ್ಣೀಯ ಹಿಂದೂಗಳು, ದಲಿತರು ಗಂಡುನಾಯಿಗಳನ್ನು ಸಾಕಬಾರದೆಂದು ಆಜ್ಞೆಯಿತ್ತಿದ್ದರ ಬಗ್ಗೆ ಅಲ್ಲ. ಇಂದು ವಿಶಿಷ್ಟ-ಭಯಂಕರ ತರ್ಕವೊಂದು ಆ ಸವರ್ಣೀಯರನ್ನೆಲ್ಲಾ ಆವರಿಸಿತ್ತು - ದಲಿತರು ಸಾಕಿದ ಗಂಡು ನಾಯಿಗಳು ಅವರ ಹೆಣ್ಣು ನಾಯಿಗಳೊಡನೆ ಸಂಭೋಗ ಮಾಡಬಹುದಲ್ಲವೆ?

ಇಂಥ ಅವಮಾನಕರ ಮತ್ತು ಬಹಿಷ್ಕಾರದ ಸಂಗತಿಗಳು ಭಾರತೀಯ ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾದುದು. ದಲಿತರು ಹೀಗೆ ಕಷ್ಟಗಳನ್ನು ಅನುಭವಿಸುತ್ತಲೇ ಇದ್ದಾರೆ. ಅವಕಾಶವೊಂದು ದೊರೆತಲ್ಲಿ ದಲಿತರು ಪ್ರತಿಕಾರಕ್ಕಿಳಿದು ಎಂಥ ತ್ಯಾಗಕ್ಕೂ ಸಿದ್ಧರಾಗುತ್ತಾರೆ. ಮಹಾರಾಷ್ಟ್ರದ ಭಾಂಡ್ರಾಜಿಲ್ಲೆಯ ಘಟನೆಗಳೇ ಇದಕ್ಕೆ ಸಾಕ್ಷಿ. ಭಯ್ಯಾಲಾಲ್ ಭೋತ್‌ಮಾಂಗೆ ಎನ್ನುವ ದಲಿತ ಕೃಷಿಕ ಜಾತಿಯ ಕ್ರೂರ ಹಿಡಿತವನ್ನು ಪ್ರತಿಭಟಿಸಿದಕ್ಕೆ ತನ್ನ ಇಡೀ ಕುಟುಂಬವನ್ನೇ ಕಳೆದುಕೊಳ್ಳಬೇಕಾಯಿತು.

ಇದು ದೆಹಲಿಯ ಕುರಿತದ್ದು. ಅದೊಂದು ಕಲ್ಪನಾತ್ಮಕ ನಾಯಿ ಮೇಳ. ಐಐಸಿಯ ಹಸಿರು ಹಾಸಿಗೆಯಂತಿರುವ ಲಾನ್ ಷಣ್ಮಗಪುರಂನ ಬಹಿಷ್ಕಾರದ ಹಬ್ಬವನ್ನು ಮರು ಸಂಘಟಿಸುತ್ತದೆ. ಅವರ ನಾಯಿಯನ್ನು ರೋಕಿ ಮತ್ತು ನಮ್ಮ ನಾಯಿಯನ್ನು ರಾಮು ಎಂದು ಕರೆಯೋಣ. ರೋಕಿ ಹಾಯ್ ಎಂದರೆ, ರಾಮು ನಮಸ್ತೆ ಎನ್ನುತ್ತದೆ. ರೋಕಿ ಮತ್ತು ರಾಮು ಇಬ್ಬರೂ ಪರಸ್ಪರ ಅಪಾರ್ಥ ಮಾಡಿಕೊಳ್ಳುತ್ತಾರೆ. ರಾಮು ಕೇವಲ ಹಿಂದಿಯನ್ನು ಮಾತ್ರ ಅರ್ಥ ಮಾಡಿಕೊಳ್ಳುತ್ತದೆ. ಆದರೆ ಇಂಗ್ಲಿಷ್‌ನ ಆದೇಶಗಳನ್ನು ರಾಮು ಅರ್ಥೈಸುವುದಿಲ್ಲ. ಆ ಮೇಳದ ಮಾರ್ಗದರ್ಶಕರು ರಾಮುಗೆ ಗೊತ್ತಿಲ್ಲದ ಭಾಷೆಯಲ್ಲಿ ಮಾತನಾಡುತ್ತಾರೆ. ಅಂತಿಮವಾಗಿ ರೋಕಿ ಗೆಲುವಿನತ್ತ ಸಾಗಿ ಜಯಶಾಲಿಯಾಗುತ್ತದೆ. ಗಲಿಬಿಲಿಗೊಂಡ ರಾಮು ಸುಮ್ಮನೆ ವೀಕ್ಷಕನಂತೆ ನಿಲ್ಲುತ್ತದೆ.

ಮೈಕ್ರೋಸಾಫ್ಟ್‌ನ ಮಾನವ ಸಂಪನ್ಮೂಲ ಇಲಾಖೆಯ ವೃತ್ತಿಪರರನ್ನು ಗುತ್ತಿಗೆಗೆ ತೆಗೆದುಕೊಳ್ಳುವಾಗ ಭಾಷೆಯನ್ನು ಪ್ರಧಾನವಾಗಿ ಪರಿಗಣಿಸುತ್ತದೆ. ರೋಕಿ ಮತ್ತು ರಾಮುವನ್ನು ಪರಿಗಣಿಸಿದಲ್ಲಿ ಮೈಕ್ರೋಸಾಫ್ಟ್ ರೋಕಿಯನ್ನು ತೆಗೆದುಕೊಳ್ಳುತ್ತದೆ. ರಾಮುವಿನ ಕೌಶಲ್ಯವನ್ನು ಗಮನಿಸಿದರೂ ಇನ್ಫೋಸಿಸ್ ಕೂಡಾ ತೆಗೆದುಕೊಳ್ಳುವುದಿಲ್ಲ. ಸಾಂಸ್ಕೃತಿಕವಾಗಿ ಉತ್ತಮ ಉಚ್ಚಾರವನ್ನು ರೂಢಿಸಿಕೊಂಡಿರುವ ರೋಕಿ ಮಾನವ-ಸಂಪನ್ಮೂಲ ಇಲಾಖೆಗಳ ವಿವೇಕವನ್ನು ನಿರ್ಧರಿಸುತ್ತದೆ. ರಾಮುಗಳಂತವರು ಈ ಹೊಸ ಶ್ರೇಣೀಕರಣದ ಬುಡದಲ್ಲಿ ನಿಲ್ಲುತ್ತಾರೆ.

೨೦೨೫ರ ವೇಳೆಗೆ ಜಗತ್ತು ಬಹುವಾಗಿ ಬದಲಾಗಿರುತ್ತದೆ. ಕ್ಯಾಬ್ ಚಾಲಕರು ಇಂಗ್ಲಿಷ್ ಬಲ್ಲವರಾಗಿರಬೇಕಾಗುತ್ತದೆ. ಇಂಗ್ಲಿಷ್ ಬಲ್ಲಂಥ ಬೀದಿ ಬದಿ ಮಾರಾಟಗಾರರು ಅಧಿಕ ಲಾಭ ಗಳಿಸಬಲ್ಲರು. ಕಛೇರಿ ಜವಾನರು ಇಂಗ್ಲಿಷ್ ಆದೇಶಗಳನ್ನು ಪಾಲಿಸುತ್ತಾರೆ. ಹಿಂದಿ ಮಾತನಾಡುವ ತಾರೆಯರು ನಿಧಾನವಾಗಿ ಕಾಣೆಯಾಗುತ್ತಾರೆ. ಬಾರ್‌ಗಳಲ್ಲಿರುವ ಹುಡುಗಿಯರು ಇಂಗ್ಲಿಷ್ ಪಿಸುಗುಟ್ಟುತ್ತಾರೆ. ರೋಕಿಯಂಥ ಅನೇಕ ಇಂಗ್ಲಿಷ್ ಮೀಡಿಯಂನವರು ಸಾಮಾನ್ಯ ಕೆಲಸಗಳನ್ನು ಸಹ ಕಬಳಿಸುತ್ತಾರೆ. ಉದ್ಯೋಗ ಮಾರುಕಟ್ಟೆಯಲ್ಲಿ ಮಿಲಿಯನ್‌ಗಟ್ಟಲೆ ರಾಮುರು ಬರಿಗೈಯಲ್ಲಿ ನಿಲ್ಲುತ್ತಾರಷ್ಟೆ.

೨೦೨೫ರ ವೇಳೆಗೆ ಜಗತ್ತು ಬಹುವಾಗಿ ಬದಲಾಗಿರುತ್ತದೆ. ಕ್ಯಾಬ್ ಚಾಲಕರು ಇಂಗ್ಲಿಷ್ ಬಲ್ಲವರಾಗಿರಬೇಕಾಗುತ್ತದೆ. ಇಂಗ್ಲಿಷ್ ಬಲ್ಲಂಥ ಬೀದಿ ಬದಿ ಮಾರಾಟಗಾರರು ಅಧಿಕ ಲಾಭ ಗಳಿಸಬಲ್ಲರು. ಕಛೇರಿ ಜವಾನರು ಇಂಗ್ಲಿಷ್ ಆದೇಶಗಳನ್ನು ಪಾಲಿಸುತ್ತಾರೆ. ಹಿಂದಿ ಮಾತನಾಡುವ ತಾರೆಯರು ನಿಧಾನವಾಗಿ ಕಾಣೆಯಾಗುತ್ತಾರೆ. ಬಾರ್‌ಗಳಲ್ಲಿರುವ ಹುಡುಗಿಯರು ಇಂಗ್ಲಿಷ್ ಪಿಸುಗುಟ್ಟುತ್ತಾರೆ. ರೋಕಿಯಂಥ ಅನೇಕ ಇಂಗ್ಲಿಷ್ ಮೀಡಿಯಂನವರು ಸಾಮಾನ್ಯ ಕೆಲಸಗಳನ್ನು ಸಹ ಕಬಳಿಸುತ್ತಾರೆ. ಉದ್ಯೋಗ ಮಾರುಕಟ್ಟೆಯಲ್ಲಿ ಮಿಲಿಯನ್‌ಗಟ್ಟಲೆ ರಾಮುರು ಬರಿಗೈಯಲ್ಲಿ ನಿಲ್ಲುತ್ತಾರಷ್ಟೆ. ೨೦೦೬ರಲ್ಲಿ ಜನಿಸಿದ ಮಿಲಿಯನ್‌ಗಟ್ಟಲೆ ದಲಿತ ಶಿಶುಗಳು ೨೦೨೫ರ ವೇಳೆಗೆ ೧೯ ವಯಸ್ಸಿನವರಾಗುತ್ತಾರೆ. ಆ ವಯಸ್ಸು ಉದ್ಯೋಗ ಮಾರುಕಟ್ಟೆಯಲ್ಲಿ ಬಿಕರಿಗೆ ನಿಲ್ಲುತ್ತದೆ. ಭಾರತದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಆದಿವಾಸಿ/ದಲಿತ ಪೋಷಕರು ರೋಕಿಯಂಥವರನ್ನು ತಯಾರಿಸಬೇಕಾಗುತ್ತದೆ.

೨೦೦೬ರಲ್ಲಿ ಜನಿಸಿದ ಮಿಲಿಯನ್‌ಗಟ್ಟಲೆ ದಲಿತ ಶಿಶುಗಳು ೨೦೨೫ರ ವೇಳೆಗೆ ೧೯ ವಯಸ್ಸಿನವರಾಗುತ್ತಾರೆ. ಆ ವಯಸ್ಸು ಉದ್ಯೋಗ ಮಾರುಕಟ್ಟೆಯಲ್ಲಿ ಬಿಕರಿಗೆ ನಿಲ್ಲುತ್ತದೆ. ಭಾರತದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಆದಿವಾಸಿ/ದಲಿತ ಪೋಷಕರು ರೋಕಿಯಂಥವರನ್ನು ತಯಾರಿಸಬೇಕಾಗುತ್ತದೆ.

ಇಂಗ್ಲಿಷ್‌ನ ಸಾಮಾನ್ಯ ಹಕ್ಕುದಾರರೆಂದರೆ ದಲಿತರೇ. ದಲಿತ ಪರಂಪರೆ ಮಾತ್ರ ಇಂಗ್ಲಿಷನ್ನು ಗೌರವಿಸುತ್ತದೆ. ರೋಕಿಯ ಮಾಸ್ತರರು ಇಂಗ್ಲಿಷ್ ಕಲಿಯುವುದರ ಮೂಲಕ ಬಹುವಾಗಿ ಪ್ರಯೋಜನ ಪಡೆಯುತ್ತಾರೆ. ಅವರೆಲ್ಲಾ ಇಂಗ್ಲಿಷ್ ಮೂಲಕ ಸಿರಿವಂತರಾಗಿ ದಬ್ಬಾಳಿಕೆ ನಡೆಸುವಾಗ ಅಲ್ಲೊಮ್ಮೆ ಇಲ್ಲೊಮ್ಮೆಯಷ್ಟೆ ತಮ್ಮ ಮಾತೃಭಾಷೆ ಭಾರತೀಯದ್ದು ಎನ್ನುತ್ತಾರೆ.

ಅವರೆಲ್ಲಾ ಇಂಗ್ಲಿಷ್‌ನ್ನು ವಸಾಹತುಶಾಹಿಯವರ ಭಾಷೆಯೆಂದು ಪರಿಗಣಿಸುತ್ತಾ, ಭಾರತದಲ್ಲಿ ಇಂಗ್ಲಿಷ್‌ನ್ನು ಹಾಗೂ ನಾಗರೀಕತೆಯನ್ನು ಸ್ಥಾಪಿಸಿದ ಲಾರ್ಡ್ ಮೆಕಾಲೆಯನ್ನು ದ್ವೇಷಿಸುತ್ತಿರುತ್ತಾರೆ.ದಲಿತ ಪರಂಪರೆಯಲ್ಲಿ ಇಂಗ್ಲಿಷ್‌ಗೆ ಪೂಜನೀಯ ಸ್ಥಾನವಿದೆ. ಆದ್ದರಿಂದ ಇಂಗ್ಲಿಷ್ ದಲಿತ/ಆದಿವಾಸಿಗಳಿಗೆ ಸೇರಿದ್ದಾಗಿದೆ.

ಬಾಬಾ ಸಾಹೇಬ್ ತಮ್ಮ ಬಹುಮುಖ್ಯ ಕೃತಿ 'ಜಾತಿ ನಿರ್ಮೂಲನೆ'ಯನ್ನು ಇಂಗ್ಲಿಷ್‌ನಲ್ಲೇ ಬರೆದದ್ದನ್ನು ಇಲ್ಲಿ ನೆನಪಿಸಿಕೊಳ್ಳಲೇ ಬೇಕು. ತದನಂತರದಲ್ಲೇ ಆ ಕೃತಿ ಮರಾಠಿ ಭಾಷೆಗೆ ಅನುವಾದಗೊಂಡದ್ದು. ಬಾಬಾ ಸಾಹೇಬರ ಅನೇಕ ಸಿದ್ಧಾಂತಗಳು ನಿರ್ಮಾಣವಾದದ್ದೇ ಇಂಗ್ಲಿಷ್‌ನಲ್ಲಿ. ಜಾಗತಿಕ ಅಧಿಕಾರವು ಇಂಗ್ಲಿಷ್‌ನ ಮೂಲಕ ಪಲ್ಲಟಗೊಳ್ಳುವುದನ್ನು ಅವರು ಮೊದಲೇ ಮನಗಂಡಿದ್ದರು. ಇಂಗ್ಲಿಷ್ ಯಶಸ್ಸಿನ ನಿಜವಾದ ಮಾರ್ಗ.

ಇಂಗ್ಲಿಷ್ ಜ್ಞಾನವನ್ನು ಪಡೆದ ದಲಿತ ರೋಕಿಗಳು ಸತ್ತ ದನದ ಚರ್ಮವನ್ನು ಸುಲಿಯುವುದಿಲ್ಲ. ಅಲ್ಲದೆ ತಮ್ಮ ಶೂಗಳನ್ನು ಪಾಲಿಷ್ ಮಾಡಿಕೊಳ್ಳುವುದಿಲ್ಲ. ಅವರ‍್ಯಾರು ಹೆಂಡ ತೆಗೆಯಲು ಮರ ಹತ್ತುವುದಿಲ್ಲ ಮತ್ತು ಒಂದು ಕೇಜಿ ಧಾನ್ಯಕ್ಕಾಗಿ ಭೂಮಾಲೀಕರ ಬಳಿ ಕೆಲಸ ಮಾಡುವುದಿಲ್ಲ.

ಇಂಗ್ಲಿಷ್ ದೇವತೆಯಿಂದ ಹರಸಲ್ಪಟ್ಟ ದಲಿತ ರೋಕಿಗಳು ತಲೆಯೆತ್ತಿ ಘನತೆಯಿಂದ ನಡೆಯಲಿದ್ದಾರೆ. ಇಂಗ್ಲಿಷ್‌ನ ಶಕ್ತಿಯಿಂದ ದಲಿತ ರೋಕಿಗಳು ಸೂಟು ಧರಿಸಿ, ಕಾರುಗಳಲ್ಲಿ ಸಾಗುತ್ತಾರೆ. ಹೀಗಿರುವಾಗ ಷಣ್ಮಗಪುರಂನ ರೋಕಿ ಕುಮಾರಿಯರು ದಲಿತ ರೋಕಿಗಳನ್ನು ಬಾರ್‌ಗಳಲ್ಲಿ, ಕೆಫೆಗಳಲ್ಲಿ, ಅಥವಾ ತಾರಾ ಹೋಟೇಲ್‌ಗಳಲ್ಲಿ ನೃತ್ಯ ಮಾಡುವಾಗ ಭೇಟಿಯಾಗಲಿದ್ದಾರೆ. ಸಾಮುದಾಯಿಕ ನೆಲೆಯಲ್ಲಿ ಇಂಗ್ಲಿಷ್ ಕಲಿಯುವ ದಲಿತರಿಂದಾಗಿ

ಒಂದೇ ಭಾಷೆಯೇ ಬಳಕೆಯಾಗಲಿದೆ. ಎಲ್ಲಾ ವಿದೇಶಿ ಅಥವಾ ದೇಶಿ ಐಐಸಿ ಹಸಿರು ಲಾನ್‌ಗಳನ್ನೊಳಗೊಂಡಂತೆ, ನಿಗಮೀಕೃತ ಮಾನವ ಸಂಪನ್ಮೂಲ ಕೇಂದ್ರಗಳೂ ಸಹ ಎಲ್ಲಾ ನಾಯಿ ಮೇಳಗಳೂ ಸಾಂಸ್ಕೃತಿಕವಾಗಿ ಸಮಾನ ನೆಲೆಯವಾಗುತ್ತವೆ. ಇಂಗ್ಲಿಷ್‌ನಿಂದ ಗಟ್ಟಿಯಾದ ರೋಕಿಗಳು ವರ್ತಮಾನದ ರೋಕಿಗಳಿಗೆ ಎದುರಾಳಿಗಳಾಗುತ್ತಾರೆ.

ಸಮಾನ ಭಾಷೆ ಮತ್ತು ಉಚ್ಚಾರಣೆಯಿಂದಾಗಿ ನಮ್ಮೆಲ್ಲಾ ನಾಯಿಗಳೂ ಮತ್ತು ಅವರೆಲ್ಲಾ ನಾಯಿಗಳು ಒಂದಾಗಿ ನಡೆಯುತ್ತವೆ ಮತ್ತು ಜಾತಿರಹಿತ ಸಮಾಜವನ್ನು ನಿರ್ಮಿಸಲಿವೆ.

ಮಹಾರಾಷ್ಟ್ರ ಮತ್ತು ಜಗತ್ತಿನಾದ್ಯಂತ ದಲಿತರನ್ನು ಆಘಾತಕ್ಕೊಳಪಡಿಸಿದ ಕೈರ್ಲಾಂಜಿ ಹತ್ಯೆ ಕೇವಲ ಅನಾಗರೀಕ ಎಂದು ವಿವರಿಸಲಾಗದು. ಅದು ಅತ್ಯಾಚಾರ ಮತ್ತು ಕೊಲೆ ಮಾತ್ರ ಅಲ್ಲ. ಅದು ನಿಜವಾಗಿಯೂ ನರಮೇಧವೇ ಆಗಿದೆ.

ಸೆಪ್ಟೆಂಬರ್ ೨೮ರಂದು ಭಯ್ಯಲಾಲ್ ಭೋತ್‌ಮಾಂಗೆಯ ಮನೆಗೆ ನುಗ್ಗಿದ ೫ ಡಜನ್ ಕುನ್ಬಿಗಳು ಮನೆಯನ್ನು ಕ್ಷಣದಲ್ಲಿ ಧ್ವಂಸಗೊಳಿಸಿದರು. ಭಯ್ಯಲಾಲ್ ಕುಟುಂಬದ ಮೇಲೆ ಅದೊಂದು ಜಾತಿ ದೌರ್ಜನ್ಯ. ಇಡೀ ಹಳ್ಳಿ ನೋಡುತ್ತಿರುವಾಗಲೇ ಭಯ್ಯಲಾಲ್‌ನ ಹೆಂಡತಿಯಾದ ೪೫ ವರ್ಷ ವಯಸ್ಸಿನ ಸುರೇಖಾಳನ್ನು ಮತ್ತು ಆಕೆಯ ೧೭ ವರ್ಷದ ಮಗಳನ್ನು ಹಾಗೂ ಎರಡು ಗಂಡು ಮಕ್ಕಳನ್ನು ವಠಾರದ ಹೊರಗೆ ಎಳೆದೊಯ್ಯಲಾಯಿತು.

ಕುನ್ಬಿ ಗಂಡಸರು, ಹೆಂಗಸರು ಮತ್ತು ಮಕ್ಕಳ ಅಟ್ಟಹಾಸದ ಸಂಭ್ರಮದ ನಡುವೆ ತಾಯಿ ಮಕ್ಕಳನ್ನು ಮೊದಲು ಬೆತ್ತಲೆ ಮಾಡಲಾಯಿತು. ಸುಮಾರು ಒಂದು ಗಂಟೆಯ ತನಕ ಅವರನ್ನು ಅತ್ಯಾಚಾರಕ್ಕೊಳ ಪಡಿಸುವಾಗ ಕುನ್ಬಿ ಹಿರಿಯರು ಪ್ರೇಕ್ಷಕನಾಗಿ ನಿಂತು ಅಪರಾಧಿಗಳಿಗೆ ಉಲ್ಲಾಸದಿಂದ ಕುಮ್ಮಕ್ಕು ನೀಡುತ್ತಿದ್ದರು.

ಹಿಟ್ಲರ್‌ನ ನಿರಂಕುಶ ಆಡಳಿತದಲ್ಲಿ ಇಂಥ ಘಟನೆಗಳು ನಡೆದಿದ್ದವೇ? ಸಾರ್ವಜನಿಕರೆದುರೇ ನಾಲ್ಕು ಮಂದಿಯನ್ನು ಕತ್ತರಿಸಿ ಹಾಕಲಾಯಿತು. ಇದು ಭಾರತದ ಸಾಮಾಜಿಕ ನರಮೇಧ. ಒಬಿಸಿ ಪಟ್ಟಿಯಲ್ಲಿ ಗುರುತಿಸಲಾಗಿರುವ ಈ ಸವರ್ಣೀಯ ಕುನ್ಬಿಗಳು ಕೊಲೆಮಾಡುತ್ತಲೇ ಅವಮಾನವನ್ನು ಉಂಟುಮಾಡಿದರು.

ದಲಿತರ ಮೇಲಿನ ದೌರ್ಜನ್ಯಗಳು ಅಖಿಲ ಮಟ್ಟದ ಭಾರತೀಯ ಒಂದು ಲಕ್ಷಣವನ್ನು ಅನುಸರಿಸುತ್ತವೆ. ಬಹುತೇಕ ಕೊಲೆಗಳು ಅವಮಾನವನ್ನುಂಟುಮಾಡುವುದರ ಜೊತೆಯಲ್ಲೇ ನಡೆಯುತ್ತವೆ. ಉದಾಹರಣೆಗೆ, ಸವರ್ಣೀಯ ಸಮಾಜವೊಂದು ದಲಿತಮಹಿಳೆಯನ್ನು ಅತ್ಯಾಚಾರಕ್ಕೊಳಪಡಿಸಲು ಅಥವಾ ಆಕೆಯ ಮಾನ ಅಪಹರಿಸಲು ತೊಡಗುವಾಗ ಅದು ಅತಿ ಹೆಚ್ಚು ಮಂದಿಗೆ ತಿಳಿಯುವಂತೆ ಮಾಡಲಾಗುತ್ತದೆ. ಈ ತರ್ಕದಿಂದಲೇ ಅತ್ಯಾಚಾರಕ್ಕೆ ಮೊದಲು ಮಹಿಳೆಯನ್ನು ಬೆತ್ತಲೆ ಮಾಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ದೈಹಿಕ ಗಾಯಗಳೇನೂ ಇರದಿದ್ದರೂ ಅವಮಾನ ಮಾತ್ರ ಇರುತ್ತದೆ. ಅಲ್ಲಿರುವ ಸಂದೇಶವೆಂದರೆ ದಲಿತರು ತಮ್ಮ ಸಾಮಾಜಿಕ ಸ್ಥಾನವನ್ನು ತಿಳಿದಿರಬೇಕಾಗುತ್ತದೆ. ಈ ಖೈರ್ಲಾಂಜಿ ಮಧ್ಯಯುಗೀನತೆಯು ಸಹ ಅಂಥದ್ದೇ ಒಂದು ನಿದರ್ಶನ. ಅಂಥ ಅನಾಗರಿಕ ಘಟನೆಗಳು ಭಾರತಾದ್ಯಂತ ಸಾಮಾನ್ಯವಾದುದು. ಅಲ್ಲದೆ ಇಂಥ ಅನಾಗರೀಕತೆಯು ಇಂದು ಭಾರತದ ಮಾಧ್ಯಗಳೇ ಗಮನವನ್ನು ಪಡೆದಿರುವುದು ನಿಜಕ್ಕೂ ಆಘಾತಕಾರಿಯಾದುದು.

ಈ ಖೈರ್ಲಾಂಜಿಯ ಅನಾಗರೀಕ ಸುದ್ದಿ ಹರಡುತ್ತಿದ್ದಂತೆ ಮಹಾರಾಷ್ಟ್ರದ ದಲಿತ ಯುವಜನ ಅಶಾಂತರಾದರು. ದಲಿತ ರಾಜಕಾರಣಿಗಳು ಇಲಿ ಬಿಲಗಳಿಗೆ ನುಸುಳಿಕೊಂಡರೆ, ದಲಿತ ಸಾಮಾಜಿಕ ಗುಂಪುಗಳ ನಡುವೆ

ದಲಿತರ ಮೇಲಿನ ದೌರ್ಜನ್ಯಗಳು ಅಖಿಲ ಮಟ್ಟದ ಭಾರತೀಯ ಒಂದು ಲಕ್ಷಣವನ್ನು ಅನುಸರಿಸುತ್ತವೆ. ಬಹುತೇಕ ಕೊಲೆಗಳು ಅವಮಾನವನ್ನುಂಟುಮಾಡುವುದರ ಜೊತೆಯಲ್ಲೇ ನಡೆಯುತ್ತವೆ. ಉದಾಹರಣೆಗೆ, ಸವರ್ಣೀಯ ಸಮಾಜವೊಂದು ದಲಿತಮಹಿಳೆಯನ್ನು ಅತ್ಯಾಚಾರಕ್ಕೊಳಪಡಿಸಲು ಅಥವಾ ಆಕೆಯ ಮಾನ ಅಪಹರಿಸಲು ತೊಡಗುವಾಗ ಅದು ಅತಿ ಹೆಚ್ಚು ಮಂದಿಗೆ ತಿಳಿಯುವಂತೆ ಮಾಡಲಾಗುತ್ತದೆ. ಈ ತರ್ಕದಿಂದಲೇ ಅತ್ಯಾಚಾರಕ್ಕೆ ಮೊದಲು ಮಹಿಳೆಯನ್ನು ಬೆತ್ತಲೆ ಮಾಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ದೈಹಿಕ ಗಾಯಗಳೇನೂ ಇರದಿದ್ದರೂ ಅವಮಾನ ಮಾತ್ರ ಇರುತ್ತದೆ. ಅಲ್ಲಿರುವ ಸಂದೇಶವೆಂದರೆ ದಲಿತರು ತಮ್ಮ ಸಾಮಾಜಿಕ ಸ್ಥಾನವನ್ನು ತಿಳಿದಿರಬೇಕಾಗುತ್ತದೆ. ಈ ಖೈರ್ಲಾಂಜಿ ಮಧ್ಯಯುಗೀನತೆಯು ಸಹ ಅಂಥದ್ದೇ ಒಂದು ನಿದರ್ಶನ. ಅಂಥ ಅನಾಗರಿಕ ಘಟನೆಗಳು ಭಾರತಾದ್ಯಂತ ಸಾಮಾನ್ಯವಾದುದು. ಅಲ್ಲದೆ ಇಂಥ ಅನಾಗರೀಕತೆಯು ಇಂದು ಭಾರತದ ಮಾಧ್ಯಗಳೇ ಗಮನವನ್ನು ಪಡೆದಿರುವುದು ನಿಜಕ್ಕೂ ಆಘಾತಕಾರಿಯಾದುದು.

ಒಂದು ರೀತಿಯ ಚಲನೆ ಆರಂಭವಾಯಿತು. ದಲಿತ ಚಳುವಳಿಯ ತಾಯ್ನಾಡಾದ ಮಹಾರಾಷ್ಟ್ರದಲ್ಲಿ ದಲಿತರು ಈ ಸಲ ಪ್ರತಿಭಟಿಸಲು ನಿರ್ಧರಿಸಿದರು. ನಾಗಪುರ ನಗರವನ್ನು ಮುಚ್ಚುವುದೇ ದಲಿತ ಚಳುವಳಿಗೆ ಒಂದು ಚಾರಿತ್ರಿಕ ತಿರುವು ನೀಡುವಂಥದ್ದು. ಹೀಗೆ ಮಹಾರಾಷ್ಟ್ರದ ದಲಿತರು ಭಾರತಾದ್ಯಂತ ದಲಿತರಿಗೊಂದು ಮಾದರಿಯನ್ನು ಸ್ಥಾಪಿಸಿದರು.

ಈ ರೀತಿಯಾಗಿ ಮಹಾರಾಷ್ಟ್ರದಲ್ಲಿ ದಲಿತ ಪ್ರತಿರೋಧವು ಉದಯಿಸಿದ್ದು ಒಂದು ಹೊಸ ರಾಜಕೀಯ ಮನೋಭಾವ–ಅಂದರೆ ದಲಿತರು ಪ್ರತಿಭಟಿಸಿ ನಿಲ್ಲುತ್ತಾರೆ ಎನ್ನುವುದಕ್ಕೆ ಸಂಕೇತವಾಯಿತು. ಇದು ೭೦ರ ದಶಕದ ಆರಂಭದ ದಲಿತ ಪ್ಯಾಂಥರ್ಸ್‌ನಂತೆ ಮತ್ತೊಮ್ಮೆ ಪ್ಯಾಂಥರ್ಸ್ ವಾಪಸ್ಸಾಗಿದ್ದಾರೆ ಎನ್ನುವುದನ್ನು ಸಾದರಪಡಿಸಿದೆ. ದಲಿತ ಪ್ಯಾಂಥರ್ ಚಳುವಳಿಯು ಕೇವಲ ಮಹಾರಾಷ್ಟ್ರಕ್ಕೆ ಸೀಮಿತವಾದರೂ ಸಹ ದಲಿತ ಪ್ರಜ್ಞೆಯ ಅದರ ಪ್ರತಿಧ್ವನಿಯು ದೇಶದ್ಯಾಂತ ಮೊಳಗಿತು.

ತೀವ್ರಗಾಮಿಯ ಮೊನಚುಳ್ಳ ದಲಿತ ಪ್ಯಾಂಥರ್ ಚಳುವಳಿಯು ದಲಿತರ ಘನತೆಯನ್ನು ಎತ್ತಿಹಿಡಿಯುವಲ್ಲಿ ಮತ್ತೊಮ್ಮೆ ತನ್ನನ್ನೇ ಪುನರುತ್ಥಾನಗೊಳಿಸಿಕೊಂಡಿದೆ. "ನಾವು ಜಾತಿ ಪ್ರಾಬಲ್ಯವನ್ನು ಪ್ರತಿಭಟಿಸಲೇ ಬೇಕು" ಎನ್ನುವ ಸಂಗತಿಗೆ ಕೂಡಲೆ ಒಪ್ಪಿಗೆ ದೊರೆಯಿತು. ಹೀಗೆ ಚಳುವಳಿ ಮಹಾರಾಷ್ಟ್ರದಲ್ಲಿ ತನ್ನ ನೆಲೆಯನ್ನು ಕಂಡುಕೊಂಡಂತೆ ದಲಿತ ಪ್ರಜ್ಞೆ ಪುಟಿದು ನಿಂತಿತು. ಅದು ನಿಧಾನವಾಗಿ ಜಾತಿ ಪ್ರಾಭಲ್ಯವನ್ನು "ಪ್ರತಿಭಟಿಸಲೇ ಬೇಕು" ಎನ್ನುವುದರತ್ತ ಹೆಜ್ಜೆ ಇಟ್ಟಿತು.

ಈ ಚಳುವಳಿಯು ಒಂದು ವಿಶೇಷವಾದ ರಾಜಕೀಯ ಸಂದರ್ಭದಲ್ಲಿ ಹುಟ್ಟಿಕೊಂಡಿದೆ. ದಲಿತರ ಒಂದೇ ಒಂದು ಪಾರ್ಟಿಯಾದ ದಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ ಆತಂಕಗೊಂಡ ದಲಿತ ಸಮುದಾಯಕ್ಕೆ ಹೊಸ ಆಶಾಕಿರಣವಾಗಿದೆ. ಅದು ೧೯೬೭ರಲ್ಲಿ ೫ ವಿಧಾನಸಭಾ ಸ್ಥಾನಗಳನ್ನು ಮಹಾರಾಷ್ಟ್ರದಲ್ಲಿ ಪಡೆದರೆ, ಉ.ಪ್ರದಲ್ಲಿ ೧೦ ಸ್ಥಾನಗಳನ್ನು ಗೆದ್ದುಕೊಂಡಿತು. ಹೀಗೆ ದಲಿತರ ಮೇಲಿನ ಅದರ ಪ್ರಭಾವ ಮತ್ತಷ್ಟು ಹೆಚ್ಚಿದೆ.

ಆದರೆ ಈ ಭರವಸೆ ಬಹುಕಾಲ ಉಳಿಯಲಿಲ್ಲ. ಕಾರಣ ಆರ್.ಪಿ.ಐ ವಿಘಟನೆಗೊಂಡಿತು. ಕಾಂಗ್ರೆಸ್ ಮತ್ತು ಜನಸಂಘಗಳು ಆರ್.ಪಿ.ಐ ನಾಯಕರನ್ನು ನುಂಗಿಬಿಟ್ಟವು. ಮಹಾರಾಷ್ಟ್ರದ ದಲಿತರು ವಿದ್ರೋಹಕ್ಕೊಳಗಾದರಲ್ಲದೆ ಆತಂಕಕ್ಕೀಡಾದರು. ಈ ಸಂದರ್ಭದಲ್ಲಿ ದಲಿತರು ಹೊಸ ವೇದಿಕೆಗಾಗಿ ಕಾಯುತ್ತಿದ್ದರು. ಅದೇ ಸಂದರ್ಭದಲ್ಲಿ ದಲಿತ್ ಪ್ಯಾಂಥರ್ ಹುಟ್ಟಿದ್ದು. ಈ ಚಳುವಳಿಯ ಅನೇಕ ನಾಯಕರು ಆರ್.ಪಿ.ಐನ ಹೊರಗಿನಿಂದ ಬಂದವರು.

ದುರಂತವೆಂದರೆ ಆರ್.ಪಿ.ಐನಂತೆ ದಲಿತ ಪ್ಯಾಂಥರ್ ಚಳುವಳಿಯೂ ಸಹ ತನ್ನ ನಾಯಕರನ್ನು ಕಾಂಗ್ರೆಸ್ ಮತ್ತು ಶಿವಸೇನೆಯು ನುಂಗಲು ಬಿಟ್ಟಿತು. ಕೆಲವು ವರ್ಷಗಳ ಹಿಂದೆ ಕೆಲವು ದಲಿತ ಕಾರ್ಯಕರ್ತರ ಮಧ್ಯಸ್ಥಿಕೆಯಿಂದಾಗಿ ಆರ್.ಪಿ.ಐ ಮತ್ತು ಇತರ ಎಲ್ಲಾ

ದಲಿತ ಪ್ಯಾಂಥರ್‌ನ ವಾಪಸ್ಸಾತಿ

ಮರೆತುಹೋದ ಪರಂಪರೆಗಳು

ಬಣಗಳು ಒಂದುಗೂಡಿದವು. ಅದೂ ಸಹ ಬಹಳ ಕಾಲ ಉಳಿಯಲಿಲ್ಲ.

ಇಂದು ಮಹಾರಾಷ್ಟ್ರದ ಸಾಮಾನ್ಯ ದಲಿತ ವಿದ್ರೋಹಕ್ಕೊಳಪಟ್ಟಂತೆ ಭಾವಿಸುತ್ತಾನೆ. ಅನೇಕ ದಲಿತ ರಾಜಕಾರಣಿಗಳು ತಮ್ಮ ಘನತೆಯನ್ನು ಕಳೆದುಕೊಂಡಿದ್ದಾರೆ.

ಹೀಗಿರುವಲ್ಲಿ ಸಾಮಾನ್ಯ ದಲಿತ ಕಾರ್ಯಕರ್ತರ ಈ ಪ್ರತಿರೋಧದ ಉದಯ ಹಾಗೂ ಅದರಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೊಸ ದಲಿತ ಮನೋಭಾವವಾದ – ಸ್ವತಂತ್ರ, ಪ್ರತಿರೋಧದ, ಮತ್ತು ಹೋರಾಟಕ್ಕೆ ಸಂಕೇತವಾಗಿದೆ. ದಲಿತ ಪ್ಯಾಂಥರ್‌ಗಳು ಮರಳಿ ಬಂದಂತೆ ಇದು ಕಾಣಿಸುತ್ತಿದೆ. ಎಲ್ಲಾ ಸಂಭಾವನೀಯತೆಯಲ್ಲು ನಾಗಪುರದ ಈ ಹೋರಾಟ ಹೊಸ ಭವಿಷ್ಯಕ್ಕೆ ನಾಂದಿಯಾಗಲಿದೆ.

ಅಕ್ಟೋಬರ್ ೨೫, ೨೧೦೬ರ ವೇಳೆಗೆ ಅಂದರೆ ಮೆಕಾಲೆಯ ೩೦೬ನೇ ಜನ್ಮೋತ್ಸವದ ಹೊತ್ತಿಗೆ ಎಲ್ಲಾ ದಲಿತರು/ಆದಿವಾಸಿಗಳು ಇಂಗ್ಲಿಷ್ ಮಾತಾನಾಡುವವರಾದರೆ, ಅವರಲ್ಲಿ ಬಹುತೇಕ ಮಂದಿ ತಮ್ಮ ಪರಂಪರೆಗಳಿಂದ ಎತ್ತಂಗಡಿಯಾಗುತ್ತಾರೆ. ಅವರೆಲ್ಲಾ ಭೂ ಮಾಲೀಕರಲ್ಲಿ ದುಡಿಯುವುದಿಲ್ಲ. ದಲಿತ ಮಹಿಳೆಯರ ಘನತೆ ನೆಲೆಯೂರುತ್ತದೆ. ಯಂತ್ರಗಳಲ್ಲದಿದ್ದರು ಬೇರೆಯವರು ಸತ್ತ ದನದ ಚರ್ಮ ಸುಲಿಯುತ್ತಾರೆ. ಅನೇಕರು ತಮ್ಮ ಶೂ ಪಾಲೀಶ್ ತಾವೇ ಮಾಡಿಕೊಳ್ಳುತ್ತಾರೆ.

ಇಂಗ್ಲಿಷ್ ಮಾತಾನಾಡುವ ದಲಿತರು ಹೆಂಡದ ಮರಗಳನ್ನು ಹತ್ತುವುದಿಲ್ಲ. ಹೆಚ್ಚಿನ ಪ್ರೋಟಿನ್ ಆಹಾರಕ್ಕಾಗಿ ಹೊಲಗಳಲ್ಲಿನ ಇಲಿಗಳನ್ನು ದಲಿತರು ಬೇಟೆಯಾಡುವುದಿಲ್ಲ. ಅವರ ಉಡುಗೆಯೂ ಸಹ ಬದಲಾಗಿರುತ್ತದೆ. ಅವರಲ್ಲಿ ಅನೇಕ ಮಂದಿ ಸೂಟು-ಬೂಟು ಧರಿಸುತ್ತಾರೆ. ಡಾ॥ ಬಿ.ಆರ್.ಅಂಬೇಡ್ಕರ್ ಎಲ್ಲಾ ಪರಂಪರೆಯನ್ನು ಮುರಿದು ಬಿಟ್ಟಂತೆ ಇಂಗ್ಲಿಷ್ ಮಾತನಾಡುವ ದಲಿತರು ತಮ್ಮೆಲ್ಲಾ ಪರಂಪರೆಗಳಿಂದ ಮುಕ್ತರಾಗುತ್ತಾರೆ.

ಅಕ್ಟೋಬರ್ ೨೫ರ ನಂತರದಲ್ಲಿ ದಲಿತ ದೇವತೆಯಾದ ಇಂಗ್ಲಿಷ್‌ನ ಬರ್ತ್‌ಡೇ ಬಗ್ಗೆ ಅನೇಕ ಭಾರತೀಯರು ತಮ್ಮ ಆತಂಕವನ್ನು ವ್ಯಕ್ತ ಪಡಿಸಿದ್ದಾರೆ. ಅವರ ಪ್ರಕಾರ ಇಂಗ್ಲಿಷ್ ಮಾತನಾಡುವ ದಲಿತರು ತಮ್ಮ ಪರಂಪರೆ, ಸಂಸ್ಕೃತಿ, ಭಾಷೆ ಮತ್ತು ಜ್ಞಾನ ಪರಂಪರೆಗಳಿಂದ ಬೇರ್ಪಡುತ್ತಾರೆ. ಅವರ ಈ ಆತಂಕ ಸರಿಯಾದುದೇ.

ಆದರೆ ಇಂಗ್ಲಿಷ್ ಮಾತನಾಡುವ ದಲಿತೇತರರು ತಮ್ಮ ಪರಂಪರೆ, ಸಂಸ್ಕೃತಿ, ಭಾಷೆ ಮತ್ತು ಜ್ಞಾನ ಪರಂಪರೆಗಳಿಂದ ಬೇರ್ಪಟ್ಟಿದ್ದಾರೆಯೇ? ಇಂಗ್ಲಿಷ್ ಕಲಿಯುವುದು ಸವರ್ಣೀಯ ಹಿಂದೂ ಪರಂಪರೆಯ ಭಾಗವಾಗಿತ್ತೇ? ಆದರೂ ಮಿಲಿಯನ್‌ಗಟ್ಟಲೆ ಜನ ಇಂಗ್ಲಿಷ್ ಕಲಿಯಲು ಸಂಸ್ಕೃತವನ್ನು ತೊರೆದರಲ್ಲವೇ.

ಏಳು ಸಮುದ್ರಗಳನ್ನು ದಾಟುವುದು ಸವರ್ಣೀಯ ಹಿಂದೂ ಪರಂಪರೆಯ ಭಾಗವಾಗಿತ್ತೇ? ಆದರೂ ಅವರೆಲ್ಲಾ ಪಾಶ್ಚಾತ್ಯ ಶಿಕ್ಷಣಕ್ಕಾಗಿ ಇಂಗ್ಲೇಡ್ ಮತ್ತು ಅಮೆರಿಕಾಗಳಿಗೆ ಹೋದರಲ್ಲದೆ, ಅನೇಕರು ಅಲ್ಲೇ ತಮ್ಮ ಬಿಡಾರವನ್ನು ನಿರ್ಮಿಸಿಕೊಂಡಿದ್ದಾರೆ. ಅದಕ್ಕಾಗಿ ಅವರು ಪಶ್ಚಾತ್ತಾಪ ಪಡುತ್ತಿದ್ದಾರೆಯೇ? ಅವರು ತಮ್ಮ ಮಕ್ಕಳು ಭಾರತಕ್ಕೆ ಮರಳಿ ಅಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಮಾಡುತ್ತಾರೆಯೇ? ಪಾಶ್ಚಾತ್ಯ ಶಿಕ್ಷಣ ಎನ್ನುವುದು ಈ ಸವರ್ಣೀಯ ಹಿಂದೂಗಳ ಭಾಗವಾಗಿತ್ತೇ? ಆದರೂ ಮಿಲಿಯನ್‌ಗಟ್ಟಲೆ ಜನ ವೇದಿಕ್ ಶಿಕ್ಷಣವನ್ನು ಬಿಟ್ಟು ಲಾರ್ಡ್ ಮೆಕಾಲೆಯ ಶಿಕ್ಷಣವನ್ನು ಒಪ್ಪಿಕೊಂಡರಲ್ಲವೇ? ಅದಕ್ಕಾಗಿ ಅವರು ಪಶ್ಚಾತ್ತಾಪ ಪಡುತ್ತಿದ್ದಾರೆಯೇ? ಅವರು ವೇದ ಶಿಕ್ಷಣಕ್ಕೆ ವಾಪಸ್ಸಾಗುತ್ತಾರೆಯೇ?

ಸೂಟು-ಬೂಟು ಈ ಜಾತಿ-ಹಿಂದೂ ಪರಂಪರೆಯ ಭಾಗವೇ? ಆದರೂ ಮಿಲಿಯನ್‌ಗಟ್ಟಲೆ ಜನ ಧೋತಿ-ಲಂಗೋಟಿಯನ್ನು ಬಿಟ್ಟು ಸೂಟು-ಬೂಟು ಅಪ್ಪಿಕೊಂಡರಲ್ಲವೇ? ಅದಕ್ಕಾಗಿಯಾದರೂ ಅವರೆಲ್ಲಾ ಪಶ್ಚಾತ್ತಾಪ ಪಡುತ್ತಿದ್ದಾರೆಯೇ? ಅವರು ತಮ್ಮ ಮಕ್ಕಳು ಧೋತಿ-ಲಂಗೋಟಿ ತೊಡುವಂತೆ ಹೇಳುತ್ತಾರೆಯೇ? ಇ-ಮೇಲ್ ವ್ಯವಸ್ಥೆಯೆಂಬುದು ಈ ಜಾತಿ-ಹಿಂದೂಗಳ ಭಾಗವಾಗಿತ್ತೇ? ಆದರೂ ಮಿಲಿಯನ್‌ಗಟ್ಟಲೆ ಜನ ಪಾರಿವಾಳ ಅಂಚೆ ವ್ಯವಸ್ಥೆಯನ್ನು ಬಿಟ್ಟು ಇ-ಮೇಲ್ ಪರವಾದರಲ್ಲವೇ? ಹಾಗಾದರೆ ಅವರೆಲ್ಲಾ ತಮ್ಮ ಮಕ್ಕಳಿಗೆ ಹಿಂದಿನ ಪಾರಿವಾಳ ಪದ್ಧತಿಗೆ ವಾಪಸ್ಸಾಗಲು ಹೇಳುತ್ತಾರೆಯೇ?

ದಲಿತ ದೇವತೆಯಾದ ಇಂಗ್ಲಿಷ್‌ನ್ನು ಟೀಕೆಮಾಡುವವರೆಲ್ಲರೂ ಸಹ ತಮ್ಮ ಪರಂಪರೆಗಳನ್ನು ತ್ಯಜಿಸುತ್ತಿದ್ದಾರಲ್ಲವೇ. ಇಂಗ್ಲಿಷ್ ಮಾತನಾಡುವ ದಲಿತೇತರರು ಪರಂಪರೆಯಲ್ಲಿ ಬೇರೂರಿವ ತಮ್ಮ ಜನತೆಯ ಬಗ್ಗೆ ಜಿಗುಪ್ಸೆಯನ್ನು ಹೊಂದಿಲ್ಲವೇ. ಉದಾಹರಣೆಗೆ ಇಂಗ್ಲಿಷ್ ಮಾತನಾಡುವ ಬ್ರಾಹ್ಮಣರು ಸಂಸ್ಕೃತ ಮಂತ್ರ ಹೇಳುವ ಮತ್ತು ವಿಧಿ ಆಚರಣೆಗಳಲ್ಲಿ ಮುಳುಗಿರುವ ಬ್ರಾಹ್ಮಣರೊಂದಿಗೆ ಎಂಥ ಸಂಬಂಧ ಹೊಂದಿದ್ದಾರೆ? ಅಲ್ಲದೆ, ಇಂಗ್ಲಿಷ್ ಮಾತನಾಡುವ ಕ್ಷತ್ರಿಯರು ದೊಡ್ಡ ಮೀಸೆಹೊತ್ತ ತಮ್ಮ ಗ್ರಾಮೀಣ ಪರಿಸರದಲ್ಲಿರುವ ಕ್ಷತ್ರಿಯರೊಂದಿಗೆ ಗುರುತಿಸಿಕೊಳ್ಳಲು ಇಷ್ಟ ಪಡುತ್ತಾರೆಯೇ?

ಇಂಗ್ಲಿಷ್ ಮಾತನಾಡುವ ವೈಶ್ಯರು ಅಂಗಡಿಗಳಲ್ಲಿ ಚಪ್ಪರುಗಾಲು ಹಾಕಿ ಕುಳಿತು ಸರಕನ್ನು ಮಾರುವ ವೈಶ್ಯರೊಂದಿಗೆ ಎಂಥ ಸಂಬಂಧ ಇಟ್ಟುಕೊಂಡಿದ್ದಾರೆ?

ಇದು ಕೇವಲ ವರ್ಗಪಲ್ಲಟ ಎಂದು ನೆನಸಬೇಡಿ. ಅದು ಸಾಂಸ್ಕೃತಿಕವಾದುದು. ಸಂಸ್ಕೃತ ಮಾತನಾಡುವ ಬ್ರಾಹ್ಮಣ ಶ್ರೀಮಂತನಾಗಿದ್ದು ಬಹುದೊಡ್ಡ ದೇವಸ್ಥಾನ ಸಂಕೀರ್ಣದ ಉಸ್ತುವಾರಿ ಮಾಡುತ್ತಿರಬಹುದು. ಆದರೂ ಅತ ಸಾಂಸ್ಕೃತಿಕವಾಗಿ ಇಂಗ್ಲಿಷ್ ಮಾತನಾಡುತ್ತಾ ದಿನ ಪತ್ರಿಕೆ ಸಂಪಾದಕೀಯದಲ್ಲಿರುವ ಬ್ರಾಹ್ಮಣರಿಂದ ಬಹಿಷ್ಕಾರಕ್ಕೊಳಗಾಗಿದ್ದಾನೆ.

ತನ್ನ ಕೃಷಿ ಭೂಮಿ, ಟ್ರಾಕ್ಟರ್‌ನಿಂದಾಗಿ ಒಬ್ಬ ಹಿಂದಿ ಮಾತನಾಡುವ ಕ್ಷತ್ರಿಯ ಶ್ರೀಮಂತನಿರಬಹುದು. ಆದರೆ ಆತ ಇಂಗ್ಲಿಷ್ ಮಾತನಾಡುವ ಒಬ್ಬ ಕ್ಷತ್ರಿಯ ಶಿಕ್ಷಕನಾಗಿರುವವನಿಂದ ಸಾಂಸ್ಕೃತಿಕವಾಗಿ ಬಹಿಷ್ಕಾರಕ್ಕೊಳಾಗಾಗಿದ್ದಾನೆ. ಹಾಗೆಯೇ ಹಿಂದಿ ಮಾತನಾಡುವ ವೈಶ್ಯನೊಬ್ಬ ತನ್ನ ಆಸ್ತಿಯಿಂದಾಗಿ ಶ್ರೀಮಂತನಿದ್ದರೂ ಇಂಗ್ಲಿಷ್ ಮಾತನಾಡುವ ಸೇಲ್ಸ್ ಪ್ರತಿನಿಧಿಯಿಂದ ಬಹಿಷ್ಕಾರವನ್ನನುಭವಿಸುತ್ತಾನೆ.

ಜಗತ್ತಿನಾದ್ಯಂತ ಒಬ್ಬ ವ್ಯಕ್ತಿಯ ಪ್ರಗತಿಯನ್ನು ಆತನ ಸಾಂಸ್ಕೃತಿಕ ಪ್ರಗತಿಯಿಂದ ತೀರ್ಮಾನವಾಗುತ್ತದೆಯೇ ಹೊರತು ಆತನ ಆಸ್ತಿಯಿಂದೇನೂ ಅಲ್ಲ. ಈ ಸಾಂಸ್ಕೃತಿಕ ಪ್ರಗತಿಯೆನ್ನುವುದು ವ್ಯಕ್ತಿಯೊಬ್ಬ ತನ್ನ ಪರಂಪರೆಯಿಂದ ಎಷ್ಟು ಬಿಡಿಸಿಕೊಂಡಿರುತ್ತಾನೆ ಎನ್ನುವುದರ ಮೇಲೆ ನಿಂತಿರುತ್ತದೆ. ಯಾರು ತಮ್ಮ ಸಂಪ್ರದಾಯಗಳಲ್ಲಿ ಬೇರೂರಿತ್ತಾರೋ ಅವರು ಸಾಮಾನ್ಯವಾಗಿ ಹಿಂದುಳಿದವರೆಂದೇ ಹೇಳಲಾಗುತ್ತದೆ.

ಭಾರತದಂಥ ಸಮಾಜಗಳಲ್ಲಿ ಪಾಶ್ಚಾತ್ಯಗೊಂಡ ವ್ಯಕ್ತಿಗಳನ್ನು ಪ್ರಗತಿಪರರೆಂದೇ ಪರಿಗಣಿಸಿ ಅವರನ್ನು ಅನುಸರಿಸಲು ಯೋಗ್ಯ ಎಂದು ಭಾವಿಸಲಾಗುತ್ತದೆ. ಮಿಲಿಯನ್‌ಗಟ್ಟಲ್ ದಲಿತೇತರರು ತಮ್ಮ ಸಂಪ್ರದಾಯಗಳನ್ನು ಬಿಟ್ಟು ಒಳ್ಳೆಯ ಜೀವನ ನಡೆಸುತ್ತಾರಾದರೆ ದಲಿತರೇಕೆ ಅಂಥ ಮಾರ್ಗವನ್ನು ಅನುಸರಿಸಿ ನಡೆಯಬಾರದು? □

ದಲಿತ ದೇವತೆಯಾದ ಇಂಗ್ಲಿಷ್‌ನ್ನು ಟೀಕೆಮಾಡುವವರೆಲ್ಲರೂ ಸಹ ತಮ್ಮ ಪರಂಪರೆಗಳನ್ನು ತ್ಯಜಿಸುತ್ತಿದ್ದಾರಲ್ಲವೇ. ಇಂಗ್ಲಿಷ್ ಮಾತನಾಡುವ ದಲಿತೇತರರು ಪರಂಪರೆಯಲ್ಲಿ ಬೇರೂರಿವ ತಮ್ಮ ಜನತೆಯ ಬಗ್ಗೆ ಜಿಗುಪ್ಸೆಯನ್ನು ಹೊಂದಿಲ್ಲವೇ. ಉದಾಹರಣೆಗೆ ಇಂಗ್ಲಿಷ್ ಮಾತನಾಡುವ ಬ್ರಾಹ್ಮಣರು ಸಂಸ್ಕೃತ ಮಂತ್ರ ಹೇಳುವ ಮತ್ತು ವಿಧಿ ಆಚರಣೆಗಳಲ್ಲಿ ಮುಳುಗಿರುವ ಬ್ರಾಹ್ಮಣರೊಂದಿಗೆ ಎಂಥ ಸಂಬಂಧ ಹೊಂದಿದ್ದಾರೆ? ಅಲ್ಲದೆ, ಇಂಗ್ಲಿಷ್ ಮಾತನಾಡುವ ಕ್ಷತ್ರಿಯರು ದೊಡ್ಡ ಮೀಸೆಹೊತ್ತ ತಮ್ಮ ಗ್ರಾಮೀಣ ಪರಿಸರದಲ್ಲಿರುವ ಕ್ಷತ್ರಿಯರೊಂದಿಗೆ ಗುರುತಿಸಿಕೊಳ್ಳಲು ಇಷ್ಟ ಪಡುತ್ತಾರೆಯೇ? ಇಂಗ್ಲಿಷ್ ಮಾತನಾಡುವ ವೈಶ್ಯರು ಅಂಗಡಿಗಳಲ್ಲಿ ಚಪ್ಪರುಗಾಲು ಹಾಕಿ ಕುಳಿತು ಸರಕನ್ನು ಮಾರುವ ವೈಶ್ಯರೊಂದಿಗೆ ಎಂಥ ಸಂಬಂಧ ಇಟ್ಟುಕೊಂಡಿದ್ದಾರೆ? ಇದು ಕೇವಲ ವರ್ಗಪಲ್ಲಟ ಎಂದು ನೆನಸಬೇಡಿ. ಅದು ಸಾಂಸ್ಕೃತಿಕವಾದುದು. ಸಂಸ್ಕೃತ ಮಾತನಾಡುವ ಬ್ರಾಹ್ಮಣ ಶ್ರೀಮಂತನಾಗಿದ್ದು ಬಹುದೊಡ್ಡ ದೇವಸ್ಥಾನ ಸಂಕೀರ್ಣದ ಉಸ್ತುವಾರಿ ಮಾಡುತ್ತಿರಬಹುದು.

ಬುದ್ಧಾಯಣ ೧೭

ನನಗವನು ಶತ್ರುವೋ ಮಿತ್ರನೋ?!

ಆ ರಾಜನು ಬೋಧಿಸತ್ವರನ್ನು ವಂದಿಸುತ್ತಾ ಪ್ರಶ್ನಿಸಿದ:

'ಪೂಜ್ಯರೇ, ನನಗೊಬ್ಬ ಧರ್ಮವನ್ನು, ಅರ್ಥವನ್ನು ಮತ್ತು ಸಮಯ ಪ್ರಜ್ಞೆಯನ್ನು ಹೊಂದಿರುವ ಅಮಾತ್ಯನಿರುವನು ಆತನಲ್ಲಿ ನಾನು ಯಾವ ತಪ್ಪನ್ನು ಕಂಡಿಲ್ಲ. ಸಮಂತದಲ್ಲಿ ಸಂದಿಗ್ಧದಲ್ಲಿ ನನಗೂ ಪ್ರಜ್ಞೆಗಳೀಗೂ ಉಪಕಾರಿಯಾಗಿರುವ. ಆದರೂ ಕೆಲವು ಮಂತ್ರಿಗಳು ಮತ್ತು ಪಂಡಿತರು ನಮ್ಮಿಬ್ಬರ ಮಿತ್ರುತ್ವಕ್ಕೆ ಹುಳಿ ಹಿಂಡುತ್ತಾ: ದೊರೆಯೇ. ಆತನನ್ನ ನಂಬಬೇಡ ಆತ ನಿನ್ನ ಹಿತ ಶತ್ರು ಎನ್ನುತ್ತಾರೆ. ನಮ್ಮ ಹೊರತು ಮತ್ಯಾರನ್ನೂ ನಂಬಬೇಡ ಎನ್ನುತ್ತಾರೆ. ಆದ್ದರಿಂದ ನಾನು ನಿಜಕ್ಕೂ ಗೊಂದಲಗೊಂಡಿದ್ದೇನೆ. ನಾನು ನಿರ್ದಿಷ್ಟವಾಗಿ ಈತನೇ ನನ್ನ ಶತ್ರು ಅಥವಾ ಈತನೇ ನನ್ನ ಮಿತ್ರನೆಂದು ಗುರುತಿಸುವ ಬಗೆ ಹೇಗೆ...?!'

'ಎಲ್ಲೈ ರಾಜನೇ. ಮಿತ್ರನನ್ನು ಶತ್ರುವನ್ನು ಅರಿಯಲು ಮೂವತ್ತೇರಡು ಗುಣಗಳಿವೆ. ಅವುಗಳಲ್ಲಿ ಹದಿನಾರು ಗುಣಗಳು ಮಿತ್ರನ ಪರವಾಗಿಯೂ ಮಿಕ್ಕ ಹದಿನಾರು ಗುಣಗಳೂ ಶತ್ರುವಿನ ಪರವಾಗಿಯೂ ಇವೆ. ಮೊದಲು ಅವುಗಳನ್ನು ಅರಿತುಕೊ ನಂತರ ಅದರಂತೆ ನೆಡೆದುಕೋ ಆಗ ನಿನ್ನ ಗೊಂದಲ ನಿವಾರಣೆಯಾಗುತ್ತದೆ. ಬಳಿಕ ನಿನಗೆ ಯಶಸ್ಸು ಲಭಿಸುತ್ತದೆ'

'ಪೂಜ್ಯನೇ, ಮಿತ್ರನನ್ನು ಗುರುತಿಸುವ ಆ ಹದಿನಾರು ಗುಣಗಳು ಯಾವುವು?'

'ಎಲ್ಲೈ ರಾಜನೇ, ನಿನಗೆ ನಿಜವಾದ ಮಿತ್ರನಾದವನು ನಿನ್ನ ಇತರೆ ಮಿತ್ರರನ್ನು ಕಂಡೊಡನೆ ಸಂತೋಷ ಪಡುತ್ತಾನೆ. ಅವರನ್ನು ನಿನ್ನ ಪರವಾಗಿ ಅಭಿನಂದಿಸುತ್ತಾರೆ. ಅವರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾನೆ. ನಿನ್ನ ಮಾತಿಗೆ ಬೆಂಬಲ ಸೂಚಿಸುತ್ತಾನೆ. ನಿನ್ನ ಶತ್ರುಗಳ ಸ್ನೇಹವನ್ನು ಅವನು ಮಾಡುವುದಿಲ್ಲ. ನಿನ್ನ ಮಿತ್ರರ ಸ್ನೇಹವನ್ನು ಮಾಡುತ್ತಾನೆ. ನಿನ್ನನ್ನು ನಿಂದಿಸುವವರನ್ನು ತಡೆಯುತ್ತಾನೆ. ಅವರೆದುರು ನಿನ್ನನ್ನು ಹೊಗಳುತ್ತಾನೆ. ನಿನಗೆ ಅಪಾಯ ತರುವ ರಹಸ್ಯವನ್ನು ಮುನ್ನೆಚ್ಚರಿಕೆಗಾಗಿ ಹೇಳುತ್ತಾನೆ. ಆದರೆ ನಿನ್ನ ರಹಸ್ಯವನ್ನು ಯಾರಲ್ಲಿಯೂ ಬಯಲು ಮಾಡುವುದಿಲ್ಲ. ನಿನ್ನ ಒಳ್ಳೆಯ ಕೆಲಸವನ್ನು ಮೆಚ್ಚಿ ಅಭಿನಂದಿಸುತ್ತಾನೆ. ನಿನ್ನ ಪ್ರತಿಭೆಯನ್ನು ಇತರರೆದುರು ಪ್ರಶಂಸೆ ಮಾಡುತ್ತಾನೆ. ನಿನಗೆ ನಷ್ಟವಾದರೆ ದುಃಖಿಸುತ್ತಾನೆ. ಲಾಭ ಬಂದರೆ ಸಂತೋಷ ವ್ಯಕ್ತ ಪಡಿಸುತ್ತಾನೆ. ಒಳ್ಳೆಯ ಊಟ ಮಾಡುವಾಗ ನಿನ್ನನ್ನು ನೆನೆಯುತ್ತಾನೆ. ವಿದೇಶಕ್ಕೆ ಹೋಗಿದ್ದ ಮಿತ್ರನನ್ನು ಸದಾ ಜ್ಞಾಪಿಸಿಕೊಳ್ಳುತ್ತಾನೆ ಹಿಂದಿರುಗಿ ಬರುತ್ತಿದ್ದಂತೆಯೇ ನಿನ್ನ ಅಭಿನಂದಿಸಿ ಆಲಂಗಿಸಿ ಪ್ರೀತಿ ಮತ್ತು ಸಂತೋಷವನ್ನು ಹಂಚಿಕೊಳ್ಳುತ್ತಾನೆ. ಈತನೇ ಮಿತ್ರ ಇದಕ್ಕೆ ವಿರುದ್ಧವಾದವನೇ ಶತ್ರು..! ಎನ್ನಲು ರಾಜನು,

'ನನ್ನ ಯಶಸ್ಸಿನ ರಹಸ್ಯವನ್ನು ತಿಳಿಸಿದ ತಮಗೆ ಅನಂತ ವಂದನೆ...!!' ಎಂದ. □

ಮಿತ್ರನನ್ನು ಶತ್ರುವನ್ನು ಅರಿಯಲು ಮೂವತ್ತೇರಡು ಗುಣಗಳಿವೆ. ಅವುಗಳಲ್ಲಿ ಹದಿ ನಾರು ಗುಣಗಳು ಮಿತ್ರನ ಪರವಾಗಿಯೂ ಹದಿ ನಾರು ಗುಣಗಳೂ ಶತ್ರುವಿನ ಪರವಾಗಿಯೂ ಇವೆ.

'ಎಲ್ಲೈ ರಾಜನೇ, ನಿನಗೆ ನಿಜವಾದ ಮಿತ್ರನಾದವನು ನಿನ್ನ ಇತರೆ ಮಿತ್ರರನ್ನು ಕಂಡೊಡನೆ ಸಂತೋಷ ಪಡುತ್ತಾನೆ. ನಿನ್ನನ್ನು ನಿಂದಿಸುವವರನ್ನು ತಡೆಯುತ್ತಾನೆ. ನಿನಗೆ ಅಪಾಯ ತರುವ ರಹಸ್ಯವನ್ನು ಮುನ್ನೆಚ್ಚರಿಕೆಗಾಗಿ ಹೇಳುತ್ತಾನೆ. ಆದರೆ ನಿನ್ನ ರಹಸ್ಯವನ್ನು ಯಾರಲ್ಲಿಯೂ ಬಯಲು ಮಾಡುವುದಿಲ್ಲ. ನಿನ್ನ ಒಳ್ಳೆಯ ಕೆಲಸವನ್ನು ಮೆಚ್ಚಿ ಅಭಿನಂದಿಸುತ್ತಾನೆ. ನಿನ್ನ ಪ್ರತಿಭೆಯನ್ನು ಇತರರೆದುರು ಪ್ರಶಂಸೆ ಮಾಡುತ್ತಾನೆ. ನಿನಗೆ ನಷ್ಟವಾದರೆ ದುಃಖಿಸುತ್ತಾನೆ. ಲಾಭ ಬಂದರೆ ಸಂತೋಷ ವ್ಯಕ್ತ ಪಡಿಸುತ್ತಾನೆ. ಈತನೇ ಮಿತ್ರ. ಇದಕ್ಕೆ ವಿರುದ್ಧವಾದವನೇ ಶತ್ರು...!

ಸಿ. ಎಚ್. ರಾಜಶೇಖರ್

ಆಕೆ ಮುಕ್ತನನ್ನು ಸಂಧಿಸಿದಳು!?

ಗೌತಮ ಬುದ್ಧರು ಶ್ರಾವಸ್ತಿಯಲ್ಲಿ ಸಂಚರಿಸುವ ಸಂದರ್ಭದಲ್ಲಿ ಭಿಕ್ಷುವೊಬ್ಬ ಹೀಗೆ ಪ್ರಶ್ನಿಸಿದ:

'ಭಂತೆ ಸನ್ಯಾಸ ಎಂದರೆ ಏನು? ಯಾವುದು ಸನ್ಯಾಸ? ಯಾವುದು ಸನ್ಯಾಸವಲ್ಲ?' ಎಂದು. ಆಗ ಬುದ್ಧರು ಅದನ್ನು ಸರಳವಾಗಿ ತಿಳಿಯ ಹೇಳುವ ಸಲುವಾಗಿ ಒಂದು ಕತೆಯನ್ನು ಹೇಳತೊಡಗಿದರು ಪ್ರತಿಯೊಬ್ಬರನ್ನು ಚಿಂತನೆಗೆ ಹಚ್ಚುವ ಆ ಕತೆಯು ಹೀಗಿದೆ:

ಒಬ್ಬ ತಪಸ್ವಿಯು ಒಂದು ನದಿಯ ದಡದ ಮೇಲೆ ಕುಳಿತು ಹರಿಯುವ ನೀರನ್ನೆ ನೋಡುತ್ತಿದ್ದ. ಸದಾ ಕಾಡಿನಲ್ಲಿ ಸಂಚರಿಸುತ್ತಿದ್ದ ಕಾಡಿನ ರಾಣಿಯು ಆ ತಪಸ್ವಿಯು ದೀರ್ಘವಾದ ಧ್ಯಾನದಲ್ಲಿ ನಿರತನಾಗಿರಬೇಕೆಂದು ಮುನ್ನೆಡೆದಳು. ಒಂದು ವಾರದ ಬಳಿಕವೂ ಕುಳಿತಲ್ಲೇ ಕುಳಿತದ್ದನ್ನು ಕಂಡ ಆಕೆ ಅವನ ಬಳಿ ನಿಂತು ವಂದಿಸುತ್ತಾ.

'ಎಲ್ಲೈ ಅಪರಿಚಿತಳೇ ನನ್ನ ಹೆಸರು ಬ್ರಹ್ಮದತ್ತನೆಂದು ನಾನು ಈ ಮೊದಲು ವಾರಣಾಸಿಯ ಮಹಾರಾಜ ಬದುಕಿನ ನಶ್ವರತೆಯನ್ನು ಮನಗಂಡು ಸಕಲವನ್ನು ತ್ಯಾಗ ಮಾಡಿ ಸನ್ಯಾಸಿಯಾಗಿ ಈ ಕಾಡನ್ನು ಸೇರಿರುವೆ. ಒಂದು ದಿನ ಈ ನದಿಯಲ್ಲಿ ಸ್ನಾನ ಮಾಡುವಾಗ ಒಂದು ಮಾವಿನ ಹಣ್ಣು ತೇಲಿಬರುತ್ತಿತ್ತು. ಅದನ್ನು ನನ್ನ ಕುಟೀರಕ್ಕೆ ತೆಗೆದುಕೊಂಡು ಹೋಗಿ ಸ್ವಲ್ಪ ಕುಯ್ದು ತಿಂದೆ. ಅದರ ರುಚಿ ಅಪೂರ್ವವಾಗಿತ್ತು.

ಒಂದೇ ಭಾರಿ ತಿಂದರೆ ಈ ರುಚಿಯಿಂದ ಶೀಘ್ರವಾಗಿ ವಂಚಿತನಾಗುವೆ ಎಂದು ಹಲವು ದಿನಗಳೂ ಈ ಹಣ್ಣನ್ನು ಜೋಪಾನವಾಗಿ ಕಾಪಾಡಿ ಸ್ವಲ್ಪ ಸ್ವಲ್ಪವೇ ತಿಂದು ಮುಗಿ ಸಿದೆ. ಮರುದಿನದಿಂದ ಬೇರೆ ಹಣ್ಣುಗಳನ್ನು, ಕಂದ ಮೂಲಗಳನ್ನು ಎಷ್ಟೇ ತಿಂದರೂ ಆ ಮಾವಿನ ಹಣ್ಣಿನ ಸ್ವಾದ ಸುಖ ಸಿಗಲಿಲ್ಲ. ಇನ್ನು ತಿನ್ನುವುದಾದರೆ ಈ ನದಿಯಲ್ಲಿ ತೇಲೆ ಬರುವ ಮಾವಿನ ಹಣ್ಣನ್ನು ಮಾತ್ರ ಎಂದು ನಿರ್ಧರಿಸಿದೆ. ಹಾಗಾಗಿ ಈಗ ಏಳು ದಿನಗಳಿಂದಲೂ ಈ ದಡದಲ್ಲಿ ಕುಳಿತು ಹರಿಯುವ ನದಿಯನ್ನೇ ನಿರಂತರವಾಗಿ ನೋಡುತ್ತಾ ಕುಳಿತಿರುವೆ ಆದರೂ ಒಂದೇ ಒಂದು ಮಾವಿನ ಹಣ್ಣು ತೇಲಿ ಬರುತ್ತಿಲ್ಲ!'

'ಎಲ್ಲೈ ಆಸಕ್ತನೇ, ನೀನಿನ್ನು ಬ್ರಹ್ಮದತ್ತನೇ ಆಗಿರುವೆ. ವಾರಣಾಸಿಯಲ್ಲಿಯೇ ಇರುವೆ. ರಾಜನೇ ಆಗಿರುವೆ!'

'ಎಲ್ಲೈ ಅಪರಿಚಿತಳೇ, ನಿನ್ನ ಮಾತಿನ ಒಳಾರ್ಥವೇನು?'

'ಎಲ್ಲೈ ಮಹಾರಾಜ, ನಾನು ಸಕಲವನ್ನು ತ್ಯಾಗ ಮಾಡಿದವನು ಎನ್ನುವೆ. ಸನ್ಯಾಸಿ ಎನ್ನುವೆ. ಆದರೆ ಒಂದು ಅಲ್ಪ ಮಾವಿನ ಹಣ್ಣಿಗಾಗಿ ಆಸಕ್ತನಾಗಿರುವುದು ಸರಿಯೇ? ಅದಕ್ಕಾಗಿ ದುಃಖಿಯಾಗಿರುವುದು ಸರಿಯೇ? ಅದಕ್ಕಾಗಿ ಕಾಲವನ್ನು ಅಪವ್ಯಯ ಮಾಡುತ್ತಿರುವುದು ವ್ಯರ್ಥವಲ್ಲವೆ? ನೀನಿನ್ನು ಆಸೆಯಿಂದ ಆಸಕ್ತಿಯಿಂದ ಮುಕ್ತನಾಗಿಲ್ಲ ಎಂಬುದರ ದ್ಯೋತಕ ಇದಲ್ಲವೆ?'

'ನನ್ನ ತಪ್ಪನ್ನು ನನ್ನ ಕಣ್ಣೆದುರು ಎತ್ತಿ ಹಿಡಿದು ನನ್ನ ಕಣ್ ತೆರೆಸಿದ ನೀನು ಯಾರು...?'

'ನನ್ನ ಹೆಸರು ಗಿರಿವನ ಕುಮಾರಿ ಎಂದು ಕೆಲವರು ಸತ್ಯವತಿ ಎನ್ನುತ್ತಾರೆ. ಮತ್ತೆ ಕೆಲವರು ಜ್ಞಾನದ ಕಣ್ಣು ಎನ್ನುತ್ತಾರೆ...!'

'ಹೌದು ತಾಯಿ, ನೀನು ಜ್ಞಾನದ ಕಣ್ಣೇ ಸರಿ...!!' ಎನ್ನುತ್ತಾ ಆಕೆಗೆ ವಂದಿಸಿ ಅಲ್ಲಿಂದ ಮುನ್ನೆಡೆದ...!! □

ಸಹಿಷ್ಣುತೆಗೆ ಮಿಗಿಲು ಧರ್ಮ ಇಲ್ಲ

ಬುದ್ಧನು ಧರ್ಮೋಪದೇಶ ಮಾಡುತ್ತಾ ಊರಿಂದ ಊರಿಗೆ ಅಲೆಯುವ ಸಂದರ್ಭದಲ್ಲಿ ಅಲವಿ ಎಂಬ ನಗರದಲ್ಲಿ ಸ್ವಲ್ಪ ದಿನ ತನ್ನ ಶಿಷ್ಯರೊಂದಿಗೆ ತಂಗಿದ್ದನು. ಅಂತಹ ಸಮಯದಲ್ಲಿ ಯಕ್ಕ ಆಲವಕ ಎಂಬುವನ ಪರಿಚಯವಾಯಿತು. ಆತ ಬುದ್ಧನನ್ನು ತನ್ನ ಮನೆಗೆ ಭೋಜನಕ್ಕೆ ಆಹ್ವಾನಿಸಿದ. ವಿನಯದಿಂದ ಬುದ್ಧನು ಆಹ್ವಾನವನ್ನು ಒಪ್ಪಿಕೊಂಡ.

ದುರ್ಬುದ್ಧಿಯಿಂದ ಕೂಡಿದ್ದ ಯಕ್ಕ ಅಲವರನು ಧರ್ಮಾಂಧನು, ದುಷ್ಟನು ದುರುಳನೂ ಆಗಿದ್ದ. ಬುದ್ಧನಿಂದಾಗಿ ಸನಾತನ ಬ್ರಾಹ್ಮಣ ಧರ್ಮ ಕ್ಷೀಣಿಸುತ್ತಿದೆ ಎಂಬುದು ಇವನ ಕೋಪಕ್ಕೆ ಕಾರಣವಾಗಿತ್ತು. ಈ ಮೂಲಕ ಮನೆಗೆ ಊಟಕ್ಕೆ ಆಹ್ವಾನಿಸಿ ಅವನಿಗೆ ಅವಮಾನ ಮಾಡಬೇಕು ಇಲ್ಲವೆ ದೈಹಿಕ ಹಲ್ಲೆ ಅಥವಾ ನಿಂದನೆ ಮಾಡಬೇಕೆಂಬುದೇ ಅವನ ಮೂಲ ಉದ್ದೇಶವಾಗಿತ್ತು.

ನಿಗದಿತ ವೇಳೆಗೆ ಬುದ್ಧನು ಯಕ್ಕ ಅಲವಕನ ಮನೆಯ ಮುಂದೆ ತನ್ನ ಭಿಕ್ಷಾಪಾತ್ರೆಯೊಂದಿಗೆ ನಿಂತನು. ನಗುಮುಖದಿಂದ ಬುದ್ಧನ್ನು ಸ್ವಾಗತಿಸಿ ಒಳಗೆ ಕರೆದ ಅವನು ಮರು ಕ್ಷಣವೆ:

'ಎಲೈ ಭಿಕ್ಷುವೇ, ಇಲ್ಲಿಂದ ಆಚೆಗೆ ತೊಲಗು?' ಎಂದನು. ಬುದ್ಧನು ಶಾಂತವಾಗಿ ಈ ರೀತಿ ಉತ್ತರಿಸಿದನು:

'ಒಳ್ಳೆಯದು ಗೆಳೆಯಾ' ಎಂದು ಹೇಳಿ ಅಲ್ಲಿಂದ ಹೊರಟನು. ಯಕ್ಕನು ಮತ್ತೆ ಆಜ್ಞೆ ಮಾಡಿದ:

'ಎಲೈ ಭಿಕ್ಷುವೇ, ಒಳಗೆ ಬಾ' ಎಂದನು. ಇದೇ ರೀತಿ ಸತತವಾಗಿ ನಾಲ್ಕೂ ಬಾರಿ ಬುದ್ಧನನ್ನು ಒಳಕ್ಕೆ ಕರೆದು ಹೊರಕ್ಕೆ ಓಡಿಸಿದನು. ಐದನೆಯ ಬಾರಿಯು ಅದೇ ರೀತಿ ಒಳಗೆ ಕರೆದ. ಈ ಬಾರಿ ನೇರವಾಗಿ ಒಳಬಂದು ಕುಳಿತುಕೊಂಡ ಬುದ್ಧ ಆಗ ಯಕ್ಕನು,

'ಎಲೈ ಭಿಕ್ಷುವೇ, ನಾನು ಆಜ್ಞೆ ಮಾಡುತ್ತಿದ್ದೇನೆ ಮೊದಲು ಇಲ್ಲಿಂದ ತೊಲಗು' ಎಂದನು. ಶಾಂತಚಿತನಾದ ಬುದ್ಧನು ಈ ರೀತಿ ಉತ್ತರವಿತ್ತ:

'ಎಲೈ ಗೆಳೆಯಾ, ಯಕ್ಕ ಆಲವಕನೆ: ಈಗ ನಾನು ಹೊರಗೆ ಹೋಗುವುದಿಲ್ಲ. ನಿನಗೇನು ಮಾಡಬೇಕು ಅನ್ನಿಸುತ್ತದೋ ಹಾಗೆ ಮಾಡು' ಎನ್ನಲು ಕೋಪಗೊಂಡ ಯಕ್ಕನು ತನ್ನ ತಾಳ್ಮೆ ಮತ್ತು ಸೈರಣೆಯನ್ನು ತಪ್ಪಿ:

'ಎಲೈ ಭಿಕ್ಷುವೇ, ನಮ್ಮಿಬ್ಬರ ನಡುವೆ ಒಂದು ಪಂದ್ಯವನ್ನು ಘೋಷಿಸಿಕೊಳ್ಳೋಣ. ಒಂದು ಪಕ್ಷ ನಾನು ಸೋತರೆ ನಿನ್ನ ಅನುಯಾಯಿ ಆಗುತ್ತೇನೆ. ನೀನು ಸೋತರೆ ನಿನ್ನ ಧರ್ಮವನ್ನು ತೊರೆಯಬೇಕು. ನಾನು ಕೆಲವು ಪ್ರಶ್ನೆಯನ್ನು ಕೇಳುತ್ತೇನೆ ನೀನು ಉತ್ತರಿಸದಿದ್ದರೆ ನಿನಗೆ ಹುಚ್ಚು ಹಿಡಿಯುವಂತೆ ಮಾಡುತ್ತೇನೆ. ಇಲ್ಲವೆ ನಿನ್ನ ಎದೆ ಸೀಳುತ್ತೇನೆ ಅಥವಾ ನಿನ್ನ ಕಾಲನ್ನು ಹಿಡಿದು ಮೇಲೆತ್ತಿ ನದಿಯ ಆಚೆ ದಡಕ್ಕೆ ಎಸೆದು ಬಿಡುತ್ತೇನೆ'

'ಗೆಳೆಯಾ, ನನಗೆ ಹುಚ್ಚು ಹಿಡಸಬಲ್ಲವರನ್ನಾಗಲಿ, ನನ್ನೆದೆಯನ್ನು ಸೀಳಬಲ್ಲವರನ್ನಾಗಲಿ ಅಥವಾ ನನ್ನ ಕಾಲನ್ನು ಹಿಡಿದು ಎತ್ತಿ ನದಿಯ ಆಚೆ ದಡಕ್ಕೆ ನನ್ನನ್ನು ಎಸೆಯ ಬಲ್ಲವರನ್ನಾಗಲಿ, ನಾನು ಈ ಜಗತ್ತಿನಲ್ಲಿ ಕಂಡಿಲ್ಲ. ಆದರೂ ಪರವಾಗಿಲ್ಲ ನಿನಗಿಷ್ಟ ಬಂದ ಪ್ರಶ್ನೆಗಳನ್ನು ಕೇಳು'

'ಈ ವಿಶ್ವದಲ್ಲಿ ಮಾನವನಿಗೆ ಅತ್ಯಂತ ಅಮೂಲ್ಯವಾದ ಆಸ್ತಿ ಯಾವುದು?'

'ಶ್ರದ್ಧೆಯೇ, ಮಾನವನ ಅತ್ಯಮೂಲ್ಯವಾದ ಆಸ್ತಿ'

'ಯಾವ ಶುದ್ಧ ಕ್ರಿಯೆಗಳಿಂದ ಮನುಷ್ಯನಿಗೆ ಸಂತೋಷ ಉಂಟಾಗುತ್ತದೆ?'

'ಧರ್ಮದ ಆಚರಣೆಯಿಂದ ಮಾತ್ರ ಸಂತೋಷ ಉಂಟಾಗಬಲ್ಲದು'

'ಎಲ್ಲ ರುಚಿಗಳಲ್ಲಿಯೂ ಅತ್ಯಂತ ಮಧುರವಾದ ರುಚಿ ಯಾವುದು?'

'ಸತ್ಯಕ್ಕಿಂತ ಮಧುರವಾದ ರುಚಿ ಮತ್ತೊಂದಿಲ್ಲ'

'ಮರು ಹುಟ್ಟನ್ನು ತಪ್ಪಿಸಿಕೊಳ್ಳುವುದು ಹೇಗೆ?'

'ಶ್ರದ್ಧೆಯಿಂದ'

ಸಂಸಾರ ಸಾಗರವನ್ನು ದಾಟುವುದು ಹೇಗೆ?

'ಧರ್ಮಪಥದಲ್ಲಿ ಸಾಗಿ ಪುನರ್‌ಜನ್ಮದಿಂದ ತಪ್ಪಿಸಿಕೊಳ್ಳುವ ಮೂಲಕ'

'ದುಃಖವನ್ನು ಜಯಿಸುವುದು ಹೇಗೆ?'

'ವಿವೇಕದಿಂದ ಕೂಡಿದ ಅರಿವು, ನಿಸ್ವಾರ್ಥ, ನಿರ್ಮೋಹ ಮತ್ತು ಸತತ ಪ್ರಯತ್ನದಿಂದ'

'ಜ್ಞಾನವನ್ನು ಹೇಗೆ ಪಡೆಯಬಹುದು?'

'ಪ್ರಕೃತಿ ಮತ್ತು ಪುರುಷರ ಬಗ್ಗೆ ಕುತೂಹಲ ಮತ್ತು ಜಿಜ್ಞಾಸೆ. ಸತ್ಯ ಸಾಕ್ಷಾತ್ಕಾರದ ಬಗ್ಗೆ ಕುತೂಹಲ ಮತ್ತು ಜಿಜ್ಞಾಸೆಯನ್ನು ಹೊಂದಿ ಅಸಾಮಾನ್ಯ ಶ್ರದ್ಧೆ ಹಾಗೂ ಎಣೆ ಇಲ್ಲದ ಪ್ರಯತ್ನದಿಂದ ಮಾತ್ರ

'ಧನವನ್ನು ಹೇಗೆ ಸಂಪಾದಿಸಬಹುದು?'

'ಧನಕ್ಕಿಂತ ಮಿಗಿಲಾದ ಸಂಪತ್ತು ಮತ್ತೊಂದಿಲ್ಲ ಎಂದು ಕಾಯಾ, ವಾಚಾ, ಮನಸ್ಸಾ ತರ್ಕಿಸಿದಾಗ, ಸ್ವಾರ್ಥವೇ ಧರ್ಮ, ಲಾಭವೇ ಸತ್ಯ ಎಂದು ಅಲ್ಲೇ ಗಾಣದೆತ್ತಿನಂತದಾ'.

'ಕೀರ್ತಿಯನ್ನು ಹೇಗೆ ಗಳಿಸಬಹುದು?'

'ಯಾವಾಗಲೂ ಸೂಕ್ತವಾದುದನ್ನೇ ಮಾಡುವ ಮೂಲಕ, ಸಕಲರಿಗೂ ಹಿತವನ್ನೇ ಬಯಸಿದಾಗ,'

'ಗೆಳೆಯರನ್ನು ಹೇಗೆ ಪಡೆಯಬಹುದು?'

'ದಾನಶೀಲನು, ಗುಣಶೀಲನು, ಅಂತರಂಗದಲ್ಲಾಗಲಿ, ಬಹಿರಂಗದಲ್ಲಾಗಲಿ ಕೇಡು ಬಗೆಯದವನು ಗೆಳೆಯರನ್ನು ಸಂಪಾದಿಸುತ್ತಾನೆ.'

'ಸಾವಿನ ನಂತರ ಈ ಲೋಕದಿಂದ ಪರಲೋಕಕ್ಕೆ ಹೋಗುವಾಗ ಪಶ್ಚಾತ್ತಾಪ ಪಡದೆ ಇರುವುದು ಹೇಗೆ?'

'ಸತ್ಯವಂತನಾದ ಧರ್ಮಪಾರಾಯಣನಾದ, ಸಹನಶೀಲನಾದ ಹಾಗೂ ಉದಾರಿಯಾದ ನಿಷ್ಠಾವಂತ ಗೃಹಸ್ಥನು ಸಾವಿನ ನಂತರ ಪಶ್ಚಾತ್ತಾಪ ಪಡುವುದಿಲ್ಲ'

'ಎಲೈ ಗೆಳೆಯಾ, ಯಕ್ಕ ಆಲವಕನೇ ಹೋಗು! ಸತ್ಯ, ಆತ್ಮಸಂಯಮ, ದಾನ ಮತ್ತು ಸಹನೆಗಿಂತ ದೊಡ್ಡ ಗುಣಗಳು ಬೇರೆ ಯಾವುದಾದರೂ ಇವೆಯೇ? ಎಂದು ಬೇರೆ ಅಸಂಖ್ಯಾತ ಬ್ರಾಹ್ಮಣರನ್ನೂ ಮತ್ತು ಭಿಕ್ಷುಗಳನ್ನು ಹೋಗಿ ಕೇಳು! ತ್ಯಾಗವೇ ಸಹಿಷ್ಣತೆಯ ಮೂಲ. ಸಹಿಷ್ಣುತೆಗಿಂತ ಮಿಗಿಲು ಧರ್ಮವಿಲ್ಲ.!!' ಎನ್ನಲು ಯಕ್ಕ ಆಲವಕನಿಗೆ ತನ್ನ ತಪ್ಪಿನ ಪೂರ್ಣ ಅರಿವಾಗಲು ಬುದ್ಧನೆದುರು ತಲೆಬಾಗಿ:

'ಪವಿತ್ರಾತ್ಮನಾದ ಗುರುದೇವನೇ, ಓ ಪ್ರಭು ಬುದ್ಧನೆ, ನನ್ನ ಅಹಂಕಾರವನ್ನು ಮನ್ನಿಸು. ಈಗ ನಾನು ಬೇರೆ ಯಾರೇ ಬ್ರಾಹ್ಮಣರು ಮತ್ತು ಭಿಕ್ಷುಗಳ ಬಳಿ ಹೋಗಿ ಕೇಳಬೇಕಾದ ಪ್ರಶ್ನೆ ಪಡೆಯಬೇಕಾದ ಉತ್ತರ ಅಥವಾ ವಿದ್ಯೆಯ ಅಗತ್ಯವಿಲ್ಲ. ನನ್ನ ಭವಿಷ್ಯದ ಒಳಿತಿಗೆ ಅವಶ್ಯಕವಾದ ಸಂಪತ್ತು ಯಾವುದು ಎಂಬ ಅರಿವು ನನಗೆ ನಿಮ್ಮಿಂದಾಗಿದೆ. ಭಗವಾನರೇ, ನನ್ನ ಉದ್ಧಾರಕ್ಕಾಗಿಯೇ ಆಲವಿನಗರಕ್ಕೆ ಪಾದಯಾತ್ರೆ ಬಂದಂತಿದೆ'.

'ನನಗೀಗ ಅರ್ಥವಾಗಿದೆ. ಜೀವನ ನಿಂತಿರುವುದೇ ಕೊಟ್ಟು ಪಡೆಯುವ ತತ್ವದ ಮೇಲೆ. ಯಾರಿಗೆ ಏನನ್ನಾದರೂ ಕೊಟ್ಟರೆ ಅದರಿಂದ ಅತಿ ಹೆಚ್ಚಿನ ಲಾಭ ಪಡೆಯುವವರು ನಾವೇ ಎಂಬ ಸತ್ಯ ಅರಿತೆ'

'ಇಂದಿನಿಂದ ನಾನು ಹಳ್ಳಿಯಿಂದ, ಹಳ್ಳಿಗೆ ನಗರದಿಂದ ನಗರಕ್ಕೆ ಸುತ್ತಾಡುತ್ತಾ ತಥಾಗತನಿಗೆ ಮತ್ತು ಧರ್ಮಕ್ಕೆ ನನ್ನ ಗೌರವವನ್ನು ಸಲ್ಲಿಸುತ್ತೇನೆ. ನನ್ನ ಅಲ್ಪಮತಿಗೆ ಬೆಳಕು ನೀಡಿದ ಬುದ್ಧನೇ ನನ್ನ ಧರ್ಮಗುರುವೆಂದು ಸಾರುತ್ತೇನೆ. ಅವಿದ್ಯೆ, ಅಸಮಾನತೆ ಮತ್ತು ಸಂಕುಚಿತತೆಯಿಂದ ಕೂಡಿದ ಧರ್ಮ, ಅಧರ್ಮವೆಂದು ಸಾರುತ್ತೇನೆ. ಸತ್ಯಕ್ಕಿಂತ ಮಧುರವಾದ ರುಚಿ ಮತ್ತೊಂದಿಲ್ಲವೆಂದು ಸಾರುತ್ತೇನೆ.!! ಸಹಿಷ್ಣುತೆಯೇ ಧರ್ಮದ ಮೂಲವೆಂದು ಒತ್ತಿ ಒತ್ತಿ ಹೇಳುತ್ತೇನೆ...!!!' ಎಂದು ಬುದ್ಧನಿಗೆ ವಂದಿಸಿದ. □

'SAMVADA' Kannada Monthly, Jan 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯಾ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

* ಯಾವುದೇ ಜ್ವರ ಮಲೇರಿಯಾ ಇರಬಹುದು. ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ ಗುಳಿಗೆಗಳನ್ನು ತೆಗೆದುಕೊಳ್ಳಿ.
* ಮಲೇರಿಯಾ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
* ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
* ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ. ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
* ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
* ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
* ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
* ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
* ಸಂಜೆ ವೇಳೆ ಬೇವಿನ ಹೊಗೆ ಹಾಕುವುದು. ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿ ವೇಳೆ ಇತರೆ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
* ಹರಿಯದೇ ನಿಂತ ನೀರು–ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ–ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ

ಕರ್ನಾಟಕ ವಾರ್ತೆ
Karnataka Information